ಭಾನುವಾರ, ಏಪ್ರಿಲ್ 20, 2025 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಸಿದ್ಧಗೆ ಪರ್ಪಲ್ ಕ್ಯಾಪ್

ಗುಜರಾತ್ ಟೈಟನ್ಸ್ ಬೌಲರ್, ಕನ್ನಡಿಗ ಪ್ರಸಿದ್ಧ ಕೃಷ್ಣ ಅವರು ಶನಿವಾರ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಐಪಿಎಲ್ ಪಂದ್ಯದಲ್ಲಿ ನಾಲ್ಕು ವಿಕೆಟ್ ಪಡೆದು ಮಿಂಚಿದರು. ಪ್ರಸಕ್ತ ಟೂರ್ನಿಯಲ್ಲಿ ಪರ್ಪಲ್ ಕ್ಯಾಪ್ ಧರಿಸಿದ್ದಾರೆ. ಟೈಟನ್ಸ್ ಏಳು ವಿಕೆಟ್‌ಗಳಿಂದ ಗೆದ್ದು ಅಗ್ರಸ್ಥಾನಕ್ಕೇರಿತು

7 ಒಟ್ಟು ಪಂದ್ಯ

14 ಒಟ್ಟು ವಿಕೆಟ್

14.35 ಸರಾಸರಿ

₹ 15 ಸಾವಿರ ಲಂಚ ಬಿಇಒ ಬಂಧನ

ಹಾವೇರಿ: ಶಿಕ್ಷಕರೊಬ್ಬರ ಬಾಕಿ ವೇತನ ಮಂಜೂರಾತಿಗಾಗಿ ₹30 ಸಾವಿರ ಲಂಚಕ್ಕೆ ಬೇಡಿಕೆಯಿಟ್ಟು, ಮುಂಗಡವಾಗಿ ₹15 ಸಾವಿರ ಪಡೆಯುತ್ತಿದ್ದ ಆರೋಪದ ಮೇಲೆ ಹಾವೇರಿ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿ (ಬಿಇಒ) ಮೌನೇಶ್ ಬಡಿಗೇರ ಮತ್ತು ಅವರಿಗೆ ನೆರವಾದ ವಾಹನ ಚಾಲಕ ಪಾಪು ಪೂಮಪ್ಪ ಉದಾಯತ್ ಎಂಬುವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ. ಇನ್ನೊಬ್ಬ ಆರೋಪಿ ಶಿಕ್ಷಕ ಮಲ್ಲಿಕಾರ್ಜುನ ಕುಂಬಾರಗೇರಿ ತಲೆಮರೆಸಿಕೊಂಡಿದ್ದಾರೆ.

ಮೌನೇಶ ಬಡಿಗೇರ

'ಮನೆಯಲ್ಲಿ ಲಂಚ ಪಡೆಯುತ್ತಿದ್ದ ವೇಳೆ ಕಾರ್ಯಾಚರಣೆ ನಡೆಸಲಾಯಿತು' ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಕುರುಬ ಸಂಸ್ಕೃತಿಯ 31 ಕೃತಿಗಳ ಬಿಡುಗಡೆ ಸಮಾರಂಭದಲ್ಲಿ ಸಿ.ಎಂ ಸಿದ್ದರಾಮಯ್ಯ ಬೇಸರ

'ಶೂದ್ರರು ಶಿಕ್ಷಿತರಾದರೂ ಗೌರವ ಸಿಗಲ್ಲ'

ಪ್ರಜಾವಾಣಿ ವಾರ್ತೆ

ತುಮಕೂರು: ಕುರುಬರ ಸಾಂಸ್ಕೃತಿಕ ಪರಿಷತ್ತು (ಟ್ರಸ್ಟ್) ಹೊರ ತಂದಿರುವ 31 ಕೃತಿಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನಗರದಲ್ಲಿ ಶನಿವಾರ ಲೋಕಾರ್ಪಣೆ ಮಾಡಿದರು.

ಕುರುಬ ಸಮಾಜದ ಇತಿಹಾಸ, ಸಂಸ್ಕೃತಿ, ಆಚರಣೆ, ಪರಂಪರೆ, ಧಾರ್ಮಿಕ ವಿಚಾರ, ಸಮುದಾಯದ ವಿಶೇಷತೆಗಳನ್ನು ಈ ಕೃತಿಗಳಲ್ಲಿ ದಾಖಲಿಸಲಾಗಿದೆ. ಮೊದಲ ಹಂತದಲ್ಲಿ ಹತ್ತು ಕೃತಿ ಬಿಡುಗಡೆ ಮಾಡಲಾಗಿದ್ದು, ಈಗ 31 ಕೃತಿಗಳನ್ನು ಹೊರ ತರಲಾಗಿದೆ.

ಕೃತಿ ಬಿಡುಗಡೆ ನಂತರ ನಗರದ ಶ್ರೀದೇವಿ ಕಾಲೇಜಿನಲ್ಲಿ ನಡೆದ ಹಾಲುಮತ ಸಾಹಿತಿಗಳ ಸಾಂಸ್ಕೃತಿಕ ಸಮಾವೇಶಕ್ಕೆ ಚಾಲನೆ ನೀಡಿದ ಮುಖ್ಯಮಂತ್ರಿ, ಎಲ್ಲ ಶ್ರಮಿಕ ವರ್ಗಗಳ ಸಂಸ್ಕೃತಿ, ಆಚಾರ, ವಿಚಾರ ದಾಖಲಿಸುವ ಕೆಲಸ ಮಾಡಬೇಕು ಎಂದು ಸಲಹೆ ಮಾಡಿದರು.

ತುಮಕೂರಿನಲ್ಲಿ ಶನಿವಾರ ಕುರುಬರ ಸಾಂಸ್ಕೃತಿಕ ಪರಿಷತ್ತು (ಟ್ರಸ್ಟ್) ಹೊರತಂದಿರುವ 31 ಕೃತಿಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಲೋಕಾರ್ಪಣೆ ಮಾಡಿದರು. ಗೃಹ ಸಚಿವ ಜಿ.ಪರಮೇಶ್ವರ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ, ಡಾ.ಎಂ.ಆರ್.ಹುಲಿನಾಯ್ಕರ್ ಇತರರು ಉಪಸ್ಥಿತರಿದ್ದರು

ನಾಲಿಗೆ ಮೇಲೆ ದೇವಿ ಅಕ್ಷರ ಬರೆದ ಕಾರಣ ಕಾಳಿದಾಸ ಸಾಹಿತಿಯಾದ. ರಾಮಾಯಣ ರಚಿಸಿದ ವಾಲ್ಮೀಕಿ ದರೋಡೆಕೋರನಾಗಿದ್ದ ಎಂಬ ಮಾತು ನಂಬಬೇಡಿ. ಶೂದ್ರರು ವಿದ್ಯಾವಂತರಾಗಿ ಮಹತ್ತರವಾದದ್ದನ್ನು ಬರೆದರೆ ಇಂತಹ ಕತೆ ಕಟ್ಟಿ ಹೇಳುತ್ತಾರೆ. ಶೂದ್ರರು ಶಿಕ್ಷಣ ಪಡೆದರೂ ಗೌರವ ಸಿಗುವುದಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ಜಾತಿ ವ್ಯವಸ್ಥೆ ನಿಂತ ನೀರು. ಅದಕ್ಕೆ ಶಿಕ್ಷಣದ ಮೂಲಕ ಆರ್ಥಿಕ ಬಲ ನೀಡಿದರೆ ಚಲನೆ ಪಡೆದುಕೊಳ್ಳುತ್ತದೆ. ಆಗ ಮಾತ್ರ ಜಾತ್ಯತೀತ, ಸಮ ಸಮಾಜ ನಿರ್ಮಾಣ ಸಾಧ್ಯ ಎಂದು ಅವರು ಅಭಿಪ್ರಾಯಪಟ್ಟರು.

ಸಮುದಾಯದ ಇತಿಹಾಸ ದಾಖಲಿಸುವ ಸಲುವಾಗಿ ಕುರುಬರ ಸಾಂಸ್ಕೃತಿಕ ಪರಿಷತ್ತು ರಚಿಸಿಕೊಂಡು ಕೃತಿಗಳನ್ನು ಪ್ರಕಟಿಸಲಾಗಿದೆ ಎಂದು ಪರಿಷತ್ತು ಅಧ್ಯಕ್ಷ ಎಚ್.ಎಂ.ರೇವಣ್ಣ ವಿವರಣೆ ನೀಡಿದರು.

ಯಾವ ಸಮುದಾಯವೂ ತಮ್ಮ ಇತಿಹಾಸ ದಾಖಲಿಸುವ ಕೆಲಸ ಮಾಡಿಲ್ಲ. ಅಂತಹ ಕೆಲಸವನ್ನು ಕುರುಬ ಸಮುದಾಯ ಮಾಡಿದ್ದು, ಇತರರಿಗೆ ಮಾದರಿಯಾಗಿದೆ ಎಂದು ಕೊಪ್ಪಳ ವಿಶ್ವವಿದ್ಯಾಲಯ ಕುಲಪತಿ ಪ್ರೊ.ಬಿ.ಕೆ. ರವಿ ಹೇಳಿದರು. ಸಮಾವೇಶದಲ್ಲಿ ಕುರುಬ ಸಮುದಾಯದ ಸಂಸ್ಕೃತಿ, ಪರಂಪರೆ, ಸಾಹಿತ್ಯ, ರಂಗಭೂಮಿ ಮೊದಲಾದ ವಿಚಾರಗಳ ಕುರಿತು ಗೋಷ್ಠಿ, ಚರ್ಚೆ ನಡೆದವು.

ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ, ಡಾ.ರಮಣ್, ಪತ್ರಕರ್ತ ಎಸ್.ನಾಗಣ್ಣ, ಇನ್‌ಸೈಟ್ ಸಂಸ್ಥೆ ಸಂಸ್ಥಾಪಕ ಜಿ.ಬಿ.ವಿನಯ್ ಕುಮಾರ್ ಉಪಸ್ಥಿತರಿದ್ದರು.

ಭಾವೇಶ್ ಜಯಂತಿ

ದಿನೇಶ್ ಗೋಮತಿ

ಎಸ್. ಶ್ರೇಯಸ್

ಪೀಯೂಷ್ ಪಾಂಡ

ಜೆಇಇ ಮೇನ್ಸ್: ಚೈತನ್ಯ ಶಿಕ್ಷಣ ಸಂಸ್ಥೆ ವಿದ್ಯಾರ್ಥಿಗಳ ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ನಡೆಸುವ 2025ನೇ ಸಾಲಿನ ಜೆಇಇ ಮೇನ್ ಪರೀಕ್ಷೆಯಲ್ಲಿ ಶ್ರೀ ಚೈತನ್ಯ ಶಿಕ್ಷಣ ಸಂಸ್ಥೆಯ ಕರ್ನಾಟಕದ ವಿದ್ಯಾರ್ಥಿಗಳು ಮತ್ತೊಮ್ಮೆ ಉತ್ತಮ ಸಾಧನೆ ಮಾಡಿದ್ದಾರೆ.

ಅಖಿಲ ಭಾರತ ಹಂತದಲ್ಲಿ (ಎಐಆರ್) ರ್‍ಯಾಂಕ್ ಪಡೆದ ವಿದ್ಯಾರ್ಥಿಗಳ ವಿವರ ಹೀಗಿದೆ: ಭಾವೇಶ್ ಜಯಂತಿ 32ನೇ ರ್‍ಯಾಂಕ್, ದಿನೇಶ್ ಗೋಮತಿ: 224, ಎಸ್. ಶ್ರೇಯಸ್: 243, ಪೀಯೂಷ್ ಪಾಂಡ: 265, ಶರತ್ ಚಂದರ್ ಎಂ: 309, ಸ್ವರಿತ್ ಸುಭಮ್:421, ಕೃಷ್ಣಶ್ರೀಪಾದ್ ಕೋಲಪರ್ತಿ: 456, ಅರ್ಣವ್ ಕೃಷ್ಣ: 477, ಆಯುಷಿ ವತ್ಸ್: 751, ಸಿದ್ಧಾರ್ಥ ಸಿಎಚ್ ವಿ.ಎಸ್: 843, ಕ್ಷಿತಿಜ್.ಎಸ್. ದೀಪಕ್:922, ನರೇನ್ ಎಂ: 959, ವಿ.ವಿ.ರಿತೇಶ್ ಪ್ರತಿಪತಿ: 997ನೇ ರ್‍ಯಾಂಕ್ ಪಡೆದಿದ್ದಾರೆ.

ಜೆಇಇನ ಎಲ್ಲ ವಿಭಾಗಗಳಲ್ಲಿ ಸಾವಿರ ರ್‍ಯಾಂಕ್‌ಗಳ ಒಳಗೆ ಶ್ರೀ ಚೈತನ್ಯ ಶಿಕ್ಷಣ ಸಂಸ್ಥೆಯು 35 ವಿದ್ಯಾರ್ಥಿಗಳು ರ್‍ಯಾಂಕ್ ಪಡೆದಿದ್ದಾರೆ. 812 ವಿದ್ಯಾರ್ಥಿಗಳು 2025ನೇ ಸಾಲಿನ ಜೆಇಇ ಅಡ್ವಾನ್ಸ್ಡ್ ಪರೀಕ್ಷೆಗೆ ಹಾಜರಾಗಲು ಅರ್ಹತೆ ಪಡೆದಿದ್ದಾರೆ.

ವಿದ್ಯಾರ್ಥಿಗಳ ಈ ಸಾಧನೆಗೆ ಪೋಷಕರು, ಶಿಕ್ಷಣ ಸಂಸ್ಥೆಯ ಸಿಬ್ಬಂದಿ ಮತ್ತು ಆಡಳಿತ ಮಂಡಳಿ ಸದಸ್ಯರು ಸಂತಸ ವ್ಯಕ್ತಪಡಿಸಿದ್ದಾರೆ. ಶ್ರೀ ಚೈತನ್ಯ ಶಿಕ್ಷಣ ಸಂಸ್ಥೆಗಳ ನಿರ್ದೇಶಕಿ ಸುಷ್ಮಾ ಬೊಪ್ಪಣ ಅವರು ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

ಸಿಇಟಿ : ವೆಬ್‌ಸೈಟ್‌ಗೆ ಒಎಂಆರ್ ಶೀಟು

ಬೆಂಗಳೂರು: ವೃತ್ತಿಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ಈ ಬಾರಿ ನಡೆದ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ಎಲ್ಲ ವಿಷಯಗಳ ಒಎಂಆರ್ ಶೀಟ್‌ಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತನ್ನ ವೆಬ್ ಸೈಟ್‌ನಲ್ಲಿ ಅಪ್ ಲೋಡ್ ಮಾಡುತ್ತಿದ್ದು, ಯಾರು ಬೇಕಾದರೂ ಅವುಗಳನ್ನು ನೋಡಬಹುದಾಗಿದೆ.

'ಪರೀಕ್ಷಾ ವ್ಯವಸ್ಥೆ ಮೇಲೆ ಅಪನಂಬಿಕೆ ಇರಬಾರದು. ಒಎಂಆರ್ ಶೀಟ್ ತಿದ್ದುತ್ತಾರೆ ಎನ್ನುವುದು ಸೇರಿದಂತೆ ಎಲ್ಲ ರೀತಿಯ ಅನುಮಾನಗಳಿಗೆ ಇತಿಶ್ರೀ ಹಾಡಲು ಈ ತೀರ್ಮಾನ ತೆಗೆದುಕೊಳ್ಳಲಾಗಿದೆ' ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

ಸಚಿವರಾದ ಎಂ.ಬಿ. ಪಾಟೀಲ ಹಾಗೂ ಶಿವಾನಂದ ಪಾಟೀಲ ಸ್ಪಷ್ಟನೆ

'ಚರ್ಚೆಯಾಗಿದೆ ಹೊರತು ವಾಗ್ವಾದವಲ್ಲ'

ಪ್ರಜಾವಾಣಿ ವಾರ್ತೆ

ವಿಜಯಪುರ: ಜಾತಿ ಜನಗಣತಿ ವರದಿ ಕುರಿತು ಈಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ತಮ್ಮ ನಡುವೆ ವಾಗ್ವಾದ ನಡೆದಿಲ್ಲ ಎಂದು ಸಚಿವರಾದ ಎಂ.ಬಿ. ಪಾಟೀಲ ಹಾಗೂ ಶಿವಾನಂದ ಪಾಟೀಲ ಸ್ಪಷ್ಟನೆ ನೀಡಿದರು.


ಶಿವಾನಂದ ಪಾಟೀಲ

'ಜಾತಿ ಜನಗಣತಿ ವಿಷಯದ ಕುರಿತು ಮುಖ್ಯಮಂತ್ರಿ ಅವರು ಎಲ್ಲ ಸಚಿವರ ಅಭಿಪ್ರಾಯ ಆಲಿಸಿದ್ದಾರೆ. ಹಿಂದಿನ ಘಟನೆ ಹಾಗೂ ಭವಿಷ್ಯದ ಆಲೋಚನೆ ಆಧರಿಸಿ ಸರ್ಕಾರ ನಿಲುವು ತೆಗೆದುಕೊಳ್ಳಬೇಕು. ಜಾತಿ ಸಂಘರ್ಷಕ್ಕೆ ಅವಕಾಶ ಕೊಡುವುದು ಬೇಡವೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದೆ' ಎಂದು ಶಿವಾನಂದ ಪಾಟೀಲ ಸುದ್ದಿಗಾರರಿಗೆ ತಿಳಿಸಿದರು.

'2018ರ ಚುನಾವಣೆಯಲ್ಲಿ ಕಾಂಗ್ರೆಸ್ 82 ಸ್ಥಾನಗಳು ಬಂದವು. ಲಿಂಗಾಯತ ಪ್ರತ್ಯೇಕ ಧರ್ಮ ವಿಚಾರದಿಂದ ಕಾಂಗ್ರೆಸ್‌ಗೆ ಹಿನ್ನಡೆಯಾಗಿಲ್ಲ ಎಂದು ಮುಖ್ಯಮಂತ್ರಿಯವರು ಅಭಿಪ್ರಾಯಪಟ್ಟರು. ಈ ವಿಷಯವಾಗಿ ಚರ್ಚೆ ನಡೆಯಿತೇ ಹೊರತು ವಾಗ್ವಾದವಲ್ಲ' ಎಂದರು.

'ಜಾತಿ ಎನ್ನುವುದು ಯಾರನ್ನೂ ಸುಭಿಕ್ಷವಾಗಿರಲು ಬಿಡುವುದಿಲ್ಲ. ಜಾತಿ ವ್ಯವಸ್ಥೆ ಇರದಿದ್ದರೆ ನಾವು ಅಮೆರಿಕ, ರಷ್ಯಾ ರಾಷ್ಟ್ರಗಳಿಗಿಂತ ಮುಂದೆ ಇರುತ್ತಿದ್ದೆವು. ಜಾತಿ ಸಂಕೀರ್ಣದಿಂದ ಹೊರಬರಬೇಕಿದೆ' ಎಂದರು.

'ಲಿಂಗಾಯತ ಸಚಿವರಿಂದ ಮತ್ತೊಂದು ಸಭೆ'

'ಲಿಂಗಾಯತ ಪ್ರತ್ಯೇಕ ಧರ್ಮ ಹೋರಾಟದಿಂದ ಹಿಂದಿನ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಹಿನ್ನಡೆ ಆಗಿದೆಯೆಂದು ಸಚಿವ ಶಿವಾನಂದ ಪಾಟೀಲ ಅವರು ಸಂಪುಟ ಸಭೆಯಲ್ಲಿ ಹೇಳಿದ್ದರು. ಆದರೆ, ಅದನ್ನು ಅಲ್ಲಗೆಳೆದ ಮುಖ್ಯಮಂತ್ರಿಯವರು ಹೋರಾಟದ ನೇತೃತ್ವ ವಹಿಸಿದ್ದ ಎಂ.ಬಿ. ಪಾಟೀಲರೇ 30 ಸಾವಿರಕ್ಕೂ ಅಧಿಕ ಅಂತರದಿಂದ ಆಯ್ಕೆಯಾಗಿದ್ದನ್ನು ಹೇಳಿದರು. ಇಷ್ಟೇ ಚರ್ಚೆಯಾಯಿತೇ ಹೊರತು ವಾಗ್ವಾದ ನಡೆಯಲಿಲ್ಲ' ಎಂದು ಸಚಿವ ಎಂ.ಬಿ. ಪಾಟೀಲ ಹೇಳಿದರು.

ಎಂ.ಬಿ ಪಾಟೀಲ

'ಸಚಿವ ಸಂಪುಟ ಸಭೆಗೂ ಮುನ್ನ ಲಿಂಗಾಯತ ಸಚಿವರ ಸಭೆ ನಡೆಸಿದ್ದೆವು. ಈಗ ಮತ್ತೊಂದು ಸುತ್ತಿನ ಸಭೆ ನಡೆಸುತ್ತೇವೆ. ಶಿವಾನಂದ ಪಾಟೀಲ ಸೇರಿದಂತೆ ಎಲ್ಲರೂ ಪಾಲ್ಗೊಳ್ಳುತ್ತೇವೆ. ನಮ್ಮಲ್ಲಿ ಭಿನ್ನಾಭಿಪ್ರಾಯ ಇಲ್ಲ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಶಾಸಕಾಂಗ ಸಭೆ ಕರೆಯಬೇಕು'

ಬೆಂಗಳೂರು: 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಜನಗಣತಿ) ವರದಿಗೆ ಕೆಲ ಸಮುದಾಯಗಳ ವಿರೋಧದ ಹಿನ್ನಲೆಯಲ್ಲಿ ಶಾಸಕಾಂಗ ಸಭೆ ಕರೆದು ಚರ್ಚಿಸಬೇಕು' ಎಂದು ಕಾಂಗ್ರೆಸ್ ಶಾಸಕ ಬೇಳೂರು ಗೋಪಾಲಕೃಷ್ಣ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ವರದಿಯ ಅಂಕಿ ಅಂಶಗಳಲ್ಲಿ ವ್ಯತ್ಯಾಸ ಆಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಸರ್ಕಾರ ಗೊಂದಲ ಬಗೆಹರಿಸಬೇಕು' ಎಂದರು.

'ಒಕ್ಕಲಿಗರು ಒಂದೂವರೆ ಕೋಟಿ ಇದ್ದೇವೆ ಎನ್ನುತ್ತಿದ್ದಾರೆ. ಅವರ ಸಂಖ್ಯೆಯೇ ಒಂದು ಕೋಟಿಯಾದರೆ ಉಳಿದವರ ಸಂಖ್ಯೆ ಎಷ್ಟಿರಬಹುದೆಂದು ನೀವೇ ಹೇಳಿ' ಎಂದು ಪ್ರಶ್ನಿಸಿದರು. ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿಕೆಗೆ, 'ಅವರಿಗೆ ವಯಸ್ಸಾಗಿದೆ, ಏನೇನೋ ಮಾತನಾಡುತ್ತಿದ್ದಾರೆ' ಎಂದರು.

> ಜಾತಿ ಜನಗಣತಿ ಕುರಿತು ವಿವಿಧ ಸಮಾಜಗಳ ಮುಖಂಡರು ಅವರವರ ಅಭಿಪ್ರಾಯ ಹೇಳಿದ್ದಾರೆ. ಅದನ್ನು ಗಣನೆಗೆ ತೆಗೆದುಕೊಂಡು ಚರ್ಚಿಸಬೇಕು. ಸಾಧಕ ಬಾಧಕಗಳನ್ನು ನೋಡಬೇಕು
>
> **ಬಿ.ವೈ. ರಾಘವೇಂದ್ರ,** ಬಿಜೆಪಿ ಸಂಸದ

ಮರು ಸಮೀಕ್ಷೆಗೆ ನದಾಫ್/ಪಿಂಜಾರ್ ಸಂಘ ಆಗ್ರಹ

ಬೆಂಗಳೂರು: 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ತಮ್ಮ ಸಮುದಾಯಕ್ಕೆ ಅನ್ಯಾಯ ಆಗಿದ್ದು, ಮತ್ತೆ ವೈಜ್ಞಾನಿಕವಾಗಿ ಸಮೀಕ್ಷೆ ನಡೆಸಬೇಕು' ಎಂದು ಕರ್ನಾಟಕ ರಾಜ್ಯ ನದಾಫ್/ಪಿಂಜಾರ್ ಸಂಘ ಆಗ್ರಹಿಸಿದೆ.

'ರಾಜ್ಯದಲ್ಲಿ ನಮ್ಮ ಸಮುದಾಯದವರು 20 ಲಕ್ಷಕ್ಕೂ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಆದರೆ, ಈ ವರದಿಯಲ್ಲಿ 1,11,805 ಎಂದು ತೋರಿಸಲಾಗಿದೆ' ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಎಚ್.ಜಲೀಲಸಾಬ ದೂರಿದ್ದಾರೆ.

'ನಮ್ಮ ನದಾಫ್/ಪಿಂಜಾರ್ ಜನಾಂಗ ಮುಸ್ಲಿಂ ಜಾತಿಯ ಉಪ ಪಂಗಡವಾಗಿದೆ. 1993ರಲ್ಲಿಯೇ ಹಿಂದುಳಿದ ಪ್ರವರ್ಗ-1ರಲ್ಲಿ ಮೀಸಲಾತಿ ಹಾಗೂ 2000ರಲ್ಲಿ ಕೇಂದ್ರ ಸರ್ಕಾರದ ಒಬಿಸಿ ಪಟ್ಟಿಯಲ್ಲಿ ಮೀಸಲಾತಿ ಪಡೆದುಕೊಂಡಿದೆ' ಎಂದು ತಿಳಿಸಿದರು. 'ಬೇಡಿಕೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ನಮ್ಮ ಜನಾಂಗಕ್ಕೆ ಮೀಸಲಾತಿ ಸೌಲಭ್ಯ ಪಡೆದುಕೊಳ್ಳುವ ನಿಟ್ಟಿನಲ್ಲಿ ಕೂಡಲೇ ಮರು ಸಮೀಕ್ಷೆ ನಡೆಸಬೇಕು' ಎಂದು ಆಗ್ರಹಿಸಿದ್ದಾರೆ.

ಸುದ್ದಿ 2 ನಿಮಿಷ

ಬಿಜೆಪಿಗೆ ರಾಮಸ್ವಾಮಿ ರಾಜೀನಾಮೆ

ಹಾಸನ: ಮಾಜಿ ಶಾಸಕ ಎ.ಟಿ. ರಾಮಸ್ವಾಮಿ ಅವರು ಬಿಜೆಪಿಯ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ.

ಈ ಬಗ್ಗೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ಪತ್ರ ಬರೆದಿರುವ ಅವರು, 'ಜನರಲ್ಲಿ ಜಾಗೃತಿ ಮೂಡಿಸಿ, ಪರಿಸರ ಸಂರಕ್ಷಿಸುವುದು ಇಂದಿನ ತುರ್ತು ಅಗತ್ಯವಾಗಿದೆ. ರಾಜಕಾರಣಕ್ಕಿಂತ ಪರಿಸರ ಸಂರಕ್ಷಣೆ ಮಹತ್ವದ್ದು ಎಂದು ಭಾವಿಸಿದ್ದೇನೆ. ಈ ಕಾರಣದಿಂದ ರಾಜೀನಾಮೆ ನೀಡುತ್ತಿದ್ದು, ಪರಿಸರ ಸಂರಕ್ಷಣೆ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ತೀರ್ಮಾನಿಸಿದ್ದೇನೆ' ಎಂದು ತಿಳಿಸಿದ್ದಾರೆ.

ಜೆಡಿಎಸ್‌ನಿಂದ ಸ್ಪರ್ಧಿಸಿ ಅರಕಲಗೂಡು ಶಾಸಕರಾಗಿದ್ದ ರಾಮಸ್ವಾಮಿ ಅವರು, 2023ರ ವಿಧಾನಸಭೆ ಚುನಾವಣೆ ವೇಳೆ ಜೆಡಿಎಸ್ ತೊರೆದು ಬಿಜೆಪಿ ಸೇರಿದ್ದರು. 2024ರಲ್ಲಿ ನಡೆದ ಲೋಕಸಭೆ ಚುನಾವಣೆಗೆ ಹಾಸನದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸುವ ಆಕಾಂಕ್ಷೆ ಹೊಂದಿದ್ದರು. ಆದರೆ, ಜೆಡಿಎಸ್- ಬಿಜೆಪಿ ಮೈತ್ರಿ ಮಾಡಿಕೊಂಡಿದ್ದರಿಂದ ಅದು ಸಾಧ್ಯವಾಗಲಿಲ್ಲ. ಆಗಿನಿಂದಲೇ ಸಕ್ರಿಯ ರಾಜಕಾರಣದಿಂದ ದೂರು ಉಳಿದಿದ್ದರು.

ತುಮಕೂರು: ಸಚಿವ ರಾಜಣ್ಣ 75ನೇ ಹುಟ್ಟುಹಬ್ಬದಲ್ಲಿ 'ಶಕ್ತಿ ಪ್ರದರ್ಶನ'?

ಬೆಂಗಳೂರು: ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರ 75ನೇ ವರ್ಷದ ಹುಟ್ಟುಹಬ್ಬವನ್ನು (ಅಮೃತ ಮಹೋತ್ಸವ) ಅದ್ದೂರಿಯಾಗಿ, 'ಶಕ್ತಿ ಪ್ರದರ್ಶನ'ವಾಗಿ ತುಮಕೂರಿನ ಕಾಲೇಜು ಮೈದಾನದಲ್ಲಿ ಮೇ 13ರಂದು ಆಯೋಜಿಸಲು ಅವರ ಅಭಿಮಾನಿಗಳು ಸಿದ್ಧತೆ ನಡೆಸಿದ್ದಾರೆ.

ರಾಜಣ್ಣ ಅವರ ಪುತ್ರ ಆರ್.ರಾಜೇಂದ್ರ ಅವರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಸದಾಶಿವನಗರದ ಮನೆಯಲ್ಲಿ ಶನಿವಾರ ಭೇಟಿ ಮಾಡಿ, ಕಾರ್ಯಕ್ರಮಕ್ಕೆ ಆಹ್ವಾನ ನೀಡಿದರು. ಕಾರ್ಯಕ್ರಮಕ್ಕೆ ಬೃಹತ್ ಸಂಖ್ಯೆಯಲ್ಲಿ ಜನರನ್ನು ಸೇರಿಸಲು ತಯಾರಿ ನಡೆಯುತ್ತಿದೆ. ಎಲ್ಲ ಸಚಿವರು, ಶಾಸಕರಿಗೆ ಆಹ್ವಾನ ನೀಡಲು ಕೂಡಾ ರಾಜೇಂದ್ರ ಮುಂದಾಗಿದ್ದಾರೆ.

'ಒಂದು ವಾರ ಮಳೆ ಮುಂದುವರಿಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಒಂದು ವಾರ ಗುಡುಗು ಸಹಿತ ಮಳೆ ಮುಂದುವರಿಯುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆ 24 ಜಿಲ್ಲೆಗಳಿಗೆ ಭಾನುವಾರ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಬೀದರ್, ಕಲಬುರಗಿ, ವಿಜಯಪುರ, ಯಾದಗಿರಿ, ರಾಯಚೂರು, ಕೊಪ್ಪಳ ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಒಣಹವೆ ಇರಲಿದೆ. ಉಳಿದ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಕರಾವಳಿಯ ದಕ್ಷಿಣ ಕನ್ನಡ ಹಾಗೂ ಉಡುಪಿಯ ಕೆಲವೆಡೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಕನ್ನಡದ ಬಹುತೇಕ ಕಡೆ ಒಣಹವೆ ಇರಲಿದ್ದು, ಕೆಲವೆಡೆ ಮಳೆಯಾಗಬಹುದು ಎಂದು ಇಲಾಖೆ ತಿಳಿಸಿದೆ.

ದಕ್ಷಿಣ ಒಳನಾಡಿನ ಎಲ್ಲ ಜಿಲ್ಲೆಗಳು, ಉತ್ತರ ಒಳನಾಡಿನ ಒಳನಾಡಿನ ಹಲವು ಜಿಲ್ಲೆಗಳಲ್ಲಿ ಗಂಟೆಗೆ 30 ರಿಂದ 50 ಕಿ.ಮೀ. ವೇಗದಲ್ಲಿ ಗಾಳಿ ಸಹಿತ ಮಳೆ ಆಗುವ ಸಂಭವ ಇದೆ. ಸೋಮವಾರ, ಮಂಗಳವಾರವೂ 10ಕ್ಕೂ ಅಧಿಕ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ.

ಸಿಡಿಲು ಬಡಿದು ಬಾಲಕ (ಹುಬ್ಬಳ್ಳಿ ವರದಿ): ವಿಜಯಪುರ ಜಿಲ್ಲೆಯ ದೇವರಹಿಪ್ಪರಗಿ ತಾಲ್ಲೂಕಿನ ಕೋರವಾರ ಗ್ರಾಮದಲ್ಲಿ ಶುಕ್ರವಾರ ಶಾಂತವೀರಯ್ಯ ಚಿಕ್ಕಯ್ಯನಮಠ (17) ಎಂಬ ಬಾಲಕ ಸಿಡಿಲು ಬಡಿದು ಮೃತಪಟ್ಟಿದ್ದಾನೆ.

ಜನಿವಾರ ತೆಗೆಯದ ವಿದ್ಯಾರ್ಥಿಗೆ ಪರೀಕ್ಷೆ ನಿರಾಕರಣೆ; ಕೆಇಎಗೆ ವರದಿ ಸಲ್ಲಿಸಿದ ಬೀದರ್ ಡಿ.ಸಿ

ಪ್ರಾಂಶುಪಾಲ, ಸಿಬ್ಬಂದಿ ಕೆಲಸದಿಂದ ವಜಾ

ಪ್ರಜಾವಾಣಿ ವಾರ್ತೆ

ಬೀದರ್: ಜನಿವಾರ ಧರಿಸಿದ ಕಾರಣಕ್ಕಾಗಿ ವಿದ್ಯಾರ್ಥಿ ಸುಚಿವ್ರತ್ ಕುಲಕರ್ಣಿ ಅವರಿಗೆ ಕೆ-ಸಿಇಟಿ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸದ ಪ್ರಕರಣ ಸಂಬಂಧ ನಗರದ ಸಾಯಿ ಸ್ಫೂರ್ತಿ ಕಾಲೇಜಿನ ಪ್ರಾಂಶುಪಾಲ ಹಾಗೂ ಸಿಬ್ಬಂದಿಯನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಶನಿವಾರ ವಜಾಗೊಳಿಸಲಾಗಿದೆ.

ಪ್ರಾಂಶುಪಾಲರೂ ಆದ ಉಪ ಮುಖ್ಯ ಅಧೀಕ್ಷಕ ಚಂದ್ರಶೇಖರ ಬಿರಾದಾರ ಮತ್ತು ಆ ಕಾಲೇಜಿನ ತಪಾಸಣಾ ಸಿಬ್ಬಂದಿ, ದ್ವಿತೀಯ ದರ್ಜೆ ಸಹಾಯಕ ಸತೀಶ ಪವಾರ ವಜಾಗೊಂಡವರು.

'ನಿಯಮಾನುಸಾರ ಕೆಲಸ ನಿರ್ವಹಿಸದೇ ಕರ್ತವ್ಯಲೋಪ ಎಸಗಿರುವುದರಿಂದ ಕೆಲಸದಿಂದ ವಜಾಗೊಳಿಸಿ ಆದೇಶಿಸಿ, ಬೀದರ್ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರಿಗೆ ಅನುಪಾಲನಾ ವರದಿ ಸಲ್ಲಿಸಲಾಗಿದೆ' ಎಂದು ಸಾಯಿ ದೀಪ ಎಜ್ಯುಕೇಶನ್ ಮತ್ತು ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ/ ಕಾರ್ಯದರ್ಶಿ ತಿಳಿಸಿದ್ದಾರೆ. ಆದೇಶದ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

'ಪ್ರಕರಣದ ತನಿಖೆ ಪೂರ್ಣಗೊಂಡಿದ್ದು, ಪರೀಕ್ಷಾ ಕೇಂದ್ರದ ಪ್ರಾಂಶುಪಾಲರು ಹಾಗೂ ಅಲ್ಲಿನ ಸಿಬ್ಬಂದಿ ಲೋಪ ಎಸಗಿರುವುದು ದೃಢಪಟ್ಟಿದೆ. ಘಟನೆಗೆ ಕಾರಣರಾದವರನ್ನು ವಜಾಗೊಳಿಸಿ ಅನುಪಾಲನಾ ವರದಿ ಸಲ್ಲಿಸಬೇಕೆಂದು ಸಾಯಿ ದೀಪ ಎಜ್ಯುಕೇಶನ್ ಟ್ರಸ್ಟ್‌ನ ಅಧ್ಯಕ್ಷ ಹಾಗೂ ಕಾರ್ಯದರ್ಶಿಗೆ ಸೂಚಿಸಲಾಗಿದೆ. ಪರೀಕ್ಷಾ ವೀಕ್ಷಕರಾಗಿದ್ದ ಔರಾದ್ ಆರ್‌ಎಫ್‌ಒ ಮೊದ್ದಸಿರ್ ಅವರು ಸರಿಯಾಗಿ ಕರ್ತವ್ಯ ನಿರ್ವಹಿಸದ ಕಾರಣ ಅವರಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಲಾಗಿದೆ' ಎಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕರಿಗೆ ಸಲ್ಲಿಸಿರುವ ವರದಿಯಲ್ಲಿ ತಿಳಿಸಿದ್ದರು. ಅವರ ವರದಿ ಬೆನ್ನಲ್ಲೇ ಕಾಲೇಜು ಆಡಳಿತ ಮಂಡಳಿ ಈ ನಿರ್ಧಾರ ಕೈಗೊಂಡಿದೆ.

ಏ. 17ರಂದು ನಗರದ ಚೌಬಾರ ನಿವಾಸಿ ಸುಚಿವ್ರತ್ ಅವರು ಇಲ್ಲಿನ ಗುಂಪಾ ಸಮೀಪದ ಸಾಯಿ ಸ್ಫೂರ್ತಿ ಶಾಲೆಯಲ್ಲಿ ಕೆ-ಸಿಇಟಿ ಗಣಿತ ಪರೀಕ್ಷೆ ಬರೆಯಲು ಹೋಗಿದ್ದರು. ಆದರೆ, ಜನಿವಾರದ ಕಾರಣಕ್ಕಾಗಿ ಅವರಿಗೆ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಿರಲಿಲ್ಲ. ಘಟನೆಗೆ ತೀವ್ರ ವಿರೋಧ ವ್ಯಕ್ತವಾದ ನಂತರ ಸರ್ಕಾರ ಜಿಲ್ಲಾಧಿಕಾರಿಗೆ ತನಿಖೆ ಕೈಗೊಂಡು ವರದಿ ಸಲ್ಲಿಸಲು ಸೂಚಿಸಿತ್ತು. ಜಿಲ್ಲಾಧಿಕಾರಿ ಅವರು, ಉಪವಿಭಾಗಾಧಿಕಾರಿ ಹಾಗೂ ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಉಪನಿರ್ದೇಶಕರಿಂದ ತನಿಖೆ ನಡೆಸಿದ್ದರು.

ಗೃಹರಕ್ಷಕ ದಳದ ಇಬ್ಬರು ಅಮಾನತು

ಶಿವಮೊಗ್ಗ: ವೃತ್ತಿಪರ ಕೋರ್ಸ್‌ಗಾಗಿನ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಬರೆಯಲು ಇಲ್ಲಿನ ಪರೀಕ್ಷಾ ಕೇಂದ್ರದೊಳಗೆ ತೆರಳುವಾಗ ಬ್ರಾಹ್ಮಣ ವಿದ್ಯಾರ್ಥಿಗಳ ಜನಿವಾರ ತೆಗೆಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯ ಲೋಪದಡಿ ಗೃಹರಕ್ಷಕ ದಳದ ಇಬ್ಬರು ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ಹೇಳಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಅಧಿಕಾರಿಗಳ ವಿಚಾರಣೆ ಹಾಗೂ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ದೊರೆತ ಸಾಕ್ಷ್ಯಗಳನ್ನು ಪರಿಶೀಲಿಸಲಾಗಿದೆ. ಕಾಲೇಜಿನ ಪ್ರಾಚಾರ್ಯರು ಹಾಗೂ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಸಮಯ ಪ್ರಜ್ಞೆಯಿಂದ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಯಾವುದೇ ತೊಂದರೆ ಆಗಿಲ್ಲ. ಆದರೆ, ಭದ್ರತೆಗೆ ನಿಯುಕ್ತರಾಗಿದ್ದ ಗೃಹರಕ್ಷಕ ದಳದ ಇಬ್ಬರು ಸಿಬ್ಬಂದಿಯ ತಿಳಿವಳಿಕೆ ಕೊರತೆಯಿಂದ ಈ ರೀತಿಯ ಘಟನೆ ನಡೆದಿದೆ ಎಂದು ಅವರು ತಿಳಿಸಿದ್ದಾರೆ.

'ವಿದ್ಯಾರ್ಥಿಗಳು ಸರಿಯಾದ ಸಮಯಕ್ಕೆ ಕೇಂದ್ರದೊಳಗೆ ತೆರಳಿ ಪರೀಕ್ಷೆ ಬರೆದಿದ್ದಾರೆ. ಇಲ್ಲಿ ಧಾರ್ಮಿಕ ಭಾವನೆಗೆ ಧಕ್ಕೆ ಆಗಿದೆ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ. ಆದ್ದರಿಂದ ಆ ಇಬ್ಬರೂ ಸಿಬ್ಬಂದಿಯ ಅಮಾನತು ಆದೇಶ ಹೊರಡಿಸಿ, ಮುಂದಿನ ಹಂತದ ತನಿಖೆಗೂ ಆದೇಶಿಸಲಾಗಿದೆ' ಎಂದು ಹೆಗಡೆ ಮಾಹಿತಿ ನೀಡಿದ್ದಾರೆ.

ಬ್ರಾಹ್ಮಣ ಮಹಾಸಭಾದ ಆರೋಪದ ಕುರಿತು ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ, 'ವಿದ್ಯಾರ್ಥಿಯ ಜನಿವಾರವನ್ನು ಕತ್ತರಿಸಿಲ್ಲ. ಜನಿವಾರವನ್ನು ವಿದ್ಯಾರ್ಥಿಯ ಕೈಯಿಂದಲೇ ತೆಗೆಸಲಾಗಿದೆ. ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯದಲ್ಲಿ ಇದು ಸ್ಪಷ್ಟವಾಗಿ ಕಾಣಿಸುತ್ತದೆ. ಜನಿವಾರವನ್ನು ಕತ್ತರಿಸಿ, ಕಸದ ಬುಟ್ಟಿಗೆ ಎಸೆಯುವ ಯಾವ ಕೃತ್ಯವೂ ನಡೆದಿಲ್ಲ' ಎಂದು ಸ್ಪಷ್ಟಪಡಿಸಿದರು.

ಸ್ವಯಂಪ್ರೇರಿತ ಪ್ರಕರಣ ದಾಖಲು

ಜನಿವಾರ ತೆಗೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಮಕ್ಕಳ ಹಕ್ಕು ರಕ್ಷಣಾ ಆಯೋಗ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮತ್ತು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿರುವ ಆಯೋಗ, 'ಶಿವಮೊಗ್ಗ ಜಿಲ್ಲೆಯ ಪರೀಕ್ಷೆ ಕೇಂದ್ರದಲ್ಲಿ ಬ್ರಾಹ್ಮಣ ವಿದ್ಯಾರ್ಥಿಯ ಜನಿವಾರ ಕತ್ತರಿಸಿ, ಕಸದ ಬುಟ್ಟಿಗೆ ಎಸೆದಿರುವುದು. ಬೀದರ್ ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಯೊಬ್ಬನಿಗೆ ಜನಿವಾರ ತೆಗೆಯುವಂತೆ ಹೇಳಿದ ಕಾರಣ, ವಿದ್ಯಾರ್ಥಿ ಪರೀಕ್ಷೆ ಬರೆಯದೇ ಮನೆಗೆ ತೆರಳಿರುವ ಘಟನೆಗಳು ಮಕ್ಕಳ ಶಿಕ್ಷಣದ ಹಕ್ಕನ್ನು ಕಸಿದಂತಾಗಿದೆ. ಪ್ರಾಧಿಕಾರ ತೆಗೆದುಕೊಂಡಿರುವ ಕಾನೂನು ಕ್ರಮದ ವರದಿಯನ್ನು ಆಯೋಗಕ್ಕೆ ನೀಡಬೇಕು ಎಂದು ತಿಳಿಸಿದೆ

'ಪ್ರಕರಣದ ಹಿಂದೆ ಜಾತಿದ್ವೇಷ'

ಸಮಾಜ ಪ್ರತಿಭಟಿಸಬೇಕು: ರಾಘವೇಶ್ವರ ಭಾರತೀ ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಕಾರವಾರ: 'ಬೀದರ್‌ನಲ್ಲಿ ಜನಿವಾರದ ಕಾರಣಕ್ಕೆ ವಿದ್ಯಾರ್ಥಿಗೆ ಸಿಇಟಿ ಪರೀಕ್ಷೆ ಬರೆಯಲು ಅವಕಾಶ ನೀಡದ ಮತ್ತು ಶಿವಮೊಗ್ಗದಲ್ಲಿ ಜನಿವಾರ ತುಂಡರಿಸಿದ ಘಟನೆ ದುರ್ವರ್ತನೆಯ ಪರಮಾವಧಿ. ಇದನ್ನು ಸಮಸ್ತ ಸಮಾಜ ಪ್ರತಿಭಟಿಸಬೇಕು' ಎಂದು ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತೀ ಸ್ವಾಮೀಜಿ ಹೇಳಿದ್ದಾರೆ.

'ಅಧಿಕಾರಿಗಳ ಈ ವರ್ತನೆಯ ಹಿಂದೆ ಜಾತಿ ದ್ವೇಷವಿದೆ. ಒಂದು ಜಾತಿಯನ್ನು ಸಂಪೂರ್ಣ ತುಳಿದು ಬಿಡಬೇಕು ಎಂಬ ಭಾವ ಕಾಣಿಸುತ್ತಿದೆ. ಪರೀಕ್ಷೆಗಳು ಮಕ್ಕಳ ಹಣೆಬರಹವನ್ನು ನಿರ್ಧರಿಸುವಂಥದ್ದು. ವಿದ್ಯಾರ್ಥಿಗಳು ಪರೀಕ್ಷೆಯ ಮಾನಸಿಕ ಒತ್ತಡದಲ್ಲಿ ಇರುವಾಗ ಅಧಿಕಾರಿಗಳು ಕ್ರೌರ್ಯ ಮೆರೆದಿರುವುದು ಖಂಡನೀಯ' ಎಂದಿದ್ದಾರೆ.

'ಜನಿವಾರ ಕೀಳುವಾಗ ಮನಸ್ಸಿಗೆ ಎಂಥ ನೋವಾಗುತ್ತದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಬ್ರಾಹ್ಮಣರು ಇದನ್ನು ಸಹಿಸಬಾರದು. ಇದನ್ನು ಇಲ್ಲಿಗೇ ಬಿಟ್ಟರೆ, ದೇಶದಲ್ಲಿ ಬದುಕಲೂ ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಬಹುದು' ಎಂದು ಅವರು ತಿಳಿಸಿದ್ದಾರೆ.

'ಪರೀಕ್ಷಾ ನಿಯಮಕ್ಕೆ ಧಕ್ಕೆಯಾಗದು'

ಶಿರಸಿ: ಜನಿವಾರ ಧರಿಸುವುದು ಕಾನೂನುಬಾಹಿರವಲ್ಲ. ಜನಿವಾರ ಧರಿಸುವುದರಿಂದ ಯಾವುದೇ ಪರೀಕ್ಷಾ ನಿಯಮಗಳಿಗೆ ಧಕ್ಕೆ ಆಗುವುದಿಲ್ಲ. ಅದಾಗಿಯೂ ಬೀದರ್ ಹಾಗೂ ಶಿವಮೊಗ್ಗದಲ್ಲಿ ಜನಿವಾರ ಧರಿಸಿದ ವಿದ್ಯಾರ್ಥಿಗಳ ಪರೀಕ್ಷೆಗೆ ಅಡ್ಡಿಪಡಿಸಿದ್ದು ಸರಿಯಲ್ಲ' ಎಂದು ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಹೇಳಿದ್ದಾರೆ.

'ಬ್ರಾಹ್ಮಣರು ಧರಿಸಿದ ಜನಿವಾರ ವಿಷಯವಾಗಿ ಅಧಿಕಾರಿಗಳು ನಡೆದುಕೊಂಡ ರೀತಿ ಖಂಡನೀಯ. ಭಾರತೀಯ ಸಂವಿಧಾನ ಪ್ರತಿಯೊಬ್ಬರಿಗೂ ಅವರವರ ಧರ್ಮ ಆಚರಣೆಗೆ ಅವಕಾಶ ನೀಡಿದೆ. ಹೀಗಿರುವಾಗ ಜನಿವಾರ ಧರಿಸುವುದು ಪರೀಕ್ಷಾ ನಿಯಮಗಳಿಗೆ ಅಡ್ಡಿಯಾಗುವುದಿಲ್ಲ' ಎಂದಿದ್ದಾರೆ.

'ಸರ್ಕಾರಿ ಅಧಿಕಾರಿಗಳು ಜವಾಬ್ದಾರಿ ಸ್ಥಾನದಲ್ಲಿರುತ್ತಾರೆ. ಅವರು ಎಲ್ಲರನ್ನು ಸಮಾನವಾಗಿ ನೋಡಬೇಕು. ಜನಿವಾರವನ್ನು ಮುಂದಿಟ್ಟುಕೊಂಡು ವಿದ್ಯಾರ್ಥಿಗಳ ಭವಿಷ್ಯ ಹಾಳು ಮಾಡುವ ಕೆಲಸ ಮಾಡಿದ್ದು ಸರಿಯಲ್ಲ' ಎಂದಿದ್ದಾರೆ.

'ಅಧಿಕಾರಿಗಳ ಕ್ಷಮೆಯಾಚನೆಗೆ ಆಗ್ರಹ'

ಬೆಂಗಳೂರು: ಸಿಇಟಿ ಪರೀಕ್ಷೆ ಬರೆಯುಲು ಹೋಗಿದ್ದ ಬ್ರಾಹ್ಮಣ ಸಮುದಾಯದ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಅಧಿಕಾರಿಗಳು ಕೂಡಲೇ ಕ್ಷಮೆಯಾಚಿಸಬೇಕು, ಸರ್ಕಾರ ಇವರನ್ನು ಅಮಾನತುಗೊಳಿಸಬೇಕು' ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಆಗ್ರಹಿಸಿದೆ. ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಾಸಭಾದ ಅಧ್ಯಕ್ಷ ಎಸ್. ರಘುನಾಥ್, 'ಇತ್ತೀಚೆಗೆ ಬ್ರಾಹ್ಮಣ ಸಮುದಾಯವನ್ನು ಹೀಯಾಳಿಸುವುದು, ಅವರ ಮೇಲೆ ದೌರ್ಜನ್ಯ ವೆಸಗುವುದು ಕೆಲವರಿಗೆ ಅಭ್ಯಾಸವಾಗಿದೆ. ಬ್ರಾಹ್ಮಣರು ಈಗ ಅಲ್ಪಸಂಖ್ಯಾತರಾಗಿದ್ದಾರೆ. ಹಾಗಾಗಿ ಕೆಲ ವಿಕೃತ ಮನಸ್ಸಿನವರು ಸಮುದಾಯದವರ ಮೇಲೆ ಆಕ್ರಮಣ ಮಾಡುತ್ತಿದ್ದಾರೆ. ಸರ್ಕಾರ ನಮ್ಮ ಸಮುದಾಯದವರಿಗೆ ರಕ್ಷಣೆ ನೀಡಬೇಕು' ಎಂದು ಒತ್ತಾಯಿಸಿದರು.

ಕೌಶಲ ವೃದ್ಧಿ, ಅವಕಾಶಗಳ ಸದ್ಬಳಕೆಗೆ ಸಲಹೆ

'ಎಡ್ಯುವರ್ಸ್': ವಿದ್ಯಾರ್ಥಿಗಳ ಗೊಂದಲ ದೂರ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಇಲ್ಲಿನ ನೆಹರೂ ಕ್ರೀಡಾಂಗಣದಲ್ಲಿ ಶನಿವಾರ 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಬಳಗವು ಆಯೋಜಿಸಿದ್ದ ಎರಡು ದಿನಗಳ 'ಎಡ್ಯುವರ್ಸ್- ಶೈಕ್ಷಣಿಕ ಮೇಳ' ಶನಿವಾರ ಆರಂಭಗೊಂಡಿತು. ಸಾವಿರಾರು ವಿದ್ಯಾರ್ಥಿಗಳು, ಪೋಷಕರು ಮೇಳಕ್ಕೆ ಭೇಟಿ ನೀಡಿ, ವಿವಿಧ ಕೋರ್ಸ್‌ಗಳ ಬಗ್ಗೆ ಮಾಹಿತಿ ಪಡೆದರು.

ಪಿಯುಸಿ ನಂತರ ಮುಂದೇನು ಎಂಬ ಪರಿಕಲ್ಪನೆಯಡಿ ಆಯೋಜಿಸಲಾಗಿದ್ದ ಮೇಳದಲ್ಲಿ ದೇಶದ ವಿವಿಧ ರಾಜ್ಯಗಳ 60ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳು ಪಾಲ್ಗೊಂಡಿದ್ದವು. ಕಲಾ, ವಾಣಿಜ್ಯ, ವಿಜ್ಞಾನ, ಎಂಜಿನಿಯರಿಂಗ್, ವೈದ್ಯಕೀಯ, ಕಾನೂನು, ವಿಧಿವಿಜ್ಞಾನ, ಫ್ಯಾಷನ್ ಡಿಸೈನಿಂಗ್, ಶೂ ಮೇಕಿಂಗ್ ಸೇರಿ ವಿವಿಧ ವಿಭಾಗಗಳ ಕೋರ್ಸ್‌ಗಳ ಬಗ್ಗೆ ಸಂಸ್ಥೆಯ ಪ್ರತಿನಿಧಿಗಳು, ಪೋಷಕರು ಹಾಗೂ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

ಹುಬ್ಬಳ್ಳಿಯಲ್ಲಿ ಶನಿವಾರ ಎಡ್ಯುವರ್ಸ್ ಮೇಳದಲ್ಲಿನ ಮಳಿಗೆಗೆ ಭೇಟಿ ನೀಡಿದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮತ್ತು ಜಿಲ್ಲಾಧಿಕಾರಿ ದಿವ್ಯಪ್ರಭು ಅವರು ಪ್ರತಿನಿಧಿಗಳ ಜೊತೆ ಸಂವಾದ ನಡೆಸಿದರು

ಮೇಳ ಉದ್ಘಾಟಿಸಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮಾತನಾಡಿ, 'ವಿದ್ಯಾರ್ಥಿ ದಿಸೆಯಲ್ಲಿ ದ್ವಿತೀಯ ಪಿಯುಸಿ ಪ್ರಮುಖ ಘಟ್ಟ. ಇದರ ನಂತರದ ಮುಂದಿನ ಹಾದಿಯ ಬಗ್ಗೆ ತಿಳಿಸಿಕೊಡಲು 'ಪ್ರಜಾವಾಣಿ'- 'ಡೆಕ್ಕನ್ ಹೆರಾಲ್ಡ್' ಬಳಗವು ಹಲವು ವರ್ಷಗಳಿಂದ ಎಡ್ಯುವರ್ಸ್ ಮೇಳ ಆಯೋಜಿಸುತ್ತಿರುವುದು ಸ್ವಾಗತಾರ್ಹ' ಎಂದರು.

'ಜಗತ್ತಿನೆಲ್ಲೆಡೆ ಕೌಶಲಯುಕ್ತ ಉದ್ಯೋಗಿಗಳಿಗೆ ಬೇಡಿಕೆ ಇದೆ. ಕೇವಲ ಶಿಕ್ಷಣ, ಪದವಿ ಪಡೆದರೆ ಸಾಲದು, ವೃತ್ತಿಕೌಶಲ ಬೆಳೆಸಿಕೊಳ್ಳಬೇಕು. ದೇಶದಲ್ಲಿಯೇ ಅಲ್ಲದೇ ವಿದೇಶದಲ್ಲೂ ಅವಕಾಶಗಳಿವೆ. ಅವುಗಳನ್ನು ಸದ್ಬಳಕೆ ಮಾಡಿಕೊಂಡು, ಬದುಕಿನಲ್ಲಿ ಯಶಸ್ಸು ಕಾಣಲು ಪ್ರಯತ್ನಿಸಬೇಕು' ಎಂದರು.

ಜಿಲ್ಲಾಧಿಕಾರಿ ದಿವ್ಯಪ್ರಭು ಮಾತನಾಡಿ, 'ಓದಿನ ಜೊತೆ ಸಮಯ ನಿರ್ವಹಣೆಯನ್ನು ವಿದ್ಯಾರ್ಥಿಗಳು ಮಾಡಬೇಕು. ಸಮಯ ನಿರ್ವಹಣೆಯನ್ನು ಚೆನ್ನಾಗಿ ಮಾಡಿದರೆ ಯಶಸ್ಸು ಹೊಂದಲು ಸಾಧ್ಯ' ಎಂದರು.

ಸಾಧನಾ ಅಕಾಡೆಮಿಯ ಸ್ಥಾಪಕ ನಿರ್ದೇಶಕ ಮಂಜುನಾಥ.ಬಿ ಅವರು ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳುವ ಮತ್ತು ಸಮಯ ನಿರ್ವಹಿಸುವ ಬಗ್ಗೆ ಉಪನ್ಯಾಸ ನೀಡಿದರು. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮಾಜಿ ಸಾರ್ವಜನಿಕ ಸಂಪರ್ಕಾಧಿಕಾರಿ ರವಿ.ಎ.ಎಸ್ ಅವರು ಸಿಇಟಿ ಕುರಿತು ಉಪನ್ಯಾಸ ನೀಡಿದರು.

ಅಂಬೇಡ್ಕರ್ ಚಿತ್ರಕ್ಕೆ ಮಲ ಬಳಿದು ಅಪಮಾನ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಸಿದ್ದರಾಮಯ್ಯ ಪ್ರತಿನಿಧಿಸುವ ವರುಣ ಕ್ಷೇತ್ರದ ವಾಜಮಂಗಲದಲ್ಲಿ ಘಟನೆ
- ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ದೃಶ್ಯ ಸೆರೆ

ಮೈಸೂರು: ತಾಲ್ಲೂಕಿನ ವಾಜಮಂಗಲದಲ್ಲಿ ಅಂಬೇಡ್ಕರ್ ಭಾವಚಿತ್ರವಿದ್ದ ಬ್ಯಾನರ್‌ಗಳು ಹಾಗೂ ನಾಮಫಲಕವನ್ನು ಶನಿವಾರ ಕಿಡಿಗೇಡಿಗಳು ವಿರೂಪಗೊಳಿಸಿದ್ದು, 'ಸಿದ್ಧಾರ್ಥ ಯುವಕರ ಸಂಘ'ದ ನಾಮಫಲಕದಲ್ಲಿದ್ದ ಚಿತ್ರಕ್ಕೆ ಮಲ ಬಳಿದು ವಿಕೃತಿ ಮೆರೆದಿದ್ದಾರೆ. ಇದನ್ನು ಖಂಡಿಸಿ ಗ್ರಾಮಸ್ಥರು ಮತ್ತು ದಲಿತ ಸಂಘಟನೆಗಳ ಮುಖಂಡರು ಪ್ರತಿಭಟಿಸಿದರು.

'ಗ್ರಾಮದಲ್ಲಿ ಸೋಮವಾರ ಅಂಬೇಡ್ಕರ್ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಗಿತ್ತು. ಅಲ್ಲಿನ ಯುವಕರು, ಶುಭಾಶಯ ತಿಳಿಸುವ ಬ್ಯಾನರ್‌ಗಳನ್ನು ರಸ್ತೆ ಬದಿಯಲ್ಲಿ ಹಾಕಿದ್ದರು. ಶುಕ್ರವಾರ ರಾತ್ರಿ ಕಿಡಿಗೇಡಿಗಳು ಬ್ಯಾನರ್‌ಗಳಲ್ಲಿನ ಅಂಬೇಡ್ಕರ್ ಭಾವಚಿತ್ರವನ್ನು ಬ್ಲೇಡ್ ಹಾಗೂ ಚಾಕುವಿನಿಂದ ಹರಿದು ವಿರೂಪಗೊಳಿಸಿದ್ದಾರೆ. ಫಲಕದಲ್ಲಿದ್ದ ಫೋಟೊಗೆ ಮಲ ಬಳಿದಿದ್ದಾರೆ' ಎಂದು ಪೊಲೀಸರು ತಿಳಿಸಿದರು.

'ಗ್ರಾಮದ ಹಾಲಿನ ಡೇರಿಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ದೃಶ್ಯ ಸೆರೆಯಾಗಿದೆ ಎಂದು ಗ್ರಾಮಸ್ಥರು ತಿಳಿಸಿದ್ದು, ಅದನ್ನು ಆಧರಿಸಿ ತನಿಖೆ ನಡೆಸಲಾಗುತ್ತಿದೆ' ಎಂದು ಹೇಳಿದರು. ಗ್ರಾಮದ ಶಿವು ಎಂಬುವವರು ನೀಡಿದ ದೂರನ್ನು ಆಧರಿಸಿ ವರುಣ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮುಂಜಾಗ್ರತಾ ಕ್ರಮವಾಗಿ, ಪೊಲೀಸರನ್ನು ನಿಯೋಜಿಸಲಾಗಿದೆ.

'ಸಂವಿಧಾನ ಶಿಲ್ಪಿಗೆ ಅವಮಾನ ಮಾಡಿದವರನ್ನು ಬಂಧಿಸಬೇಕು' ಎಂದು ಒತ್ತಾಯಿಸಿ ಗ್ರಾಮಸ್ಥರು ಹಾಗೂ ದಲಿತ ಸಂಘಟನೆಗಳ ಮುಖಂಡರು ಪ್ರತಿಭಟಿಸಿದರು. 'ಮಲ ಬಳಿದು ವಿಕೃತಿ ಮೆರೆದಿರುವುದನ್ನು ತೀವ್ರವಾಗಿ ಖಂಡಿಸುತ್ತೇವೆ' ಎಂದರು.

'ಎರಡು ಬೈಕ್‌ಗಳಲ್ಲಿ ಬಂದಿದ್ದ ಮೂವರು ಕೃತ್ಯ ಎಸಗಿರುವುದು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಆದರೆ ಬೈಕ್ ನಂಬರ್ ಪ್ಲೇಟ್ ಕಾಣಿಸುತ್ತಿಲ್ಲ. ಸೌಹಾರ್ದ ಕೆಡಿಸಲು ಯತ್ನಿಸಿದವರನ್ನು ಕೂಡಲೇ ಬಂಧಿಸಬೇಕು' ಎಂದು ಒತ್ತಾಯಿಸಿದರು.

ಸ್ಥಳಕ್ಕೆ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿಷ್ಣುವರ್ಧನ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. 'ಆರೋಪಿಗಳನ್ನು ಶೀಘ್ರದಲ್ಲೇ ಬಂಧಿಸುತ್ತೇವೆ' ಎಂದು ಪೊಲೀಸ್ ಅಧಿಕಾರಿಗಳು ಭರವಸೆ ನೀಡಿದ ಬಳಿಕ ಪ್ರತಿಭಟನೆ ವಾಪಸ್ ಪಡೆಯಲಾಯಿತು.

ಸಾತಗಳ್ಳಿಯಲ್ಲೂ ಅವಮಾನ: 'ಹೊರವಲಯದ ಸಾತಗಳ್ಳಿ ಹಂಚ್ಯ 'ಬಿ' ವಲಯ ಬಡಾವಣೆಯ ಉದ್ಯಾನದಲ್ಲಿ ಅಂಬೇಡ್ಕರ್ ಅವರ ಹೆಸರು ಮತ್ತು ಫೋಟೊವುಳ್ಳ ಫಲಕವನ್ನು ಬಿಸಾಡಿ ಅವಮಾನ ಮಾಡಲಾಗಿದೆ. ಇದಕ್ಕೆ ಕಾರಣವಾದವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು' ಎಂದು ಸಾತಗಳ್ಳಿ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ರಿಕ್ಕಿ ರೈ ಮೇಲೆ ಗುಂಡಿನ ದಾಳಿ

ರಾಮನಗರ: ಭೂಗತ ಲೋಕದ ಮಾಜಿ ಡಾನ್ ಮುತ್ತಪ್ಪ ರೈ ಪುತ್ರ ರಿಕ್ಕಿ ರೈ ಕಾರಿನ ಮೇಲೆ ತಾಲ್ಲೂಕಿನ ಬಿಡದಿ ಬಳಿಯ ಕರಿಯಪ್ಪನದೊಡ್ಡಿಯಲ್ಲಿ ಶುಕ್ರವಾರ ರಾತ್ರಿ ಗುಂಡಿನ ದಾಳಿ ನಡೆದಿದೆ. ಅವರ ಕೈ ಮತ್ತು ಮೂಗಿಗೆ ಗುಂಡೇಟುತಗುಲಿದೆ. ಪ್ರಾಣಾಪಾಯದಿಂದ ಪಾರಾಗಿರುವ ಅವರು ಬೆಂಗಳೂರಿನ ಮಣಿಪಾಲ್‌ಆಸ್ಪತ್ರೆಗೆ ದಾಖಲಾಗಿದ್ದಾರೆ.

ರಿಕ್ಕಿ ರೈ

ರಿಕ್ಕಿ ಕಾರು ಚಾಲಕ ಜಿ. ಬಸವರಾಜು ನೀಡಿದ ದೂರಿನ ಮೇರೆಗೆ ಮುತ್ತಪ್ಪ ರೈ ಅವರಿಗೆ ಒಂದು ಕಾಲದಲ್ಲಿ ಆಪ್ತನಾಗಿದ್ದ ಸದ್ಯ ಕಾಂಗ್ರೆಸ್‌ನಲ್ಲಿ ಗುರುತಿಸಿಕೊಂಡಿರುವ ಬಂಟ್ವಾಳದ ರಾಕೇಶ್ ಮಲ್ಲಿ, ರೈ ಅವರ ಎರಡನೇ ಪತ್ನಿ ಅನುರಾಧ, ನಿತೇಶ್ ಎಸ್ಟೇಟ್ ಮಾಲೀಕರಾದ ನಿತೇಶ್ ಶೆಟ್ಟಿ, ವೈದ್ಯನಾಥನ್ ಹಾಗೂ ಸಹಚರರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಭಾನುವಾರ, ಏಪ್ರಿಲ್ 20, 2025 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕೊಡಗಿನಲ್ಲಿ ಸಿಂಧು

ಬ್ಯಾಡ್ಮಿಂಟನ್ ತಾರೆ ಪಿ.ವಿ. ಸಿಂಧು ಈಚೆಗೆ ಕೊಡಗು ಜಿಲ್ಲೆಯ ಕಾಫಿ ತೋಟವೊಂದಕ್ಕೆ ರಜಾ ದಿನಗಳನ್ನು ಕಳೆಯಲು ಕುಟುಂಬದವರೊಂದಿಗೆ ಬಂದಿದ್ದರು. ಕೊಡಗಿನ ಪರಿಸರದ ಕುರಿತು ಮೆಚ್ಚುಗೆ ವ್ಯಕ್ತಪಡಿಸಿರುವ ಅವರು, 'ಕಾಫಿ ತೋಟವೊಂದನ್ನು ಖರೀದಿಸುವ ಆಸೆ ಪತಿಗೆ ಇದೆ' ಎಂದು ಫೇಸ್‌ಬುಕ್‌ನಲ್ಲಿ ಬರೆದುಕೊಂಡಿದ್ದಾರೆ

Infinity Learn by Sri Chaitanya

Sri Chaitanya
PU & CBSE (+2) COLLEGES | TECHNO SCHOOLS

40 Years of Excellence 1986-2025

JEE MAIN 2025 RESULTS

TOPPERS ARE NOT BORN, THEY'RE MADE @ SRI CHAITANYA

1 — ALL INDIA RANK OPEN CATEGORY — 300/300 Marks
Ajay Reddy Vangala
Appl. No. 250310255592
Classroom Student from Grade IX-XII
Sri Chaitanya Techno School Student

1 — ALL INDIA RANK OPEN CATEGORY — 300/300 Marks
Devdutta Majhi
Appl. No. 250310016185*

SEIZES 4 RANKS IN TOP 10 IN ALL-INDIA OPEN CATEGORY

9 — All India Rank Open Category — 295/300 Marks
Toshniwal Shiven
Appl. No. 250310391420*

10 — All India Rank Open Category — 295/300 Marks
Saksham Jindal
Appl. No. 250310236696*

32 RANK Open Category — 295/300
Bhavesh Jayanthi
Appl. No. 250310269939*
Sri Chaitanya Techno School Student

SRI CHAITANYA KARNATAKA TOP RANKERS

136 RANK KUSHAL B N Appl. No. 250310310257*
224 RANK D G S ARUNACHALAM Appl. No. 250310496782
243 RANK S SHREYAS Appl. No. 250310485787
265 RANK PIYUSH PANDA Appl. No. 250310029401*
269 RANK G T TUSYA Appl. No. 250310061948*
305 RANK M ARJUN GOWDA Appl. No.250310492158
309 RANK SARATH CHANDAR M Appl. No. 250310329395*
394 RANK CHINMAI D.J Appl. No. 250310225641*
421 RANK SWARIT SUBHAM Appl. No. 250310160758*
454 RANK SIDDHARTH SASIKUMAR Appl. No. 250310168605*
456 RANK KRISHNASRIPAD KOLAPARTHY Appl. No. 250310481851
469 RANK ARNAV KRISHNA Appl. No. 2250310172782*
477 RANK GAUTHAM POCHA Appl. No. 250310446545*
611 RANK NALLAGORLA YASHASVI Appl. No. 250310293071*
751 RANK AYUSHI VATS Appl. No. 250310249038*
843 RANK SIDDHARTHA CH V S Appl. No. 250310207787*
883 RANK SAI SHAM S R Appl. No. 250310327153*
922 RANK KSHITIJ.S. DEEPAK Appl. No. 250310127223*
959 RANK NHAREN M Appl. No. 250310236535*
997 RANK V V RITESH PRATHIPATI Appl. No. 250310245004*
1097 RANK TEJAS GHOTGALKAR Appl. No. 250310545376*

BELOW 100 ALL INDIA OPEN CATEGORY RANKS — 31
BELOW 500 ALL INDIA OPEN CATEGORY RANKS — 95
BELOW 10 ALL INDIA CATEGORY RANKS — 10
BELOW 100 ALL INDIA CATEGORY RANKS COUNT — 98
BELOW 1000 ALL INDIA CATEGORY RANKS COUNT — 579
TOTAL QUALIFIED RANKS FOR JEE ADVANCED-2025 — 22,094

Scan QR Code for Admissions

*T & C apply | Note: Any inadvertent error published in this advertisement could be brought to our notice Note: The information is as per students feedback

*DLP-AITS Information so far.

PREPARE YOUR CHILD FOR THE FUTURE — ADMISSIONS OPEN FOR NURSERY ONWARDS

KARNATAKA BRANCHES :

BANASWADI - 7022625903, 7022625904 | HORAMAVU - 9071766563, 8123337377 | KAGGADASPURA - 7022042419, 7022990917 | KR PURAM - 7022975733, 7022975752| KUDLU - 7411869823, 7411869822 | MARTHAHALLI - 7022009494, 7022977406 | MARTHAHALLI C-120 - 9916502075, 9916502084 | BELLANDUR - 7207144989, 7207144203 | HEGDENAGAR - 7022625905, 7022625906 | RAJAJI NAGAR - 9900041428, 70229 91464 | SESHADRIPURAM - 9663488992, 8861986797 | VIDYARANYAPURA - 9900024299 9900035563 | YESHWANTHPUR - 9900023941, 70229 90518 | MAGADI ROAD - 7022625909, 7022625910 | PEENYA DASARAHALLI - 7207501428, 7207501458 | ELECTRONIC CITY - 8861286996, 7022193643 | ELECTRONIC CITY DS - 7022042414, 8861133405 | ECITY NEET BOYS - 7022977361, 8099734600 | SARJAPURA - 7618712603, 9611194363 | NAGARBHAVI - 7619396744, 7207767624 | UTTARAHALLI - 9900074751, 7022602882 | J P NAGAR - 7022975745, 9148450580 | BANNERGHATTA ROAD - 7022653386, 7022977215 | KORAMANGALA - 7618712598, 7022949219 | KANAKAPURA ROAD - 8618655239, 7022625902 | MANGALORE - 7619253037, 7619396727 | TUMKUR - 7022992174, 7032058686 | MANDYA - 7618721281, 7618721282 | MYSORE - 7022048451, 7022048452 | DR BS RAO VIDYASOUDHA MYSORE - 7207402751, 7207402752 | HUBLI - 7411869818, 7411869817 | HUBLI 2 - 7022625934, 7022625933 | DAVANAGERE (DAY) - 7022975746, 9886406148 | DAVANAGERE (RES) - 7022975746, 9886406148 | BALLARI GIRLS - 7022975730, 8885996256 | BALLARI BOYS - 7022975754, 9949470497 | BELAGAVI - 7207703079, 7411869828 | KOLAR - 7022625900, 8748014705 | SHIVAMOGGA - 7022625891, 7022048460

Sri Chaitanya ACADEMY | India's Most Trusted Result-Oriented Coaching Center! | ADMISSIONS OPEN | JEE MAIN & ADVANCED 1 & 2 Years Courses

BENGALURU — Kalyan Nagar - 91778 67027 | Jayanagar - 9177867198 | HSR Layout - 99160 56900 | Yelahanka - 95152 22384 | Basaveshwar Nagar - 89770 30521
BELAGAVI - 7207914070

ಮನೆಯಲ್ಲಿದ್ದಾಗ ಬೈಕ್‌ನಲ್ಲಿ ಬಂದ ನಾಲ್ವರಿಂದ ಅಪಹರಣ • ಮೃತರು ‘ಪೂಜಾ ಉದ್ಜಪನ್ ಪರಿಷತ್ತಿ’ನ ಉಪಾಧ್ಯಕ್ಷ

ಬಾಂಗ್ಲಾದೇಶ: ಹಿಂದೂ ನಾಯಕನ ಹತ್ಯೆ

ಢಾಕಾ (ಪಿಟಿಐ): ಬಾಂಗ್ಲಾದೇಶದ ದಿನಾಜ್‌ಪುರ ಜಿಲ್ಲೆಯಲ್ಲಿ ಹಿಂದೂ ಸಮುದಾಯದ ನಾಯಕರನ್ನು ಮನೆಯಿಂದ ಅಪಹರಿಸಿ ಹತ್ಯೆ ಮಾಡಲಾಗಿದೆ ಎಂದು ಅಲ್ಲಿನ ಮಾಧ್ಯಮವೊಂದು ವರದಿ ಮಾಡಿದೆ.

ದಿನಾಜ್‌ಪುರ ಜಿಲ್ಲೆಯ ಬಸುದೇವಪುರ ಗ್ರಾಮದ ನಿವಾಸಿ ಭಬೇಶ್ ಚಂದ್ರ ರಾಯ್ (58) ಅವರನ್ನು ಗುರುವಾರ ರಾತ್ರಿ ಭೀಕರವಾಗಿ ಕೊಲೆ ಮಾಡಲಾಗಿದೆ ಎಂದು ಪೊಲೀಸರು ಮತ್ತು ಮೃತ ವ್ಯಕ್ತಿಯ ಸಂಬಂಧಿಕರ ಹೇಳಿಕೆಗಳನ್ನು ಉಲ್ಲೇಖಿಸಿ ‘ದಿ ಡೈಲಿ ಸ್ಟಾರ್’ ವರದಿ ಮಾಡಿದೆ.

‘ಮನೆಯಲ್ಲಿದ್ದ ಪತಿಗೆ ಸಂಜೆ 4.30 ಗಂಟೆ ವೇಳೆಗೆ ಫೋನ್ ಕರೆಯೊಂದು ಬಂದಿತು. ಅದಾದ 30 ನಿಮಿಷಗಳಲ್ಲಿಯೇ ಎರಡು ಬೈಕ್‌ಗಳಲ್ಲಿ ಬಂದ ನಾಲ್ವರು, ಪತಿಯನ್ನು ಅಪಹರಿಸಿಕೊಂಡು ಹೋದರು’ ಎಂದು ರಾಯ್ ಅವರ ಪತ್ನಿ ಶಾಂತಾನ ಅವರು ವಿವರಿಸಿದ್ದಾರೆ.

ಅಪಹರಣಕಾರರು ನರಬಾರಿ ಗ್ರಾಮದ ಬಳಿ ರಾಯ್ ಅವರ ಮೇಲೆ ಕ್ರೂರವಾಗಿ ಹಲ್ಲೆ ನಡೆಸಿದ್ದಾರೆ. ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಅವರನ್ನು ಸಂಬಂಧಿಕರು ಕೂಡಲೇ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಆದರೆ ಅವರು ಮಾರ್ಗ ಮಧ್ಯೆಯೇ ಮೃತಪಟ್ಟಿದ್ದಾರೆ ಎಂದು ವೈದ್ಯರು ಘೋಷಿಸಿದರು ಎಂದು ವರದಿಯಲ್ಲಿ ಹೇಳಲಾಗಿದೆ.

ರಾಯ್ ಅವರು ‘ಬಾಂಗ್ಲಾದೇಶ ಪೂಜಾ ಉದ್ಜಪನ್ ಪರಿಷತ್ತಿ’ನ ಬಿರಾಲ್ ಘಟಕದ ಉಪಾಧ್ಯಕ್ಷರಾಗಿದ್ದರು, ಆ ಭಾಗದಲ್ಲಿ ಹಿಂದೂ ಧರ್ಮದ ಪ್ರಮುಖ ನಾಯಕರಾಗಿದ್ದರು.

ಈ ಕೃತ್ಯದ ಕುರಿತು ಪ್ರಕರಣ ದಾಖಲಿಸುವ ಸಿದ್ಧತೆ ನಡೆಯುತ್ತಿದ್ದು, ಆರೋಪಿಗಳ ಬಂಧನಕ್ಕೆ ಶೋಧ ಕೈಗೊಳ್ಳಲಾಗಿದೆ ಎಂದು ಬಿರಾಲ್ ಪೊಲೀಸ್ ಠಾಣೆಯ ಅಧಿಕಾರಿ ತಿಳಿಸಿದ್ದಾರೆ.

ತೀವ್ರ ಖಂಡನೆ; ಕ್ರಮಕ್ಕೆ ಭಾರತ ಆಗ್ರಹ

ನವದೆಹಲಿ (ಪಿಟಿಐ): ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತ ಹಿಂದೂ ಸಮುದಾಯದ ಸ್ಥಳೀಯ ನಾಯಕನ ಅಪಹರಿಸಿ, ಭೀಕರವಾಗಿ ಕೊಲೆ ಮಾಡಿರುವ ಕೃತ್ಯವನ್ನು ಭಾರತ ಖಂಡಿಸಿದೆ.

ಅಲ್ಪಸಂಖ್ಯಾತ ಹಿತ ರಕ್ಷಿಸಲು ಬಾಂಗ್ಲಾದ ಮಧ್ಯಂತರ ಸರ್ಕಾರ ಕಠಿಣ ಕ್ರಮಕೈಗೊಳ್ಳಬೇಕು ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಆಗ್ರಹಪಡಿಸಿದ್ದಾರೆ.

‘ಹಿಂದೂ ನಾಯಕ ಭಬೇಶ್ ಚಂದ್ರರಾಯ್ ಅವರ ಭೀಕರ ಹತ್ಯೆ, ಬಾಂಗ್ಲಾದಲ್ಲಿ ಹಿಂದೂ ಅಲ್ಪಸಂಖ್ಯಾತರನ್ನು ವ್ಯವಸ್ಥಿತವಾಗಿ ಶಿಕ್ಷಿಸುವ ಕ್ರಮದಂತಿದೆ’ ಎಂದು ಹೇಳಿದ್ದಾರೆ.

ಕೊಲೆ ಕೃತ್ಯವನ್ನು ಭಾರತ ಖಂಡಿಸಲಿದೆ. ಅಲ್ಪಸಂಖ್ಯಾತ ಹಿತ ರಕ್ಷಿಸಲು ಮಧ್ಯಂತರ ಸರ್ಕಾರ ಹೊಣೆಗಾರಿಕೆ ತೋರಬೇಕು ಎಂದು ಒತ್ತಾಯಿಸಿದ್ದಾರೆ.

ರಣಧೀರ್ ಜೈಸ್ವಾಲ್

‘ಪ್ರಧಾನಿ ಸಭೆ ವೈಫಲ್ಯಕ್ಕೆ ನಿದರ್ಶನ’

ಬಾಂಗ್ಲಾದಲ್ಲಿ ಹಿಂದೂ ಸಮುದಾಯದ ನಾಯಕನ ಕೊಲೆ ಕುರಿತು ಬಾಂಗ್ಲಾ ಸರ್ಕಾರದ ಜೊತೆ ಚರ್ಚಿಸಬೇಕು ಎಂದು ಕೇಂದ್ರವನ್ನು ಕಾಂಗ್ರೆಸ್ ಒತ್ತಾಯಿಸಿದೆ.

‘ಹಿಂದೂಗಳ ಗುರಿಯಾಗಿಸಿ ಹಿಂಸೆ ಹೆಚ್ಚುತ್ತಿರುವ ಹೊತ್ತಿನಲ್ಲಿ ಮೌನವಾಗಿ ಇರುವುದು ಅಥವಾ ಪ್ರತಿಕ್ರಿಯೆ ತೋರದಿರುವುದು ಉತ್ತಮ ಆಯ್ಕೆಯಲ್ಲ’ ಎಂದೂ ಹೇಳಿದೆ.

‘ಪ್ರಧಾನಿ ನರೇಂದ್ರ ಮೋದಿ ಅವರು ನಗುತ್ತಾ ಬಾಂಗ್ಲಾದ ಮಧ್ಯಂತರ ಸರ್ಕಾರದ ಮುಖ್ಯ ಸಲಹೆಗಾರರ ಜೊತೆ ನಡೆಸಿದ ಸಭೆ ವಿಫಲವಾಗಿದೆ ಎಂಬುದಕ್ಕೆ ಈ ಕೊಲೆ ಕೃತ್ಯವೇ ನಿದರ್ಶನ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ‘ಎಕ್ಸ್’ನಲ್ಲಿ ಪ್ರತಿಕ್ರಿಯಿಸಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ

ಸುದ್ದಿ 2 ನಿಮಿಷ

ಕೋರ್ಟ್ ಕಾಯ್ದೆ ರೂಪಿಸುವುದಾದರೆ ಸಂಸತ್ತನ್ನೇ ಮುಚ್ಚಿಬಿಡಲಿ: ನಿಶಿಕಾಂತ್

ನವದೆಹಲಿ (ಪಿಟಿಐ): ನ್ಯಾಯಾಲಯವೇ ಕಾಯ್ದೆ, ಕಾನೂನುಗಳನ್ನು ರೂಪಿಸುವುದಾದರೆ ಸಂಸತ್ತನ್ನೇ ಮುಚ್ಚಿಬಿಡಲಿ ಎಂದು ಬಿಜೆಪಿ ಸಂಸದ ನಿಶಿಕಾಂತ್ ದುಬೆ ಶನಿವಾರ ಹೇಳಿದರು.

ಸಂಸತ್ತಿನಲ್ಲಿ ಅಂಗೀಕಾರಗೊಂಡಿರುವ ವಕ್ಫ್ ತಿದ್ದುಪಡಿ ಕಾಯ್ದೆಯ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಹಲವು ಅರ್ಜಿಗಳನ್ನು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸುತ್ತಿರುವಾಗಲೇ ದುಬೆ ಅವರು ‘ಎಕ್ಸ್’ನಲ್ಲಿ ಈ ರೀತಿ ಹೇಳಿದ್ದಾರೆ.

ನಂತರ ಪಿಟಿಐ ಸುದ್ದಿಸಂಸ್ಥೆಯೊಂದಿಗೆ ಮಾತನಾಡಿದ ಅವರು, ‘ಶಾಸಕಾಂಗವು ಅಂಗೀಕಾರ ನೀಡಿದ ಕಾನೂನುಗಳನ್ನು ತಡೆಹಿಡಿಯುವ ಮೂಲಕ ಸಂಸತ್ತಿನ ಮೇಲೆ ನ್ಯಾಯಾಲಯವು ದರ್ಪ ತೋರುತ್ತಿದೆ’ ಎಂದು ಆರೋಪಿಸಿದರು.

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳನ್ನು ನೇಮಕ ಮಾಡುವ ರಾಷ್ಟ್ರಪತಿಗೇ ನಿರ್ದೇಶನ ನೀಡುತ್ತಿದೆ ಎಂದರು. ಸಂವಿಧಾನದ 368ನೇ ವಿಧಿ ಉಲ್ಲೇಖಿಸಿದ ಅವರು, ‘ಕಾನೂನು ರೂಪಿಸುವುದು ಸಂಸತ್ತಿನ ಕರ್ತವ್ಯ ಮತ್ತು ಸುಪ್ರೀಂ ಕೋರ್ಟ್ ಅದನ್ನು ವ್ಯಾಖ್ಯಾನಿಸಬಹುದು. ನ್ಯಾಯಾಲಯವು ಸರ್ಕಾರಕ್ಕೆ ಆದೇಶ ನೀಡಬಹುದು, ಸಂಸತ್ತಿಗಲ್ಲ’ ಎಂದು ಹೇಳಿದರು.

ಬಿಎಂಐಸಿ ಯೋಜನೆ ಪರಾಮರ್ಶೆಗೆ ಸಂಪುಟ ಉಪ ಸಮಿತಿ

ಬೆಂಗಳೂರು: ಬೆಂಗಳೂರು– ಮೈಸೂರು ಮೂಲಸೌಕರ್ಯ ಕಾರಿಡಾರ್ (ಬಿಎಂಐಸಿ) ಯೋಜನೆಯ ಅನುಷ್ಠಾನದಲ್ಲಿ ಈವರೆಗೆ ಆಗಿರುವ ಪ್ರಗತಿ ಮತ್ತು ಮುಂದಿನ ಕ್ರಮಗಳ ಕುರಿತು ಪರಾಮರ್ಶೆ ನಡೆಸಿ ಶಿಫಾರಸು ಮಾಡಲು ಗೃಹ ಸಚಿವ ಜಿ. ಪರಮೇಶ್ವರ ಅವರ ನೇತೃತ್ವದಲ್ಲಿ ಸಚಿವ ಸಂಪುಟ ಉಪಸಮಿತಿ ರಚಿಸಲಾಗಿದೆ.

ಕಾನೂನು ಸಚಿವ ಎಚ್‌.ಕೆ.ಪಾಟೀಲ, ಆಹಾರ ಸಚಿವ ಕೆ.ಎಚ್. ಮುನಿಯಪ್ಪ, ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ, ಸಮಾಜ ಕಲ್ಯಾಣ ಸಚಿವ ಎಚ್‌.ಸಿ.ಮಹದೇವಪ್ಪ, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಸಮಿತಿಯ ಸದಸ್ಯರಾಗಿದ್ದಾರೆ.

ಕಾನೂನು ಹಾಗೂ ವಿಷಯ ತಜ್ಞರ ಜೊತೆ ಚರ್ಚಿಸಿ ತೆಗೆದುಕೊಳ್ಳಬಹುದಾದ ಕಾನೂನು ಕ್ರಮಗಳ ಕುರಿತು ಎರಡು ತಿಂಗಳಲ್ಲಿ ವರದಿ ನೀಡುವಂತೆ ಸಮಿತಿಗೆ ಸೂಚಿಸಲಾಗಿದೆ.

ದಿನದ ಮಟ್ಟಿಗೆ ಕದನ ವಿರಾಮ: ಪುಟಿನ್

ಮಾಸ್ಕೊ (ಎಪಿ/ರಾಯಿಟರ್ಸ್): ಉಕ್ರೇನ್ ವಿರುದ್ಧ ಯುದ್ಧ ನಡೆಸುತ್ತಿರುವ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು, ಒಂದು ದಿನ ಮಟ್ಟಿಗೆ ಶನಿವಾರ ಕದನ ವಿರಾಮ ಘೋಷಿಸಿದ್ದಾರೆ.

ವ್ಲಾದಿಮಿರ್ ಪುಟಿನ್

ಈಸ್ಟರ್ ಪ್ರಯುಕ್ತ ಘೋಷಿಸಲಾಗಿರುವ ಈ ಕದನ ವಿರಾಮ, ಸ್ಥಳೀಯ ಕಾಲಮಾನ ಶನಿವಾರ ಸಂಜೆ 6ರಿಂದ ಜಾರಿಗೆ ಬಂದಿದ್ದು, ಭಾನುವಾರ ಮಧ್ಯರಾತ್ರಿ ಅಂತ್ಯವಾಗಲಿದೆ ಎಂಧು ಕ್ರೆಮ್ಲಿನ್ ಹೇಳಿದೆ.

ಝೆಲೆನ್‌ಸ್ಕಿ ಟೀಕೆ: ‘ರಷ್ಯಾ ಪಡೆಗಳು ಶನಿವಾರವೂ ದಾಳಿ ನಡೆಸಿದ್ದು, ಆಕ್ರಮಣ ಮಾಡಿದ್ದ ಡ್ರೋನ್‌ಗಳನ್ನು ನಮ್ಮ ಪಡೆಗಳು ಹಿಮ್ಮೆಟ್ಟಿಸಿವೆ’ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ.

ವ್ಲಾದಿಮಿರ್ ಪುಟಿನ್ ಘೋಷಿಸಿರುವ ತಾತ್ಕಾಲಿಕ ಕದನ ವಿರಾಮ ಕುರಿತು ಪ್ರತಿಕ್ರಿಯಿಸಿರುವ ಅವರು, ‘ಡ್ರೋನ್ ಬಳಸಿ ನಡೆಸಿರುವ ಈ ದಾಳಿಯು ಈಸ್ಟರ್ ಹಾಗೂ ಜನರ ಕುರಿತ ರಷ್ಯಾದ ದೃಷ್ಟಿಕೋನ ತೋರಿಸುತ್ತದೆ’ ಎಂದು ಟೀಕಿಸಿದ್ದಾರೆ.

‘ಪರಮಾಧಿಕಾರ’ ವಿರುದ್ಧ ಕಾನೂನು ಹೋರಾಟ

ಮಂಡ್ಯದ ಕಸಾಪ ಸದಸ್ಯರು, ಪ್ರಗತಿಪರ ಸಂಘಟನೆಗಳ ಮುಖಂಡರ ಸಭೆಯಲ್ಲಿ ನಿರ್ಣಯ

• ಸಿದ್ದು ಆರ್‌.ಜಿ.ಹಳ್ಳಿ

ಮುಖ್ಯಾಂಶಗಳು

- ಕಸಾಪ ಬೈ–ಲಾ ತಿದ್ದುಪಡಿಗೆ ವಿರೋಧ
- ಸಿ.ಎಂ ಬಳಿ ನಿಯೋಗ ಹೋಗಲು ತೀರ್ಮಾನ
- ಜಿಲ್ಲಾ ಘಟಕಗಳ ಅಧಿಕಾರ ಮೊಟಕು: ಖಂಡನೆ

ಮಂಡ್ಯ: ಕನ್ನಡ ಸಾಹಿತ್ಯ ಪರಿಷತ್ತಿನ ‘ಸಮಸ್ತ ಅಧಿಕಾರ’ವನ್ನು ರಾಜ್ಯ ಘಟಕದ ಅಧ್ಯಕ್ಷರಿಗೆ ನೀಡುವ ಉದ್ದೇಶದಿಂದ ಬೈ–ಲಾ ತಿದ್ದುಪಡಿಗೆ ಮುಂದಾಗಿರುವ ಕ್ರಮ ಖಂಡಿಸಿ, ಕಾನೂನು ಹೋರಾಟ ನಡೆಸಲು ಪರಿಷತ್ ಸದಸ್ಯರು ಮತ್ತು ಪ್ರಗತಿಪರ ಸಂಘಟನೆಗಳ ಮುಖಂಡರು ಮುಂದಾಗಿದ್ದಾರೆ.

ನಗರದ ಕರ್ನಾಟಕ ಸಂಘದ ಕೆ.ವಿ. ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಸಾಹಿತ್ಯ ಪರಿಷತ್ತಿನ ಸದಸ್ಯರು ಮತ್ತು ರೈತ ಮತ್ತು ಪ್ರಗತಿಪರ ಸಂಘಟನೆಗಳ ಮುಖಂಡರು ತುರ್ತು ಸಭೆ ನಡೆಸಿ ಹಲವು ನಿರ್ಣಯಗಳನ್ನು ಕೈಗೊಂಡಿದ್ದಾರೆ. ಮಹೇಶ ಜೋಶಿ ವಿರುದ್ಧ ಜಿಲ್ಲೆ ಮತ್ತು ರಾಜ್ಯದಾದ್ಯಂತ ಹೋರಾಟಕ್ಕೆ ಅಣಿಯಾಗಿದ್ದಾರೆ.

‘ಅಧ್ಯಕ್ಷರು ಮಂಡ್ಯ ಜಿಲ್ಲಾ ಘಟಕದ ಕೆಲವು ಸದಸ್ಯರಿಗೆ ಷೋಕಾಸ್ ನೋಟಿಸ್ ನೀಡಿ ಸದಸ್ಯತ್ವ ರದ್ದತಿಗೆ ಏಕಪಕ್ಷೀಯವಾಗಿ ಕ್ರಮ ಕೈಗೊಂಡಿದ್ದಾರೆ’ ಎಂದು ಆರೋಪಿಸಿದ್ದಾರೆ. ಈ ಸಂಬಂಧ, ಹಿರಿಯ ಸಾಹಿತಿಗಳು, ಸಂಘಟನೆಗಳ ಮುಖಂಡರನ್ನು ಒಳಗೊಂಡ ನಿಯೋಗವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಳಿಗೆ ಕರೆದೊಯ್ದು, ಸಮಸ್ಯೆ ಮನವರಿಕೆ ಮಾಡಿಕೊಡಲು ತೀರ್ಮಾನಿಸಿದ್ದಾರೆ.

> ಕೇಂದ್ರ ಕಸಾಪದ ಬೈಲಾ ತಿದ್ದುಪಡಿಗೆ ನ್ಯಾಯಾಲಯ ತಡೆಯಾಜ್ಞೆ ನೀಡಿದೆ. ಇದರ ನಡುವೆ ಇನ್ನಷ್ಟು ತಿದ್ದುಪಡಿಗೆ ಮುಂದಾಗಿರುವ ಜೋಶಿ ಧೋರಣೆ ಸರಿಯಲ್ಲ
> **ಕೆ.ಟಿ.ಶ್ರೀಕಂಠೇಗೌಡ**, ವಿಧಾನ ಪರಿಷತ್ ಮಾಜಿ ಸದಸ್ಯ

> ಮಹೇಶ ಜೋಶಿ ನಡೆ, ನಿಲುವು ಸಮ್ಮೇಳನದ ಆರಂಭದಿಂದ ಕೊನೆಯವರೆಗೆ ವ್ಯತಿರಿಕ್ತವಾಗಿದ್ದವು. ಮುಖ್ಯ ವೇದಿಕೆಯಲ್ಲಿ ಹಿರಿಯ ಸಾಹಿತಿಗಳಿಗೆ ವಿಚಾರ ಮಂಡನೆಗೆ ಅವಕಾಶ ನೀಡಲಿಲ್ಲ
> **ಸುನಂದಾ ಜಯರಾಂ,** ರೈತ ನಾಯಕಿ

ತಡೆಯಾಜ್ಞೆ ತಂದವರಿಗೆ ನೋಟಿಸ್: 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮುಗಿದ ಮಾರನೇ ದಿನ ಪರಿಷತ್‌ನ ಬೈಲಾ ನಿಯಮ ಉಲ್ಲಂಘಿಸಿ, ಕಾರ್ಯಕಾರಿ ಮಂಡಳಿ ರದ್ದುಪಡಿಸಿ ಹೊಸ ಕಾರ್ಯಕಾರಿ ಮಂಡಳಿ ರಚಿಸಲಾಗಿತ್ತು. ಇದರ ವಿರುದ್ಧ ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದಿದ್ದವರಿಗೆ ಸದಸ್ಯತ್ವ ರದ್ದುಪಡಿಸುವ ನೋಟಿಸ್ ನೀಡಲಾಗಿದ್ದು, ಅದಕ್ಕೆ ತಕ್ಕ ಉತ್ತರ ನೀಡುವ ಬಗ್ಗೆಯೂ ನಿರ್ಣಯ ಕೈಗೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

2022 ಮತ್ತು 2023ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ನಿಬಂಧನೆಗಳಿಗೆ ಕಸಾಪ ಅಧ್ಯಕ್ಷರು ತಿದ್ದುಪಡಿ ತಂದಿರುವುದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಜಿಲ್ಲಾ ಘಟಕದ ಅಧ್ಯಕ್ಷರ ಸ್ಥಾನ ತೆರವಾದಲ್ಲಿ ಆ ಸ್ಥಾನಕ್ಕೆ ಅರ್ಹರಾದ ಬೇರೊಬ್ಬ ವ್ಯಕ್ತಿಯನ್ನು ಆಯ್ಕೆ ಮಾಡಿಕೊಳ್ಳುವ ಅಧಿಕಾರವನ್ನು ಕಾರ್ಯಕಾರಿ ಸಮಿತಿಯಿಂದ ಹಿಂಪಡೆಯಲು ಮುಂದಾಗಿರುವ ಕ್ರಮವನ್ನು ಒಕ್ಕೊರಲಿನಿಂದ ಖಂಡಿಸಿದ್ದಾರೆ.

ಮುದ್ದೇಗೌಡರ ಪತ್ರಕ್ಕೆ ಆಕ್ಷೇಪ: ಕೇಂದ್ರ ಕಸಾಪ ಸಂಘ–ಸಂಸ್ಥೆಗಳ ಪ್ರತಿನಿಧಿ ಎಚ್‌.ಎಸ್‌.ಮುದ್ದೇಗೌಡ ಅವರು, ‘ಮಂಡ್ಯದಲ್ಲಿ ನಡೆದ 87ನೇ ನುಡಿಜಾತ್ರೆ ಸಿದ್ಧತೆಯಿಂದ ಮುಕ್ತಾಯದವರೆಗೆ ನಡೆದ ಅಹಿತಕರ ಘಟನೆ ಮತ್ತು ಕಾರ್ಯಕಾರಿ ಸಮಿತಿ ಸಭೆಯಲ್ಲಿ ಹಲವರ ಅತಿಕ್ರಮ ಪ್ರವೇಶವಾಗಿ ಆತಂಕದ ವಾತಾವರಣ ಸೃಷ್ಟಿಯಾಗಿತ್ತು. ಇದಕ್ಕೆ ಕಾರಣರಾದ ಕಸಾಪ ಜಿಲ್ಲಾ ಸದಸ್ಯರಾದ ರಂಗಸ್ವಾಮಿ, ಹರ್ಷ ಪಣ್ಣೆದೊಡ್ಡಿ, ನಾಗಮಂಗಲ ಧನಂಜಯ, ಮದ್ದೂರಿನ ಶಿವ ಅವರ ಸದಸ್ಯತ್ವ ಅಮಾನತಿನಲ್ಲಿಡಬೇಕು. ಘಟನೆಗೆ ಕುಮ್ಮಕ್ಕು ನೀಡಿದ ಸಮ್ಮೇಳನದ ಸಂಚಾಲಕಿ ಮೀರಾ ಶಿವಲಿಂಗಯ್ಯ ಅವರ ನಡೆ ಅಕ್ಷಮ್ಯ’ ಎಂದು ಮಹೇಶ ಜೋಶಿ ಅವರಿಗೆ ಈಚೆಗೆ ಪತ್ರ ಬರೆದಿದ್ದರು.

‘ರಾಜ್ಯ ಘಟಕದ ಅಧ್ಯಕ್ಷರ ಸರ್ವಾಧಿಕಾರಿ ಧೋರಣೆ ಸಮರ್ಥಿಸಿಕೊಂಡು, ಸ್ಥಳೀಯರ ವಿರುದ್ಧವೇ ದನಿ ಎತ್ತಿರುವ ಮುದ್ದೇಗೌಡ ಅವರು ರಾಜೀನಾಮೆ ನೀಡಬೇಕು’ ಎಂದು ಪ್ರಗತಿಪರ ಸಂಘಟನೆಗಳ ಮುಖಂಡರು ಒತ್ತಾಯಿಸಿದ್ದಾರೆ.

‘ಜೋಶಿಯವರೇನು ಪಾಳೇಗಾರನೆ?’

‘ಮಂಡ್ಯದಲ್ಲಿ ನಡೆದ 87ನೇ ನುಡಿಜಾತ್ರೆಯ ₹30 ಕೋಟಿ ಅನುದಾನದಲ್ಲಿ ಕೇಂದ್ರ ಕಸಾಪಕ್ಕೆ ₹2.50 ಕೋಟಿ ನೀಡಲಾಗಿದೆ. ಇದುವರೆಗೂ ಮಹೇಶ ಜೋಶಿ ಅವರು ಲೆಕ್ಕ ಕೊಡದೆ ಸರ್ವಾಧಿಕಾರಿ ಧೋರಣೆ ತೋರುತ್ತಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರೇ ಲೆಕ್ಕ ಕೊಟ್ಟಿದ್ದಾರೆ. ಜೋಶಿಯವರೇನು ಪಾಳೇಗಾರನೆ?’ ಎಂದು ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡ ಪ್ರಶ್ನಿಸಿದ್ದಾರೆ.

ಜೆಇಇ: 24 ಮಂದಿಗೆ ಅಗ್ರ ಶ್ರೇಯಾಂಕ

ನವದೆಹಲಿ (ಪಿಟಿಐ): ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶ ಪರೀಕ್ಷೆ ‘ಜೆಇಇ–ಮೇನ್’ ಎರಡನೇ ಆವೃತ್ತಿಯ ಫಲಿತಾಂಶ ಶನಿವಾರ ಪ್ರಕಟವಾಗಿದ್ದು, ಕರ್ನಾಟಕದ ಒಬ್ಬರು ಸೇರಿ 24 ಪರೀಕ್ಷಾರ್ಥಿಗಳು ಶೇಕಡ 100 ಪರ್ಸೆಂಟೈಲ್ ಗಳಿಸಿದ್ದಾರೆ.

ರಾಜಸ್ಥಾನದ ಏಳು ಮಂದಿ, ತೆಲಂಗಾಣ, ಉತ್ತರ ಪ್ರದೇಶ ಮತ್ತು ಮಹಾರಾಷ್ಟ್ರದಿಂದ ತಲಾ ಮೂವರು ಹಾಗೂ ದೆಹಲಿ, ಪಶ್ಚಿಮ ಬಂಗಾಳ ಮತ್ತು ಗುಜರಾತ್‌ನಿಂದ ತಲಾ ಇಬ್ಬರು ಹಾಗೂ ಕರ್ನಾಟಕ, ಆಂಧ್ರ ಪ್ರದೇಶದಿಂದ ತಲಾ ಒಬ್ಬ ಅಭ್ಯರ್ಥಿ ಶೇಕಡ 100 ಪರ್ಸೆಂಟೈಲ್ ಗಳಿಸಿದ ಹಿರಿಮೆಗೆ ಪಾತ್ರರಾಗಿದ್ದಾರೆ. 24 ಮಂದಿಯ ಪೈಕಿ ಇಬ್ಬರು ಮಹಿಳೆಯರು ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಪ್ರಕಟಿಸಿದೆ.

ಶೇಕಡ 100 ಪರ್ಸೆಂಟೈಲ್ ಗಳಿಸಿದವರಲ್ಲಿ ಸಾಮಾನ್ಯ ವರ್ಗದ 21 ಮಂದಿ ಹಾಗೂ ಒಬಿಸಿ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ತಲಾ ಒಬ್ಬ ಅಭ್ಯರ್ಥಿ ಇದ್ದಾರೆ. ಎರಡನೇ ಆವೃತ್ತಿಯ ಪರೀಕ್ಷೆ ಸಂದರ್ಭದಲ್ಲಿ 110 ಅಭ್ಯರ್ಥಿಗಳು ನಕಲಿ ದಾಖಲೆ ಸಲ್ಲಿಸಿರುವುದು ಪತ್ತೆಯಾಗಿದ್ದು, ಅವರ ಫಲಿತಾಂಶವನ್ನು ಪ್ರಕಟಿಸಿಲ್ಲ ಎಂದು ಎನ್‌ಟಿಎ ತಿಳಿಸಿದೆ.

ಮೊದಲ ಆವೃತ್ತಿಯಲ್ಲಿ 10.61 ಲಕ್ಷ ಮಂದಿ, ಎರಡನೇ ಆವೃತ್ತಿಯಲ್ಲಿ 9.92 ಲಕ್ಷ ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು.

ವರ್ಷಾಂತ್ಯದಲ್ಲಿ ಭಾರತಕ್ಕೆ ಭೇಟಿ: ಮಸ್ಕ್

ವಾಷಿಂಗ್ಟನ್/ ನ್ಯೂಯಾರ್ಕ್ (ಪಿಟಿಐ): ‘ಈ ವರ್ಷಾಂತ್ಯದಲ್ಲಿ ಭಾರತಕ್ಕೆ ಭೇಟಿ ನೀಡಲು ಎದುರು ನೋಡುತ್ತಿದ್ದೇನೆ’ ಎಂದು ಟೆಸ್ಲಾ ಹಾಗೂ ಸ್ಪೇಸ್‌ಎಕ್ಸ್ ಕಂಪನಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಲಾನ್ ಮಸ್ಕ್ ತಿಳಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಎಲಾನ್ ಮಸ್ಕ್ ಜತೆ ನಾವೀನ್ಯತೆ ಮತ್ತು ತಂತ್ರಜ್ಞಾನ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮಹತ್ವದ ಮಾತುಕತೆ ನಡೆಸಿದ ಬೆನ್ನಲ್ಲೇ ಈ ಹೇಳಿಕೆ ನೀಡಿದ್ದಾರೆ.

ಎಲಾನ್ ಮಸ್ಕ್

ಡೊನಾಲ್ಡ್ ಟ್ರಂಪ್ ಆಡಳಿತದಲ್ಲಿ ಅತ್ಯಂತ ಪ್ರಭಾವಿ ವ್ಯಕ್ತಿಗಳಲ್ಲಿ ಒಬ್ಬರೆನಿಸಿರುವ ಮಸ್ಕ್ ಅವರು ಅಮೆರಿಕ ಸರ್ಕಾರದ ದಕ್ಷತಾ ಇಲಾಖೆಯ (ಡಿಒಜಿಇ) ನೇತೃತ್ವ ವಹಿಸಿದ್ದಾರೆ.

‘ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಮಾತನಾಡಿರುವುದು ಗೌರವದ ಸಂಗತಿ. ಈ ವರ್ಷದ ಕೊನೆಯಲ್ಲಿ ಭಾರತಕ್ಕೆ ಭೇಟಿ ನೀಡಲು ಎದುರು ನೋಡುತ್ತಿದ್ದೇನೆ’ ಎಂದು ತಿಳಿಸಿದ್ದಾರೆ.

ಮಸ್ಕ್ ಒಡೆತನದ ಸ್ಟಾರ್‌ಲಿಂಕ್ ಮತ್ತು ವಿದ್ಯುತ್‌ಚಾಲಿತ ಕಾರು ತಯಾರಿಕಾ ಕಂಪನಿ ಟೆಸ್ಲಾ, ಭಾರತದ ಮಾರುಕಟ್ಟೆಗೆ ಪ್ರವೇಶಿಸಲು ಸಿದ್ಧತೆ ನಡೆಸಿರುವ ಸಮಯದಲ್ಲೇ ಇಬ್ಬರ ನಡುವೆ ದೂರವಾಣಿ ಸಂಭಾಷಣೆ ನಡೆದಿದೆ.

ಕೆನಡಾ: ಭಾರತೀಯ ವಿದ್ಯಾರ್ಥಿನಿಯ ಹತ್ಯೆ

ನ್ಯೂಯಾರ್ಕ್ (ಪಿಟಿಐ): ಭಾರತೀಯ ವಿದ್ಯಾರ್ಥಿನಿಯೊಬ್ಬರು ಕೆನಡಾದಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಹತರಾಗಿದ್ದಾರೆ.

ಪಂಜಾಬ್‌ನ ತರನ್ ತಾರನ್ ಜಿಲ್ಲೆಯವರಾದ ಹರಸಿಮ್ರತ್ ರಂಧಾವ (21) ಹತ್ಯೆಯಾದ ವಿದ್ಯಾರ್ಥಿನಿ. ಕಾರಿನಲ್ಲಿದ್ದ ವ್ಯಕ್ತಿಯೊಬ್ಬ ಬುಧವಾರ ಬೇರೆಯವರನ್ನು ಗುರಿಯಾಗಿಸಿಕೊಂಡು ಹೊಡೆದಿದ್ದ ಗುಂಡು ಬಸ್ ನಿಲ್ದಾಣದಲ್ಲಿ ನಿಂತಿದ್ದ ಹರಸಿಮ್ರತ್ ರಂಧಾವ ಅವರಿಗೆ ತಗುಲಿದೆ.

‘ಸ್ಥಳೀಯ ಪೊಲೀಸರ ಮಾಹಿತಿ ಪ್ರಕಾರ, ರಂಧಾವ ಅವರನ್ನು ಗುರಿಯಾಗಿಸಿಕೊಂಡು ದಾಳಿ ನಡೆದಿಲ್ಲ. ಎರಡು ವಾಹನಗಳಲ್ಲಿ ಇದ್ದವರ ನಡುವಿನ ಗುಂಡಿನ ಚಕಮಕಿ ವೇಳೆ ರಂಧಾವ ಅವರಿಗೆ ಗುಂಡು ತಗುಲಿದೆ. ಅವರ ಕುಟುಂಬಸ್ಥರೊಂದಿಗೆ ಸಂಪರ್ಕದಲ್ಲಿದ್ದೇವೆ’ ಎಂದು ಟೊರೊಂಟೊದಲ್ಲಿನ ಭಾರತೀಯ ಕಾನ್ಸುಲೇಟ್ ಜನರಲ್ ‘ಎಕ್ಸ್’ ಮೂಲಕ ತಿಳಿಸಿದೆ.

‘ಘಟನೆಯ ಬಗ್ಗೆ ತನಿಖೆ ನಡೆಸಲಾಗುತ್ತಿದೆ. ಆರೋಪಿಗಳು ಹಾರಿಸಿದ ಗುಂಡು ಹತ್ತಿರದ ಮನೆಗಳಿಗೂ ನುಗ್ಗಿದ್ದು, ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಮೃತದೇಹ ತರಲು ಸಹಕರಿಸಿ’: ಹರ್ಸಿಮ್ರತ್ ರಂಧಾವ ಅವರ ಮೃತದೇಹವನ್ನು ಕೆನಡಾದಿಂದ ಭಾರತಕ್ಕೆ ತರಲು ಸಹಕರಿಸುವಂತೆ ಅವರ ಕುಟುಂಬಸ್ಥರು ಕೇಂದ್ರ ಮತ್ತು ಪಂಜಾಬ್ ಸರ್ಕಾರಕ್ಕೆ ಶನಿವಾರ ಮನವಿ ಮಾಡಿದ್ದಾರೆ.

ಸಿಡಿ ಉತ್ಸವ... ತುಮಕೂರು ಜಿಲ್ಲೆ ತುರುವೇಕೆರೆಯ ಗ್ರಾಮ ದೇವತೆ ಉಡುಸಲಮ್ಮ ದೇವಿ ಜಾತ್ರೆ ಅಂಗವಾಗಿ ಶನಿವಾರ ಸಿಡಿ ಉತ್ಸವ ಅದ್ದೂರಿಯಾಗಿ ನೆರವೇರಿತು

ಮತ್ತೆ ಒಂದಾಗಲು ಉದ್ಧವ್, ರಾಜ್ ಒಲವು

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದಲ್ಲಿ ಮಹತ್ವದ ರಾಜಕೀಯ ಬೆಳವಣಿಗೆಯೊಂದರಲ್ಲಿ ಉದ್ಧವ್ ಠಾಕ್ರೆ ಮತ್ತು ರಾಜ್ ಠಾಕ್ರೆ ಅವರು ತಮ್ಮ ನಡುವಿನ ಭಿನ್ನಾಭಿಪ್ರಾಯಗಳನ್ನು ಮರೆತು, ರಾಜ್ಯದ ಹಿತಕ್ಕಾಗಿ ಒಟ್ಟಾಗಿ ಕೆಲಸ ಮಾಡುವ ಸೂಚನೆ ನೀಡಿದ್ದಾರೆ.


ಉದ್ಧವ್ ಠಾಕ್ರೆ

ರಾಜ್ ಠಾಕ್ರೆ

ಉದ್ಧವ್ ಅವರು ಶಿವಸೇನಾ (ಯುಬಿಟಿ) ಪಕ್ಷದ ಚುಕ್ಕಾಣಿ ಹಿಡಿದಿದ್ದಾರೆ. ರಾಜ್ ಅವರು ಮಹಾರಾಷ್ಟ್ರ ನವನಿರ್ಮಾಣ ಸೇನಾ (ಎಂಎನ್‌ಎಸ್) ನಾಯಕತ್ವ ಹೊಂದಿದ್ದಾರೆ. ರಾಜ್ ಅವರು ಉದ್ಧವ್ ಅವರ ಸೋದರ ಸಂಬಂಧಿಯೂ ಹೌದು.

‘ನನಗೆ ಮಹಾರಾಷ್ಟ್ರದ ಹಿತಾಸಕ್ತಿ ದೊಡ್ಡದು. ಅದರ ಎದುರು ಉಳಿದ ಎಲ್ಲವೂ ನಗಣ್ಯ. ಇದಕ್ಕಾಗಿ ನಾನು ಸಣ್ಣ ತಕರಾರುಗಳನ್ನು ಬದಿಗೆ ಸರಿಸಲು ಸಿದ್ಧ, ಉದ್ಧವ್ ಅವರ ಜೊತೆ ಕೆಲಸ ಮಾಡಲು ತಯಾರಿದ್ದೇನೆ. ಇದಕ್ಕೆ ಅವರೂ ಸಿದ್ಧರಿದ್ದಾರೆಯೇ ಎಂಬುದು ಇಲ್ಲಿರುವ ಪ್ರಶ್ನೆ’ ಎಂದು ರಾಜ್ ಅವರು ಸಿನಿಮಾ ನಿರ್ದೇಶಕ ಮಹೇಶ್ ಮಾಂಜ್ರೇಕರ್ ನಡೆಸುವ ಪಾಡ್‌ಕಾಸ್ಟ್‌ನಲ್ಲಿ ಹೇಳಿದ್ದಾರೆ.

ರಾಜ್ ಅವರ ಮಾತುಗಳಿಗೆ ಪ್ರತಿಕ್ರಿಯೆ ನೀಡಿರುವ ಉದ್ಧವ್ ಅವರು, ‘ಮರಾಠಿ ಭಾಷೆ ಮತ್ತು ಮಹಾರಾಷ್ಟ್ರಕ್ಕಾಗಿ ನಾನು ಕೂಡ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳನ್ನು ಪಕ್ಕಕ್ಕೆ ಇರಿಸಲು ಸಿದ್ಧನಿದ್ದೇನೆ. ಆದರೆ ಅವರು ಮಹಾರಾಷ್ಟ್ರ ವಿರೋಧಿ ಜನರಿಗೆ ಮತ್ತು ಪಕ್ಷಗಳಿಗೆ ನೆರವು ಒದಗಿಸಬಾರದು... ಅವರು ಈ ಬಗ್ಗೆ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆ ಎದುರು ಪ್ರಮಾಣ ಮಾಡಬೇಕು’ ಎಂದಿದ್ದಾರೆ.

ನವದೆಹಲಿಯಲ್ಲಿ ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರನ್ನು ತಮಿಳುನಾಡು ರಾಜ್ಯಪಾಲ ಆರ್‌.ಎನ್‌.ರವಿ ಅವರು ಶನಿವಾರ ಭೇಟಿ ಮಾಡಿದರು –ಪಿಟಿಐ ಚಿತ್ರ

30 ಮಂದಿಗೆ ‘ಸರ್ವೋತ್ತಮ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯುತ್ತಮವಾಗಿ ಕರ್ತವ್ಯ ನಿರ್ವಹಿಸಿದವರಿಗೆ ರಾಜ್ಯ ಸರ್ಕಾರ ನೀಡುವ 2023ನೇ ಸಾಲಿನ ರಾಜ್ಯಮಟ್ಟದ ‘ಸರ್ವೋತ್ತಮ ಪ್ರಶಸ್ತಿ’ಗೆ ಒಟ್ಟು 30 ಅಧಿಕಾರಿ, ನೌಕರರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿ ಪುರಸ್ಕೃತರಿಗೆ ತಲಾ ₹50 ಸಾವಿರ ನಗದು, ಪ್ರಶಸ್ತಿ ಫಲಕ, ಹಾರ, ಶಾಲು ನೀಡಿ ಗೌರವಿಸಲಾಗುವುದು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ತಿಳಿಸಿದೆ.

ಪ್ರಶಸ್ತಿಗೆ ಸ್ವತಃ ನಾಮ ನಿರ್ದೇಶನ ಸಲ್ಲಿಸಿದ್ದ ಅಧಿಕಾರಿ, ನೌಕರರ ಪೈಕಿ ತಲಾ ಇಬ್ಬರನ್ನು ಪ್ರತಿ ಜಿಲ್ಲೆಯ ಜಿಲ್ಲಾಧಿಕಾರಿಗಳು, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿ ನಾಮ ನಿರ್ದೇಶನ ಮಾಡಲು ಅವಕಾಶ ನೀಡಲಾಗಿತ್ತು. ಅರ್ಜಿಗಳನ್ನು ಪರಿಶೀಲಿಸಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯ ನೇತೃತ್ವದ ಆಯ್ಕೆ ಸಮಿತಿ ಆಯ್ಕೆ ಮಾಡಿದೆ.

ಪ್ರಶಸ್ತಿಗೆ ಆಯ್ಕೆಗೊಂಡವರು: ಎಸ್. ವಾಸುದೇವ, ಸರ್ವೇಯರ್, ಭೂ ಮಾಪನ ಮತ್ತು ಕಂದಾಯ ನಿರ್ಣಯ ತರಬೇತಿ ಸಂಸ್ಥೆ, ಮೈಸೂರು. ಲಲಿತ, ಜಂಟಿ ಕಾರ್ಯದರ್ಶಿ, ಕಾನೂನು ಇಲಾಖೆ, ಸಚಿವಾಲಯ. ಸೋನಿಯಾ ವರ್ಣೆಕರ್, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ, ಕೋಲಾರ. ಭಕ್ತರಾಜ್ ಪಾಟೀಲ್, ಉಪ ನಿರ್ದೇಶಕರು, ಭಾಷಾಂತರ ನಿರ್ದೇಶನಾಲಯ, ಬೆಂಗಳೂರು. ವಿಜಯ್ ಕುಮಾರ್ ಎಂ. ಭತ್ತದ್, ಉಪ ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ. ಮಂಜು ಎ.ಸಿ, ಉಪ ಕೃಷಿ ನಿರ್ದೇಶಕರು, ಬೆಂಗಳೂರು.

ಶೈಲಜಾ ಎಂ.ಟಿ. ನರ್ಸಿಂಗ್ ಅಧಿಕಾರಿ, ಆರೋಗ್ಯ ಇಲಾಖೆ, ಜನರಲ್ ಆಸ್ಪತ್ರೆ, ಹೊಸನಗರ, ಶಿವಮೊಗ್ಗ. ಶಿವಪ್ರಸಾದ್ ಆಳ್ವ.ಕೆ. ಕಾನೂನು ಅಧಿಕಾರಿ, ಎಸ್‌ಪಿ ಕಚೇರಿ ಆವರಣ, ಮಂಗಳೂರು. ಅನಿತಾ ಭಾಸ್ಕರ್, ಉಪ ನಿರ್ದೇಶಕರು, ಪ್ರವಾಸೋದ್ಯಮ ನಿರ್ದೇಶನಾಲಯ, ಬೆಂಗಳೂರು. ಜಂಬುನಾಥ ಬೂತಪ್ಪ ಮಜ್ಜಗಿ, ತಹಶೀಲ್ದಾರ್ ಗ್ರೇಡ್–1, ಬಾದಾಮಿ. ಮಾರುತಿ ದೊಡ್ಡಮನಿ, ನಿಲಯ ಮೇಲ್ವಿಚಾರಕರು, ಬನಹಟ್ಟಿ ತಾಲ್ಲೂಕು, ಬಾಗಲಕೋಟೆ. ಹೊನ್ನಲಿಂಗಪ್ಪ ವೈ.ಬಿ. ಜಂಟಿ ನಿಯಂತ್ರಕರು, ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ. ಶ್ರೀನಿವಾಸಯ್ಯ ಎಚ್‌.ಎಸ್. ಸಹಾಯಕ ನಿರ್ದೇಶಕರು, ಪಿಎಂಐ ವಿಭಾಗ, ಯೋಜನಾ ಇಲಾಖೆ ಬೆಂಗಳೂರು. ಸರೋಜ ಎಂ. ಉಪ ನಿರ್ದೇಶಕರು (ಯೋಜನಾ ವಿಭಾಗ), ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಆಯುಕ್ತಾಲಯ, ಬೆಂಗಳೂರು

ಸತ್ಯಶ್ರೀ, ಹೆಚ್ಚುವರಿ ನಿರ್ದೇಶಕರು (ಆಡಳಿತ), ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು. ನಾಮದೇವ ವಿ. ಬಿಲ್ಕರ್, ಜಿಲ್ಲಾ ಅಂಗವಿಕಲರ ಕಲ್ಯಾಧಿಕಾರಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಳಗಾವಿ. ಹನುಮೇಗೌಡ ಬಿ.ಆರ್, ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಭೂ ದಾಖಲೆಗಳ ಉಪ ನಿರ್ದೇಶಕರು, ಬೆಂಗಳೂರು ಗ್ರಾಮಾಂತರ ಜಿಲ್ಲೆ. ಗೀತಾ ಹುಡೇದ, ಹೆಚ್ಚುವರಿ ಜಿಲ್ಲಾಧಿಕಾರಿ, ಚಾಮರಾಜನಗರ. ಸುಬ್ರಮಣಿ, ದಫೇದಾರ್, ಜಿಲ್ಲಾಧಿಕಾರಿ ಕಚೇರಿ, ಚಿಕ್ಕಬಳ್ಳಾಪುರ

ಮಲ್ಲಮ್ಮ, ಗ್ರಾಮ ಆಡಳಿತಾಧಿಕಾರಿ, ಘಟರೆಡ್ಡಿಹಾಳ ತಾಲ್ಲೂಕು, ಕೊಪ್ಪಳ. ಕೆ. ಮಂಜುನಾಥ್, ಪಿಡಿಒ, ಉಮ್ಮಡಹಳ್ಳಿ ಗ್ರಾಮ ಪಂಚಾಯಿತಿ, ಮಂಡ್ಯ ತಾಲ್ಲೂಕು. ತಾನೋಜಿ, ಗ್ರಾಮ ಆಡಳಿತ ಅಧಿಕಾರಿ (ಭೂಮಿ ಕೇಂದ್ರ), ತಹಶೀಲ್ದಾರ್ ಕಾರ್ಯಾಲಯ ಶಹಾಪುರ. ಸಾವಿತ್ರಿ ಎಚ್‌.ಎಸ್. ಉಪ ನಿರ್ದೇಶಕರು, ಜಿಲ್ಲಾ ಖಜಾನೆ ಇಲಾಖೆ, ಶಿವಮೊಗ್ಗ. ಪ್ರಶಾಂತ ಜೆ.ಸಿ. ಮುಖ್ಯ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯಿತಿ ಗದಗ. ಅರುಣ್ ಕುಮಾರ್ ಶೆಟ್ಟಿ ಎನ್. ಉಪ ನಿರ್ದೇಶಕರ ಕಚೇರಿ, ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆಗಳ ಇಲಾಖೆ ಮಂಗಳೂರು

ಸಂಜಯ್ ಎಂ.ಎನ್. ಸಹಾಯಕ ಔಷಧ ನಿಯಂತ್ರಕ, ಆಯುಷ್ ಇಲಾಖೆ, ಬೆಂಗಳೂರು. ಅಬ್ದುಲ್ ಸಾಹೇಬ್, ಸೈಯದಾಸಾಬ್ ಮಕಂದರ್, ಪ್ರಿನ್ಸಿಪಲ್ ಸಿವಿಲ್ ಜಡ್ಜ್, ಸಿಜೆಎಂ ಕೋರ್ಟ್ ಗದಗ. ಮುರಳೀಧರ ಸಿ, ಉಪ ನಿರ್ದೇಶಕರು, ಖಜಾನೆ ಇಲಾಖೆ. ಪದ್ಮರಾಜ್, ಪಿಡಿಒ, ಸುಂಕಸಾಲೆ ಗ್ರಾಮ ಪಂಚಾಯಿತಿ, ಮೂಡಿಗೆರೆ ತಾಲ್ಲೂಕು. ದುರುಗೇಶ್, ವಿಶೇಷ ಭೂಸ್ವಾಧೀನ ಅಧಿಕಾರಿ, ಕೃಷ್ಣಾ ಮೇಲ್ದಂಡೆ ಯೋಜನೆ, ಇಂಡಿ ತಾಲ್ಲೂಕು.

ಬಾಲಕನ ಅಪಹರಿಸಿ, ಗುದಸಂಭೋಗ ನಡೆಸಿದವನಿಗೆ ಜೀವಾವಧಿ ಶಿಕ್ಷೆ

ನವದೆಹಲಿ (ಪಿಟಿಐ): 12 ವರ್ಷ ವಯಸ್ಸಿನ ಬಾಲಕನನ್ನು 2023ರ ಫೆಬ್ರುವರಿಯಲ್ಲಿ ಅಪಹರಿಸಿ, ಆತನ ಜತೆ ಗುದಸಂಭೋಗ ನಡೆಸಿದ ವ್ಯಕ್ತಿಯೊಬ್ಬನಿಗೆ ಇಲ್ಲಿನ ನ್ಯಾಯಾಲಯವೊಂದು ಕಠಿಣ ಜೀವಾವಧಿ ಶಿಕ್ಷೆ ವಿಧಿಸಿದೆ.

ಈ ಅಪರಾಧ ಕೃತ್ಯವು ಮಾನವ ಘನತೆಯ ಮೌಲ್ಯವನ್ನು ಉಲ್ಲಂಘಿಸಿದೆ, ಅಪರಾಧಿಯನ್ನು ಸಮಾಜದಿಂದ ಶಾಶ್ವತವಾಗಿ ಪ್ರತ್ಯೇಕಿಸಬೇಕಾಗಿದೆ ಎಂದು ನ್ಯಾಯಾಲಯ ಹೇಳಿದೆ.

ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶೆ ಬಬಿತಾ ಪುನಿಯಾ ಅವರು, 47 ವರ್ಷ ವಯಸ್ಸಿನ ಅಪರಾಧಿಗೆ ಯಾವ ಶಿಕ್ಷೆ ವಿಧಿಸಬೇಕು ಎಂಬ ಬಗ್ಗೆ ವಾದ ಆಲಿಸಿ ಈ ಆದೇಶ ನೀಡಿದ್ದಾರೆ.

‘ಅಪರಾಧಿ ಎಸಗಿದ ಕೃತ್ಯವು ಹೀನವಾದುದು, ಗಂಭೀರ ಸ್ವರೂಪದ್ದು. ಅಷ್ಟೇ ಅಲ್ಲ, ಅದು ಎಚ್ಚರಿಕೆಯ ಕರೆಗಂಟೆಯಂತೆಯೂ ಇದೆ’ ಎಂದು ಏಪ್ರಿಲ್ 16ರಂದು ನೀಡಿರುವ ಆದೇಶದಲ್ಲಿ ಹೇಳಲಾಗಿದೆ. ಅಪರಾಧಿಗೆ ಕಠಿಣ ಜೀವಾವಧಿ ಶಿಕ್ಷೆ ವಿಧಿಸಿರುವುದಕ್ಕೆ ಸಮರ್ಥನೆ ನೀಡಿರುವ ನ್ಯಾಯಾಧೀಶರು ‘ಆತನಿಗೆ ಸಮಾಜದ ಜೊತೆ ಸೇರಲು ಮತ್ತೆ ಅವಕಾಶ ನೀಡಿದರೆ, ಆತ ಅದಕ್ಕೆ ಬೆದರಿಕೆಯಾಗಬಹುದು’ ಎಂದು ಹೇಳಿದ್ದಾರೆ.

ಅತ್ಯಾಚಾರ ಪ್ರಕರಣಗಳು ಹೆಚ್ಚುತ್ತಿರುವುದಕ್ಕೆ ದೀರ್ಘಾವಧಿ ಪರಿಹಾರವಾಗಿ, ‘ಸಾಮಾಜಿಕ, ಮನಃಶಾಸ್ತ್ರೀಯ ಅಂಶಗಳನ್ನು’ ನೀತಿ ನಿರೂಪಕರು ಪರಿಗಣಿಸಬೇಕು ಎಂದು ನ್ಯಾಯಾಧೀಶರು ಹೇಳಿದ್ದಾರೆ.

‘ಅತ್ಯಾಚಾರ ಪ್ರಕರಣಗಳನ್ನು ನಿರ್ಮೂಲಗೊಳಿಸುವ ಕಾರ್ಯತಂತ್ರಗಳು ಮಕ್ಕಳ ಮೇಲಿನ ಅತ್ಯಾಚಾರದ ಮೂಲವನ್ನು ಪರಿಹರಿಸದೆ ಇದ್ದರೆ, ನಾವು ರೋಗ ಲಕ್ಷಣಕ್ಕೆ ಮಾತ್ರ ಚಿಕಿತ್ಸೆ ನೀಡಿದಂತಾಗುತ್ತದೆಯೇ ವಿನಾ ಮೂಲಕ್ಕೆ ಅಲ್ಲ’ ಎಂದು ಅವರು ಹೇಳಿದ್ದಾರೆ.

ಅಪರಾಧ ಕೃತ್ಯ ನಡೆದ ಸಂದರ್ಭದಲ್ಲಿ ಬಾಲಕನು ನೋವಿನಿಂದ ಕಿರುಚಿಕೊಂಡಾಗ, ಅಪರಾಧಿಯು ಆತನನ್ನು ಥಳಿಸಿದ್ದ. ಹೀಗಾಗಿ ಅಪರಾಧಿಗೆ ವಿನಾಯಿತಿ ಕೊಡಲು ಆಗುವುದಿಲ್ಲ ಎಂದು ಆದೇಶದಲ್ಲಿ ಹೇಳಲಾಗಿದೆ.

ಎಸಿಬಿ ತನಿಖೆಗೆ ಟಿಟಿಡಿ ಅಧ್ಯಕ್ಷ ಮನವಿ

ಬಿ.ಆರ್‌.ನಾಯ್ಡು

ತಿರುಪತಿ (ಪಿಟಿಐ): ತಿರುಮಲದ ಶ್ರೀ ವೆಂಕಟೇಶ್ವರ ದೇವಾಲಯದಲ್ಲಿ ಕಳೆದ ಐದು ವರ್ಷಗಳಲ್ಲಿ ನಡೆದ ಎಲ್ಲ ಅಕ್ರಮಗಳ ಕುರಿತಂತೆ ಭ್ರಷ್ಟಾಚಾರ ನಿಗ್ರಹ ದಳದಿಂದ (ಎಸಿಬಿ) ತನಿಖೆ ನಡೆಸಲು ಸೂಚನೆ ನೀಡಬೇಕು ಎಂದು ಮುಖ್ಯಮಂತ್ರಿ ಎನ್‌.ಚಂದ್ರಬಾಬು ನಾಯ್ಡು ಅವರಿಗೆ ಮನವಿ ಮಾಡಲು ತಿರುಪತಿ ತಿರುಮಲ ದೇವಸ್ಥಾನಂ (ಟಿಟಿಡಿ) ಅಧ್ಯಕ್ಷ ಬಿ.ಆರ್. ನಾಯ್ಡು ನಿರ್ಧರಿಸಿದ್ದಾರೆ.

ಕಳೆದ ಮೂರು ತಿಂಗಳಲ್ಲಿ ಟಿಟಿಡಿ ಗೋಶಾಲೆಯಲ್ಲಿ 100 ಗೋವುಗಳು ಮೃತಪಟ್ಟಿವೆ ಎಂದು ತಿರುಪತಿ ತಿರುಮಲ ದೇವಸ್ಥಾನಂ (ಟಿಟಿಡಿ) ಮಾಜಿ ಅಧ್ಯಕ್ಷ ಬಿ.ಕರುಣಾಕರ ರೆಡ್ಡಿ ಅವರು ಆರೋಪಿಸಿದ್ದರು.

ಇಲ್ಲಿನ ಗೋಶಾಲೆಗೆ ಭೇಟಿ ನೀಡಿದ ಬಳಿಕ ಪತ್ರಕರ್ತರ ಜೊತೆ ಮಾತನಾಡಿದ ಅವರು, ‘ಕಳೆದ 5 ವರ್ಷಗಳಲ್ಲಿ ಟಿಟಿಡಿಯಲ್ಲಿ ನಡೆದ ಎಲ್ಲ ಅಕ್ರಮಗಳ ಕುರಿತಂತೆ, ಎಸಿಬಿಯಿಂದ ತನಿಖೆ ನಡೆಸುವಂತೆ ನಿಯೋಗದಲ್ಲಿ ತೆರಳಿ ಮುಖ್ಯಮಂತ್ರಿಗೆ ಮನವಿ ಮಾಡಲಾಗುವುದು’ ಎಂದು ವಿವರಿಸಿದರು.

‘ಹಿಂದೂಯೇತರ ಸಿಬ್ಬಂದಿಗೆ ನ್ಯಾಯ ಒದಗಿಸುತ್ತೇವೆ: ದೇವಸ್ಥಾನ ಮಂಡಳಿಯು ಹಿಂದೂಯೇತರ ಸಿಬ್ಬಂದಿಗೆ ಅನ್ಯಾಯ ಮಾಡುವುದಿಲ್ಲ, ರಾತ್ರೋರಾತ್ರಿ ವಜಾಗೊಳಿಸುವುದನ್ನು ಹಿಂದುತ್ವವು ಪ್ರೇರೇಪಿಸುವುದಿಲ್ಲ ಎಂದು ಬಿ.ಆರ್. ನಾಯ್ಡು ಶನಿವಾರ ಹೇಳಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಪರ- ವಿರೋಧ ಚರ್ಚೆ

ಉರುಳಿದ ರಥದ ಮೇಲ್ಭಾಗ: ಭಕ್ತರ ಅಸಮಾಧಾನ

ಪ್ರಜಾವಾಣಿ ವಾರ್ತೆ

ಮೂಲ್ಕಿ (ದಕ್ಷಿಣ ಕನ್ನಡ): ಇತಿಹಾಸ ಪ್ರಸಿದ್ಧ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ವರ್ಷಾವಧಿ ಜಾತ್ರಾ ಮಹೋತ್ಸವದ ಬ್ರಹ್ಮ ರಥೋತ್ಸವ ವೇಳೆ ದೇವರ ತೇರಿನ ಮೇಲ್ಭಾಗ ಮುರಿದು ಬಿದ್ದಿರುವ ಘಟನೆಗೆ ಸಂಬಂಧಿಸಿ ಭಕ್ತರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಶನಿವಾರ ಮುಂಜಾವ 1.40ರಿಂದ 2 ಗಂಟೆಯ ವೇಳೆ ಬ್ರಹ್ಮರಥೋತ್ಸವ ತೇರಿನ ಮೇಲ್ಭಾಗ ಕುಸಿದು ಬಿದ್ದಿದೆ. ಈ ಸಂದರ್ಭದಲ್ಲಿ ಅರ್ಚಕರು ರಥದಲ್ಲಿಯೇ ಕುಳಿತಿದ್ದರು. ಕೆಳಗೆ ಸಾವಿರಾರು ಭಕ್ತರು ರಥ ಎಳೆಯುತ್ತಿದ್ದರು. ರಥವನ್ನು ನಿಯಂತ್ರಿಸುವ ದಂಡ ತುಂಡಾದ ಪರಿಣಾಮ ರಥದ ಮೇಲ್ಭಾಗ ಸಂಪೂರ್ಣ ಧರೆಗೆ ಉರುಳಿದೆ. ಒಬ್ಬರು ಅರ್ಚಕರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ರಥ ಬಿದ್ದ ಬಳಿಕ ದೇವರ ಉತ್ಸವವನ್ನು ಚಂದ್ರಮಂಡಲ ರಥದಲ್ಲಿ ಮುಂದುವರಿಸಲಾಯಿತು.

ಕಳೆದ ವರ್ಷ ರಥ ಸಾಗುವ ಸಂದರ್ಭದಲ್ಲಿ ರಸ್ತೆಯಲ್ಲಿದ್ದ ಕಾರು, ರಿಕ್ಷಾ ಹಾಗೂ ಸ್ಕೂಟರ್‌ಗೆ ಕಿಡಿಗೇಡಿಗಳು ಹಾನಿ ಮಾಡಿದ್ದರು. ಅದನ್ನು ಈ ಬಾರಿಯ ಘಟನೆಗೆ ತಳುಕು ಹಾಕಿ ಸಾಮಾಜಿಕ ಜಾಲತಾಣದಲ್ಲಿ ಪರ–ವಿರೋಧ ಚರ್ಚೆಗಳು ನಡೆದಿವೆ. ದೇವಳದ ಕಡೆಯಿಂದ ಈ ಬಗ್ಗೆ ಪ್ರತಿಕ್ರಿಯೆ ಬಂದಿಲ್ಲ.

ಘಟನೆಯ ಬಗ್ಗೆ ಉಳೆಪಾಡಿ ಶ್ರೀ ದುರ್ಗಾಪರಮೇಶ್ವರಿ ಮಹಮ್ಮಾಯಿ ದೇವಾಲಯದ ಮೋಹನದಾಸ ಸುರತ್ಕಲ್ ಪ್ರತಿಕ್ರಿಯಿಸಿ, ಕಳೆದ ಕೆಲವು ವರ್ಷಗಳಿಂದ ವಾರ್ಷಿಕ ಜಾತ್ರೆಯ ಬ್ರಹ್ಮರಥೋತ್ಸವದ ವೇಳೆ ಹಾನಿಗಳಾಗುವುದು, ದೇವರ ಉತ್ಸವಕ್ಕೆ ಭಂಗ ಉಂಟಾಗುವುದು ನಡೆಯುತ್ತಿದೆ. ಮೂಲ್ಕಿ ಸೀಮೆಯ ಬಂಭತ್ತು ಮಾಗಣೆಗೆ ಸೇರಿದ ಈ ಮಹಾ ಕ್ಷೇತ್ರದಲ್ಲಿನ ಘಟನೆಗಳು ಎಲ್ಲರಿಗೂ ಖೇದ ಉಂಟು ಮಾಡಿವೆ. ಸಂಬಂಧಪಟ್ಟವರು ತಕ್ಷಣ ಮಾಗಣೆಯ ಭಕ್ತರ ಸಭೆ ಕರೆದು ಪೂರ್ವಾಪರ ವಿಮರ್ಶೆ ನಡೆಸಬೇಕು ಎಂದು ಆಗ್ರಹಿಸಿದ್ದಾರೆ. ರಥ ಕಟ್ಟುವಾಗ ಸಮಸ್ಯೆ ಯಾರ ಗಮನಕ್ಕೂ ಬರಲಿಲ್ಲವೇ? ಅಥವಾ ಬಂದಿದ್ದರೂ ದೇವಳದ ಗಮನಕ್ಕೆ ತರಲಿಲ್ಲವೇ? ತಂದಿದ್ದರೆ ದೇವಳದ ಆಡಳಿತ ನಿರ್ಲಕ್ಷ್ಯ ವಹಿಸಿತೇ ಎಂದು ಅವರು ಪ್ರಶ್ನಿಸಿದ್ದಾರೆ.

ಮೂಲ್ಕಿಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಬ್ರಹ್ಮರಥದ ಮೇಲ್ಭಾಗ ಉರುಳಿ ಬಿದ್ದ ಸಂದರ್ಭ

ಭಾನುವಾರ, ಏಪ್ರಿಲ್ 20, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 109 | ಪುಟ 22
www.prajavani.net
prajavani.net prajavani prajavani prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮುರಿದ ತೇರು
ದಕ್ಷಿಣ ಕನ್ನಡ ಜಿಲ್ಲೆಯ ಮೂಲ್ಕಿಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಶನಿವಾರ ಮುಂಜಾನೆ ನಡೆದ ಜಾತ್ರಾ ಮಹೋತ್ಸವದ ವೇಳೆ ತೇರಿನ ಮೇಲ್ಭಾಗ ಮುರಿದು ಬಿದ್ದು, ಆತಂಕ ಸೃಷ್ಟಿಸಿತ್ತು

‘ಸರ್ಕಾರಿ ಆಸ್ತಿ ವಶಕ್ಕೆ ಗಾಂಧಿ ಕುಟುಂಬದ ಪಿತೂರಿ’ 5
22ರಿಂದ ಮೋದಿ ಸೌದಿ ಅರೇಬಿಯಾ ಪ್ರವಾಸ 10
ಕಿಂಗ್ಸ್ ವಿರುದ್ಧ ಮುಯ್ಯಿ ತೀರಿಸಿಕೊಳ್ಳುವತ್ತ ರಜತ್ ಬಳಗ ಚಿತ್ತ
ಪಂಜಾಬ್‌ಗೆ ‘ರಾಯಲ್ ಚಾಲೆಂಜ್’ 12

ರಾಜ್ಯ ಪಠ್ಯಕ್ರಮ, ಸಿಬಿಎಸ್‌ಇ, ಐಸಿಎಸ್‌ಇ ಸೇರಿ ಎಲ್ಲ ಖಾಸಗಿ ಶಾಲೆಗಳಿಗೂ ಅನ್ವಯ: ಸುತ್ತೋಲೆ

ಹೆಣ್ಮಕ್ಕಳಿಗೆ ಶೇ 50 ಸೀಟು ಕಡ್ಡಾಯ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಅನುದಾನಿತ ಹಾಗೂ ಅನುದಾನರಹಿತ ಖಾಸಗಿ ಶಾಲೆಗಳು ಪೂರ್ವ ಪ್ರಾಥಮಿಕ ಹಂತದಿಂದ ಪ್ರೌಢಶಾಲಾ ಹಂತದವರೆಗೂ ನಡೆಸುವ ಶಾಲಾ ಪ್ರವೇಶ ಪ್ರಕ್ರಿಯೆಯಲ್ಲಿ ಶೇ 50ರಷ್ಟು ಸೀಟುಗಳನ್ನು ಹೆಣ್ಣುಮಕ್ಕಳಿಗೆ ಮೀಸಲಿಡುವುದು ಇನ್ನು ಮುಂದೆ ಕಡ್ಡಾಯ.

ರಾಜ್ಯ ಪಠ್ಯಕ್ರಮ ಹಾಗೂ ಸಿಬಿಎಸ್‌ಇ, ಐಸಿಎಸ್‌ಇ ಸೇರಿದಂತೆ ಕೇಂದ್ರ ಪಠ್ಯಕ್ರಮ ಅನುಸರಿಸುವ, ಸಹ ಶಿಕ್ಷಣ ಹೊಂದಿರುವ ಎಲ್ಲ ಖಾಸಗಿ ಶಾಲೆಗಳು ಎಲ್‌ಕೆಜಿ, ಯುಕೆಜಿ, ಒಂದನೇ ತರಗತಿಯಿಂದ 10ನೇ ತರಗತಿಯವರೆಗೆ ಪ್ರವೇಶ ನೀಡುವಾಗ ಈ ನಿಯಮವನ್ನು ಕಡ್ಡಾಯವಾಗಿ ಪಾಲಿಸಬೇಕು. ಪ್ರತಿ ತರಗತಿಯಲ್ಲೂ ಲಭ್ಯವಿರುವ ಸೀಟುಗಳಲ್ಲಿ ಶೇ 50ರಷ್ಟು ಹೆಣ್ಣು ಮಕ್ಕಳಿಗೆ ಮೀಸಲಿಡಬೇಕು. ಒಂದು ವೇಳೆ ನಿರೀಕ್ಷಿತ ಅರ್ಜಿಗಳು ಲಭ್ಯವಿಲ್ಲದೇ ಇದ್ದಾಗ ಉಳಿಕೆ ಸೀಟುಗಳನ್ನು ಬಾಲಕರಿಗೆ ನೀಡಬಹುದು. ಈ ಕುರಿತು ಶಾಲಾ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಬಹುತೇಕ ಖಾಸಗಿ ಶಾಲೆಗಳಲ್ಲಿ 2025–26ನೇ ಸಾಲಿನ ಪ್ರವೇಶ ಪ್ರಕ್ರಿಯೆ ಮುಗಿಯುತ್ತಾ ಬಂದಿದೆ. ಈಗ ಹೊರಡಿಸಿದ ನಿಯಮಗಳಿಂದ ಹೆಚ್ಚು ಪ್ರಯೋಜನವಾಗದು ಎಂದು ಹಲವು ಪೋಷಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

10ನೇ ಪುಟ ನೋಡಿ

23,206 ರಾಜ್ಯ ಪಠ್ಯಕ್ರಮ ಅನುಸರಿಸುವ ಖಾಸಗಿ ಶಾಲೆಗಳು
1,476 ಸಿಬಿಎಸ್‌ಇ ಶಾಲೆಗಳು
448 ಐಸಿಎಸ್‌ಇ ಶಾಲೆಗಳು
112 ಕೇಂದ್ರೀಯ ವಿದ್ಯಾಲಯಗಳು

- ಶೈಕ್ಷಣಿಕ ವೇಳಾಪಟ್ಟಿ, ಶುಲ್ಕ ಪ್ರಕಟ ಕಡ್ಡಾಯ
- ಶಾಲಾ ಪ್ರವೇಶದಲ್ಲಿ ಜಾತಿ ಮೀಸಲಾತಿ ಅನ್ವಯ
- ಡಿಡಿಪಿಐ, ಬಿಇಒಗಳಿಗೆ ಅನುಷ್ಠಾನದ ಹೊಣೆ

ಪ್ರವೇಶ ಪರೀಕ್ಷೆ, ಸಂದರ್ಶನ ನಿಷೇಧ

ಖಾಸಗಿ ಶಾಲೆಗಳು ಪೂರ್ವ ಪ್ರಾಥಮಿಕ, ಒಂದನೇ ತರಗತಿ ಸೇರಿದಂತೆ ಯಾವುದೇ ತರಗತಿಗೆ ಪ್ರವೇಶ ನೀಡಬೇಕಾದರೆ ಶಾಲಾ ಹಂತದಲ್ಲೇ ಕಿರು ಪರೀಕ್ಷೆ ನಡೆಸಿ, ವಿದ್ಯಾರ್ಥಿಗಳ ಸಾಮರ್ಥ್ಯ ಪರೀಕ್ಷಿಸಿದ ನಂತರವೇ ಪ್ರವೇಶ ನೀಡುವುದು ಸಾಮಾನ್ಯ ಸಂಗತಿಯಾಗಿದೆ.

ಕೆಲವು ಶಾಲೆಗಳಲ್ಲಿ ಪ್ರವೇಶ ಪರೀಕ್ಷೆಯಲ್ಲಿ ಮಕ್ಕಳು ಗಳಿಸುವ ಅಂಕಗಳನ್ನು ಶುಲ್ಕ ನಿಗದಿಯ ಮಾನದಂಡವಾಗಿಯೂ ಬಳಸಲಾಗುತ್ತಿದೆ.

ಶಾಲೆಗಳು ಪ್ರವೇಶಕ್ಕಾಗಿ ಪ್ರತ್ಯೇಕ ಪರೀಕ್ಷೆ, ಸಂದರ್ಶನ ನಡೆಸುವಂತಿಲ್ಲ. ನಿರ್ದೇಶನ ಉಲ್ಲಂಘಿಸಿದರೆ ಶಿಕ್ಷಣ ಹಕ್ಕು ಕಾಯ್ದೆ ಅನ್ವಯ ದಂಡ ವಿಧಿಸಲಾಗುವುದು ಎಂದು ಇಲಾಖೆ ಆಯುಕ್ತ ಕೆ.ವಿ. ತ್ರಿಲೋಕ್‌ಚಂದ್ರ ಎಚ್ಚರಿಸಿದ್ದಾರೆ.

ಮಕ್ಕಳ ಶಾಲಾ ಪ್ರವೇಶ ಪ್ರಕ್ರಿಯೆ ಅತ್ಯಂತ ಸೂಕ್ಷ್ಮ ವಿಚಾರ. ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ತಮ್ಮದೇ ಆದ ಹಕ್ಕುಬಾಧ್ಯತೆ, ಕರ್ತವ್ಯ ಇರುತ್ತದೆ. ಒತ್ತಡ ಹೇರಿದರೆ ಕಾನೂನು ತೊಡಕಾಗುತ್ತದೆ
ಡಿ. ಶಶಿಕುಮಾರ
ಸಂಚಾಲಕ, ಕರ್ನಾಟಕ ಖಾಸಗಿ ಶಾಲಾ ಆಡಳಿತ ಮಂಡಳಿ

ಶಾಲಾ ಪ್ರವೇಶದಲ್ಲಿ ಹೆಣ್ಣು ಮಕ್ಕಳ ಮೀಸಲಾತಿಗೆ ಅವಕಾಶ ಇದ್ದರೂ, ಜಾರಿಗೆ ಒಲವು ತೋರಿರಲಿಲ್ಲ. ಪ್ರತಿ ಶಾಲೆಯೂ ನೆರೆಹೊರೆಯ ಬಾಲಕಿಯರಿಗೆ ಮೊದಲ ಪ್ರಾಶಸ್ತ್ಯ ನೀಡಿದರೆ ಸುತ್ತೋಲೆ ಸಾರ್ಥಕವಾಗುತ್ತದೆ
ವಿ.ಪಿ. ನಿರಂಜನಾರಾಧ್ಯ, ಸದಸ್ಯ, ರಾಜ್ಯ ಶಿಕ್ಷಣ ನೀತಿ ಆಯೋಗ

ಎಂಥಾ ಬಿಸಿಲವ್ವ ಕಲ್ಯಾಣ ಕರ್ನಾಟಕದಲ್ಲಿ ದಿನೇ ದಿನೇ ತಾಪಮಾನ ಹೆಚ್ಚುತ್ತಿದ್ದು, ಕಲಬುರಗಿಯ ಬಹಮನಿ ಕೋಟೆ ಬಳಿ ಶನಿವಾರ ಸಂತೆಯಲ್ಲಿ ವೃದ್ಧೆಯೊಬ್ಬರು ಮಾರಾಟಕ್ಕೆ ಇಟ್ಟಿದ್ದ ಬಿದಿರಿನ ಬುಟ್ಟಿಯನ್ನೇ ತಲೆ ಮೇಲಿಟ್ಟುಕೊಂಡು ಆಸರೆ ಪಡೆದರು ಚಿತ್ರ: ತಾಜುದ್ದೀನ್ ಆಜಾದ್

ದೆಹಲಿ: ಕಟ್ಟಡ ಕುಸಿತ, 11 ಸಾವು

ನವದೆಹಲಿ (ಪಿಟಿಐ): ರಾಜಧಾನಿಯ ಮುಸ್ತಾಫಾಬಾದ್ ಬಡಾವಣೆಯಲ್ಲಿ 4 ಮಹಡಿಗಳ ವಸತಿ ಕಟ್ಟಡವೊಂದು ಶನಿವಾರ ಬೆಳಗಿನ ಜಾವ ಕುಸಿದಿದೆ. 11 ಜನರು ಮೃತಪಟ್ಟಿದ್ದು, ಇತರೆ 11 ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸತತ 12 ಗಂಟೆ ಕಾರ್ಯಾಚರಣೆ ನಡೆಸಿ ಅವಶೇಷಗಳನ್ನು ತೆರವುಗೊಳಿಸಲಾಯಿತು. ಕಟ್ಟಡದಲ್ಲಿ 22 ಮಂದಿ ವಾಸವಿದ್ದರು. ಮೃತರಲ್ಲಿ ಕಟ್ಟಡದ ಮಾಲೀಕ ತೆಹ್‌ಸೀನ್ ಮತ್ತು ಅವರ ಕುಟುಂಬದ ಆರು ಮಂದಿ ಸೇರಿದ್ದಾರೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ.

20 ವರ್ಷ ಹಳೆಯದಾದ ಕಟ್ಟಡ ಕುಸಿದಿರುವ ಮಾಹಿತಿ ಬೆಳಗಿನ ಜಾವ 3 ಗಂಟೆಗೆ ಬಂದಿತು. ರಕ್ಷಣಾ ಕಾರ್ಯದಲ್ಲಿ ಎನ್‌ಡಿಆರ್‌ಎಫ್ ಸಿಬ್ಬಂದಿ, ಅಗ್ನಿಶಾಮಕ ಪಡೆ, ದೆಹಲಿ ಪೊಲೀಸರ ಜೊತೆಗೆ ಸ್ವಯಂಸೇವಕರು ಭಾಗಿಯಾಗಿದ್ದರು ಎಂದು ತಿಳಿಸಿದ್ದಾರೆ.

ಪಕ್ಕದಲ್ಲಿ ನಿರ್ಮಾಣ ಕಾರ್ಯ ನಡೆಯುತ್ತಿತ್ತು. ಇದೂ ಕುಸಿತಕ್ಕೆ ಕಾರಣವಾಗಿರಬಹುದು. ಈ ವಲಯದಲ್ಲಿ ಇದೂ ಸೇರಿ 4–5 ಕಟ್ಟಡಗಳು ಶಿಥಿಲಗೊಂಡಿದ್ದವು. ಹಲವು ವರ್ಷಗಳಿಂದ ನೀರು ಕೊಳವೆಗಳಿಂದ ಕಟ್ಟಡದ ಗೋಡೆಗಳಲ್ಲಿ ಸೋರಿಕೆಯಾಗಿ ಶಿಥಿಲವಾಗಿತ್ತು ಎಂದು ತಿಳಿಸಿದ್ದಾರೆ.

‘ಅವಶೇಷಗಳಡಿ 22 ಮಂದಿ ಸಿಕ್ಕಿಬಿದ್ದಿದ್ದರು. 15 ಜನರನ್ನು ರಕ್ಷಿಸಿ ಜಿಟಿಬಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆಸ್ಪತ್ರೆಗೆ ಕರೆದೊಯ್ಯುವ ವೇಳೆಗೆ ನಾಲ್ವರು ಮೃತಪಟ್ಟಿದ್ದರು’ ಎಂದು ಪೊಲೀಸರು ತಿಳಿಸಿದರು.

ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತ ಅವರು ಅವಘಡ ಕುರಿತು ತನಿಖೆಗೆ ಆದೇಶಿಸಿದ್ದಾರೆ. ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆ ಒದಗಿಸಲು ಕ್ರಮವಹಿಸಲಾಗಿದೆ ಎಂದು ಅವರು ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

ಬಗರ್ ಹುಕುಂ; ಕಂದಾಯ ಇಲಾಖೆಯ ಕ್ರಮದಿಂದ ಆತಂಕದಲ್ಲಿ ರೈತರು

ಲಕ್ಷ ಲಕ್ಷ ಅರ್ಜಿ ವಜಾ ಏಕೆ?

• ಎಸ್.ರವಿಪ್ರಕಾಶ್

ಒಳನೋಟ

ಬೆಂಗಳೂರು: ಪಶ್ಚಿಮಘಟ್ಟದ ತಪ್ಪಲಿಗೆ ಹೊಂದಿಕೊಂಡಿರುವ ಉಡುಪಿ ಜಿಲ್ಲೆಯ ಪುಟ್ಟ ಹಳ್ಳಿ ಅದು. ಅಲ್ಲಿ ಸರ್ಕಾರಿ ಜಮೀನಿನಲ್ಲಿ ಹಲವು ದಶಕಗಳಿಂದ ಅನಧಿಕೃತವಾಗಿ ಉಳುಮೆ ಮಾಡಿಕೊಂಡಿದ್ದ ರೈತನಿಗೆ ಉಳುಮೆ ಮಾಡಿದ ಜಮೀನು ಈಗ ತನ್ನ ಪಾಲಿಗೆ ಸಿಗುತ್ತದೆಯೇ ಇಲ್ಲವೇ ಎಂಬ ಆತಂಕ ಕಾಡಿದೆ. ಇದಕ್ಕೆ ಕಾರಣವಿಷ್ಟೇ, ಅಕ್ರಮ–ಸಕ್ರಮಕ್ಕೆ ಸಂಬಂಧಿಸಿದಂತೆ ಲಕ್ಷಾಂತರ ಅರ್ಜಿಗಳನ್ನು ಕಂದಾಯ ಇಲಾಖೆ ತಿರಸ್ಕರಿಸುತ್ತಿದೆ. ಸಕ್ರಮಕ್ಕಾಗಿ ಈಗಾಗಲೇ ತಾನು ಸಲ್ಲಿಸಿರುವ ಅರ್ಜಿಯ ಕಥೆ ಏನಾಗಬಹುದು, ಪುರಸ್ಕೃತಗೊಳ್ಳುತ್ತದೆಯೇ ಎಂಬ ಆತಂಕ ಆತನನ್ನು ಕಾಡಿದೆ. ಇದೇ ವ್ಯಥೆ ರಾಜ್ಯದ ಉದ್ದಗಲಕ್ಕೂ ಕೇಳಿ ಬರುತ್ತಿದೆ.

ಹಲವು ವರ್ಷಗಳಿಂದ ಭಾರಿ ಸಂಖ್ಯೆಯಲ್ಲಿ ವಿಲೇ ಆಗದೇ ಉಳಿದಿದ್ದ ಬಗರ್‌ಹುಕುಂ ಅರ್ಜಿಗಳನ್ನು ತ್ವರಿತ ಗತಿಯಲ್ಲಿ ವಿಲೇವಾರಿ ಮಾಡಲು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಅಧಿಕಾರಿಗಳಿಗೆ ಗುರಿ ನಿಗದಿ ಮಾಡಿದ್ದಾರೆ. ಈ ಮಧ್ಯೆ ಅರ್ಜಿ ವಿಲೇಯಲ್ಲಿ ಬಗರ್‌ಹುಕುಂ ಸಮಿತಿಗಳ ಅಧ್ಯಕ್ಷರು ಅಂದರೆ ಶಾಸಕರಿಗಿದ್ದ ಅಧಿಕಾರವನ್ನು ಮೊಟಕು ಮಾಡಲಾಗಿದೆ ಎಂಬ ಆರೋಪ ಕೆಲ ಶಾಸಕರಿಂದ ಕೇಳಿಬಂದಿದೆ. ಇದು ಕೆಲವು ಶಾಸಕರ ಅಸಮಾಧಾನಕ್ಕೂ ಕಾರಣವಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ತಿರಸ್ಕಾರಗೊಳ್ಳಲು ಇದುವೇ ಮುಖ್ಯ ಕಾರಣ ಎನ್ನುವುದು ಅಂತಹ ಶಾಸಕರ ವಾದ.

ಆದರೆ, ಕಂದಾಯ ಸಚಿವರು ಇದನ್ನು ಒಪ್ಪುವುದಿಲ್ಲ, ‘ಮೊಟಕು ಆಗಿದೆ ಎನ್ನುವವರು ಒಮ್ಮೆ ಕಾನೂನು ಅಧ್ಯಯನ ಮಾಡಿಕೊಂಡು ನನ್ನ ಬಳಿ ಚರ್ಚೆಗೆ ಬರಲಿ. ಅದರಲ್ಲಿ ಎಲ್ಲವೂ ಸ್ಪಷ್ಟವಾಗಿದೆ. ಕಾನೂನಿನ ಪ್ರಕಾರವೇ ಎಲ್ಲವೂ ನಡೆಯುತ್ತಿದೆ’ ಎನ್ನುತ್ತಾರೆ.

4ನೇ ಪುಟ ನೋಡಿ

ಬಗರ್ ಹುಕುಂ ‘ಪ್ರಗತಿ’ ವರದಿ

ಅರ್ಜಿ ನಮೂನೆ	ಸ್ವೀಕೃತ	ಅನುಮತಿ ಸಿಕ್ಕಿದ್ದು	ತಿರಸ್ಕೃತ	ಬಾಕಿ
ಫಾರಂ-50	11,85,996	3,71,436	8,09,165	5,395
ಫಾರಂ-53	9,94,593	2,30,772	6,71,118	92,703
ಫಾರಂ-57	12,44,284	8,102	3,97,716	8,38,466
ಒಟ್ಟು	34,24,873	6,10,310	18,77,999	9,36,564

ಅರ್ಹ ರೈತರಿಗೆ ಅನ್ಯಾಯವಾಗದು: ಸಚಿವ ಕೃಷ್ಣ ಬೈರೇಗೌಡ ಭರವಸೆ

‘ಕಾನೂನಿನ ಚೌಕಟ್ಟಿನ ಅಡಿ, ಯಾವುದೇ ಅರ್ಹ ರೈತನ ಅರ್ಜಿಯನ್ನು ತಿರಸ್ಕಾರ ಮಾಡಲು ಸಾಧ್ಯವಿಲ್ಲ. ಒಂದು ವೇಳೆ ಅರ್ಹರ ಅರ್ಜಿ ತಿರಸ್ಕಾರಗೊಂಡಿದ್ದರೆ, ಅಂತಹ ರೈತರಿಗೆ ನ್ಯಾಯ ಒದಗಿಸಲು ನಾನು ಸಿದ್ಧನಿದ್ದೇನೆ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಸ್ಪಷ್ಟಪಡಿಸಿದರು.

‘ಶಾಸಕರ ಅಧಿಕಾರವೂ ಮೊಟಕು ಆಗಿಲ್ಲ. ಕಾನೂನು ಹೇಳಿದೆಯೋ ಅದೇ ಪ್ರಕಾರ ನಡೆಯುತ್ತಿದೆ. ಬಗರ್‌ಹುಕುಂ ಅಡಿ ಸ್ವೀಕೃತವಾಗಿರುವ ಅರ್ಜಿಗಳನ್ನು ಇತ್ಯರ್ಥಪಡಿಸಲು ನಿರ್ದಿಷ್ಟ ಮಾರ್ಗಸೂಚಿ ಪ್ರಕಾರವೇ ನಡೆಯುತ್ತಿದೆ. ಆ ಮಾರ್ಗಸೂಚಿಯ ಪ್ರಕಾರ ಅರ್ಜಿ ಅರ್ಹವಾಗಿದ್ದರೆ ಪುರಸ್ಕಾರಗೊಳ್ಳುತ್ತದೆ. ಅರ್ಜಿಗಳು ಭಾರಿ ಪ್ರಮಾಣದಲ್ಲಿ ವಿಲೇವಾರಿ ಆಗದೇ ಉಳಿದಿವೆ. 1991 ರಲ್ಲಿ ಸಲ್ಲಿಸಿದ ಅರ್ಜಿಯೂ ವಿಲೇವಾರಿ ಆಗಿಲ್ಲ. ಹೀಗಾಗಿ 2 ತಿಂಗಳಲ್ಲಿ ವಿಲೇವಾರಿ ಮಾಡಲು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದೇನೆ. ಸರ್ಕಾರದ ಜಮೀನು ಸಿಗುತ್ತದೆ ಎಂದು ಸಾಕಷ್ಟು ಅನರ್ಹರೂ ಅರ್ಜಿ ಹಾಕುತ್ತಾರೆ. ಅವರ ಉದ್ದೇಶ ಏನು ಎಂಬುದು ಗೊತ್ತಾಗುತ್ತದೆ ಅಲ್ಲವೇ. ಒಟ್ಟಿನಲ್ಲಿ ಇವೆಲ್ಲಕ್ಕೂ ತೆರೆ ಎಳೆಯಬೇಕಾಗಿದೆ’ಎಂದು ವಿವರಿಸಿದರು.

ಯುಪಿಐ ಪಾವತಿಗೆ ಜಿಎಸ್‌ಟಿ ಇಲ್ಲ

ನವದೆಹಲಿ (ಪಿಟಿಐ): ಯುಪಿಐ ಪಾವತಿ ಮೇಲೆ ಜಿಎಸ್‌ಟಿ ವಿಧಿಸುವ ಪ್ರಸ್ತಾವವು ಇಲ್ಲ ಎಂದು ಕೇಂದ್ರ ಹಣಕಾಸು ಸಚಿವಾಲಯವು ಸ್ಪಷ್ಟನೆ ನೀಡಿದೆ. 10

ಚಿನಕುರುಳಿ
ಪ್ರಕಾಶ್ ಶೆಟ್ಟಿ

‘ಒಳ ಮೀಸಲು: ಜಾತಿಗಣತಿ ದತ್ತಾಂಶ ಬಳಕೆ ಪರಿಶೀಲನೆ’

ಪ್ರಜಾವಾಣಿ ವಾರ್ತೆ

ಜಿ.ಪರಮೇಶ್ವರ

ಬೆಂಗಳೂರು: ‘ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಹಂಚಿಕೆಗೆ ಜಾತಿ ಜನಗಣತಿ ವರದಿಯ ದತ್ತಾಂಶವನ್ನೂ ಬಳಸುವ ಬಗ್ಗೆ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನ್ ದಾಸ್ ನೇತೃತ್ವದ ಆಯೋಗ ಪರಿಶೀಲಿಸಲಿದೆ’ ಎಂದು ಗೃಹ ಸಚಿವ ಸಚಿವ ಜಿ.ಪರಮೇಶ್ವರ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ದತ್ತಾಂಶ ಸಂಗ್ರಹಿಸಲು ಆಯೋಗಕ್ಕೆ ಈಗಾಗಲೇ ಆದೇಶಿಸಲಾಗಿದೆ. ಆ ದತ್ತಾಂಶವನ್ನು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿ ಜನಗಣತಿ) ವೇಳೆ ಸಂಗ್ರಹಿಸಿದ ದತ್ತಾಂಶದ ಜೊತೆ ಹೋಲಿಕೆ ಮಾಡಲಿದ್ದಾರೆ. ವರದಿ ಬಿಡುಗಡೆಯಾಗುವ ಮೊದಲೇ ದತ್ತಾಂಶ ಸಂಗ್ರಹಿಸಲು ಆಯೋಗಕ್ಕೆ ಆದೇಶ ಮಾಡಿರುವುದರಿಂದ ವಾಪಸು ಪಡೆಯಲು ಆಗುವುದಿಲ್ಲ’ ಎಂದರು.

‘ಜಾತಿ ಜನಗಣತಿ ವರದಿ ವಿಚಾರದಲ್ಲಿ ಎಲ್ಲರ ಅಭಿಪ್ರಾಯ ಆಲಿಸಿ ಸರ್ಕಾರ ಅಂತಿಮ ತೀರ್ಮಾನ ತೆಗೆದುಕೊಳ್ಳಲಿದೆ. ಇದು ಒಬ್ಬರ ತೀರ್ಮಾನ ಆಗದು. ಮುಖ್ಯಮಂತ್ರಿಯೊಬ್ಬರ ತೀರ್ಮಾನವೂ ಆಗುವುದಿಲ್ಲ. ಸಚಿವ ಸಂಪುಟದ ತೀರ್ಮಾನ ಆಗುತ್ತದೆ’ ಎಂದರು.

‘ವರದಿ ಬಗ್ಗೆ ಕೆಲ ಸಮುದಾಯದವರು ಆತಂಕ ವ್ಯಕ್ತಪಡಿಸಿದ್ದಾರೆ. ನಾನು ವರದಿ ಓದಿದ್ದು, ವೈಜ್ಞಾನಿಕವಾಗಿದೆ. ಒಂದು ಕುಟುಂಬದಲ್ಲಿ ಕೊಳವೆಬಾವಿ ಹಾಕಿಸಿದ್ದರೆ, ಅದರಲ್ಲಿ ನೀರು ಬಂದಿದೆಯೇ? ಇಲ್ಲವೇ? ಎಂಬ ಮಾಹಿತಿಯನ್ನೂ ಸಂಗ್ರಹಿಸಿ ನೀಡಲಾಗಿದೆ. ಸಮೀಕ್ಷೆ ವೇಳೆ ಮನೆಗೆ ಹೋದಾಗ ಮನೆಯವರಿಂದ ಸಹಿ ಮಾಡಿಸಿಕೊಂಡಿದ್ದಾರೆ. ಮರದ ಕೆಳಗೆ ಕುಳಿತು ದತ್ತಾಂಶ ಬರೆದುಕೊಂಡು ಬರಲು ಆಗುವುದಿಲ್ಲ’ ಎಂದು ವಿಪಕ್ಷಗಳ ಟೀಕೆಗಳಿಗೆ ತಿರುಗೇಟು ನೀಡಿದರು.

ಜೆಇಇ: ಕುಶಾಗ್ರ ರಾಜ್ಯಕ್ಕೇ ಅಗ್ರ

ಪ್ರಜಾವಾಣಿ ವಾರ್ತೆ


ಕುಶಾಗ್ರ ಗುಪ್ತ

ಬೆಂಗಳೂರು: ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಪ್ರಕಟಿಸಿದ ಜಂಟಿ ಪ್ರವೇಶ ಪರೀಕ್ಷೆ–2025ರ ಫಲಿತಾಂಶದಲ್ಲಿ (ಜೆಇಇ ಮೇನ್‌–2) ಬೆಂಗಳೂರಿನ ಕಸವನಹಳ್ಳಿಯ ನಾರಾಯಣ-ಕೋ-ಕಾವೇರಿ ಭವನ ಕಾಲೇಜಿನ ವಿದ್ಯಾರ್ಥಿ ಕುಶಾಗ್ರ ಗುಪ್ತ 100 ಪರ್ಸೆಂಟೈಲ್ ಗಳಿಸುವ ಮೂಲಕ ಕರ್ನಾಟಕಕ್ಕೆ ಅಗ್ರಸ್ಥಾನ ಪಡೆದಿದ್ದಾರೆ.

ಶನಿವಾರ ಜೆಇಇ ಮೇನ್‌–2 ಫಲಿತಾಂಶ ಪ್ರಕಟವಾಗಿದ್ದು, ದೇಶದ 24 ಮಂದಿ ಶೇಕಡ 100 ಪರ್ಸೆಂಟೈಲ್ ಗಳಿಸಿದ್ದಾರೆ. ಅದರಲ್ಲಿ ಕುಶಾಗ್ರ ಕೂಡ ಒಬ್ಬರು. ಜೆಇಇ (ಮುಖ್ಯ-1) ಫಲಿತಾಂಶದಲ್ಲೂ ಅವರು 100 ಪರ್ಸೆಂಟೈಲ್ ಗಳಿಸಿದ್ದರು.

10ನೇ ಪುಟ ನೋಡಿ



₹51.25 ಕೋಟಿ ಮೌಲ್ಯದ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಒತ್ತುವರಿಯಾಗಿರುವ ₹51.25 ಕೋಟಿ ಮೌಲ್ಯದ ಒಟ್ಟು 13 ಎಕರೆ 0.26 ಗುಂಟೆ ಸರ್ಕಾರಿ ಜಮೀನನ್ನು ಜಿಲ್ಲಾಧಿಕಾರಿ ಜಿ.ಜಗದೀಶ ಅವರ ನೇತೃತ್ವದಲ್ಲಿ ತೆರವುಗೊಳಿಸಲಾಗಿದೆ.

ತಹಶೀಲ್ದಾರ್‌ಗಳು ತಮ್ಮ ವ್ಯಾಪ್ತಿಯಲ್ಲಿ ಗೋಮಾಳ, ಹದ್ದುಗಿಡದಹಳ್ಳ, ಮುಫತ್ ಕಾವಲ್, ಸರ್ಕಾರಿ ಕುಂಟೆ, ಶ್ರೀಬಸವಣ್ಣ ದೇವರ ಇನಾಂ, ಗುಂಡು ತೋಪು, ಸರ್ಕಾರಿ ಬೀಳು, ಸರ್ಕಾರಿ ಖರಾಬು ಜಾಗಗಳ ಒತ್ತುವರಿಯನ್ನು ತೆರವುಗೊಳಿಸಿದರು.

ಪೂರ್ವ ತಾಲ್ಲೂಕಿನ ಕೆ.ಆರ್. ಪುರ ಹೋಬಳಿಯ ಹಗದೂರು ಬಿದರಹಳ್ಳಿ ಹೋಬಳಿಯ ಶೀಗೆಹಳ್ಳಿ, ಕಿತ್ತಗನೂರು, ವರ್ತೂರು ಹೋಬಳಿಯ ಕೈಕೊಂಡ್ರಹಳ್ಳಿ, ಆನೇಕಲ್ ತಾಲ್ಲೂಕಿನ ಕಸಬಾ-1 ಹೋಬಳಿಯ ಮೆಣಸಿಗನಹಳ್ಳಿ ಗ್ರಾಮ, ಅತ್ತಿಬೆಲೆ-1 ಹೋಬಳಿಯ ಹಳೇಹಳ್ಳಿ, ಸರ್ಜಾಪುರ-2 ಹೋಬಳಿಯ ಮುತ್ತಾನಲ್ಲೂರು, ಸರ್ಜಾಪುರ-3 ಹೋಬಳಿಯ ನರಿಗಾ ಗ್ರಾಮದಲ್ಲಿ ತೆರವು ಕಾರ್ಯಾಚರಣೆ ನಡೆಯಿತು.

ದಕ್ಷಿಣ ತಾಲ್ಲೂಕಿನ ತಾವರೆಕೆರೆ ಹೋಬಳಿಯ ಮಾದಾಪಟ್ಟಣ, ಬೇಗೂರು ಹೋಬಳಿಯ ಮೈಲಸಂದ್ರ, ಉತ್ತರಹಳ್ಳಿ ಹೋಬಳಿಯ ರಾವುಗೋಡ್ಲು, ಕೆಂಗೇರಿ ಹೋಬಳಿಯ ಕಂಬೀಪುರ, ಯಲಹಂಕ ತಾಲ್ಲೂಕಿನ ಜಾಲ-3 ಹೋಬಳಿಯ ಬಿ.ಕೆ.ಅಮಾನಿಕರೆ ಗ್ರಾಮ, ಜಾಲ-1 ಹೋಬಳಿಯ ಹುತ್ತನಹಳ್ಳಿ, ಹೆಸರುಘಟ್ಟ-2 ಹೋಬಳಿಯ ಕಾಮಾಕ್ಷಿಪುರ, ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ಕಡಬಗೆರೆ, ದಾಸನಪುರ ಹೋಬಳಿಯ ಕದರನಹಳ್ಳಿ, ಕುಕ್ಕನಹಳ್ಳಿ, ಗಟ್ಟಿಸಿದ್ದನಹಳ್ಳಿಯಲ್ಲಿ ಒತ್ತುವರಿ ತೆರವುಗೊಳಿಸಲಾಯಿತು.

ಮೂವರ ವಿರುದ್ಧ ಎಫ್‌ಐಆರ್; ಸಿಸಿಬಿ ಪೊಲೀಸರಿಂದ ತನಿಖೆ ಚುರುಕು

ವೇತನ ನೀಡದೇ ವಂಚನೆ: ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇತನ ನೀಡದೇ ವಂಚನೆ ನಡೆಸಲಾಗಿದೆ ಎಂಬ ಆರೋಪದ ಅಡಿ ಬೆಟಾಲಕ್ಸ್ ಕನ್ಸಲ್ಟಿಂಗ್ ಕಂಪನಿಯ ಸಿ.ಇ.ಒ ಸೇರಿ ಮೂವರ ವಿರುದ್ಧ ಸಿಸಿಬಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಎ.ಶರವಣನ್ ಅವರು ನೀಡಿರುವ ದೂರು ಆಧರಿಸಿ, ಕಂಪನಿಯ ಸಿಇಒ ಅನಿಮೇಶ್ ಕುಮಾರ್, ಸಿಟಿಒ ಉತ್ಕರ್ಷ್ ಸಿನ್ಹಾ ಹಾಗೂ ಲೆಕ್ಕ ಪರಿಶೋಧಕ ಪವನ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

'ದೂರುದಾರ ಶರವಣನ್ ಅವರು ಕ್ಲೌಡ್ ಕಂಪ್ಯೂಟಿಂಗ್, ಆರ್ಟಿಫಿಶಿಯಲ್ ಇಂಟಲಿಜೆನ್ಸ್, ದೇವ್ ಆಪ್ ಹಾಗೂ ಮಾಹಿತಿ ಭದ್ರತೆಗೆ ಸಂಬಂಧಿಸಿದಂತೆ 15 ವರ್ಷ ಅನುಭವ ಹೊಂದಿದ್ದಾರೆ. ಅಲ್ಲದೇ ವಿವಿಧ ಕಂಪನಿಗಳಲ್ಲೂ ಕೆಲಸ ಮಾಡಿದ್ದಾರೆ. 2023ರ ಫೆಬ್ರುವರಿಯಲ್ಲಿ ಶರವಣನ್ ಅವರು ಫುಡ್ ಹಬ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಬೆಟಾಲಕ್ಸ್ ಕನ್ಸಲ್ಟಿಂಗ್ ಕಂಪನಿಯ ಸಿಇಒ ಅನಿಮೇಶ್ ಕುಮಾರ್, ಸಿಟಿಒ ಉತ್ಕರ್ಷ್ ಸಿನ್ಹಾ ಅವರು ಶರವಣನ್ ಅವರನ್ನು ಸಂಪರ್ಕಿಸಿ, ತಮ್ಮ ಕಂಪನಿಗೆ ಸೇರುವಂತೆ ಆಹ್ವಾನಿಸಿದ್ದರು. ಪ್ರತಿ ಗಂಟೆಗೆ ₹700 ವೇತನ ಕೊಡುವುದಾಗಿಯೂ ಭರವಸೆ ನೀಡಿದ್ದರು. ಅಲ್ಲದೇ ದೇವ್ ಆಪ್ ಹಾಗೂ ಕ್ಲೌಡ್ ವರ್ಟಿಕಲ್ ನಿರ್ವಹಣೆಯ ನಿರ್ದೇಶಕರನ್ನಾಗಿ ಮಾಡಿಕೊಳ್ಳುವುದಾಗಿಯೂ ಭರವಸೆ ನೀಡಿದ್ದರು. ಅದೇ ವರ್ಷ ಏಪ್ರಿಲ್‌ನಲ್ಲಿ ದೂರುದಾರರು ಕೆಲಸಕ್ಕೆ ಸೇರಿಕೊಂಡು ಕ್ಲೌಡ್ ಕಂಪ್ಯೂಟಿಂಗ್ ಕಾರ್ಯನಿರ್ವಹಣೆಗೆ ಒಂದು ತಂಡವನ್ನು ಕಟ್ಟಿಕೊಂಡಿದ್ದರು' ಎಂದು ಮೂಲಗಳು ತಿಳಿಸಿವೆ.

'ಶರವಣನ್ ಕೆಲಸಕ್ಕೆ ಸೇರಿಕೊಂಡ ಬಳಿಕ ಕಂಪನಿಗೆ ಸುಮಾರು ₹20 ಕೋಟಿ ವ್ಯವಹಾರದ ಒಪ್ಪಂದ ಆಗಿತ್ತು. ದೂರುದಾರರು ಕಂಪನಿಗೆ ಸೇರಿಕೊಳ್ಳುವ ಸಂದರ್ಭದಲ್ಲಿ ವಾರ್ಷಿಕವಾಗಿ ₹90 ಲಕ್ಷ ವೇತನ ನೀಡುವುದಾಗಿ ಭರವಸೆ ನೀಡಿದ್ದರು. ಕೆಲಸಕ್ಕೆ ಸೇರಿದ ಮೇಲೆ ಡಿಸೆಂಬರ್‌ನಲ್ಲಿ ವೇತನ ಪರಿಶೀಲಿಸಿದಾಗ ಅದು ₹80 ಲಕ್ಷಕ್ಕೆ ಕಡಿತ ಆಗಿರುವುದು ಕಂಡುಬಂದಿತ್ತು. ನಿರ್ದೇಶಕರನ್ನು ಪ್ರಶ್ನಿಸಿದಾಗ ಬೋನಸ್ ರೂಪದಲ್ಲಿ ₹10 ಲಕ್ಷ ಪಾವತಿ ಮಾಡುವುದಾಗಿ ಭರವಸೆ ನೀಡಿದ್ದರು. ವೇತನದ ರಶೀದಿಯನ್ನು ಪರಿಶೀಲನೆ ನಡೆಸಿದಾಗ 31 ದಿನ ಕೆಲಸ ನಿರ್ವಹಿಸಿದ್ದರೂ ಕಂಪನಿಯವರು 28 ದಿನ ಎಂಬುದಾಗಿ ತೋರಿಸಿದ್ದರು. ಆ ಕುರಿತು ಕಂಪನಿಯ ನಿರ್ದೇಶಕರನ್ನು ಪ್ರಶ್ನಿಸಿದಾಗ, ಸರಿಪಡಿಸಲಾಗುವುದು ಎಂದು ಭರವಸೆ ನೀಡಿದ್ದರು' ಎಂಬ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'ನಂತರ ದಿನಗಳಲ್ಲಿ ವೇತನವನ್ನು ಪಾವತಿ ಮಾಡಿರಲಿಲ್ಲ. ಕರೆ ಮಾಡಿ ಪ್ರಶ್ನಿಸಿದಾಗ ಇನ್ನೂ ಹೆಚ್ಚಿನ ಕೆಲಸ ಮಾಡಿದರೆ ಎಲ್ಲ ಬಾಕಿ ವೇತನವನ್ನೂ ನೀಡುವುದಾಗಿ ಅನಿಮೇಶ್ ಕುಮಾರ್ ಹೇಳಿದ್ದರು. ಬಾಕಿ ವೇತನ ಸಿಗುವ ಭರವಸೆಯಿಂದ ಶರವಣನ್ ಅವರು ಹೆಚ್ಚು ಅವಧಿಯಲ್ಲಿ ಕೆಲಸ ಮಾಡಿದ್ದರು. ನಂತರ, ಅನಿಮೇಶ್ ಕುಮಾರ್, ಉತ್ಕರ್ಷ್ ಸಿನ್ಹಾ, ಪವನ್ ಅವರು ನೌಕರರ ವೇತನಕ್ಕೆ ಸಂಬಂಧಿಸಿದಂತೆ ನಕಲಿ ರಶೀದಿ ಸಿದ್ಧಪಡಿಸಿ ಟಿಡಿಎಸ್ ಅನ್ನು ಕಡಿತ ಮಾಡಿಕೊಂಡಿದ್ದರು. ಅಲ್ಲದೇ ಟಿಡಿಎಸ್ ಹಣವನ್ನು ಆದಾಯ ತೆರಿಗೆ ಇಲಾಖೆಗೂ ಪಾವತಿ ಮಾಡಿರಲಿಲ್ಲ. ಹಿಂದಿನ ನೌಕರರ ಜತೆಗೆ ಚರ್ಚಿಸಿದಾಗ ಅವರಿಗೂ ಟಿಡಿಎಸ್ ಹಣ ಕಟಾವಣೆ ಮಾಡಿಕೊಂಡು ಮೋಸ ಮಾಡಿರುವುದು ಗೊತ್ತಾಗಿತ್ತು. ಕಂಪನಿಯು ₹1.04 ಕೋಟಿ ವಂಚನೆ ಮಾಡಿದೆ' ಎಂಬ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ವಿವರಿಸಲಾಗಿದೆ.

ಬೆದರಿಕೆ ಆರೋಪ: ಶರವಣನ್ ಅವರು ಕೆಲಸಕ್ಕೆ ರಾಜೀನಾಮೆ ನೀಡಿ, ವೇತನ ನೀಡುವಂತೆ ಕೇಳಿದರು. ಆಗ ಅನಿಮೇಶ್ ಕುಮಾರ್ ಅವರು ಬೆದರಿಕೆ ಹಾಕಿದ್ದರು ಎನ್ನಲಾಗಿದೆ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆರೋಪಿಗಳು ನಾಪತ್ತೆ ಮಾಹಿತಿ ನೀಡಲು ಮನವಿ

ಬೆಂಗಳೂರು: ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿರುವ ನಿವ್ಯಾ ಟ್ರೇಡರ್ಸ್‌ನ ವಿ.ಸುಕುಮಾರ್ ಮತ್ತು ಪ್ರೋಗ್ರೆಸಿವ್ ಮೈನ್ಸ್ ಆ್ಯಂಡ್ ಮಿನರಲ್ಸ್‌ನ ರಾಜ್‌ಕುಮಾರ್ ಕ್ರಿಶ್ಚಿಯನ್ ಅವರ ಬಗ್ಗೆ ಮಾಹಿತಿ ನೀಡುವಂತೆ ಲೋಕಾಯುಕ್ತ ವಿಶೇಷ ತನಿಖಾ ತಂಡ ಸಾರ್ವಜನಿಕರಿಗೆ ಮನವಿ ಮಾಡಿದೆ.

23ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯವು ಘೋಷಿತ ಆರೋಪಿಗಳು ಎಂದು ಪ್ರಕಟಿಸಿದೆ . ಆರೋಪಿಗಳ ಬಗ್ಗೆ ಮಾಹಿತಿ ದೊರೆತಲ್ಲಿ ವಿಶೇಷ ತನಿಖಾ., ಲೋಕಾಯುಕ್ತ ಪೊಲೀಸ್ ಅಧೀಕ್ಷಕರು 9449840251, 9448023018, 080-22942702 ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ತಿಳಿಸಿದೆ.

ಚಾಲಕನ ಅಪಹರಣ: ರೌಡಿಶೀಟರ್ ಸೇರಿ ನಾಲ್ವರ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ಮಿನಿ ಬಸ್ ಚಾಲಕನನ್ನು ಅಪಹರಿಸಿ ಹಲ್ಲೆ ನಡೆಸಿದ್ದ ರೌಡಿಶೀಟರ್ ಸೇರಿ ನಾಲ್ವರು ಆರೋಪಿಗಳನ್ನು ತಲಘಟ್ಟಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತಲಘಟ್ಟಪುರ ಠಾಣೆ ರೌಡಿಶೀಟರ್ ಮಂಜೇಶ್ ಅಲಿಯಾಸ್ ಆವಲಹಳ್ಳಿ ಮಂಜ, ಆತನ ಸಹಚರರಾದ ದಿಲೀಪ್, ಚಂದ್ರಶೇಖರ್ ಮತ್ತು ನೂತನ್ ಬಂಧಿತರು.

ಆರೋಪಿಗಳು ಏ.8ರಂದು ಮಿನಿ ಬಸ್ ಚಾಲಕ ಕಿರಣ್ ಎಂಬಾತನನ್ನು ಬಸ್ ಸಮೇತ ಅಪಹರಿಸಿದ್ದರು. ನಂತರ ಹಲ್ಲೆ ನಡೆಸಿದ್ದರು. ಅಲ್ಲದೇ ಕಿರಣ್ ಅವರ ಬಳಿಯಿದ್ದ ಹಣವನ್ನೂ ಕಸಿದುಕೊಂಡಿದ್ದರು. ಕಿರಣ್ ಕುಟುಂಬಸ್ಥರು ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

'ಅಪಹರಣಕ್ಕೆ ಒಳಗಾದ ಕಿರಣ್ ಅವರು ಈ ಹಿಂದೆ ಮಂಜೇಶ್ ಪತ್ನಿಯ ತವರು ಮನೆಯಲ್ಲಿ ಕಾರು ಚಾಲಕನಾಗಿ ಕೆಲಸ ಮಾಡುತ್ತಿದ್ದರು. ಆಗ ಕಿರಣ್‌ಗೆ ಮಂಜೇಶ್ ಅವರ ಪತ್ನಿಯ ಪರಿಚಯವಾಗಿತ್ತು. ಆತ್ಮೀಯತೆ ಇತ್ತು ಎನ್ನಲಾಗಿದೆ. ಬಳಿಕ ಕಿರಣ್ ಕೆಲಸ ಬಿಟ್ಟು ಸ್ವಂತ ಮಿನಿ ಬಸ್ ಖರೀದಿಸಿ ಪ್ರವಾಸಿ ತಾಣಗಳಿಗೆ ಬಾಡಿಗೆಗೆ ಹೋಗುತ್ತಿದ್ದರು. ಈ ಮಧ್ಯೆ ಕಿರಣ್ ಅವರಿಂದ ಮಂಜೇಶ್ ಅವರ ಪತ್ನಿ ₹40 ಸಾವಿರ ಸಾಲ ಪಡೆದುಕೊಂಡಿದ್ದರು. ಸಾಲವನ್ನೂ ತೀರಿಸುತ್ತಿದ್ದರು. ಇಬ್ಬರ ಸ್ನೇಹದ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದ ಮಂಜೇಶ್ ಏಪ್ರಿಲ್ 8ರಂದು ಮಹಿಳೆಯೊಬ್ಬರಿಂದ ಕರೆ ಮಾಡಿಸಿದ್ದ. ಕೋಟಿ ಲಿಂಗೇಶ್ವರಕ್ಕೆ ಪ್ರವಾಸಕ್ಕೆ ಹೋಗಬೇಕು. ಬಾಡಿಗೆಗೆ ಬಸ್ ಬೇಕು ಎಂದು ಹೇಳಿದ್ದರು. ಬಾಡಿಗೆಗೆ ಬಂದಾಗ ಬೇರೊಂದು ಸ್ಥಳಕ್ಕೆ ಕರೆದೊಯ್ದು ಹಲ್ಲೆ ನಡೆಸಿದ್ದರು' ಎಂದು ಮೂಲಗಳು ತಿಳಿಸಿವೆ.

'ಪಾಲಿಕೆ ಮಾಜಿ ಸದಸ್ಯ ಸೋಮಣ್ಣ ಅವರ ಅಣ್ಣನ ಮಗ ವಿನೋದ್ ಕೊಲೆ ಪ್ರಕರಣದಲ್ಲಿ ಜೈಲು ಸೇರಿದ್ದ ಮಂಜೇಶ್, ಎರಡು ತಿಂಗಳ ಹಿಂದೆ ಜಾಮೀನು ಪಡೆದು ಬಿಡುಗಡೆಯಾಗಿದ್ದ' ಎಂದು ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಸಿ.ಸಿ.ಟಿ.ವಿ ಕ್ಯಾಮೆರಾ, ಯುಪಿಎಸ್ ಕಳ್ಳರ ಬಂಧನ

ಬೆಂಗಳೂರು: ಸೇಫ್ ಸಿಟಿ ಯೋಜನೆಯಡಿ ಅಳವಡಿಸಿರುವ ಸಿ.ಸಿ.ಟಿ.ವಿ ಕ್ಯಾಮೆರಾಗಳ ಯುಪಿಎಸ್ ಮತ್ತು ಬ್ಯಾಟರಿ ಕಳವು ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನವೀನ್ ಕುಮಾರ್ ಮತ್ತು ಪ್ರಶಾಂತ್ ಅವರನ್ನು ಬಂಧಿಸಿ ಎರಡು ಯುಪಿಎಸ್, ಮೂರು ಬ್ಯಾಟರಿ ಸೇರಿ ₹56 ಸಾವಿರ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡು ವಿಚಾರಣೆ ನಡೆಸುತ್ತಿದ್ದಾರೆ.

ಆರೋಪಿಗಳು ಬ್ಯಾಟರಿ ಮತ್ತು ಯುಪಿಎಸ್ ಕಳ್ಳತನ ಮಾಡುವ ವೇಳೆ ಹಿಡಿದು ಪ್ರಶ್ನಿಸಿದಾಗ, ಮತ್ತೊಂದು ಕಡೆಯೂ ಕಳ್ಳತನ ಮಾಡಿರುವ ಬಗ್ಗೆ ತಪ್ಪೊಪ್ಪಿಕೊಂಡಿದ್ದಾರೆ.

ಆರೋಪಿಗಳ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬೇಕು ಎಂದು ಹನಿವೆಲ್ ಆಟೊಮೇಷನ್ ಇಂಡಿಯಾ ಕಂಪನಿ ಎಲೆಕ್ಟ್ರಿಕಲ್ ಎಂಜಿನಿಯರ್ ಬರ್ಕತ್ ಅಲಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡು ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

₹66 ಲಕ್ಷ ವಂಚಿಸಿದ ಆರೋಪಿಗಳು

ಬೆಂಗಳೂರು: ನಗರದ ನಿವಾಸಿಯೊಬ್ಬರು ವಾಟ್ಸ್‌ಆ್ಯಪ್‌ಗೆ ಬಂದ ಆ್ಯಪ್‌ನಲ್ಲಿ ಹಣ ಹೂಡಿಕೆ ಮಾಡಿ ₹ 66.51 ಲಕ್ಷ ಕಳೆದುಕೊಂಡಿರುವ ಘಟನೆ ನಡೆದಿದೆ.

ಶ್ರೀನಿವಾಸಪುರದ ನಿವಾಸಿ ಅವರ ದೂರು ಆಧರಿಸಿ ಸೆನ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

'ಮಿರೇ ಅಸೆಟ್ ಶೇರ್‌ಖಾನ್ ಸೆಕ್ಯುರಿಟೀಸ್ ಕಂಪನಿಯಲ್ಲಿ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಾಂಶ ಸಿಗಲಿದೆ ಎಂದು ವಂಚಕರು ನಂಬಿಸಿದರು. ಈ ಲಿಂಕ್ ಮೇಲೆ ಕ್ಲಿಕ್ ಮಾಡಿ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಹಂತ ಹಂತವಾಗಿ ಷೇರುಗಳ ಖರೀದಿ ಮತ್ತು ಮಾರಾಟ ವ್ಯವಹಾರ ನಡೆಸಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ಒಟ್ಟು ₹66 ಲಕ್ಷ ಮೌಲ್ಯದ ಷೇರುಗಳನ್ನು ಖರೀದಿ ಮಾಡಿದ್ದು, ಆ್ಯಪ್‌ನಲ್ಲಿ ₹1 ಕೋಟಿ ಲಾಭಾಂಶ ಗಳಿಸಿರುವುದಾಗಿ ವಂಚಕರು ತೋರಿಸುತ್ತಿದ್ದರು. ಲಾಭಾಂಶ ಮೊತ್ತ ಪಡೆಯಲು ಪ್ರಯತ್ನಿಸಿದಾಗ ಆರೋಪಿಗಳು ಮೊಬೈಲ್ ಸ್ವಿಚ್ಡ್ ಆಫ್ ಮಾಡಿಕೊಂಡು, ಸಂಪರ್ಕಕ್ಕೆ ಸಿಕ್ಕಿರಲಿಲ್ಲ. ಬಳಿಕ ಅವರಿಗೆ ಮೋಸ ಹೋಗಿರುವುದು ಗೊತ್ತಾಗಿದೆ' ಎಂದು ಹೇಳಿದ್ದಾರೆ.

'ದೇಶದ ಅಭಿವೃದ್ಧಿಗೆ ಬಾಹ್ಯಾಕಾಶ ಬಳಕೆ'

ಆರ್ಯಭಟ ಉಡಾವಣೆಯ ಸುವರ್ಣ ಮಹೋತ್ಸವದಲ್ಲಿ ಕಿರಣ್ ಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಾಹ್ಯಾಕಾಶವನ್ನು ಎಲ್ಲ ದೇಶಗಳು ರಕ್ಷಣಾ (ಮಿಲಿಟರಿ) ಉದ್ದೇಶಕ್ಕೆ ಬಳಸಿಕೊಳ್ಳುತ್ತಿದ್ದರೆ, ದೇಶದ ಅಭಿವೃದ್ಧಿಗಾಗಿ ಬಳಸಿಕೊಳ್ಳುತ್ತಿರುವ ಏಕೈಕ ರಾಷ್ಟ್ರ ಭಾರತ' ಎಂದು ಬಾಹ್ಯಾಕಾಶ ಆಯೋಗದ ಸದಸ್ಯ ವಿಜ್ಞಾನಿ ಎ.ಎಸ್. ಕಿರಣ್ ಕುಮಾರ್ ತಿಳಿಸಿದರು.

ಯು.ಆರ್. ರಾವ್ ಉಪಗ್ರಹ ಕೇಂದ್ರ ಮತ್ತು ಜವಾಹರಲಾಲ್ ನೆಹರೂ ತಾರಾಲಯವು ಶನಿವಾರ ಹಮ್ಮಿಕೊಂಡಿದ್ದ ಆರ್ಯಭಟ ಉಪಗ್ರಹ ಉಡಾವಣೆಯ ಸುವರ್ಣಮಹೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸಂವಹನಕ್ಕೆ, ರಿಮೋಟ್ ಸೆನ್ಸಿಂಗ್‌ಗೆ, ಬ್ರಾಡ್‌ಕಾಸ್ಟ್‌ಗೆ ಬಾಹ್ಯಾಕಾಶವನ್ನು ಭಾರತ ಬಳಸುತ್ತಿದೆ. ಕಳೆದ ಐವತ್ತು ವರ್ಷಗಳಲ್ಲಿ ಬಾಹ್ಯಾಕಾಶ ವಿಜ್ಞಾನದಲ್ಲಿ ಬಹಳಷ್ಟು ಸಾಧನೆಯನ್ನು ಮಾಡಿದ್ದು, ಕಳೆದ 10 ವರ್ಷಗಳಲ್ಲಿ ಅನುಷ್ಠಾನಕ್ಕೆ ತಂದಿರುವ ಕಾರ್ಯಕ್ರಮಗಳು ಜಗತ್ತೇ ನಮ್ಮ ದೇಶದತ್ತ ನೋಡುವಂತೆ ಮಾಡಿದೆ' ಎಂದು ಹೇಳಿದರು.

ಯು.ಆರ್. ರಾವ್ ಉಪಗ್ರಹ ಕೇಂದ್ರದ ನಿರ್ದೇಶಕ ಎಂ. ಶಂಕರನ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, '1970ರ ನಂತರ ಭಾರತವು ಬಾಹ್ಯಾಕಾಶ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಲು ಆರಂಭಿಸಿತು. 100ಕ್ಕೂ ಅಧಿಕ ಉಪಗ್ರಹಗಳನ್ನು ಉಡಾವಣೆ ಮಾಡಿದೆ. ಅದರಲ್ಲಿ ಶೇ 50ರಷ್ಟು ಉಪಗ್ರಹಗಳು ಈಗಲೂ ಕಾರ್ಯನಿರ್ವಹಿಸುತ್ತಿವೆ. ನಮ್ಮಲ್ಲಿ ತಯಾರಾದ 100 ರಾಕೆಟ್‌ಗಳು ನಮ್ಮ ದೇಶದ ಮತ್ತು ಬೇರೆ ಬೇರೆ ದೇಶಗಳ ಉಪಗ್ರಹಗಳನ್ನು ಅಂತರಿಕ್ಷಕ್ಕೆ ಕೊಂಡೊಯ್ದಿವೆ' ಎಂದು ಮಾಹಿತಿ ನೀಡಿದರು.

'1971ರಲ್ಲಿ ನಡೆದ ಬಾಂಗ್ಲಾ ವಿಮೋಚನಾ ಯುದ್ಧ, 1974ರಲ್ಲಿ ಪೋಖ್ರಾನ್‌ನಲ್ಲಿ ನಡೆಸಿದ ಪರಮಾಣು ಪರೀಕ್ಷೆ, 1975ರಲ್ಲಿ ನಡೆದ ಆರ್ಯಭಟ ಉಡಾವಣೆಯಂತಹ ಘಟನೆಗಳು ಭಾರತದ ಬೆಳವಣಿಗೆಯನ್ನು ಸಾರುವ ಮೈಲುಗಲ್ಲುಗಳು' ಎಂದು ಬಣ್ಣಿಸಿದರು.

ಸಾಹಸಿ ಪ್ರವೃತ್ತಿಯೊಂದಿಗೆ ಸವಾಲುಗಳನ್ನು ಎದುರಿಸುವ ಮನೋಬಲ ಇದ್ದಾಗ ಸಾಧನೆ ಮಾಡಲು ಸಾಧ್ಯ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಎಲ್‌ಇಒಎಸ್ ನಿರ್ದೇಶಕ ಕೆ.ವಿ. ಶ್ರೀರಾಂ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಭಾರತದ ಸಾಧನೆಗಳನ್ನು ಪ್ರಚುರಪಡಿಸುವ ಉಪಗ್ರಹಗಳ ಮಾದರಿ, ಇನ್ನಿತರ ತಂತ್ರಜ್ಞಾನಗಳ ಮಾದರಿಗಳ ಪ್ರದರ್ಶನ ಏರ್ಪಡಿಸಲಾಗಿತ್ತು. ವಿದ್ಯಾರ್ಥಿಗಳೊಂದಿಗೆ ಸಂವಾದ, ವಿವಿಧ ಸ್ಪರ್ಧೆ ನಡೆಸಲಾಯಿತು. ವಿವಿಧ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ನಗರದಲ್ಲಿ ಶನಿವಾರ ಆಯೋಜಿಸಿದ್ದ ಆರ್ಯಭಟ ಉಡಾವಣೆಯ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಬಾಹ್ಯಾಕಾಶ ಆಯೋಗದ ಸದಸ್ಯ ಎ. ಎಸ್. ಕಿರಣ್‌ಕುಮಾರ್, ಯು.ಆರ್‌.ರಾವ್ ಉಪಗ್ರಹ ಕೇಂದ್ರದ ನಿರ್ದೇಶಕ ಎಂ. ಶಂಕರನ್, ಜವಾಹರಲಾಲ್ ನೆಹರೂ ತಾರಾಲಯದ ನಿರ್ದೇಶಕ ಬಿ.ಆರ್. ಗುರುಪ್ರಸಾದ್, ಬೇಸ್ ಉಪಾಧ್ಯಕ್ಷ ಟಿ.ಕೆ. ಅಲೆಕ್ಸ್ ಮತ್ತು ಭಾರತೀಯ ಖಗೋಳ ಭೌತವಿಜ್ಞಾನ ಸಂಸ್ಥೆಯ ನಿರ್ದೇಶಕಿ ಅನ್ನಪೂರ್ಣಿ ಸುಬ್ರಮಣ್ಯಂ ಅವರು ಆರ್ಯಭಟ ಉಪಗ್ರಹದ ಮಾದರಿಯನ್ನು ವೀಕ್ಷಿಸಿದರು — ಪ್ರಜಾವಾಣಿ ಚಿತ್ರ

ಸಂಚಾರ ಸಮಸ್ಯೆ ಗಮನಕ್ಕೆ ಬಂದಿದೆ: ಸಂವಾದದಲ್ಲಿ ಹೇಳಿಕೆ

ನಾಗರಿಕರ ಸುರಕ್ಷತೆಗೆ ಆದ್ಯತೆ ಕಮಿಷನರ್ ದಯಾನಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ಮೇಲ್ಸೇತುವೆ ಕಾಮಗಾರಿ ನಡೆಯುತ್ತಿರುವ ಕಾರಣ ದಟ್ಟಣೆ ಅವಧಿಯಲ್ಲಿ ಸಂಚಾರ ಅಸ್ತವ್ಯಸ್ತವಾಗುತ್ತಿದೆ. ಹಾಗಾಗಿ ಇದಕ್ಕೆ ಸಂಬಂಧಿಸಿದ ಸಂಸ್ಥೆಗಳ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಲಾಗುವುದು ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

ನಗರದಲ್ಲಿ ಶನಿವಾರ ಸಾರ್ವಜನಿಕರ ಜತೆಗಿನ ಸಂವಾದದಲ್ಲಿ ಮಾತನಾಡಿದ ಅವರು, ಬಿಡಿಎ ಮತ್ತು ಇತರೆ ಸಂಸ್ಥೆಗಳು ಮೂಲಸೌಕರ್ಯ ಒದಗಿಸುವ ಕಾರ್ಯ ಕೈಗೊಂಡಿವೆ. ವಾಹನ ಸಂಚಾರ ಸಮಸ್ಯೆ ಇರುವುದು ಗಮನಕ್ಕೆ ಬಂದಿದೆ. ಕಾಮಗಾರಿ ಪೂರ್ಣಗೊಂಡರೆ ಸಮಸ್ಯೆ ಬಗೆಹರಿಯಲಿದೆ. ಈ ಪ್ರದೇಶದಲ್ಲಿ ಹೆಚ್ಚಿನ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ. ದಟ್ಟಣೆ ಅವಧಿಯಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳು ಹಾಜರಿದ್ದು, ಸುಗಮ ಸಂಚಾರಕ್ಕೆ ಕ್ರಮ ಕೈಗೊಳ್ಳುತ್ತಿದ್ದಾರೆ ಎಂದು ಹೇಳಿದರು.

ಬೇಸಿಗೆ ಸಂದರ್ಭದಲ್ಲಿ ವಾಟರ್ ಟ್ಯಾಂಕರ್‌ಗಳಿಗೆ ಹೆಚ್ಚಿನ ಬೇಡಿಕೆ ಇದೆ. ಆದರೆ, ವಾಹನ ಚಾಲಕರು ಮದ್ಯ ಸೇವಿಸಿ ಚಾಲನೆ ಮಾಡುವುದು, ಅತಿ ವೇಗದ ಚಾಲನೆ, ನಿರ್ಲಕ್ಷ್ಯತನದ ಚಾಲನೆ ಮಾಡುವ ಬಗ್ಗೆ ದೂರುಗಳು ಬಂದಿವೆ. ಸಾರಿಗೆ ಇಲಾಖೆ ಅಧಿಕಾರಿಗಳ ಜತೆ ವಿಶೇಷ ಕಾರ್ಯಾಚರಣೆ ನಡೆಸಿ, ಕ್ರಮ ಕೈಕೊಳ್ಳಲಾಗುತ್ತಿದೆ. ನಿಯಮ ಉಲ್ಲಂಘಿಸಿದವರಿಗೆ ದಂಡ ವಿಧಿಸಲಾಗುತ್ತಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮುಖ್ಯಾಂಶಗಳು

- ಸಂಚಾರ ದಟ್ಟಣೆ ನಿವಾರಣೆಗೆ ಕ್ರಮ
- ನಿಯಮ ಉಲ್ಲಂಘಿಸಿದರೆ ದಂಡ

ಬಿ.ದಯಾನಂದ

ನಗರದಲ್ಲಿ ಸುದ್ದಗುಂಟೆ ಪಾಳ್ಯ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಯುವತಿಯರಿಗೆ ಲೈಂಗಿಕ ಕಿರುಕುಳ ನೀಡಿದ ಪ್ರಕರಣ ಪ್ರಸ್ತಾಪಿಸಿ, ಮಹಿಳೆಯರ ಸುರಕ್ಷತೆ ಬಗ್ಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಮಹಿಳೆಯೊಬ್ಬರು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ದಯಾನಂದ, ಮಹಿಳೆಯರು ಸೇರಿದಂತೆ ನಗರದ ಪ್ರತಿಯೊಬ್ಬರ ಸುರಕ್ಷತೆಗೆ ಪೊಲೀಸ್ ಇಲಾಖೆ ಅಗತ್ಯ ಕ್ರಮ ಕೈಗೊಂಡಿದೆ. 250 ಹೊಯ್ಸಳ ವಾಹನಗಳು 24X7 ತಾಸು ಗಸ್ತು ತಿರುಗುತ್ತಿರುತ್ತವೆ. ಅಲ್ಲದೇ ಪೊಲೀಸ್ ಸಹಾಯವಾಣಿ 112ಕ್ಕೆ ಕರೆ ಮಾಡಿ ಮಾಹಿತಿ ನೀಡಬಹುದು ಎಂದು ಹೇಳಿದರು.

'ಲಂಚ ಕೇಳಿದರೆ ದೂರು ನೀಡಿ'

ಪೊಲೀಸ್ ಇಲಾಖೆಯಲ್ಲಿ ಯಾವುದೇ ಕೆಲಸ ಮಾಡಿಕೊಡಲು ಲಂಚ ಕೇಳಿದರೆ ಹಿರಿಯ ಅಧಿಕಾರಿಗಳಿಗೆ ದೂರು ನೀಡಬಹುದು. ಸೂಕ್ತ ದಾಖಲೆಗಳನ್ನು ಹಾಜರುಪಡಿಸಿದರೆ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಬಿ.ದಯಾನಂದ ಹೇಳಿದರು.

ನಗರದಲ್ಲಿ ಮಾದಕ ವಸ್ತು ಮಾರಾಟ ನಿಯಂತ್ರಣ ಇಲಾಖೆಗೆ ಸವಾಲಾಗಿದೆ. ಡ್ರಗ್ಸ್ ಪೆಡ್ಲರ್‌ಗಳ ಬಗ್ಗೆ ಸಾರ್ವಜನಿಕರು ಪೊಲೀಸರಿಗೆ ಮಾಹಿತಿ ನೀಡಿದರೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಅರ್ಹತಾ ಪಟ್ಟಿ ಪ್ರಕಟ

ಬೆಂಗಳೂರು: ಕರ್ನಾಟಕ ವಿಧಾನ ಪರಿಷತ್ ಸಚಿವಾಲಯದ ವಿವಿಧ ವೃಂದಗಳ 27 ಹುದ್ದೆಗಳಿಗೆ ನಡೆದ ಲಿಖಿತ ಪರೀಕ್ಷೆಯ ಅಂತಿಮ ಅರ್ಹತಾ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸಿದೆ.

ಅಭ್ಯರ್ಥಿಗಳು ಗಳಿಸಿದ ಅಂಕಗಳ ಸಹಿತ ಅರ್ಹತಾ ಪಟ್ಟಿಯನ್ನು ಪರಿಷತ್ತಿನ ಸಚಿವಾಲಯಕ್ಕೆ ಸೋಮವಾರ ರವಾನಿಸಲಾಗುತ್ತದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ. ಏಳು ವೃಂದಗಳ ಈ ಹುದ್ದೆಗಳಿಗೆ ಮಾರ್ಚ್ 22ರಿಂದ 25ರವರೆಗೆ ಪರೀಕ್ಷೆ ನಡೆಸಲಾಗಿತ್ತು.

ಸಂಕ್ಷಿಪ್ತ ಸುದ್ದಿ

ವ್ಯಾನ್ಸ್ ಭೇಟಿ ವಿರೋಧಿಸಿ ಪ್ರತಿಭಟನೆ ನಾಳೆ

ಬೆಂಗಳೂರು: ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಭಾರತಕ್ಕೆ ಭೇಟಿ ನೀಡುತ್ತಿರುವುದನ್ನು ಖಂಡಿಸಿ ಏಪ್ರಿಲ್ 21ರಂದು ಪ್ರತಿಭಟನೆ ನಡೆಸಲು ಕರ್ನಾಟಕ ರಾಜ್ಯ ಪ್ರಾಂತ ರೈತರ ಸಂಘ ಕರೆ ನೀಡಿದೆ.

'ಭಾರತ ಮಾರಾಟಕ್ಕಿಲ್ಲ ಎಂಬ ಬಲವಾದ ಸಂದೇಶ ರವಾನಿಸಲು ಗ್ರಾಮ, ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಅವರ ಪ್ರತಿಕೃತಿಗಳನ್ನು ದಹಿಸಿ ಪ್ರತಿಭಟನೆ ನಡೆಸಲಾಗುವುದು' ಎಂದು ಸಂಘದ ಅಧ್ಯಕ್ಷ ಯು. ಬಸವರಾಜ ತಿಳಿಸಿದ್ದಾರೆ.



ಡೊನಾಲ್ಡ್ ಟ್ರಂಪ್ ಭಾರತದ ವಿರುದ್ಧ ಸಾರಿರುವ ಸುಂಕ ಸಮರದ ಬೆದರಿಕೆ ಮೂಲಕ ಭಾರತದ ಕೃಷಿ, ಹೈನುಗಾರಿಕೆ, ಮೀನುಗಾರಿಕೆ ಮಾರುಕಟ್ಟೆಯನ್ನು ಅಮೆರಿಕ ದೇಶದ ಉತ್ಪನ್ನಗಳಿಗೆ ಸುಂಕ ರಹಿತವಾಗಿ ಮುಕ್ತಗೊಳಿಸುವಂತೆ ಒತ್ತಡ ಹಾಕುತ್ತಿದೆ. ಈ ಹಿನ್ನೆಲೆಯಲ್ಲಿ ಅಮೆರಿಕದ ಉಪಾಧ್ಯಕ್ಷರ ಭೇಟಿ ಮತ್ತು ವಾಣಿಜ್ಯ ಮಾತುಕತೆ ಭಾರತದ ಕೋಟ್ಯಾಂತರ ರೈತಾಪಿ ಸಮುದಾಯಕ್ಕೆ ಮರಣ ಶಾಸನವಾಗಲಿದೆ. ಅದ್ದರಿಂದ ಈ ಭೇಟಿಗೆ ನಾವು ವಿರೋಧ ವ್ಯಕ್ತಪಡಿಸುತ್ತಿದ್ದೇವೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಹಿಂದೂ ಸಮಾಜಕ್ಕೆ ಮಾಡಿದ ಅವಮಾನ'

ಬೆಂಗಳೂರು: 'ಜನಿವಾರ ತೆಗೆಸಿ ಸಿಇಟಿ ಪರೀಕ್ಷೆ ಬರೆಯಲು ಅಡ್ಡಿಪಡಿಸಿರುವುದು ಇಡೀ ಹಿಂದೂ ಸಮಾಜಕ್ಕೆ ಮಾಡಿದ ಅವಮಾನ' ಎಂದು ಅಖಿಲ ಭಾರತೀಯ ಬ್ರಾಹ್ಮಣ ಮಹಾ ಸಂಘದ ಬ್ರಹ್ಮೋದ್ಯೋಗದ ರಾಷ್ಟ್ರೀಯ ಅಧ್ಯಕ್ಷ ತ್ರಿವಿಕ್ರಮ ಜೋಶಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಜನಿವಾರದ ಕಾರಣ ಸಿಇಟಿ ಪರೀಕ್ಷೆಗೆ ಅಡ್ಡಿಪಡಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಎಡಿಜಿಪಿ ಆರ್. ಹಿತೇಂದ್ರ ಅವರಿಗೆ ಅಖಿಲ ಭಾರತೀಯ ಬ್ರಾಹ್ಮಣ ಮಹಾ ಸಂಘದ ಪ್ರತಿನಿಧಿಗಳು ನಗರದಲ್ಲಿ ಶನಿವಾರ ಮನವಿ ಸಲ್ಲಿಸಿದರು.

ಈ ವೇಳೆ ಮಾತನಾಡಿದ ತ್ರಿವಿಕ್ರಮ ಜೋಶಿ, 'ಇದು ಅತ್ಯಂತ ಹೇಯ ಕೃತ್ಯವಾಗಿದ್ದು, ಕೂಡಲೇ ಇದಕ್ಕೆ ಸಂಬಂಧಿಸಿದವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಜರುಗಿಸಬೇಕು' ಎಂದು ಆಗ್ರಹಿಸಿದರು. ಅಖಿಲ ಭಾರತೀಯ ಬ್ರಾಹ್ಮಣ ಮಹಾ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ವಿಶ್ವನಾಥ ಜೋಶಿ, 'ವಿದ್ಯಾರ್ಥಿಗಾದ ಅನ್ಯಾಯವನ್ನು ಸರಿಪಡಿಸಿ, ಸರ್ಕಾರ ನ್ಯಾಯ ಒದಗಿಸಬೇಕು. ನಮ್ಮ ಸಂಘವು ವಿದ್ಯಾರ್ಥಿಗೆ ಕಾನೂನಾತ್ಮಕ ಬೆಂಬಲ ನೀಡುವ ಜತೆಗೆ ಎಲ್ಲ ರೀತಿಯ ಸಹಕಾರ ನೀಡಲಿದೆ' ಎಂದು ಹೇಳಿದರು.

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರು ಕೆಳ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ಥಿರಾಸ್ತಿಯನ್ನು ಅದರ ಮಾಲೀಕರಾದ **ಶ್ರೀ ಬಿ.ಕೆ.ಶೋಭ ಕೋಂ ಶ್ರೀ ಚಲುವರಾಜು,** ವಯಸ್ಸು 50 ವರ್ಷ, ಆಧಾರ್ ಕಾರ್ಡ್ ಸಂಖ್ಯೆ: 529050810400, ವಾಸ: ನಂ. 707, 1ನೇ ಮುಖ್ಯ ರಸ್ತೆ, 2ನೇ ಫೇಸ್, 7ನೇ ಬ್ಲಾಕ್, ಬನಶಂಕರಿ, 3ನೇ ಹಂತ, ಬೆಂಗಳೂರು-560085, ಇವರಿಂದ ಖರೀದಿಸಲು ಇಚ್ಛಿಸಿದ್ದಾರೆ. ಸದರಿ ಸ್ವತ್ತಿನ ಮಾಲೀಕರು ಸ್ವತ್ತಿಗೆ ಒಳ್ಳೆಯ ಮಾರಾಟದ ಶೀರ್ಷಿಕೆ, ಹಕ್ಕು ಬಾಧ್ಯತೆ ಹಾಗೂ ಹಿತಾಸಕ್ತಿಯನ್ನು ಹೊಂದಿದ್ದಾರೆ. ಸ್ವತ್ತಿನ ಮಾಲೀಕರು ಖಚಿತಪಡಿಸಿರುವಂತೆ ಸದರಿ ಸ್ವತ್ತಿಗೆ ಯಾವುದೇ ತೆರಿಗೆಗಳು, ಶುಲ್ಕಗಳು ನ್ಯಾಯಾಲಯದ ವ್ಯಾಜ್ಯಗಳು ಅಥವಾ ಇನ್ನಾವುದೇ ಹೊಣೆಗಾರಿಕೆಯಿಂದ ಮುಕ್ತವಾಗಿದೆ, ದಿನಾಂಕ: 06.12.2014 ರಂದು ಉಪನೋಂದಣಾಧಿಕಾರಿಯವರ ಕಛೇರಿ, ಬಸವನಗುಡಿ, ಬೆಂಗಳೂರು, ನೋಂದಣಿ ದಾಖಲಾತಿ ಸಂಖ್ಯೆ: BSG-1-05611-2014-15, ಪುಸ್ತಕ-1, ದಾಖಲಿಸಿದ ಸಿ.ಡಿ. ಸಂಖ್ಯೆ: BSGD260, ನೋಂದಾಯಿತ ಕ್ರಯ ಪತ್ರದ ಮೂಲಕ ಅನಿರ್ಬಂದಿತ ಹಕ್ಕನ್ನು ಹೊಂದಿದ್ದಾರೆ. ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಯಾರಿಗಾದರು ಯಾವುದೇ ವಿಧವಾದ ತಂಟೆ ತಕರಾರು ಅಥವಾ ಹಕ್ಕು ಬಾಧ್ಯತೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ **15 ದಿನಗಳ ಒಳಗಾಗಿ** ಪೂರಕ ದಾಖಲಾತಿ ಪುರಾವೆಗಳೊಂದಿಗೆ ಕೆಳಸಹಿದಾರರಿಗೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ನಮ್ಮ ಕಕ್ಷಿದಾರರು ಕಾನೂನಾತ್ಮಕವಾಗಿ ಸ್ವತ್ತಿನ ಖರೀದಿ ವ್ಯವಹಾರಕ್ಕೆ ಮುಂದುವರೆಯುವರು, ನಂತರ ಬಂದ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್ ಸ್ವತ್ತು

ಬೆಂಗಳೂರು-560085, ಬನಶಂಕರಿ 3ನೇ ಹಂತ, 7ನೇ ಬ್ಲಾಕ್, 2ನೇ ಫೇಸ್, 1ನೇ 'ಬಿ' ಮುಖ್ಯ ರಸ್ತೆಯಲ್ಲಿರುವ ನಿವೇಶನ ಸಂಖ್ಯೆ: 707, ಹಳೇ ಬಿಡಿಎ ನಿವೇಶನ ಸಂಖ್ಯೆ 707, PID ಸಂಖ್ಯೆ: 162-W0246-33 (ಹಳೇ PID ಸಂಖ್ಯೆ: 54-172-707) EPID ಸಂಖ್ಯೆ: 5858206951 ಹಾಲಿ ಬಿಬಿಎಂಪಿ ವ್ಯಾಪ್ತಿಗೆ ಒಳಪಟ್ಟಿದ್ದು, ವಾರ್ಡ್ ಸಂಖ್ಯೆ: 162/ಗಿರಿನಗರ, ಬೆಂಗಳೂರು, ವಿಸ್ತೀರ್ಣ ಪೂರ್ವ-ಪಶ್ಚಿಮ 12.2 ಮೀಟರುಗಳು ಹಾಗೂ ಉತ್ತರ-ದಕ್ಷಿಣ 17.8 ಮೀಟರುಗಳು, ಒಟ್ಟು ವಿಸ್ತೀರ್ಣ 217.16 ಚದರ ಮೀಟರುಗಳು ಜೊತೆಗೆ RCC ಭಾವಣಿಯುಳ್ಳ ನೆಲಮಹಡಿ ಮತ್ತು 1ನೇ ಮಹಡಿಗಳ ಒಟ್ಟು 2800 ಚದುರ ಅಡಿಗಳ ಇಟಾಲಿಯನ್ ಮಾರ್ಬಲ್ ಫ್ಲೋರಿಂಗ್ ಮತ್ತು ತೇಗದ ಮರದ ಬಾಗಿಲು ಕಿಟಕಿಗಳುಳ್ಳ ಕಟ್ಟಡಕ್ಕೆ **ಚಕ್ಕುಬಂಧಿ: ಪೂರ್ವಕ್ಕೆ:** ನಿವೇಶನ ಸಂಖ್ಯೆ: 706, **ಪಶ್ಚಿಮಕ್ಕೆ:** ನಿವೇಶನ ಸಂಖ್ಯೆ: 708, **ಉತ್ತರಕ್ಕೆ:** ರಸ್ತೆ, **ದಕ್ಷಿಣಕ್ಕೆ:** ನಿವೇಶನ ಸಂಖ್ಯೆ: 728.

ಸೇವಾ ವಿಳಾಸ: ರಾಜೇಂದ್ರ ಎಸ್.ಅಂಗಡಿ, ವಕೀಲರು, ಅಂಗಡಿ ಅಸೋಸಿಯೇಟ್ಸ್, ನಂ. 24, ಪೈಪ್‌ಲೈನ್ ಮುಖ್ಯ ರಸ್ತೆ, 7ನೇ 'ಬಿ' ಕ್ರಾಸ್ ಪಕ್ಕ, ಮಲ್ಲೇಶ್ವರಂ, ಬೆಂಗಳೂರು-560003, ಮೊ: 9845292045
ದೂ: 080-23314922 e:rsangadi@gmail.com

ನೈರುತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂಖ್ಯೆ ಇಂಟರ್‌ಲಾಕಿಂಗ್-16ಎಲ್‌ಸಿ_ಎಸ್‌ಬಿಸಿ ವಿಭಾಗ, ತಿದ್ದುಪಡಿ 1 ದಿನಾಂಕ: 03.04.2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ-ಹರಾಜನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ	ಕೆಲಸದ ಹೆಸರು	ಅಂದಾಜು ಮೌಲ್ಯ
1	ನೈಋತ್ಯ ರೈಲ್ವೆ	ರೂ. 13,97,42,549.81/-
	ಬೆಂಗಳೂರು ವಿಭಾಗ- ಎಸ್‌ಬಿಸಿ ವಿಭಾಗದಲ್ಲಿ ಇಂಟರ್‌ಲಾಕ್ ಮಾಡದ 16 ಎಲ್‌ಸಿ ಗೇಟ್‌ಗಳ ಇಂಟರ್‌ಲಾಕಿಂಗ್ (ಎಸ್ ಮತ್ತು ಟಿ, ಎಂಜಿನಿಯರಿಂಗ್, ಎಲೆಕ್ಟ್ರಿಕಲ್ ಟಿಆರ್‌ಡಿ ಮತ್ತು ಎಲೆಕ್ಟ್ರಿಕಲ್ ಜನರಲ್‌ನ ಸಂಯುಕ್ತ ಕೆಲಸ	

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 28-04-2025 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ

ಹಿರಿಯ ವಿಭಾಗೀಯ ಸಂಕೇತ ಮತ್ತು ದೂರವಾಣಿ ಅಭಿಯಂತರರು, ಬೆಂಗಳೂರು

ಪಿಯುಬಿ/54/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2024-25

South Western Railway - SWR SWRRLY SWRRLY

ನೈರುತ್ಯ ರೈಲ್ವೆ

ಇ-(ಐಆರ್‌ಇಪಿಎಸ್) ಟೆಂಡರ್ ಪ್ರಕಟಣೆ ಸಂಖ್ಯೆ. 02 ಯುಬಿಎಲ್ 2025-26 ದಿನಾಂಕ: 15.04.2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ	ಕೆಲಸದ ಹೆಸರು	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ	ರೂ. 2,39,78,969.00
	ಲೋಂಡಾ-ಬೆಳಗಾವಿ ಎಲ್‌ಡಿ-ಬಿಜಿಎಂ) ವಿಭಾಗ: ದೇಸೂರ್-ಬೆಳಗಾವಿ (ಡಿಯುಆರ್-ಬಿಜಿಎಂ} ವಿಭಾಗದಲ್ಲಿ ಪ್ರೀಕಾಸ್ಟ್ ಆರ್‌ಸಿಸಿ ಸೆಗ್ಮೆಂಟಲ್ ಬಾಕ್ಸ್‌ಗಳು/ಬಾಕ್ಸ್ ಪುಶಿಂಗ್ ವಿಧಾನದ ಮೂಲಕ ಒಆರ್‌ಎನ್ 3 ಗೆ ಕಾರಣದಿಂದ ಸೇತುವೆ ಸಂಖ್ಯೆ 91 ಮತ್ತು 112 {ಯುಪಿ ಲೈನ್) ಮರು ನಿರ್ಮಾಣ ಕಾರ್ಯ	
2	ಹುಬ್ಬಳ್ಳಿ ವಿಭಾಗ	ರೂ. 3,75,62,272.00
	ಉಪ ಕೆಲಸ-i) ಲೋಂಡಾ-ಮಿರಾಜ್ (ಎಲ್‌ಡಿ-ಎಂಆರ್‌ಜೆ) ವಿಭಾಗದಲ್ಲಿ ರೋಡ್ ಓವರ್ ಬ್ರಿಡ್ಜ್ 6/ಎ ಸಮೀಪ ಕಿ ಮೀ 611/355 ಬಳಿ ಪ್ರಸ್ತಾವಿತ ಫುಟ್ ಓವರ್ ಬ್ರಿಡ್ಜ್. ಉಪ ಕೆಲಸ-ii) ಲೋಂಡಾ-ಮಿರಾಜ್ (ಎಲ್‌ಡಿ-ಎಂಆರ್‌ಜೆ) ವಿಭಾಗದಲ್ಲಿ ಕಿ ಮೀ. 613/326 ರಲ್ಲಿ ಆರ್‌ಒಬಿ 26/ಎ ಸಮೀಪ ಪ್ರಸ್ತಾವಿತ ಫುಟ್ ಓವರ್ ಬ್ರಿಡ್ಜ್	
3	ಹುಬ್ಬಳ್ಳಿ ವಿಭಾಗ	ರೂ. 44,08,063.00
	ಗದಗ ಕಾಲೋನಿಯಲ್ಲಿ ನೀರಿನ ಪೈಪ್ ಲೈನ್ ಅಳವಡಿಕೆಯ ಸುಧಾರಣೆ	
4	ಹುಬ್ಬಳ್ಳಿ ವಿಭಾಗ	ರೂ. 2,89,89,116.00
	ಖಾನಾಪುರ: 450 ಮೀಟರ್ ಪ್ಲಾಟ್‌ಫಾರ್ಮ್ ಶೆಲ್ಟರ್ ಮತ್ತು ಖಾನಾಪುರ (ಕೆಎನ್‌ಪಿ) ರೈಲು ನಿಲ್ದಾಣದಲ್ಲಿ ಪ್ರತ್ಯೇಕ ಪುರುಷರ ಮತ್ತು ಮಹಿಳೆಯರ ವಿಶ್ರಾಂತಿ ಕೊಠಡಿಗಳ ನಿರ್ಮಾಣ.	
5	ಹುಬ್ಬಳ್ಳಿ ವಿಭಾಗ	ರೂ. 8,63,35,377.00
	ಒಂದು ವರ್ಷದ ಅವಧಿಗೆ ಎಸ್‌ಎಸ್‌ಇ/ಪಿ. ವೇ/ಜೆಡಿಜಿ (ಎಂಎಲ್) ವ್ಯಾಪ್ತಿಯಲ್ಲಿ ವಾರ್ಷಿಕ ಹಳಿ ನಿರ್ವಹಣೆ.	

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 14-05-2025 ರಂದು 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ

ಹಿರಿಯ ವಿಭಾಗೀಯ ಅಭಿಯಂತರರು/ಸಮನ್ವಯ, ಹುಬ್ಬಳ್ಳಿ

ಪಿಯುಬಿ/53/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2024-25

South Western Railway - SWR SWRRLY SWRRLY

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಎಲ್.ಆರ್.ಡಿ.ಇ ಕಟ್ಟಡ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-560 052
ದೂರವಾಣಿ ಸಂಖ್ಯೆ: 22263479

ಸಂಖ್ಯೆ: STRRPA/TP/CLU/01/2025-26 | **ಪ್ರಕಟಣೆ** | ದಿನಾಂಕ: 19.04.2025.

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69ರ ತಿದ್ದುಪಡಿ ಕಾಯ್ದೆಯಂತೆ)

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 36 ಬಿಎಂಆರ್ 2016, ದಿನಾಂಕ: 24.06.2016 ರನ್ವಯ ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ರಾಯಸಂದ್ರ ಗ್ರಾಮವು "ಉಪನಗರ ವರ್ತುಲ ರಸ್ತೆ (STRR) ಸ್ಥಳೀಯ ಯೋಜನಾ ಪ್ರದೇಶ" ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/194/ಬಿಎಂಆರ್/2016ರ ದಿನಾಂಕ: 20.05.2017ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 4(ಎ)(4)ರನ್ವಯ ಉಪನಗರ ವರ್ತುಲ ರಸ್ತೆ (STRR) ಸ್ಥಳೀಯ ಯೋಜನಾ ಪ್ರದೇಶದಲ್ಲಿ ಹಿಂದಿನ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಸರ್ಕಾರದಿಂದ ಅನುಮೋದನೆಯಾಗಿ ಜಾರಿಯಲ್ಲಿರುವ ಮಹಾಯೋಜನೆಯನ್ನು ಅಳವಡಿಸಿಕೊಳ್ಳಲಾಗಿರುತ್ತದೆ. ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 157 ಬಿಎಂಆರ್ 2005 ದಿ:27.01.2009 ಮತ್ತು ತಿದ್ದುಪಡಿ ಆದೇಶ ದಿ:29.01.2009ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69 (2) ರನ್ವಯ ಭೂ ಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69 (4) ರನ್ವಯ ಈ ಕೆಳಕಂಡಂತೆ ವಸತಿ ಭೂಉಪಯೋಗ ನಿಗಧಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(4)ರ ಅಡಿಯಲ್ಲಿ ಈ ಕೆಳಕಂಡಂತೆ ಹೊಸದಾಗಿ ಭೂಉಪಯೋಗ ನಿಗಧಿಪಡಿಸುವ ಸಂಬಂಧ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸ ನಂ.	ವಿಸ್ತೀರ್ಣ ಎ-ಗು	ಅನುಮೋದಿತ ಮಹಾ ಯೋಜನೆಯಂತೆ ಭೂ ಉಪಯೋಗ	ಹೊಸದಾಗಿ ನಿಗದಿಪಡಿಸಲು ಕೋರಿರುವ ಭೂ ಉಪಯೋಗ
(1)	(2)	(3)	(4)	(5)	(6)	(7)	(8)	(9)
1	ಶ್ರೀ ಜಿ. ಮುಕುಂದ ಇವರ ಪರವಾಗಿ ಜಿಪಿಎ & ಜಂಟಿ ಅಭಿವೃದ್ಧಿದಾರರಾದ ಮೆ॥ ಮರುಶ್ರೀ ಸ್ಕೈಸ್ ಇದರ ಪಾರ್ಟನರ್ ಆದ ಶ್ರೀ ಎಂ. ವೆಂಕಟೇಶ್ವರ ರೆಡ್ಡಿ, ನಂ. ಟಿ3, ಗೋಲ್ಡನ್ ಮೆಡವ್ ಅಪಾರ್ಟ್‌ಮೆಂಟ್, 3ನೇ ಮಹಡಿ, ಬ್ಲಾಕ್-ಎ, 4ನೇ ಅಡ್ಡರಸ್ತೆ, ಬಾಗಲೂರು ಮುಖ್ಯರಸ್ತೆ, ಹೆಣ್ಣೂರ್, ಬೆಂಗಳೂರು-560 043.	ದೇವನಹಳ್ಳಿ	ಕಸಬಾ	ರಾಯಸಂದ್ರ	38/5	2-26 ಪೈಕಿ 2-18	ಉದ್ಯಾನವನ	ವಸತಿ

"ಸದಸ್ಯ ಕಾರ್ಯದರ್ಶಿರವರ ದಿನಾಂಕ: 17.03.2025ರ ಅಧಿಕೃತ ಜ್ಞಾಪನ ಪತ್ರದಲ್ಲಿ ಅಧಿಕಾರ ಪ್ರತ್ಯೋಜಿಸಿರುವಂತೆ ಸಹಿ ಮಾಡಿದೆ."

ಸಹಿ/- ಸದಸ್ಯ ಕಾರ್ಯದರ್ಶಿಗಳು ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/281/ಆಕಾರ್/2025-26

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ

ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-562123
ದೂರವಾಣಿ ಸಂಖ್ಯೆ: 080-23718487
ಇ-ಮೇಲ್: itstaff_ulb_mnhalli@yahoo.com

ಸಂಖ್ಯೆ: ಮಾ.ನ.ಕಾ/ತಾ.ಶಾ/03/2025-26 | ದಿನಾಂಕ: 17.04.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(Through GOK e-Procurement Portal www.kppp.karnataka.gov.in only)

2022-23ನೇ ಸಾಲಿನ 15ನೇ ಹಣಕಾಸು ಯೋಜನೆಯ ಉಳಿತಾಯದ ಮೊತ್ತಕ್ಕೆ ಮಾದನಾಯಕನಹಳ್ಳಿ ನಗರಸಭಾ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಇ-ಪ್ರೊಕ್ಯೂರ್‌ಮೆಂಟ್ ವೇದಿಕೆಯಡಿಯಲ್ಲಿ ಈ ಕೆಳಕಂಡಂತೆ ಐಟಂವಾರು ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದ್ದು, ಅರ್ಹ ಹಾಗೂ ಅನುಭವವುಳ್ಳ ಸಿವಿಲ್ ಗುತ್ತಿಗೆದಾರರು (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನಂತೆ) ಟೆಂಡರ್‌ನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಕಛೇರಿಯ ವೇಳೆಯಲ್ಲಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿರುತ್ತದೆ. ಇಂಡೆಂಟ್ ಸಂಖ್ಯೆ: **INDENT38970.** ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಲು, ನಮೂನೆಗಳನ್ನು ಆನ್‌ಲೈನ್‌ನಲ್ಲಿ ಪಡೆಯಲು ಹಾಗೂ ಆನ್‌ಲೈನ್ ಮೂಲಕ ಭರ್ತಿ ಮಾಡಿದ ನಮೂನೆ ಮತ್ತು ಇ.ಎಂ.ಡಿ ಠೇವಣಿಯನ್ನು ಸ್ವೀಕರಿಸುವ ಅವಧಿ ದಿನಾಂಕ: **25.04.2025 ಸಂಜೆ 5.30 ಗಂಟೆಯವರೆಗೆ.** ಹಾಗೂ ಸಲ್ಲಿಸಿರುವ ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **28.04.2025 ಬೆಳಿಗ್ಗೆ 11.30 ಗಂಟೆಗೆ.** ಆರ್ಥಿಕ ಬಿಡ್ ತೆರೆಯುವ ದಿನಾಂಕ: **29.04.2025 ಸಂಜೆ 5.00 ಗಂಟೆಗೆ.**

ಸೂಚನೆ: ಈ ಕಛೇರಿಯಿಂದ ನೀಡುವ ಇತರೆ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು, ಹಾಗೂ ಹೆಚ್ಚಿನ ವಿವರಗಳಿಗೆ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/- ಪೌರಾಯುಕ್ತರು, ನಗರಸಭೆ, ಮಾದನಾಯಕನಹಳ್ಳಿ

ವಾಸಾಸಂಇ/ವಾಪ್ರಾ/274/2025-26

ಶಾಸಕ ಚನ್ನಾರೆಡ್ಡಿ ದೋಷಮುಕ್ತ: ಅಶೋಕ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಾದಗಿರಿ ಪಿಎಸ್‌ಐ ಪರಶುರಾಂ ಆತ್ಮಹತ್ಯೆ ಪ್ರಕರಣದ ಬಿ ರಿಪೋರ್ಟ್ ಸಲ್ಲಿಸಿರುವ ಸಿಐಡಿ, ಪ್ರಕರಣದ ಆರೋಪಿಯಾಗಿದ್ದ ಕಾಂಗ್ರೆಸ್ ಶಾಸಕ ಚನ್ನಾರೆಡ್ಡಿ ಪಾಟೀಲ ತುನ್ನೂರು ಅವರನ್ನು ದೋಷಮುಕ್ತ ಗೊಳಿಸುವ ಕೆಲಸಕ್ಕೆ ಮುಂದಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಟೀಕಿಸಿದ್ದಾರೆ.

ಈ ಬಿ ರಿಪೋರ್ಟ್ ಗಮನಿಸಿದರೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ದಲಿತರಿಗೆ ರಕ್ಷಣೆ ನೀಡುವುದಿಲ್ಲ ಎನ್ನುವುದು ಸಾಬೀತಾಗಿದೆ. ವಾಲ್ಮೀಕಿ ನಿಗಮದ ಹಗರಣಕ್ಕೆ ದಲಿತ ಅಧಿಕಾರಿ ಚಂದ್ರಶೇಖರನ್ ಜೀವತೆತ್ತರು. ನಾಮಕವಾಸ್ತೆಗೆ ಎಸ್‌ಐಟಿ ತನಿಖೆಗೆ ಕೊಟ್ಟು ಹಳ್ಳ ಹಿಡಿಸಿದ್ದಾಯ್ತು. ಗೃಹ ಇಲಾಖೆಯಲ್ಲಿ ವರ್ಗಾವಣೆ ದಂಧೆಗೆ ಬಲಿಯಾದ ಪಿಎಸ್‌ಐ ಪರಶುರಾಂ ಅವರ ಪ್ರಕರಣವನ್ನೂ ಮುಚ್ಚಿಹಾಕಲು ಹೊರಟಿದ್ದಾರೆ. ಗೃಹ ಸಚಿವ ಜಿ. ಪರಮೇಶ್ವರ ಅವರಿಗೆ ತಮ್ಮದೇ ಸಮುದಾಯದ ಅಧಿಕಾರಿಗೆ ನ್ಯಾಯ ಕೊಡಿಸಲು ಆಗಿಲ್ಲ ಎಂದರು.

‘ಸಾಹಿತ್ಯಕ್ಕಿದೆ ಕಣ್ಣೀರು ಒರೆಸುವ ಶಕ್ತಿ’

‘ಮನೆಯಂಗಳದಲ್ಲಿ ಮಾತುಕತೆ’ಯಲ್ಲಿ ತುಂಬಾಡಿ ರಾಮಯ್ಯ ಮನದಾಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾಹಿತ್ಯಕ್ಕೆ ಕಣ್ಣೀರು ಒರೆಸುವ ಶಕ್ತಿಯಿದೆ. ಅಕ್ಷರಸ್ಥನಾದ ನಾನು ಆತ್ಮಕಥೆ ಬರೆಯುವ ಮೂಲಕ ಸಮಾಜದಲ್ಲಿ ನನಗಾಗಿದ್ದ ಅಪಮಾನ ಹೊರಹಾಕಿ, ನೋವು ಮರೆತೆ’ ಎಂದು ಸಾಹಿತಿ ತುಂಬಾಡಿ ರಾಮಯ್ಯ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಮನೆಯಂಗಳದಲ್ಲಿ ಮಾತುಕತೆ ಕಾರ್ಯಕ್ರಮದಲ್ಲಿ ತಿಂಗಳ ಅತಿಥಿಯಾಗಿ ಭಾಗವಹಿಸಿ, ಮನದಾಳ ಹಂಚಿಕೊಂಡರು.

‘ಅಂಬೇಡ್ಕರ್ ಅವರ ಪುಸ್ತಕ, ಕುವೆಂಪು ಅವರ ಸಾಹಿತ್ಯದ ಓದು, ಲಂಕೇಶ ಅವರ ಬರವಣಿಗೆಗಳು ನನ್ನನ್ನು ಸಾಹಿತ್ಯದತ್ತ ವಾಲುವಂತೆ ಮಾಡಿತು. ಸಾಹಿತ್ಯಕ್ಕೆ ಕಣ್ಣೀರು ಒರೆಸುವ ಶಕ್ತಿಯಿದೆ. ಅದು ನನ್ನ ಆತ್ಮಕಥೆ ‘ಮಣೆಗಾರ’ ಕೃತಿ ರಚಿಸಿದಾಗ ಅರಿವಿಗೆ ಬಂದಿತು. ನನ್ನ ಕೃತಿಯಲ್ಲಿ ಆಕ್ರೋಶ ಮತ್ತು ಘರ್ಷಣೆಯಿಲ್ಲ ಎಂದು ಕೆಲವರು

ಕಾರ್ಯಕ್ರಮದಲ್ಲಿ ತುಂಬಾಡಿ ರಾಮಯ್ಯ ಅವರನ್ನು ಗಾಯತ್ರಿ ಕೆ.ಎಂ. ಗೌರವಿಸಿದರು —ಪ್ರಜಾವಾಣಿ ಚಿತ್ರ

ಹೇಳಿದ್ದಾರೆ. ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ಪ್ರಭಾವವೇ ಇದಕ್ಕೆ ಕಾರಣ’ ಎಂದು ಅಭಿಪ್ರಾಯಪಟ್ಟರು.

‘ಅನಕ್ಷರಸ್ಥ ಕುಟುಂಬದಲ್ಲಿ ಜನಿಸಿದ ನನ್ನ ಬದುಕು ಹೋರಾಟಗಳಿಂದ ಕೂಡಿತ್ತು. ಹತ್ತನೇ ತರಗತಿಯಲ್ಲಿ ಇರುವಾಗಲೇ ಬೂಸಾ ಚಳವಳಿಯ ಭಾಗವಾಗಿದ್ದೆ. ದಲಿತ ಸಂಘಟನೆಯ ಸಂಪರ್ಕಕ್ಕೂ ಬಂದೆ. ಹಲವು ಸಾಹಿತಿಗಳು, ಹೋರಾಟಗಾರರ ಪರಿಚಯವಾಯಿತು. ದಲಿತ ಚಳವಳಿ ಶಕ್ತಿಯನ್ನು ತುಂಬಿತು. ಕಾರ್ಮಿಕ ಇಲಾಖೆಗೆ ಸೇರಿದ ಮೇಲೆ ಹಲವು ಹುದ್ದೆಗಳಲ್ಲಿ ಕೆಲಸ ಮಾಡಿದೆ. ನೊಂದವರಿಗೆ ನ್ಯಾಯ ಕೊಡಿಸಿದ್ದೇನೆ. ನಿವೃತ್ತಿಯ ನಂತರವೂ ಕರಿ ಕೋಟು ತೊಟ್ಟು, ನನ್ನಿಂದಾದ ಸಹಾಯ ಮಾಡುತ್ತಾ ಬದುಕು ಕಳೆಯುತ್ತಿದ್ದೇನೆ’ ಎಂದು ಹೇಳಿದರು.

ಈ ವೇಳೆ ರಾಜಕೀಯ ಪ್ರವೇಶದ ಬಗ್ಗೆ ಪ್ರೇಕ್ಷಕರೊಬ್ಬರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ‘ದಲಿತ ಚಳವಳಿಯಲ್ಲಿ ಸಕ್ರಿಯವಾಗಿದ್ದ ನಾನು, ನ್ಯಾಯಯುತ ಬೇಡಿಕೆಗಳಿಗೆ ಬಿ. ಕೃಷ್ಣಪ್ಪ ಮೊದಲಾದವರ ಜತೆಗೆ ಸೇರಿ ಹೋರಾಟ ಮಾಡಿದೆ. ನನ್ನ ಮನೋಭಾವಕ್ಕೆ ವೃತ್ತಿ ರಾಜಕೀಯ ತಕ್ಕುದಾಗಿರಲಿಲ್ಲ. ಆದ್ದರಿಂದ ರಾಜಕೀಯ ಕ್ಷೇತ್ರ ಪ್ರವೇಶಿಸಬೇಕು ಅನಿಸಲಿಲ್ಲ. ರಾಜಕೀಯ ಎನ್ನುವುದು ವೃತ್ತಿಯಾಚೆಗೂ ಇರುತ್ತದೆ’ ಎಂದರು.

‘ಸಾಹಿತ್ಯ ಕ್ಷೇತ್ರದಲ್ಲಿಯೂ ಒಳ ರಾಜಕೀಯ ಇರಲಿದ್ದು, ಅದನ್ನು ಮೀರಿ ಬೆಳೆಯಬೇಕಾಗುತ್ತದೆ’ ಎಂದು ಅಭಿಪ್ರಾಯಟ್ಟರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಗಾಯತ್ರಿ ಕೆ.ಎಂ. ಉಪಸ್ಥಿತರಿದ್ದರು.

ಹುಳಿಮಾವುನಲ್ಲಿ ನಡೆದ ಶ್ರೀಕೋದಂಡರಾಮಸ್ವಾಮಿ ಬ್ರಹ್ಮರಥೋತ್ಸವ

ಹುಳಿಮಾವು: 50 ದೇವರ ಮುತ್ತಿನ ಪಲ್ಲಕ್ಕಿ

ಕೋದಂಡರಾಮಸ್ವಾಮಿ ಬ್ರಹ್ಮರಥೋತ್ಸವ

ಬೊಮ್ಮನಹಳ್ಳಿ: ಶ್ರೀ ಕೋದಂಡರಾಮ ಸ್ವಾಮಿ ಬ್ರಹ್ಮರಥೋತ್ಸವ ಮತ್ತು 50 ದೇವರ ಮುತ್ತಿನ ಪಲ್ಲಕ್ಕಿ ಉತ್ಸವವು ಬನ್ನೇರುಘಟ್ಟರಸ್ತೆಯ ಹುಳಿಮಾವು ಗ್ರಾಮದಲ್ಲಿ ನಡೆಯಿತು.

ರಥೋತ್ಸವ ಮೇಲೆ ಹೆಲಿಕಾಪ್ಟರ್ ಮೂಲಕ ಹೂಮಳೆ ಸುರಿಸುತ್ತಿದ್ದಂತೆ ಭಕ್ತರು ಗೋವಿಂದಾ, ಗೋವಿಂದಾ, ಕೋದಂಡರಾಮ ಎನ್ನುತ್ತಾ ರಥವನ್ನು ಎಳೆದು ಭಕ್ತಿ-ಭಾವ ಮೆರೆದರು.

ರಾಮ-ಲಕ್ಷ್ಮಣ, ಸೀತೆಯ ವಿಗ್ರಹ ಗಳನ್ನು ಹೊತ್ತ ರಥವನ್ನು ಡೊಳ್ಳು ಕುಣಿತ, ತಮಟೆ, ನಗಾರಿ ಸೇರಿದಂತೆ ವಿವಿಧ ವಾದ್ಯ ಮೇಳದೊಂದಿಗೆ ದೇವಸ್ಥಾನದ ಸುತ್ತಲು ಎಳೆದರು.

ದೇವಾಲಯದ ಆಡಳಿತ ಮಂಡಳಿ ಧರ್ಮದರ್ಶಿಗಳಾದ ಆರ್.ಶರಶ್ಚಂದ್ರ, ಟಿ.ಶ್ರೀನಿವಾಸರೆಡ್ಡಿ, ಎಚ್.ಕೆ.ಮುತ್ತಪ್ಪ, ಸಿ.ಲಕ್ಷ್ಮೀನಾರಾಯಣ್, ಶಾಸಕ ಬಿ.ಶಿವಣ್ಣ, ಸಿ.ರವಿಕುಮಾರ್ ಅವರು ವಿಶೇಷ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು.

ಮುತ್ತಿನ ಪಲ್ಲಕ್ಕಿ: ಕೋದಂಡಸ್ವಾಮಿ ದೇವರೊಂದಿಗೆ ವೆಂಕಟರಮಣಸ್ವಾಮಿ, ಶಂಭುಲಿಂಗೇಶ್ವರಸ್ವಾಮಿ, ಆಂಜನೇಯ, ಮುತ್ತುರಾಯಸ್ವಾಮಿ, ಕಬ್ಬಾಳಮ್ಮ, ದೊಡ್ಡಮ್ಮದೇವಿ ಸೇರಿ ಸುಮಾರು ಐವತ್ತು ದೇವರ ಮುತ್ತಿನ ಪಲ್ಲಕ್ಕಿ ಉತ್ಸವ ಮತ್ತು ರೇಣುಕಾ ಯಲ್ಲಮ್ಮ ದೇವಿಯ ಹೂವಿನ ಕರಗ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಶುಕ್ರವಾರ ರಾತ್ರಿ ಮುತ್ತಿನ ಪಲ್ಲಕ್ಕಿ ಉತ್ಸವದ ಜೊತೆಗೆ ರೇಣುಕಾ ಯಲ್ಲಮ್ಮದೇವಿಯ ಹೂವಿನಕರಗ ನೋಡಲು ಬೆಂಗಳೂರು ನಗರ, ಆನೇಕಲ್, ರಾಮನಗರ, ಕೋಲಾರ, ಆಂಧ್ರ ಪ್ರದೇಶ, ತಮಿಳುನಾಡಿನಿಂದ ಸಾವಿರಾರು ಭಕ್ತರು ಬಂದಿದ್ದರು.

ಹರಕೆ ಹೊತ್ತವರು ಮಜ್ಜಿಗೆ, ಪಾನಕ, ಕೋಸಂಬರಿ ವಿತರಿಸಿದರು. ಭಕ್ತಾದಿಗಳಿಗೆ ಅನ್ನದಾನ ಏರ್ಪಡಿಸಲಾಗಿತ್ತು.

ಜನತಾ ಬ್ಯಾಂಕ್‌ಗೆ ₹27.90 ಕೋಟಿ ಲಾಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2024-25ನೇ ಆರ್ಥಿಕ ವರ್ಷದಲ್ಲಿ ನಗರದ ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ₹27.90 ಕೋಟಿ ಲಾಭ ಗಳಿಸಿದೆ.

ಬ್ಯಾಂಕ್ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸುಮಾರು 60 ವರ್ಷಕ್ಕೂ ಮೀರಿ ಸೇವೆ ಸಲ್ಲಿಸುತ್ತಾ ಬಂದಿದೆ. ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಒಟ್ಟು 7 ಶಾಖೆ ಹೊಂದಿದೆ. 23,881 ಸದಸ್ಯರು ಹಾಗೂ 58,561 ಗ್ರಾಹಕರು ವ್ಯವಹರಿಸುತ್ತಿದ್ದಾರೆ ಎಂದು ಬ್ಯಾಂಕ್ ಅಧ್ಯಕ್ಷ ಸಿ.ಎಲ್. ಮರಿಗೌಡ ತಿಳಿಸಿದ್ದಾರೆ.

ಮರಿಗೌಡ

ಬ್ಯಾಂಕ್‌ನ ಒಟ್ಟು ಬಂಡವಾಳ ₹837 ಕೋಟಿ ಆಗಿದೆ. ₹5 ಸಾವಿರ ಕೋಟಿಗೂ ಹೆಚ್ಚು ವಹಿವಾಟು ನಡೆಸಿದೆ. ₹142.09 ಕೋಟಿ ಸ್ವಂತ ಬಂಡವಾಳ ಕ್ರೋಡೀಕರಿಸಿದೆ. ಇದು ಬ್ಯಾಂಕ್‌ನ ಆರ್ಥಿಕ ಸದೃಢತೆಗೆ ಸಾಕ್ಷಿಯಾಗಿದೆ ಎಂದು ತಿಳಿಸಿದ್ದಾರೆ.

ತನ್ನ ಸದಸ್ಯರ ಅವಶ್ಯಕತೆಗೆ ಅನುಗುಣವಾಗಿ ಒಟ್ಟು ₹428 ಕೋಟಿ ಸಾಲ ವಿತರಿಸಲಾಗಿದೆ. ಸಾಲಗಾರ ಸದಸ್ಯರು ಸಕಾಲದಲ್ಲಿ ಸಾಲದ ಕಂತುಗಳನ್ನು ಪಾವತಿಸಿದ್ದಾರೆ. ಇದರಿಂದ ಮಾರ್ಚ್ ಅಂತ್ಯಕ್ಕೆ ಬ್ಯಾಂಕ್‌ನ ನಿವ್ವಳ ಎನ್‌ಪಿಎ ಶೂನ್ಯಕ್ಕೆ ಇಳಿದಿದೆ ಎಂದು ವಿವರಿಸಿದ್ದಾರೆ.

ಆಡಳಿತ ಮಂಡಳಿಯ ಮಾರ್ಗದರ್ಶನ, ಸಿಬ್ಬಂದಿಯ ಪರಿಶ್ರಮ ಮತ್ತು ಸದಸ್ಯರ ಸಹಕಾರದಿಂದ ಬ್ಯಾಂಕ್ ₹27.90 ಲಾಭ ಗಳಿಸಿದೆ. ತೆರಿಗೆ ಬಳಿಕ ನಿವ್ವಳ ಲಾಭ ₹17.92 ಕೋಟಿ ಆಗಿದೆ ಎಂದು ತಿಳಿಸಿದ್ದಾರೆ.

केनरा बैंक Canara Bank

(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಸರ್ಕಲ್ ಆಫೀಸ್
ಆರ್ & ಎಲ್ ವಿಭಾಗ ಬೆಂಗಳೂರು, 2ನೇ ಮಹಡಿ, ನಂ.86,
ಸ್ಪೆನ್ಸರ್ ಟವರ್, ಎಂ.ಜಿ. ರಸ್ತೆ, ಬೆಂಗಳೂರು-560001.
ದೂ: 8708450558, 8105907450, 7415599880/080-25008800
ಇಮೇಲ್ ಐಡಿ: birlegal@canarabank.com,blrnpa@canarabank.com

ಬ್ಯಾಂಕ್ ಪ್ಯಾನೆಲ್‌ಗೆ ವಕೀಲರ ನಿಯೋಜನೆಗೆ ಅಗತ್ಯವಾದ ನಿಬಂಧನೆಗಳು

ವಿವರಗಳು : ಡಿಆರ್‌ಟಿಗಳು, ಹೈಕೋರ್ಟ್‌ಗಳು ಸೇರಿದಂತೆ ವಿವಿಧ ನ್ಯಾಯಾಲಯಗಳು ಮತ್ತು ವಿವಿಧ ಸಾಲದ ಪ್ರಸ್ತಾಪಗಳಿಗೆ ಸಂಬಂಧಿಸಿದಂತೆ ಕಾನೂನು ಪರಿಶೀಲನೆಯ ವರದಿಗಳನ್ನು ನೀಡುವುದಕ್ಕಾಗಿ ಬ್ಯಾಂಕ್ ಅನ್ನು ಪ್ರತಿನಿಧಿಸಲು ಬ್ಯಾಂಕ್ ತನ್ನ ಸಮಿತಿಗೆ ವಕೀಲರನ್ನು ಎಂಪಾನೆಲಿಂಗ್ ಮಾಡುವ ಪ್ರಕ್ರಿಯೆಯಲ್ಲಿದೆ. ಮಂಜೂರು ಮಾಡಿದ ಕೆಲಸಕ್ಕೆ ಶುಲ್ಕ ರಚನೆಯು ಬ್ಯಾಂಕಿನ ನಿಗದಿತ ಶುಲ್ಕ ರಚನೆಯ ಪ್ರಕಾರ ಇರುತ್ತದೆ.

ಅರ್ಹತೆ : * ನಿಗದಿತ ದಿನಾಂಕದಂದು ಮೇಲೆ ತಿಳಿಸಿದ ನ್ಯಾಯಾಲಯಗಳಲ್ಲಿ 5 ವರ್ಷಗಳಿಗಿಂತ ಹೆಚ್ಚು ಅಭ್ಯಾಸ ಅನುಭವ ಹೊಂದಿರುವ ವಕೀಲರು. * ಇತರ ಬ್ಯಾಂಕ್‌ಗಳು/ಎಫ್‌ಐ ಸಂಸ್ಥೆಗಳಲ್ಲಿ ಅನುಭವ ಹೊಂದಲು ಅಪೇಕ್ಷಣೀಯ. * ವಕೀಲರನ್ನು ಯಾವುದೇ ಬ್ಯಾಂಕ್‌ಗಳು/ಹಣಕಾಸು ಸಂಸ್ಥೆಗಳ ಸಮಿತಿಯಿಂದ ತೆಗೆದುಹಾಕಲಾಗುವುದಿಲ್ಲ/ ಪಟ್ಟಿಯಿಂದ ತೆಗೆದುಹಾಕಲಾಗುವುದಿಲ್ಲ ಮತ್ತು IBA ಎಚ್ಚರಿಕೆ ಪಟ್ಟಿಯಲ್ಲಿ ಸೇರಿಸಲಾಗುವುದಿಲ್ಲ.

ಎಲ್ಲಾ ಆಸಕ್ತ ವಕೀಲರು ಈ ಕೆಳಗಿನ ವಿವರಗಳೊಂದಿಗೆ ಬೆಂಗಳೂರಿನಲ್ಲಿರುವ ಯಾವುದೇ ಕೆನರಾ ಬ್ಯಾಂಕ್ ಶಾಖೆಯನ್ನು ಸಂಪರ್ಕಿಸಬಹುದು. (1) ಬ್ಯಾಂಕಿನ ಮಾರ್ಗಸೂಚಿಯ ಪ್ರಕಾರ ಶಾಖೆಯ ಶಿಫಾರಸಿನೊಂದಿಗೆ ನಮ್ಮ ಬ್ಯಾಂಕಿನ ಸ್ವರೂಪದಲ್ಲಿರುವ ಬಯೋ ಡೇಟಾ, (2) ಪದವಿ ಪ್ರಮಾಣಪತ್ರ (ಎಲ್‌ಎಲ್‌ಬಿ) (ಶಾಖೆಯಿಂದ ಮೂಲಗಳೊಂದಿಗೆ ಪರಿಶೀಲಿಸಬೇಕು ಮತ್ತು ಸರಿಯಾಗಿ ದೃಢೀಕರಿಸಬೇಕು), (3) ಬಾರ್ ಕೌನ್ಸಿಲ್ ನೋಂದಣಿ ಪ್ರಮಾಣಪತ್ರ (ಶಾಖೆಯಿಂದ ಮೂಲಗಳೊಂದಿಗೆ ಪರಿಶೀಲಿಸಬೇಕು ಮತ್ತು ಸರಿಯಾಗಿ ದೃಢೀಕರಿಸಬೇಕು), (4) ಆಧಾರ್ ಕಾರ್ಡ್ ಮತ್ತು ಪ್ಯಾನ್ ಕಾರ್ಡ್‌ನ ಪ್ರತಿ (ಶಾಖೆಯಿಂದ ಮೂಲ ಪ್ರತಿಗಳೊಂದಿಗೆ ಪರಿಶೀಲಿಸಬೇಕು ಮತ್ತು ಸರಿಯಾಗಿ ದೃಢೀಕರಿಸಬೇಕು), (5) ಇತರ ಬ್ಯಾಂಕುಗಳು/ ಹಣಕಾಸು ಸಂಸ್ಥೆಗಳೊಂದಿಗೆ ನೋಂದಾಯಿಸಿದ್ದರೆ, ನೋಂದಣಿ ಪತ್ರಗಳು ಮತ್ತು ಅನುಭವ ಪ್ರಮಾಣಪತ್ರಗಳು. (6) ಯಾವುದೇ ಇತರ ಸಂಬಂಧಿತ ದಾಖಲೆಗಳು (ಶಾಖೆಯಿಂದ ಮೂಲಗಳೊಂದಿಗೆ ಪರಿಶೀಲಿಸಬೇಕು ಮತ್ತು ಸರಿಯಾಗಿ ದೃಢೀಕರಿಸಬೇಕು).

ಸ್ಥಳ : ಬೆಂಗಳೂರು
ದಿನಾಂಕ : 19.04.2025

ಸಹಿ/- ಅಧಿಕೃತ ಅಧಿಕಾರಿ
ಕೆನರಾ ಬ್ಯಾಂಕ್

ನಿಖಿಲ್ ಕುಮಾರಸ್ವಾಮಿ ಅಭಿಪ್ರಾಯ

‘ಜಾತಿ ಗಣತಿ: ಸಮಾಲೋಚನೆ ನಡೆಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಾತಿ ಗಣತಿಗೆ ಸಂಬಂಧಿಸಿದಂತೆ ಎಲ್ಲ ಸಮುದಾಯಗಳ ಸ್ವಾಮೀಜಿ, ಮುಖಂಡರು, ಬುದ್ಧಿಜೀವಿ ಗಳೊಂದಿಗೆ ಸರ್ಕಾರ ಸಮಾಲೋಚನೆ ನಡೆಸಿ, ಸರ್ವಸಮ್ಮತ ಪರಿಹಾರ ಕಂಡುಕೊಳ್ಳಬೇಕು’ ಎಂದು ಯುವ ಜನತಾದಳದ ರಾಜ್ಯ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ‘ಗಣತಿಗೆ ಜೆಡಿಎಸ್ ವಿರೋಧ ಮಾಡುತ್ತಿಲ್ಲ. ಆದರೆ, ಸಮೀಕ್ಷೆ ಕ್ರಮಬದ್ಧವಾಗಿ ಇಲ್ಲ. ಸೋರಿಕೆ ಆಗಿರುವ ಅಂಕಿ ಅಂಶಗಳ ಸತ್ಯಾಸತ್ಯತೆ ಬಗ್ಗೆ ಪ್ರಶ್ನೆ ಮಾಡಿದ್ದೇವೆ. ಆ ಅಂಕಿ ಅಂಶಗಳು ಸತ್ಯಕ್ಕೆ ದೂರವಾಗಿವೆ ಎಂದಷ್ಟೇ ಹೇಳಿದ್ದೇವೆ’ ಎಂದರು.

‘ಸಾಮಾಜಿಕ, ಶೈಕ್ಷಣಿಕವಾಗಿ ಸಮೀಕ್ಷೆ ಯಾಗಬೇಕಿತ್ತು. ಶೋಷಿತರಿಗೆ ಆಗಿರುವ ಸಮಸ್ಯೆ ಬಗ್ಗೆ ಚರ್ಚೆ ಆಗಬೇಕಿತ್ತು. ಸೌಲಭ್ಯಗಳಿಂದ ವಂಚಿತರಾದವರ ಬಗ್ಗೆ ಸರ್ಕಾರ ಕಾರ್ಯಕ್ರಮ ರೂಪಿಸುವ ಬಗ್ಗೆ ಸಮೀಕ್ಷೆ ಆಗಿಲ್ಲ’ ಎಂದು ದೂರಿದರು.

‘ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದಾಗ ಜಯಪ್ರಕಾಶ್ ಹೆಗ್ಡೆ ಅವರು, ಸದಸ್ಯ ಕಾರ್ಯದರ್ಶಿ ವರದಿಗೆ ಸಹಿ ಹಾಕಿಲ್ಲ ಎಂಬುದನ್ನು ಸರ್ಕಾರದ ಗಮನಕ್ಕೆ ತಂದಿದ್ದರು. ಆಯೋಗದ ಅವಧಿ ಐದು ವರ್ಷಗಳ ನಂತರ ಎರಡು ತಿಂಗಳು ವಿಸ್ತರಿಸ ಲಾಯಿತು. ಈ 60 ದಿನಗಳಲ್ಲೇ ವರದಿ ಯಾರು ತಯಾರು ಮಾಡಿದರು’ ಎಂದು ನಿಖಿಲ್ ಪ್ರಶ್ನಿಸಿದರು.

ಚರ್ಚೆಗೆ ಒಳಪಡಿಸಲು ಒತ್ತಾಯ

‘ಜಾತಿ ಗಣತಿ ವರದಿ ಸಚಿವ ಸಂಪುಟದಲ್ಲಿ ಚರ್ಚೆಗೆ ಬಂದಿದೆ. ಅದನ್ನು ಸಾರ್ವಜನಿಕಗೊಳಿಸಿ, ದೇಶದಾದ್ಯಂತ ಚರ್ಚೆಗೆ ಒಳಪಡಿಸಬೇಕು’ ಎಂದು ವಿಧಾನಪರಿಷತ್‌ನ ಮಾಜಿ ಸದಸ್ಯ ಮೋಹನ್‌ಕುಮಾರ್ ಕೊಂಡಜ್ಜಿ ಒತ್ತಾಯಿಸಿದ್ದಾರೆ.

‘2015ರಲ್ಲಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಸುಮಾರು ₹160 ಕೋಟಿ ವೆಚ್ಚ ಮಾಡಿ, ಕಾಂತರಾಜ ಸಮಿತಿ ನೀಡಿದ್ದ ವರದಿಯನ್ನು ಬಿಡುಗಡೆ ಮಾಡಬೇಕು ಎಂದು ನಾನು ಒತ್ತಾಯಿಸಿದ್ದೆ. ಕಾಂತರಾಜ ಸಮಿತಿ ಅಥವಾ ಸದಾಶಿವ ವರದಿಗಳನ್ನು ಡಿಜಿಟಲೀಕರಣ ಮಾಡಬೇಕು ಎಂದು ವಿಧಾನಪರಿಷತ್‌ನಲ್ಲಿ ಪ್ರಶ್ನೆ ಮಾಡಿದಾಗ, ಅಂದು ಸಚಿವರಾಗಿದ್ದ ಮಾಧುಸ್ವಾಮಿ ವರದಿಗಳನ್ನು ಡಿಜಿಟಲೀಕರಣ ಮಾಡಿ, ನಾಗರಿಕರಿಗೆ ಲಭ್ಯವಾಗುವಂತೆ ಮಾಡಲು ಯಾವುದೇ ಸರ್ಕಾರಗಳು ಕ್ರಮ ಕೈಗೊಂಡಿಲ್ಲ ಎಂದಿದ್ದರು. ಇದೀಗ ಸಚಿವ ಸಂಪುಟದಲ್ಲಿ ಚರ್ಚೆಯಾಗಿರುವುದರಿಂದ ಬಹಿರಂಗವಾಗಲಿ’ ಎಂದಿದ್ದಾರೆ.

ವಿಶೇಷ ಶಿಕ್ಷಕರ ವರ್ಗಾವಣೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗವಿಕಲ ಮಕ್ಕಳ ಶಾಲೆಗೆ ಶಿಕ್ಷಕರಾಗಿ ನೇಮಕವಾದವರು ನಂತರ ನಿಯೋಜನೆ, ವರ್ಗಾವಣೆ ಮೇಲೆ ಬೇರೆ ಸ್ಥಳಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸರ್ಕಾರ ನಿಯೋಜನೆ ರದ್ದು ಮಾಡಿ ಮೂಲ ಸ್ಥಳಕ್ಕೆ ವಾಪಸ್ ಕಳುಹಿಸಬೇಕು ಎಂದು ಕರ್ನಾಟಕ ರಾಜ್ಯ ವಿಕಲಚೇತನರ ರಕ್ಷಣಾ ಸಮಿತಿ ಒತ್ತಾಯಿಸಿದೆ.

ರಾಜ್ಯದ ಐದು ಶ್ರವಣದೋಷ ಶಾಲೆಗಳಲ್ಲಿ ಬಳ್ಳಾರಿ ಶಾಲೆಗೆ ಸ್ಪೀಚ್ ಥೆರಪಿಸ್ಟ್ ಆಗಿ ರಮ್ಯಾ ಅವರು ನೇಮಕ ವಾಗಿದ್ದರು. ಆದರೆ, ಬೆಂಗಳೂರಿನ ಮಂದಮತಿ ಅನುಪಾಲನ ಗೃಹಕ್ಕೆ ವರ್ಗಾವಣೆ ಮಾಡಿಸಿಕೊಂಡಿದ್ದಾರೆ. ಅಲ್ಲಿ ಮಂದಮತಿಯರಿಗೆ ಯಾವ ಥೆರಪಿ ಕೊಡಲು ಸಾಧ್ಯ? ಹಾಗೆಯೇ, ಬೆಂಗಳೂರಿನ ಮಂದಮತಿ ಅನುಪಾಲನ ಗೃಹದ ವಿಶೇಷ ಶಿಕ್ಷಕಿಯಾಗಿ ನೇಮಕವಾಗಿದ್ದ ಎ.ಎಸ್. ಲಕ್ಷ್ಮಿ ಅವರು, ಮೈಸೂರಿನ ಶ್ರವಣ ದೋಷ ಶಾಲೆಗೆ ವರ್ಗವಾಗಿದ್ದಾರೆ. ಮಂದಮತಿ ಮಕ್ಕಳ ಶಿಕ್ಷಕಿ ಶ್ರವಣ ದೋಷವುಳ್ಳವರಿಗೆ ಯಾವ ಪಾಠ ಮಾಡುತ್ತಾರೆ ಎಂದು ಸಮಿತಿಯ ಕಾರ್ಯಾಧ್ಯಕ್ಷ ಚಂದ್ರಶೇಖರ ಪುಟ್ಟಪ್ಪ ಪ್ರಶ್ನಿಸಿದ್ದಾರೆ.

ಹುಬ್ಬಳ್ಳಿಯ ಅನುಪಾಲನಾ ಗೃಹದಲ್ಲಿ ವಿಶೇಷ ಶಿಕ್ಷಕರಾಗಿದ್ದ ಎ.ಕೆ. ಶಿವಾಜಿ ಅವರನ್ನು ಉಡುಪಿಯ ಅಂಗವಿಕಲರ ಕಲ್ಯಾಣ ಇಲಾಖೆಯ ಕಚೇರಿಗೆ ನಿಯೋಜನೆ ಮಾಡಲಾಗಿತ್ತು. ಸತತ ಹೋರಾಟದ ನಂತರ ಅವರನ್ನು ವಾಪಸ್ ಕಳುಹಿಸಲಾಗಿದೆ. ಉಳಿದ ಶಿಕ್ಷಕರನ್ನೂ ಅವರು ನೇಮಕವಾದ ಸ್ಥಳಗಳಿಗೆ ವಾಪಸ್ ಕಳುಹಿಸಬೇಕು ಎಂದು ಆಗ್ರಹಿಸಿದ್ದಾರೆ.

ಅಧಿಕಾರಿಗಳ ಕಿರುಕುಳ ಆತ್ಮಹತ್ಯೆಗೆ ಯತ್ನ

ಕಡೂರು: ರಜೆ ನೀಡಿಲ್ಲ ಎಂದು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸಿಬ್ಬಂದಿಯೊಬ್ಬರು ಇಲ್ಲಿನ ಬಸ್ ಡಿಪೊದಲ್ಲಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದಾರೆ.

ಚಾಲಕ ಎಂ.ವಿ. ಮಧು ಆತ್ಮಹತ್ಯೆಗೆ ಯತ್ನಿಸಿದ್ದು, ಕಡೂರು ಡಿಪೊ ಎಟಿಎಸ್ ಕಿರುಕುಳ ನೀಡಿರುವುದಾಗಿ ಆಪಾದಿಸಿದ್ದಾರೆ. ಮಧು ಅವರು ಒಂದು ವಾರ ರಜೆ ಹಾಕದೆ, ವಾರದ ರಜೆಯಲ್ಲೂ ಕೆಲಸ ಮಾಡಿದ್ದರು. ಅವರ ಮಗುವಿಗೆ ಅನಾರೋಗ್ಯದ ಕಾರಣ ಆಸ್ಪತ್ರೆಗೆ ತೆರಳಬೇಕಿತ್ತು. ವಾರದ ರಜೆ ದಿನ ಕೆಲಸ ಮಾಡಿದ್ದರಿಂದ ರಜೆ ನೀಡಿ ಎಂದು ಎಟಿಎಸ್ ಅವರಲ್ಲಿ ಮನವಿ ಮಾಡಿದ್ದರು. ಅವರು ರಜೆ ನೀಡದೆ ಗೈರು ಎಂದು ನಮೂದಿಸಿದ್ದಾರೆ ಎಂದು ಆರೋಪಿಸಲಾಗಿದೆ.

‘ಎಷ್ಟು ಮನವಿ ಮಾಡಿದರೂ ಸ್ಪಂದಿಸದೆ ಇದ್ದುದರಿಂದ ಮನನೊಂದ ಮಧು ಅಧಿಕಾರಿಗಳ ವರ್ತನೆ ಖಂಡಿಸಿ ಶುಕ್ರವಾರ ಪತ್ರ ಬರೆದಿಟ್ಟು ಡಿಪೊದಲ್ಲಿ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು. ಕೂಡಲೇ ಅಲ್ಲಿದ್ದವರು ಮಧು ಅವರನ್ನು ಕಡೂರು ಸಾರ್ವಜನಿಕ ಆಸ್ಪತ್ರೆಗೆ ಕರೆ ತಂದು ಚಿಕಿತ್ಸೆ ಕೊಡಿಸಿದ್ದಾರೆ’ ಎಂದು ಮಧು ಕುಟುಂಬದವರು ತಿಳಿಸಿದ್ದಾರೆ.

ನಿಧನ ವಾರ್ತೆ

ಟಿ.ಎಂ. ರಾಘವೇಂದ್ರ

ಬೆಂಗಳೂರು: ಭಾರತೀಯ ರಿಸರ್ವ್ ಬ್ಯಾಂಕಿನ ವ್ಯವಸ್ಥಾಪಕರಾಗಿ ನಿವೃತ್ತ ರಾಗಿದ್ದ ತೀರ್ಥಹಳ್ಳಿಯ ತೂದೂರಿನ ಟಿ.ಎಂ. ರಾಘವೇಂದ್ರ (70) ಅವರು ಜೆ.ಪಿ. ನಗರದ ಆರ್‌ಬಿಐ ಕಾಲೊನಿಯ ತಮ್ಮ ನಿವಾಸದಲ್ಲಿ ಶನಿವಾರ ನಿಧನರಾಗಿದ್ದಾರೆ.

ರಾಘವೇಂದ್ರ

ಮೃತರಿಗೆ ತಾಯಿ, ಪತ್ನಿ ಮತ್ತು ಪುತ್ರ ಇದ್ದಾರೆ. ಅಂತ್ಯಕ್ರಿಯೆಯು ಭಾನುವಾರ ಬೆಳಿಗ್ಗೆ 9ಕ್ಕೆ ಚಾಮರಾಜಪೇಟೆಯ ಚಿತಾಗಾರದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಿದ್ವಾಯಿ: ಹೆಚ್ಚಿದ ಹೊರ, ಒಳ ರೋಗಿಗಳು

ತಪಾಸಣೆ, ಅರಿವಿನಿಂದ ಕ್ಯಾನ್ಸರ್‌ನ ಹೊಸ ಪ್ರಕರಣಗಳು ಅಧಿಕ ಸಂಖ್ಯೆಯಲ್ಲಿ ಪತ್ತೆ • ಹೊರ ರಾಜ್ಯಗಳಿಂದಲೂ ಭೇಟಿ

• ವರುಣ ಹೆಗಡೆ

874 ರೋಗಿಗಳ ಚಿಕಿತ್ಸೆಗೆ ಸಂಸ್ಥೆ ಹೊಂದಿರುವ ಬೆಡ್‌ಗಳು

1,116 ನಿತ್ಯ ಭೇಟಿ ನೀಡುವ ಸರಾಸರಿ ಹೊರ ರೋಗಿಗಳು

1,243 ಫಾಲೊ ಅಪ್ ಚಿಕಿತ್ಸೆಗೆ ನಿತ್ಯ ಭೇಟಿ ನೀಡುವವರು

3 ಲಕ್ಷ ಸಂಸ್ಥೆಯಲ್ಲಿ ಪ್ರತಿವರ್ಷ ಚಿಕಿತ್ಸೆ ಪಡೆದುಕೊಳ್ಳುವವರು

2024ರಲ್ಲಿ ಹೆಚ್ಚಾಗಿ ಕಾಣಿಸಿಕೊಂಡ ಕ್ಯಾನ್ಸರ್

ಪುರುಷರು		ಮಹಿಳೆಯರು	
ಬಾಯಿ ಕ್ಯಾನ್ಸರ್	9.5%	ಸ್ತನ ಕ್ಯಾನ್ಸರ್	21.7%
ಶ್ವಾಸಕೋಶ ಕ್ಯಾನ್ಸರ್	9.2%	ಗರ್ಭಕಂಠದ ಕ್ಯಾನ್ಸರ್	16%
ನಾಲಿಗೆ ಕ್ಯಾನ್ಸರ್	7.3%	ಬಾಯಿ ಕ್ಯಾನ್ಸರ್	8.8%
ಅನ್ನನಾಳ ಕ್ಯಾನ್ಸರ್	5.9%	ಥೈರಾಯ್ಡ್ ಕ್ಯಾನ್ಸರ್	4.5%
ಉದರ ಕ್ಯಾನ್ಸರ್	5.1%	ಅನ್ನನಾಳದ ಕ್ಯಾನ್ಸರ್	3.7%

ಬೆಂಗಳೂರು: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಗೆ ಭೇಟಿ ನೀಡುವ ಹೊರ ಹಾಗೂ ಒಳ ರೋಗಿಗಳ ಸಂಖ್ಯೆಯಲ್ಲಿ ಗಣನೀಯ ಏರಿಕೆ ಕಂಡಿದೆ. ತಪಾಸಣೆ ಹಾಗೂ ರೋಗದ ಬಗ್ಗೆ ಹೆಚ್ಚಿದ ಅರಿವಿನಿಂದಾಗಿ ಕ್ಯಾನ್ಸರ್ ಹೊಸ ಪ್ರಕರಣಗಳೂ ಅಧಿಕ ಸಂಖ್ಯೆಯಲ್ಲಿ ಪತ್ತೆಯಾಗುತ್ತಿವೆ.

ರಾಜ್ಯದ ವಿವಿಧ ಭಾಗಗಳ ಜತೆಗೆ ಹೊರ ರಾಜ್ಯಗಳಿಂದಲೂ ಇಲ್ಲಿನ ಹೊಂಬೇಗೌಡ ನಗರದಲ್ಲಿರುವ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಗೆ ರೋಗಿಗಳು ಭೇಟಿ ನೀಡುತ್ತಿದ್ದಾರೆ. ಸಂಸ್ಥೆಯು ಕ್ಯಾನ್ಸರ್ ಚಿಕಿತ್ಸೆಯ ಜತೆಗೆ ಶಿಕ್ಷಣ, ಸಂಶೋಧನೆ ಹಾಗೂ ರೋಗದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯದಲ್ಲಿಯೂ ತೊಡಗಿಕೊಂಡಿದೆ. ಇದರಿಂದಾಗಿ ಚಿಕಿತ್ಸೆಗಾಗಿ ಸಂಸ್ಥೆಗೆ ಬರುವ ರೋಗಿಗಳ ಸಂಖ್ಯೆ ಏರುಗತಿ ಪಡೆದಿದೆ. ಪ್ರತಿ ತಿಂಗಳು ಸರಾಸರಿ 33,946 ಹೊರ ರೋಗಿಳು ಭೇಟಿ ನೀಡಿದರೆ, 1,839 ಮಂದಿ ಒಳ ರೋಗಿಗಳಾಗಿ ದಾಖಲಾಗುತ್ತಿದ್ದಾರೆ. 2020ರಲ್ಲಿ ಈ ಸಂಖ್ಯೆ ಕ್ರಮವಾಗಿ 21,483 ಹಾಗೂ 795ರಷ್ಟಿತ್ತು.

ಬದಲಾದ ಜೀವನಶೈಲಿ, ಪಾಶ್ಚಾತ್ಯ ಆಹಾರ ಪದ್ಧತಿ ಸೇರಿ ವಿವಿಧ ಕಾರಣಗಳಿಂದ ಕ್ಯಾನ್ಸರ್ ಹೊಸ ಪ್ರಕರಣಗಳು ಏರಿಕೆ ಕಂಡಿವೆ. ಸಂಸ್ಥೆಯ ನೋಂದಣಿ ಪ್ರಕಾರ, 2020ರಲ್ಲಿ ಪ್ರತಿನಿತ್ಯ ಸರಾಸರಿ 38 ಕ್ಯಾನ್ಸರ್ ಹೊಸ ಪ್ರಕರಣಗಳು ಪತ್ತೆಯಾದರೆ, 2024ರಲ್ಲಿ ಇದು 60ಕ್ಕೆ ಏರಿಕೆಯಾಗಿದೆ. ಕಳೆದ ವರ್ಷ 21 ಸಾವಿರಕ್ಕೂ ಅಧಿಕ ಹೊಸ ಪ್ರಕರಣಗಳು ದೃಢಪಟ್ಟಿವೆ. ಸಂಸ್ಥೆಯು ಸರ್ಕಾರೇತರ ಸಂಸ್ಥೆಗಳ ನೆರವಿನಿಂದ, ಸಂಚಾರಿ ಪ್ರಯೋಗಾಲಯಗಳ ಮೂಲಕವೂ ಕ್ಯಾನ್ಸರ್ ಪತ್ತೆಗೆ ಕ್ರಮವಹಿಸಿದೆ. ಇದರಿಂದಾಗಿ ಅಧಿಕ ಸಂಖ್ಯೆಯಲ್ಲಿ ಹೊಸ ಪ್ರಕರಣಗಳು ದೃಢಪಡುತ್ತಿವೆ ಎಂದು ಸಂಸ್ಥೆಯ ಮೂಲಗಳು ತಿಳಿಸಿವೆ.

ತಡವಾಗಿ ದಾಖಲು: ಶೇ 50ರಷ್ಟು ರೋಗಿಗಳು ಕ್ಯಾನ್ಸರ್ ಚಿಕಿತ್ಸೆಗೆ ಮೂರು ಹಾಗೂ ನಾಲ್ಕನೇ ಹಂತದಲ್ಲಿ ಬರುತ್ತಿದ್ದಾರೆ. ಶೇ 14.3ರಷ್ಟು ಮಂದಿಗೆ ಮಾತ್ರ ಮೊದಲ ಹಾಗೂ ಎರಡನೇ ಹಂತದಲ್ಲಿ ಕ್ಯಾನ್ಸರ್ ಪತ್ತೆಯಾಗುತ್ತಿದೆ. ಪುರುಷರಲ್ಲಿ ಹೆಚ್ಚಾಗಿ ಬಾಯಿ ಮತ್ತು ಶ್ವಾಸಕೋಶದ ಕ್ಯಾನ್ಸರ್ ಕಾಣಿಸಿಕೊಂಡರೆ, ಸ್ತನ ಹಾಗೂ ಗರ್ಭಕಂಠದ ಕ್ಯಾನ್ಸರ್ ಮಹಿಳೆಯರಲ್ಲಿ ಹೆಚ್ಚಾಗಿ ಪತ್ತೆಯಾಗುತ್ತಿದೆ.

‘ಬದಲಾದ ಜೀವನಶೈಲಿ ಹಾಗೂ ಪಾಶ್ಚಾತ್ಯ ಆಹಾರ ಪದ್ಧತಿ ಜತೆಗೆ ಧೂಮಪಾನದಂತಹ ವ್ಯಸನ, ತಂಬಾಕು ಉತ್ಪನ್ನ ಸೇವನೆ, ಒತ್ತಡದ ಜೀವನ ಸೇರಿ ವಿವಿಧ ಕಾರಣಗಳಿಂದ ಕ್ಯಾನ್ಸರ್ ಪ್ರಕರಣಗಳು ಹೆಚ್ಚಳವಾಗುತ್ತಿವೆ. ಕ್ಯಾನ್ಸರ್ ಹಾಗೂ ಚಿಕಿತ್ಸೆ ಬಗ್ಗೆ ಜನರಲ್ಲಿ ಜಾಗೃತಿ ಮೂಡುತ್ತಿದೆ. ಇದರಿಂದ ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳು ಬರುತ್ತಿದ್ದಾರೆ’ ಎಂದು ಸಂಸ್ಥೆಯ ನಿರ್ದೇಶಕ ಡಾ.ಟಿ. ನವೀನ್ ತಿಳಿಸಿದರು.

ಸಂಸ್ಥೆಗೆ ಭೇಟಿ ನೀಡಿದ ರೋಗಿಗಳು

ವರ್ಷ	ಹೊರ ರೋಗಿಗಳು	ಒಳ ರೋಗಿಗಳು	ಹೊಸ ಪ್ರಕರಣ
2020	2.57 ಲಕ್ಷ	9,544	13,973
2021	3.07 ಲಕ್ಷ	11,535	16,316
2022	3.80 ಲಕ್ಷ	17,739	21,059
2023	3.90 ಲಕ್ಷ	20,162	21,608
2024	4.07 ಲಕ್ಷ	22,063	21,881

ಕ್ಯಾನ್ಸರ್ ಅನ್ನು ಸೂಕ್ತ ಸಮಯದಲ್ಲಿ ಪತ್ತೆ ಹಚ್ಚಿ, ಚಿಕಿತ್ಸೆ ಒದಗಿಸಿದರೆ ಗುಣಪಡಿಸಬಹುದು. ಆದ್ದರಿಂದ ತಪಾಸಣೆಗೆ ಆದ್ಯತೆ ನೀಡಲಾಗಿದೆ. ಜನರಲ್ಲೂ ಅರಿವು ಮೂಡುತ್ತಿದೆ

ಡಾ.ಟಿ.ನವೀನ್, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ

ಸುದ್ದಿ 2 ನಿಮಿಷ

ನಮ್ಮ ಮೆಟ್ರೊ: 9 ಲಕ್ಷ ಪ್ರಯಾಣಿಕರ ಸಂಚಾರ

ಬೆಂಗಳೂರು: ‘ನಮ್ಮ ಮೆಟ್ರೊ’ ಪ್ರಯಾಣದರ ಹೆಚ್ಚಳವಾದ ಮೇಲೆ ಕುಸಿದಿದ್ದ ಪ್ರಯಾಣಿಕರ ಸಂಖ್ಯೆ ಮತ್ತೆ ಏರಿಕೆಯಾಗುತ್ತಿದೆ. ಏಪ್ರಿಲ್ 17ರಂದು ಒಂದೇ ದಿನ 9.08 ಲಕ್ಷ ಜನರು ಮೆಟ್ರೊದಲ್ಲಿ ಪ್ರಯಾಣಿಸಿದ್ದಾರೆ.

2024ರ ಡಿಸೆಂಬರ್ 7ರಂದು 9.20 ಲಕ್ಷ ಪ್ರಯಾಣಿಕರು ಸಂಚರಿಸಿರುವುದು ಸಾರ್ವಕಾಲಿಕ ದಾಖಲೆಯಾಗಿದೆ. ಅದಕ್ಕಿಂತ ಹಿಂದೆ ಆಗಸ್ಟ್ 14ರಂದು 9.17 ಲಕ್ಷ ಜನರು ಪ್ರಯಾಣಿಸುವ ಮೂಲಕ ಮೊದಲ ಬಾರಿಗೆ 9 ಲಕ್ಷ ದಾಟಿರುವುದು ದಾಖಲೆಯಾಗಿತ್ತು.

ಏಪ್ರಿಲ್ 17ರಂದು ಸಿಇಟಿ ಪರೀಕ್ಷೆ, ಮರುದಿನ ‘ಗುಡ್‌ಫ್ರೈಡೆ’ ರಜೆ ಇದ್ದಿದ್ದರಿಂದ ಊರಿಗೆ ಹೊರಡುವವರು ಹೆಚ್ಚು ಮಂದಿ ಬಸ್ ಮತ್ತು ರೈಲು ನಿಲ್ದಾಣಗಳಿಗೆ ತಲುಪಲು ಮೆಟ್ರೊ ರೈಲನ್ನು ಬಳಸಿದ್ದಾರೆ. ಈ ಕಾರಣದಿಂದ ಮೆಟ್ರೊ ನಿಲ್ದಾಣಗಳಲ್ಲೂ ಅಂದು ಭಾರಿ ಜನದಟ್ಟಣೆ ಉಂಟಾಗಿತ್ತು. ‘ನಮ್ಮ ಮೆಟ್ರೊ’ ಇತಿಹಾಸದಲ್ಲಿ ಪ್ರಯಾಣಿಕರ ಸಂಖ್ಯೆ ಮೂರನೇ ಬಾರಿಗೆ 9 ಲಕ್ಷ ದಾಟಿದೆ.

ಅಂದು ನೇರಳೆ ಮಾರ್ಗದಲ್ಲಿ 4.35 ಲಕ್ಷ, ಹಸಿರು ಮಾರ್ಗದಲ್ಲಿ 2.85 ಲಕ್ಷ, ಮೆಜೆಸ್ಟಿಕ್‌ನಲ್ಲಿ ಮಾರ್ಗ ಬದಲಾಯಿಸಿ (ಇಂಟರ್‌ಚೇಂಜ್) 1.87 ಲಕ್ಷ ಜನರು ನಮ್ಮ ಮೆಟ್ರೊದಲ್ಲಿ ಪ್ರಯಾಣಿಸಿದ್ದಾರೆ.

ಯುವಿಸಿಇಜಿಎ ಫೆಲೋಶಿಪ್ ಪ್ರದಾನ

ಬೆಂಗಳೂರು: ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನ (ಯುವಿಸಿಇ) ಗ್ರಾಜ್ಯುಯೇಟ್ಸ್ ಅಸೋಸಿಯೇಷನ್ ವತಿಯಿಂದ 84 ವಿದ್ಯಾರ್ಥಿಗಳಿಗೆ ಯುವಿಸಿಇಜಿಎ ಫೆಲೋಶಿಪ್ ಪ್ರದಾನ ಮಾಡಲಾಯಿತು.

ನಂತರ ಮಾತನಾಡಿದ ವಿ.ಕೆ. ಅತ್ರೆ, ‘2047ಕ್ಕೆ ಅಭಿವೃದ್ಧಿ ರಾಷ್ಟ್ರವಾಗಿ ರೂಪಿಸುವಲ್ಲಿ ವಿದ್ಯಾರ್ಥಿಗಳು ನಿರ್ಣಾಯಕ ಪಾತ್ರ ವಹಿಸಲಿದ್ದಾರೆ. ಈ ವಿದ್ಯಾರ್ಥಿವೇತನ (ಫೆಲೋಶಿಪ್) ನಿಮಗೆ ಆರ್ಥಿಕ ನೆರವು ನೀಡುವುದರ ಜೊತೆಗೆ ಉತ್ತಮ ಸಾಧನೆ ಮಾಡಲು ಹೆಚ್ಚಿನ ಜವಾಬ್ದಾರಿ ವಹಿಸಲಿದೆ’ ಎಂದು ಹೇಳಿದರು.

ಯುವಿಸಿಇ ಗ್ರಾಜ್ಯುಯೇಟ್ಸ್ ಅಸೋಸಿಯೇಷನ್ ಅಧ್ಯಕ್ಷ ಶ್ರೀಕಾಂತ್ ಎಂ. ಮಾತನಾಡಿ, ವಿದ್ಯಾರ್ಥಿಗಳ ಬೆಳವಣಿಗೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ನಮ್ಮ ಸಂಘ ನಿರಂತರವಾಗಿ ಬದ್ಧತೆಯನ್ನು ಪ್ರದರ್ಶಿಸುತ್ತಿದೆ. ಭವಿಷ್ಯದ ಅವಕಾಶಗಳನ್ನು ಹಳೆಯ ವಿದ್ಯಾರ್ಥಿಗಳ ಜಾಲದೊಂದಿಗೆ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ 2024–25ನೇ ಸಾಲಿನಲ್ಲಿ ₹16.5 ಲಕ್ಷ ಮೊತ್ತವನ್ನು ಲ್ಯಾಪ್‌ಟಾಪ್ ಮತ್ತು ಕೌಶಲ ಅಭಿವೃದ್ಧಿ ಕೋರ್ಸ್‌ಗಳಿಗೆ 84 ವಿದ್ಯಾರ್ಥಿಗಳಿಗೆ ನೀಡಲಾಯಿತು.

ನಿವೃತ್ತ ಮೇಜರ್ ಜನರಲ್ ನೀಲಕಂಟಪ್ಪ, ನಿವೃತ್ತ ಐಎಎಸ್ ಅಧಿಕಾರಿ ಮಂಜುನಾಥ್ ಪ್ರಸಾದ್, ಯುವಿಸಿಇ ನಿರ್ದೇಶಕ ಸುಭಾಷಿಷ್ ತ್ರಿಪಾಠಿ ಉಪಸ್ಥಿತರಿದ್ದರು.

ಬಿಡದಿ ಟೌನ್‌ಶಿಪ್ ಕೈಬಿಡಿ: ಸಂಸದ

ರಾಮನಗರ: ‘ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕೈಗೆತ್ತಿಕೊಂಡಿರುವ ಬಿಡದಿ ಟೌನ್‌ಶಿಪ್ ನಿರ್ಮಾಣ ಯೋಜನೆಗೆ ರೈತರ ಜಮೀನುಗಳ ಸ್ವಾಧೀನವನ್ನು ಸರ್ಕಾರ ಕೈಬಿಡಬೇಕು’ ಎಂದು ಸಂಸದ ಡಾ.ಸಿ.ಎನ್.ಮಂಜುನಾಥ್ ಒತ್ತಾಯಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ‘ಟೌನ್‌ಶಿಪ್ ನಿರ್ಮಾಣ ಯೋಜನೆಗಾಗಿ ಭೂಸ್ವಾಧೀನ ಪ್ರಕ್ರಿಯೆ ವಿರುದ್ಧ ಸ್ಥಳೀಯ ರೈತರು ಹೋರಾಟ ಮಾಡುತ್ತಿದ್ದಾರೆ. ಯೋಜನೆಯಿಂದ ಈ ಭಾಗದ ಕೃಷಿ ಮತ್ತು ತೋಟಗಾರಿಕೆಗೆ ತೊಂದರೆಯಾಗಲಿದ್ದು, ಹಸಿರು ಪರಿಸರ ನಾಶವಾಗಲಿದೆ. ಭೂಸ್ವಾಧೀನದಿಂದ ಈ ಭಾಗದ ಜನರಿಗೂ ತೊಂದರೆಯಾಗಲಿದೆ. ಹಾಗಾಗಿ, ಸರ್ಕಾರ ತನ್ನ ನಿರ್ಧಾರ ಕೈಬಿಡಬೇಕು ಎಂದಿದ್ದಾರೆ.

ಬಿಬಿಎಂಪಿ ಪೌರಕಾರ್ಮಿಕರು ಕಾಯಂ: ಮೇ 1ಕ್ಕೆ ನೇಮಕ ಪತ್ರ

ವಲಯವಾರು ಅಂತಿಮ ಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಪೌರಕಾರ್ಮಿಕ ಹುದ್ದೆಗಳಿಗೆ ಆಯ್ಕೆ ಆಗಿರುವ 12,692 ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಪ್ರಕಟಿಸಲಾಗಿದೆ.

2024ರ ಅಕ್ಟೋಬರ್‌ನಲ್ಲಿ ಕರಡು ಪಟ್ಟಿಯನ್ನು ಪ್ರಕಟಿಸಲಾಗಿತ್ತು. ಅಂತಿಮ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ವಲಯ ಮಟ್ಟದಲ್ಲಿ ನಿಗದಿಪಡಿಸಲಾಗಿರುವ ದಿನಗಳಂದು ಮೀಸಲಾತಿ ಮತ್ತು ಇತರೆ ದಾಖಲೆಗಳನ್ನು ಹಾಜರುಪಡಿಸಬೇಕು ಎಂದು ಸೂಚಿಸಲಾಗಿದೆ.

ಪೌರಕಾರ್ಮಿಕರನ್ನು ಕಾಯಂಗೊಳಿಸಿ, ಮೇ 1ರಂದು ನೇಮಕ ಪತ್ರ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇತ್ತೀಚೆಗೆ ಪ್ರಕಟಿಸಿದ್ದರು. ಅದರಂತೆ, ಬಿಬಿಎಂಪಿ ಪ್ರಕ್ರಿಯೆ ಆರಂಭಿಸಿದೆ.

ಪಾಲಿಕೆ ವ್ಯಾಪ್ತಿಯಲ್ಲಿ ನೇರ ಪಾವತಿಯಡಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ ‘ಡಿ’ ವೃಂದದ ಪೌರಕಾರ್ಮಿಕರ ನೇಮಕಾತಿ ಪ್ರಕ್ರಿಯೆಯನ್ನು ಎರಡು ಹಂತದಲ್ಲಿ ನಡೆಸಲಾಗಿದೆ. ಮೊದಲ ಹಂತದಲ್ಲಿ 3,673 ಹಾಗೂ ಎರಡನೇ ಹಂತದಲ್ಲಿ 11,307 ಹುದ್ದೆಗಳು ಸೇರಿದಂತೆ ಒಟ್ಟು 14,980 ಪೌರಕಾರ್ಮಿಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಬೇಕಾಗಿದೆ. ಇದರಲ್ಲಿ ನಿಯಮಾನುಸಾರ 12,692 ಅರ್ಹ ಪೌರಕಾರ್ಮಿಕರನ್ನು ನೇಮಕ ಮಾಡಿಕೊಳ್ಳಲು ಕ್ರಮಕೈಗೊಳ್ಳಲಾಗಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ಘನತ್ಯಾಜ್ಯ ನಿರ್ವಹಣೆ ಹಾಗೂ ವಿವಿಧ ಸ್ವಚ್ಛತಾ ಕಾರ್ಯಗಳ ನಿರ್ವಹಣೆಗಾಗಿ ಘನತ್ಯಾಜ್ಯ ವಿಭಾಗದಲ್ಲಿ ನೇರ ಪಾವತಿಯಡಿ(ಡಿಪಿಎಸ್) ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಂದ 15 ಸಾವಿರಕ್ಕೂ ಹೆಚ್ಚು ಅರ್ಜಿಗಳು ಬಂದಿದ್ದವು. ದೀರ್ಘಾವಧಿ ಸೇವೆ, ರೋಸ್ಟರ್ ಪದ್ಧತಿ ಹಾಗೂ ವಿವಿಧ ಮಾನದಂಡಗಳ ಆಧಾರದ ಮೇಲೆ ಎರಡು ಹಂತಗಳಲ್ಲಿ ಅರ್ಜಿ ಆಹ್ವಾನಿಸಲಾಗಿತ್ತು. ಅರ್ಜಿ ಸಲ್ಲಿಸಿದವರ ಪೈಕಿ 12,692 ಪೌರ ಕಾರ್ಮಿಕರನ್ನು ಆಯ್ಕೆ ಮಾಡಲಾಗಿದೆ. ಪಟ್ಟಿಯನ್ನು https://bbmp.gov.in/homeನಲ್ಲಿ ಪ್ರಕಟಿಸಲಾಗಿದೆ.



ಬೈಕ್ ಮೇಲೆ ಲಾರಿ ಮಗುಚಿ ಬಿದ್ದು ತಂದೆ, ಮಗಳ ಸಾವು

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ತಾಲ್ಲೂಕಿನ ಲಿಂಗಶೆಟ್ಟಿಪುರ ಗೇಟ್ ಬಳಿ ಶನಿವಾರ ಸಂಜೆ ದ್ವಿಚಕ್ರವಾಹನದ ಮೇಲೆ ಲಾರಿ ಮಗುಚಿ ಬಿದ್ದು ತಂದೆ, ಮಗಳು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಬೈಕ್‌ನಲ್ಲಿ ತೆರಳುತ್ತಿದ್ದ ಬಂಡಹಳ್ಳಿಯ ವೆಂಕಟೇಶ್ (35), ಅವರ ಪುತ್ರಿ ಗ್ರೀಷ್ಮಾ (4) ಮೃತರು. ವೆಂಕಟೇಶ್ ಅವರ ಪತ್ನಿ ರೂಪಾ ತೀವ್ರವಾಗಿ ಗಾಯಗೊಂಡಿದ್ದು, ಚಿಕಿತ್ಸೆಗೆ ಬೆಂಗಳೂರಿಗೆ ಕಳುಹಿಸಲಾಗಿದೆ.

ಸಾವಿಗೆ ಆಕ್ರೋಶ ವ್ಯಕ್ತಪಡಿಸಿ ಸುತ್ತಮುತ್ತಲಿನ ಹಳ್ಳಿಗಳ ಗ್ರಾಮಸ್ಥರು ಪ್ರತಿಭಟಿಸಿದರು. ರಾಷ್ಟ್ರೀಯ ಹೆದ್ದಾರಿ 44ರಲ್ಲಿ ವಾಹನಗಳು ಸಾಲುಗಟ್ಟಿದ್ದವು.

‘ಉತ್ತಮ ನಾಟಕ ವೀಕ್ಷಣೆಗೆ ಅವಕಾಶ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾಡಿನ ವಿವಿಧ ಭಾಗಗಳ ಉತ್ತಮ ನಾಟಕಗಳಿಗೆ ಬೆಂಗಳೂರಿನಲ್ಲಿ ವೇದಿಕೆ ಕಲ್ಪಿಸಲು ತಿಂಗಳ ನಾಟಕ ಸಂಭ್ರಮ ಯೋಜನೆ ಸಹಕಾರಿಯಾಗಿದೆ’ ಎಂದು ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಹೇಳಿದರು.

ಅಕಾಡೆಮಿಯು ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ‘ತಿಂಗಳ ನಾಟಕ ಸಂಭ್ರಮ’ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ‘ರಾಜ್ಯದ ವಿವಿಧ ಜಿಲ್ಲೆಗಳ ಅತ್ಯುತ್ತಮ ನಾಟಕಗಳ ಪ್ರದರ್ಶನಕ್ಕಾಗಿಯೇ ತಿಂಗಳ ನಾಟಕ ಸಂಭ್ರಮ ಯೋಜನೆ ರೂಪಿಸಲಾಗಿದೆ. ಈಗಾಗಲೇ 10ಕ್ಕೂ ಹೆಚ್ಚು ಜಿಲ್ಲೆಗಳ ನಾಟಕಗಳು ಪ್ರದರ್ಶನಗೊಂಡಿವೆ. ನಾಡಿನ ಎಲ್ಲ ಭಾಗದ ಉತ್ತಮ ನಾಟಕಗಳ ವೀಕ್ಷಣೆ ಬೆಂಗಳೂರಿಗರಿಗೆ ಸಾಧ್ಯವಾಗುತ್ತಿದೆ’ ಎಂದು ಅವರು ಹೇಳಿದರು.

ರಂಗಭೂಮಿ ಕಲಾವಿದೆ ನಾಗರತ್ನಮ್ಮ ಮರಿಯಮ್ಮನಹಳ್ಳಿ ಅವರು ತಿಂಗಳ ಅತಿಥಿಯಾಗಿ ಭಾಗವಹಿಸಿದ್ದರು.

ಬಳಿಕ ಹೊಸಪೇಟೆಯ ಟಿ.ಬಿ. ಡ್ಯಾಂ ಕನ್ನಡ ಕಲಾ ಸಂಘದ ಕಲಾವಿದರು ‘ನಾ. ಸತ್ತಿಲ್ಲ’ ನಾಟಕ ಪ್ರದರ್ಶಿಸಿದರು.

ಹೆದ್ದಾರಿಯಲ್ಲಿ ಸಂಚಾರಕ್ಕೆ ಅಡ್ಡಿ ಮೂವರ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಮಂಗಳೂರು: ವಕ್ಫ್ ಕಾಯ್ದೆ ತಿದ್ದುಪಡಿ ವಿರೋಧಿಸಿ ಅಡ್ಯಾರ್‌ನಲ್ಲಿ ಶುಕ್ರವಾರ ನಡೆದ ಪ್ರತಿಭಟನೆಯ ವೇಳೆ ರಾಷ್ಟ್ರೀಯ ಹೆದ್ದಾರಿ 73ರಲ್ಲಿ ವಾಹನ ಸಂಚಾರಕ್ಕೆ ಅಡ್ಡಿಪಡಿಸಿದ ಆರೋಪದ ಮೇಲೆ ಕಂಕನಾಡಿ ಠಾಣೆಯಲ್ಲಿ ಮೂವರ ವಿರುದ್ಧ ಪ್ರಕರಣ ದಾಖಲಾಗಿದೆ.

ಕರ್ತವ್ಯಕ್ಕೆ ನಿಯೋಜಿಸಿದ್ದ ಪೊಲೀಸ್ ಅಧಿಕಾರಿ ನೀಡಿದ ದೂರು ಆಧರಿಸಿ ಕೃಷ್ಣಾಪುರ ನಿವಾಸಿ ಜಲೀಲ್, ವಳಚ್ಚಿಲ್ ನಿವಾಸಿ ಫಾಝುಲ್, ಮೊಹಮ್ಮದ್ ಹನೀಫ್ ನೌಫಾಲ್ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ವಿವಿಧ ಕಲಂಗಳ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ. ವಿಡಿಯೊ ದೃಶ್ಯ ಆಧರಿಸಿ ಇನ್ನಿತರ ಆರೋಪಿಗಳ ಗುರುತು ಪತ್ತೆ ಕಾರ್ಯ ನಡೆದಿದೆ ಎಂದು ಮಂಗಳೂರು ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್ ತಿಳಿಸಿದ್ದಾರೆ.

ಕರ್ನಾಟಕ ಉಲಮಾ ಒಕ್ಕೂಟವು ಕಣ್ಣೂರು ಅಡ್ಯಾರ್‌ನ ಷಾ ಗಾರ್ಡನ್‌ನಲ್ಲಿ ಪ್ರತಿಭಟನೆ ಹಮ್ಮಿಕೊಂಡಿತ್ತು. ಪ್ರತಿಭಟನಾ ಸ್ಥಳದ ಸಮೀಪ ಇರುವ ರಾಷ್ಟ್ರೀಯ ಹೆದ್ದಾರಿ 73ರಲ್ಲಿ ಸುಗಮ ಸಂಚಾರಕ್ಕೆ ಅಡ್ಡಿಯಾಗದಂತೆ ಪೊಲೀಸರನ್ನು ನಿಯೋಜಿಸಲಾಗಿತ್ತು. ಪ್ರತಿಭಟನೆಯ ಸಂಘಟಕರು ನೇಮಿಸಿದ್ದ ಸ್ವಯಂ ಸೇವಕರು ಪೊಲೀಸ್ ಸಿಬ್ಬಂದಿಗೆ ನೆರವು ನೀಡುತ್ತಿದ್ದರು. ಈ ವೇಳೆ ಸಂಜೆ 4.30ರ ಸುಮಾರಿಗೆ ಬಂದ ಗುಂಪೊಂದು ಹೆದ್ದಾರಿ ಮಧ್ಯದಲ್ಲಿ ಜಮಾಯಿಸಿ, ಮುಕ್ತ ಸಂಚಾರಕ್ಕೆ ಅಡ್ಡಿಪಡಿಸಿತು ಎಂದು ಅಗ್ರವಾಲ್ ತಿಳಿಸಿದ್ದಾರೆ.

ನಾಳೆಯಿಂದ ಸ್ವಚ್ಛತಾ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಏಪ್ರಿಲ್ 21ರಿಂದ 30ರವರೆಗೆ ‘ಬೃಹತ್ ಪ್ರಮಾಣದ ಸ್ವಚ್ಛತಾ ಅಭಿಯಾನ’ ಹಮ್ಮಿಕೊಳ್ಳಲಾಗಿದೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮಳೆಗಾಲದ ಮುನ್ನ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ವತಿಯಿಂದ ನಗರದಾದ್ಯಂತ ಬೃಹತ್ ಪ್ರಮಾಣದ ಸ್ವಚ್ಛತಾ ಅಭಿಯಾನವನ್ನು ಹಮ್ಮಿಕೊಳ್ಳಲು ನಿರ್ದೇಶನ ನೀಡಿದ್ದಾರೆ. ಹೀಗಾಗಿ ಅಭಿಯಾನ ಆಯೋಜಿಸಲಾಗಿದೆ ಎಂದು ಬಿಎಸ್‌ಡಬ್ಲ್ಯುಎಂಎಲ್ ಮುಖ್ಯ ಕಾರ್ಯಾಚರಣಾಧಿಕಾರಿ ರಮಾಮಣಿ ತಿಳಿಸಿದ್ದಾರೆ.

ಸಾರ್ವಜನಿಕ ಸ್ಥಳಗಳಾದ ರಸ್ತೆ ಬದಿ, ಪಾದಚಾರಿ ಮಾರ್ಗಗಳು, ಖಾಲಿ ಸ್ಥಳಗಳಲ್ಲಿ ತ್ಯಾಜ್ಯವನ್ನು ಎಸೆಯುತ್ತಿರುವುದರಿಂದ ನಗರದ ಸೌಂದರ್ಯಕ್ಕೆ ಧಕ್ಕೆಯಾಗುತ್ತಿದೆ. ಈ ಸಂಬಂಧ ನಗರದಾದ್ಯಂತ ತ್ಯಾಜ್ಯ ಬಿಸಾಡುವ ಸ್ಥಳಗಳನ್ನು ಈಗಾಗಲೇ ಗುರುತಿಸಲಾಗಿದ್ದು, ಎಲ್ಲಾ ಸ್ಥಳಗಳನ್ನು ಒಂದು ಬಾರಿ ಸ್ವಚ್ಛಗೊಳಿಸಲು ಕಾರ್ಯಕ್ರಮವನ್ನು ರೂಪಿಸಲಾಗಿದೆ.

ಸಾರ್ವಜನಿಕರು, ಸರ್ಕಾರೇತರ ಸಂಘ– ಸಂಸ್ಥೆಗಳು, ನಿವಾಸಿ ಕಲ್ಯಾಣ ಸಂಘಗಳು, ಅಪಾರ್ಟ್‌ಮೆಂಟ್ ಮಾಲೀಕರ ಸಂಘಗಳು, ಸ್ವಯಂ ಸೇವಕ ಗುಂಪುಗಳ ಸಹಭಾಗಿತ್ವದೊಂದಿಗೆ ನಗರದಾದ್ಯಂತ ರಸ್ತೆ, ಪಾದಚಾರಿ ಮಾರ್ಗ, ರಸ್ತೆಗಳ ವಿಭಜಕ ಮತ್ತು ಸಾರ್ವಜನಿಕ ಸ್ಥಳಗಳನ್ನು 10 ದಿನಗಳಲ್ಲಿ ಸ್ವಚ್ಛಗೊಳಿಸುವ ಗುರಿ ಹೊಂದಲಾಗಿದೆ. ಇದರ ಜೊತೆಗೆ ಏಕಬಳಕೆ ಪ್ಲಾಸ್ಟಿಕ್ ಉತ್ಪನ್ನಗಳನ್ನು ಬಳಸುವ ಉದ್ದಿಮೆ/ಮಳಿಗೆಗಳ ಮೇಲೆ ದಾಳಿ ನಡೆಸಿ, ಏಕಬಳಕೆ ಪ್ಲಾಸ್ಟಿಕ್ ನಿಯಂತ್ರಣಕ್ಕೆ ಕ್ರಮವಹಿಸಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ಕಟ್ಟಡ ಭಗ್ನಾವಶೇಷಗಳ ನಿಯಂತ್ರಣಕ್ಕೂ ಕ್ರಮ ಕೈಗೊಳ್ಳಲಾಗುತ್ತಿದ್ದು, ಖಾಲಿ ಜಾಗದಲ್ಲಿ ಸುರಿದಿರುವ ಕಟ್ಟಡ ಭಗ್ನಾವಶೇಷಗಳನ್ನು ಸಂಪೂರ್ಣವಾಗಿ ತೆರವುಗೊಳಿಸಲು ಕ್ರಮವಹಿಸಲಾಗುವುದು.

ಸಾರ್ವಜನಿಕ ಸ್ಥಳಗಳಲ್ಲಿ ತ್ಯಾಜ್ಯ ಬಿಸಾಡದಂತೆ ನಾಗರಿಕರಲ್ಲಿ ಅರಿವು ಮೂಡಿಸಲು ಎಂಟೂ ವಲಯಗಳಲ್ಲಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ತ್ಯಾಜ್ಯ ಸಂಗ್ರಹಿಸುವ ಆಟೊ ಟಿಪ್ಪರ್‌ಗಳಲ್ಲಿ ಧ್ವನಿವರ್ಧಕಗಳ ಮೂಲಕ ಜಾಗೃತಿ ಮೂಡಿಸುವ ಕೆಲಸ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಶ್ರೀ ರಾಮನವಮಿ ಸಂಗೀತೋತ್ಸವ

ನಗರದ್ ‘ಕೋಟೆ ಹೈಸ್ಕೂಲ್’ ಆವರಣದಲ್ಲಿ ಶನಿವಾರ ‘ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೆಷನ್ ಟ್ರಸ್ಟ್’ ಆಯೋಜಿಸಿದ್ದ ‘87ನೇ ಶ್ರೀ ರಾಮನವಮಿ ಸಂಗೀತೋತ್ಸವ - 2025’ ಕಾರ್ಯಕ್ರಮದಲ್ಲಿ ಸುಮಂತ್ ಮಂಜುನಾಥ್, ಮೈಸೂರು ಮಂಜುನಾಥ್ ಮತ್ತು ವಿಶ್ವಮೋಹನ್ ಭಟ್ ಅವರು ಜುಗಲ್‌ಬಂದಿ ಕಾರ್ಯಕ್ರಮ ಪ್ರಸ್ತುತಪಪಡಿಸಿದರು ಚಿತ್ರ: ರಂಜು ಪಿ

ಚಿತ್ರಾವಳಿ

ನಗರದಲ್ಲಿ ಶನಿವಾರ ಪ್ರಣತಿ ಪ್ರತಿಷ್ಠಾನ ಆಯೋಜಿಸಿದ್ದ 31ನೇ ವಾರ್ಷಿಕೋತ್ಸವದಲ್ಲಿ ಕನ್ನಡ ಸಾಹಿತ್ಯ ಪ್ರಣತಿ ಪ್ರಶಸ್ತಿಯನ್ನು ನಾ.ಸೋಮೇಶ್ವರ ಅವರಿಗೆ ಹಾಗೂ ಕನ್ನಡ ಸಾಹಿತ್ಯ ಪ್ರಚಾರ ಪ್ರಣತಿ ಪ್ರಶಸ್ತಿಯನ್ನು ಬಿ.ವಿ.ಶ್ರೀನಿವಾಸ ಅವರಿಗೆ ನೀಡಿ ಗೌರವಿಸಲಾಯಿತು. ಪ್ರಣತಿ ರಾಘವೇಂದ್ರ, ಎನ್.ಎಸ್.ಪ್ರಸಾದ್ ಮತ್ತು ಪ್ರತಿಷ್ಠಾನದ ಸದಸ್ಯರು ಉಪಸ್ಥಿತರಿದ್ದರು

ನಗರದಲ್ಲಿ ಶನಿವಾರ 'ಬಿ.ಎಂ.ಶ್ರೀ ಪ್ರತಿಷ್ಠಾನ' ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಲತಾ ಗುತ್ತಿ ಅವರಿಗೆ ‘ಡಾ.ವಿಜಯಾ ಸುಬ್ಬರಾಜ್ ಗಣ್ಯ ಲೇಖಕಿ ಪ್ರಶಸ್ತಿ’ ಮತ್ತು ಪ್ರಸನ್ನ ನಂಜಾಪುರ ಅವರಿಗೆ ‘ಸೂ.ವೆಂ.ಆರಗ ವಿಮರ್ಶಾ ಪ್ರಶಸ್ತಿ’ ನೀಡಿ ಗೌರವಿಸಲಾಯಿತು. ‘ಬಿ.ಎಂ.ಶ್ರೀ ಪ್ರತಿಷ್ಠಾನ'ದ ಗೌರವ ಕಾರ್ಯದರ್ಶಿ ಶಾಂತರಾಜು, ಲೇಖಕಿ ವಿಜಯಸುಬ್ಬರಾಜ್, ಕೆ.ಮೋಹನ್ ದೇವ್ ಆಳ್ವ ಮತ್ತು ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರಗಳು

ನಗರದಲ್ಲಿ ಇಂದು

‘ಭವಿಷ್ಯದಲ್ಲಿ ಹವಾಮಾನದಲ್ಲಿ ಆಗುವ ವೈಪರಿತ್ಯ ಹಾಗೂ ಬದಲಾವಣೆ’ ಕುರಿತ ಸಮ್ಮೇಳನ: ‘ಜೌಗುಭೂಮಿ ಸಂರಕ್ಷಣೆ ಮತ್ತು ಹವಾಮಾನ ಬದಲಾವಣೆ’ ಉಪನ್ಯಾಸ: ಮುಖ್ಯ ಭಾಷಣಕಾರರು: ಮುಸೊಂಡ ಮುಂಬಾ, ಅತಿಥಿಗಳು: ಮೀನಾಕ್ಷಿ ನೇಗಿ, ರೇವತಿ ಕಾಮತ್, ಕುಮಾರ್ ಪುಷ್ಕರ್, ರಮಣ್ ಸುಕುಮಾರ್, ಬಿ.ಸಿ. ಚೌಧರಿ, ಆಯೋಜನೆ: ಸಿನ್ನಾಪಿ ಸಂಸ್ಥೆ, ಸ್ಥಳ: ಮುಖ್ಯ ಸಭಾಂಗಣ, ಕೃಷ್ಣ ವೆಲ್‌ನೆಸ್ ಯೋಗ ಮತ್ತು ಸಾಂಸ್ಕೃತಿಕ ಕೇಂದ್ರ, ಒಂಬತ್ತನೇ ಕ್ರಾಸ್, ಆರನೇ ಮುಖ್ಯರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 9.30

ಅಂತರರಾಷ್ಟ್ರೀಯ ಲಯನ್ಸ್ ಸಂಸ್ಥೆ ಜಿಲ್ಲಾ 317 ಎಫ್‌ನ 12ನೇ ವಾರ್ಷಿಕ ಜಿಲ್ಲಾ ಸಮ್ಮೇಳನ: ಅತಿಥಿಗಳು: ಮದನ್ ಗೋಪಾಲ್, ಕೆ. ವಂಶಿಧರ್ ಬಾಬು, ವಿ.ವಿ. ಕೃಷ್ಣಾರೆಡ್ಡಿ, ಬಿ.ಎಸ್. ರಾಜಶೇಖರಯ್ಯ, ಆಕಾಶ್ ಸುವರ್ಣ, ರಾಜು ಚಂದ್ರಶೇಖರ್, ಅಧ್ಯಕ್ಷತೆ: ಸಿ.ಎಂ. ನಾರಾಯಣ ಸ್ವಾಮಿ, ಆಯೋಜನೆ: ಅಂತರರಾಷ್ಟ್ರೀಯ ಲಯನ್ಸ್ ಸಂಸ್ಥೆ ಜಿಲ್ಲಾ 317 ಎಫ್, ಸ್ಥಳ: ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್, ಬೆಳಿಗ್ಗೆ 10

‘ಶಿವದೂತ ಗುಳಿಗ’ ನಾಟಕ ಪ್ರದರ್ಶನ: ನಿರ್ದೇಶನ: ವಿಜಯ್ ಕುಮಾರ್, ಆಯೋಜನೆ: ತರಳಬಾಳು ಕೇಂದ್ರ, ಸ್ಥಳ: ತರಳಬಾಳು ಕೇಂದ್ರದ ಸಭಾಂಗಣ, ಬಿಡಿಎ ಕಾಂಪ್ಲೆಕ್ಸ್ ಹತ್ತಿರ, ಆರ್.ಟಿ. ನಗರ, ಸಂಜೆ 5

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಚಂದನಾ ನಾಗ್, ಅತಿಥಿಗಳು: ಸ್ನೇಹಾ ಕಪ್ಪಣ್ಣ, ಲಲಿತಾ ಶ್ರೀನಿವಾಸನ್, ಪ್ರತಿಭಾ ಪ್ರಹ್ಲಾದ್, ಶುಭಾ ಧನಂಜಯ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 5.30

ಚಂದನಾ ನಾಗ್

ಕೋಟೆ ಮಾರಮ್ಮ, ಪಟ್ಟಂದರಮ್ಮ, ಚಂದ್ರಮೌಳೇಶ್ವರ ಸ್ವಾಮಿಯ ಉತ್ಸವ: ಗಣಪತಿ, ವೀರಾಂಜನೇಯ, ಪಟ್ಟಂದರಮ್ಮ ದೇವಿ ಮತ್ತು ಮೈಸೂರು ಅಮ್ಮನಿಗೆ ಆರತಿ, ಸ್ಥಳ: ಬಸವಣ್ಣ ದೇವಸ್ಥಾನದ ಆವರಣ, ಚಿಕ್ಕಬಾಣಾವರ, ಬೆಳಿಗ್ಗೆ 10ರಿಂದ

ವಿಶ್ವ ಹೋಮಿಯೋಪಥಿ ದಿನಾಚರಣೆ, ರಾಷ್ಟ್ರೀಯ ವಿಚಾರಸಂಕಿರಣ: ಉದ್ಘಾಟನೆ: ದಿನೇಶ್ ಗುಂಡೂರಾವ್, ಅತಿಥಿಗಳು: ಡಾ.ಸಿ. ಎನ್. ಮಂಜುನಾಥ್, ಡಾ.ಬಿ.ಸಿ. ಭಗವಾನ್, ಡಾ. ಶೈಲೇಂದ್ರ ಬೆಲ್ದಾಳೆ, ವಿಪಿನ್ ಸಿಂಗ್, ಆಯೋಜನೆ: ಕರ್ನಾಟಕ ಹೋಮಿಯೋಪಥಿಕ್ ಮೆಡಿಕಲ್ ಅಸೋಸಿಯೇಷನ್, ಸ್ಥಳ: ಎ.ವಿ. ರಾಮರಾವ್ ಸಭಾಂಗಣ, ಕೆಮಿಕಲ್ ಸೈನ್ಸ್ ಕಟ್ಟಡ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಸಿ.ವಿ. ರಾಮನ್ ರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 10.30

‘ದೇವಾಲಯ ಶಿಲ್ಪಗಳಲ್ಲಿ ಅಭಿಜಾತ ಕಾವ್ಯ’ ಉಪನ್ಯಾಸ: ಅರ್ಜುನ್ ಭಾರದ್ವಾಜ್, ‘ಭಾರತೀಯ ವಾಸ್ತು ಶಾಸ್ತ್ರದ ವೈಜ್ಞಾನಿಕತೆ’ ಉಪನ್ಯಾಸ: ಅಪ್ಪಣ್ಣ ಡಿ. ಸರದೇಶಪಾಂಡೆ, ಆಯೋಜನೆ ಮತ್ತು ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

‘ಲೋರ್ಕಾ 4 ನಾಟಕಗಳು’ ಪುಸ್ತಕ ಬಿಡುಗಡೆ: ಭಾಗವಹಿಸುವವರು: ನೆಲ್ಲುಕುಂಟೆ ವೆಂಕಟೇಶಯ್ಯ, ಅಚ್ಯುತ್ ಕುಮಾರ್, ವಿ.ಎಲ್. ನರಸಿಂಹಮೂರ್ತಿ, ಎಸ್. ಗಂಗಾಧರಯ್ಯ, ಆಯೋಜನೆ: ಜಿರುಂಡೆ ಪುಸ್ತಕ, ಸ್ಥಳ: ಬೀಟಲ್ ಬುಕ್ ಶಾಪ್, ಎಲ್.ಜೆ. ಆರ್ಕೆಡ್, ವಿಜಯನಗರ ಮೆಟ್ರೊ ನಿಲ್ದಾಣದ ಹತ್ತಿರ, ಬೆಳಿಗ್ಗೆ 11

ರಾಜ ಕಲಾ ವೈಭವ: ಆಯೋಜನೆ: ಕಲಾಭೂಮಿ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4

‘ನಾಡಪ್ರಭು ಕೆಂಪೇಗೌಡರ ಅಭಿವೃದ್ಧಿಯ ದೃಷ್ಟಿಕೋನ, ಬೆಂಗಳೂರು ನಗರಾಭಿವೃದ್ಧಿಯ ಸವಾಲು–ಸಾಧ್ಯತೆಗಳು’ ವಿಚಾರಸಂಕಿರಣ, ಪ್ರಶಸ್ತಿ ಪ್ರದಾನ: ಉದ್ಘಾಟನೆ: ನಿಶ್ಚಲಾನಂದನಾಥ ಸ್ವಾಮೀಜಿ, ಅಧ್ಯಕ್ಷತೆ: ಭಾಗ್ಯ ಕೃಷ್ಣಮೂರ್ತಿ, ವಿಚಾರ ಮಂಡನೆ: ಕೆ. ರಾಜಕುಮಾರ್, ಪ್ರಶಸ್ತಿ ಪ್ರದಾನ: ಟಿ. ತಿಮ್ಮೇಗೌಡ, ಉಪಸ್ಥಿತಿ: ಕೆ. ಪ್ರಶಾಂತ್, ಟಿ. ಸತೀಶ್ ಜವರೇಗೌಡ, ಸುರೇಶ್ ಜೀವನ್ಮುಖಿ, ಆಯೋಜನೆ: ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ, ಸ್ಥಳ: ಕುವೆಂಪು ಸಭಾಂಗಣ, ಮೂರನೇ ಮಹಡಿ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4.30

ಸ್ವರ–ಧಾರಾ: ಸರೋದ್: ದೇಬಸ್ಮಿತಾ ಭಟ್ಟಾಚಾರ್ಯ, ತಬಲಾ: ರಾಜೇಂದ್ರ ನಾಕೋಡ, ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಗಾಯನ: ವಿದುಲಾ ವೇಣುಗೋಪಾಲ್, ಕರ್ನಟಕ ಶಾಸ್ತ್ರೀಯ ಸಂಗೀತದ ಗಾಯನ: ವಿ. ಸಮೀಕ್ಷಾ ಕುಮಾರ, ಪಿಟೀಲು: ವರಲಕ್ಷ್ಮಿ, ಮೃದಂಗ: ರಘುನಂದನ ಭಾರ್ಗವ ವಿ., ತಬಲಾ: ಕೌಶಿಕ್ ಭಟ್ಟ, ಹಾರ್ಮೋನಿಯಂ: ಗೌರವ ಗಡಿಯಾರ, ತಾಳ: ಸಾತ್ವಿಕ್ ಹೆಗಡೆ, ಆಯೋಜನೆ: ಸಪ್ತಕ ಬೆಂಗಳೂರು, ಕಲಾನಂದನಂ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5.30

ಪ್ರಕಾಶ ಗರುಡ ಅವರ ‘ವಾರೆನ್ ಹೇಸ್ಟಿಂಗ್ಸ್‌ನ ಹೋರಿ’, ಎ.ಪಿ. ಮಾಲತಿ ಅವರ ‘ಬೆಳ್ಳಿ ಚುಕ್ಕಿ’, ಎಂ.ವಿ. ನಾಗರಾಜರಾವ್ ಅವರ ‘ಷರ್ಲಾಕ್ ಹೋಮ್ಸ್ ಸಾಹಸಗಳು’, ‘ಕೆಂಪು ತಲೆಗೂದಲಿನ ರಹಸ್ಯ’, ಸಂಪಟೂರು ವಿಶ್ವನಾಥ್ ಅವರ ‘ಶ್ರೀ ಕೃಷ್ಣನ ಕಥೆ’, ಪುಸ್ತಕಗಳ ಬಿಡುಗಡೆ: ಬಿ.ಆರ್. ಲಕ್ಷ್ಮಣರಾವ್, ಅತಿಥಿಗಳು: ನಾ. ದಾಮೋದರ ಶೆಟ್ಟಿ, ಎನ್.ಎಸ್. ಶ್ರೀಧರಮೂರ್ತಿ, ಆಯೋಜನೆ: ಅಂಕಿತ ಪುಸ್ತಕ, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಮೂರನೇ ಮುಖ್ಯರಸ್ತೆ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30



ಬಿ.ಆರ್. ಲಕ್ಷ್ಮಣರಾವ್

87ನೇ ಶ್ರೀ ರಾಮನವಮಿ ಸಂಗೀತೋತ್ಸವ: ವರದಾ ಕುಲಕರ್ಣಿ ಮತ್ತು ತಂಡ, ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಅಭಿಷೇಕ ರಘುರಾಮ್, ಎಚ್.ಎನ್. ಭಾಸ್ಕರ್, ಅರ್ಜುನ್ ಕುಮಾರ್, ಕೃಷ್ಣ ಕುಮಾರ್, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5

‘ನಾ ಸತ್ತಿಲ್ಲ’ ನಾಟಕ ಪ್ರದರ್ಶನ: ರಚನೆ: ಕೃಷ್ಣ ಕೊಲ್ಹಾರ ಕುಲಕರ್ಣಿ, ನಿರ್ದೇಶನ: ಕೃಷ್ಣ ಕುಲಕರ್ಣಿ, ನಿರ್ವಹಣೆ: ಆರ್. ನರೇಂದ್ರ ಬಾಬು, ಆಯೋಜನೆ: ಕರ್ನಾಟಕ ಎಂಜಿನಿಯರ್ಸ್ ಅಕಾಡೆಮಿ, ಕನ್ನಡ ಕಲಾ ಸಂಘ, ಟಿ.ಬಿ. ಡ್ಯಾಂ ಹೊಸಪೇಟೆ, ಸ್ಥಳ: ಕೆ.ಇ.ಎ ಪ್ರಭಾತ್ ರಂಗಮಂದಿರ, ಕರ್ನಾಟಕ ಎಂಜಿನಿಯರ್ಸ್ ಅಕಾಡೆಮಿ, ಕಮಲಾನಗರ, ಸಂಜೆ 5.30ರಿಂದ

‘ಹಾರ್ಟ್ ಲ್ಯಾಂಪ್’ ಪುಸ್ತಕದ ಕುರಿತು ಮಾತುಕತೆ: ಭಾಗವಹಿಸುವವರು: ಬಾನು ಮುಷ್ತಾಕ್, ದೀಪಾ ಭಸ್ತಿ, ಶೈನಿ ಆ್ಯಂಟನಿ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ, ನಾಲ್ಕನೇ ಮುಖ್ಯರಸ್ತೆ, ಎರಡನೇ ಹಂತ, ದೊಮ್ಮಲೂರು, ಸಂಜೆ 6ರಿಂದ

‘ಮಾವ ಮಾವ ಕಥೆ ಕೇಳ’ ನಾಟಕ ಪ್ರದರ್ಶನ: ನಿರ್ದೇಶನ: ವಿಜಯ್ ಕಶ್ಯಪ್, ಆಯೋಜನೆ: ರಂಗರಸಧಾರೆ, ಸ್ಥಳ: ಡಾ.ಸಿ. ಅಶ್ವತ್ಥ್ ಕಲಾಭವನ, ಎನ್.ಆರ್. ಕಾಲೊನಿ, ಬಸವನಗುಡಿ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಈ ಮಳೆಗಾಲದಲ್ಲೇ ಲಕ್ಷಾಂತರ ಲೀಟರ್ ನೀರು ಇಂಗಿಸುವಿಕೆ • ಕಟ್ಟಡ ಅಭಿವೃದ್ಧಿಗೂ ಚಾಲನೆ

ಬಿಬಿಎಂಪಿ ಶಾಲೆಗಳಲ್ಲಿ ಇಂಗುಗುಂಡಿ

• ಆರ್. ಮಂಜುನಾಥ್

ಬೆಂಗಳೂರು: ಶಾಲೆಗಳ ಆವರಣದಲ್ಲಿ ಮಳೆ ನೀರನ್ನು ಹಿಡಿದಿಟ್ಟುಕೊಂಡು, ಇಂಗಿಸಲು ಬಿಬಿಎಂಪಿ ಕಾರ್ಯಗತವಾಗಿದೆ. ಈ ವರ್ಷದ ಮಳೆಗಾಲದಲ್ಲೇ ಲಕ್ಷಾಂತರ ಲೀಟರ್ ನೀರು ಭೂಮಿಗೆ ಇಳಿಯಲಿದೆ.

ಬಿಬಿಎಂಪಿಯ ಪಶ್ಚಿಮ ಹಾಗೂ ದಕ್ಷಿಣ ವಲಯದ ಶಾಲೆಗಳ ನವೀಕರಣ ಹಾಗೂ ಉನ್ನತೀಕರಣ ಕಾಮಗಾರಿಗಳು ನಡೆಯುತ್ತಿದ್ದು, ಇದರ ಜೊತೆಗೆ ಮಳೆ ನೀರು ಇಂಗಿಸಲು ಗುಂಡಿಗಳನ್ನು ನಿರ್ಮಿಸಲಾಗುತ್ತಿದೆ.

ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಅಂತಿಮಗೊಳಿಸಲಾಗಿದ್ದು, ಬೇಸಿಗೆ ರಜೆ ನಂತರ ಶಾಲೆಗಳು ಆರಂಭವಾಗುವ ಮುನ್ನ ಎಲ್ಲ ಕೆಲಸಗಳನ್ನೂ ಪೂರ್ಣಗೊಳಿಸಲು ಯೋಜಿಸಲಾಗಿದೆ. ಆದರೆ, ಕೆಲವು ನಿರ್ಮಾಣ ಕಾಮಗಾರಿಗಳಿಗೆ ಆರು ತಿಂಗಳು ಗಡುವು ನೀಡಲಾಗಿದೆ. ಆದರೆ, ಮಳೆಗಾಲಕ್ಕೆ ಮುನ್ನವೇ ಇಂಗು ಗುಂಡಿಗಳನ್ನು ನಿರ್ಮಿಸಲು ನಿರ್ಧರಿಸಲಾಗಿದೆ.

ಮಕ್ಕಳಿಗೆ ಮತ್ತು ಪೋಷಕರಿಗೆ ಶಾಲಾ ಆವರಣದಲ್ಲಿ ಕುಳಿತುಕೊಳ್ಳಲು, ನಡೆದಾಡಲು ವಿಶೇಷ ವಿನ್ಯಾಸದ ಮಾದರಿಗಳನ್ನು ರಚಿಸಲಾಗಿದೆ. ಶಾಲೆಯ ಆವರಣದಲ್ಲೇ ಉದ್ಯಾನ, ಆಟಿಕೆ ಅಳವಡಿಕೆ, ಚಾವಣಿ ಮೇಲೆ ಗಿಡಗಳನ್ನು ಬೆಳೆಸುವ ವಿನ್ಯಾಸ, ಶಾಲೆಯ ಪ್ರವೇಶದ್ವಾರವನ್ನು ಆಕರ್ಷಕಗೊಳಿಸಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಉನ್ನತೀಕರಿಸುವ ಮಾದರಿಗಳನ್ನೂ ರಚಿಸಲಾಗಿದೆ. ಆದರೆ, ಅಷ್ಟೊಂದು ವೆಚ್ಚ ಮಾಡಲು ಹಣಕಾಸಿನ ಕೊರತೆ ಇರುವುದರಿಂದ, ಬಿಡುಗಡೆಯಾಗಿರುವ ಹಣದಲ್ಲೇ ಎಲ್ಲವನ್ನೂ ನಿರ್ವಹಿಸಲಾಗುತ್ತಿದೆ.

ಪಶ್ಚಿಮ ವಲಯದ 18 ಶಾಲೆಗಳಲ್ಲಿ ಇಂಗುಗುಂಡಿ ಸೌಲಭ್ಯ ಸೇರಿದಂತೆ ಅಭಿವೃದ್ಧಿ ಕಾಮಗಾರಿಗಳನ್ನು ₹3.35 ಕೋಟಿ ವೆಚ್ಚದಲ್ಲಿ ಕೈಗೊಳ್ಳಲಾಗಿದೆ. ದಕ್ಷಿಣ ವಲಯದ 11 ಶಾಲೆಗಳಿಗೆ ₹1.45 ಕೋಟಿ ವೆಚ್ಚ ಮಾಡಲಾಗುತ್ತಿದೆ.

'ಬಿಬಿಎಂಪಿಯ ಯೋಜನಾ ವಿಭಾಗದಿಂದ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಶಾಲೆಗಳ ಕಟ್ಟಡಗಳ ಅಭಿವೃದ್ಧಿ, ನವೀಕರಣ ಸೇರಿದಂತೆ ಕಳೆಗುಂದಿರುವ ಪ್ರದೇಶಗಳಿಗೆ ಹೊಸ ನೋಟ ನೀಡಲಾಗುತ್ತಿದೆ. ಮಳೆ ನೀರು ಇಂಗಲು ವ್ಯವಸ್ಥೆ ಮಾಡಲಾಗುತ್ತಿದ್ದು, ಶಾಲೆಗಳ ಆವರಣದಲ್ಲಿ ಎಲ್ಲಿ ಇಳಿಜಾರು ಇರುತ್ತದೋ ಅಲ್ಲಿ ಇಂಗುಗುಂಡಿ ನಿರ್ಮಿಸಲಾಗುತ್ತದೆ. ಶಾಲೆಯ ಆವರಣದ ವಿಸ್ತೀರ್ಣ ಹಾಗೂ ಮಳೆ ನೀರು ಹರಿಯುವ ಪ್ರಮಾಣವನ್ನು ಆಧರಿಸಿ ಇಂಗುಗುಂಡಿಯ ಆಳವನ್ನು ನಿರ್ಧರಿಸಲಾಗುತ್ತಿದೆ' ಎಂದು ದಕ್ಷಿಣ ವಲಯದ ಯೋಜನಾ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಮಹಾಂತೇಶ್ ಮಾಹಿತಿ ನೀಡಿದರು.

30 ಶಾಲೆಗಳಲ್ಲಿ ಇಂಗುಗುಂಡಿ ನಿರ್ಮಾಣ | **12** ದಕ್ಷಿಣ ವಲಯದ ಶಾಲೆಗಳು | **18** ಪಶ್ಚಿಮ ವಲಯದ ಶಾಲೆಗಳು



ಅಂತರರಾಷ್ಟ್ರೀಯ ಮಟ್ಟದಲ್ಲಿ ಶಾಲೆಯ ಆವರಣವನ್ನು ರೂಪಿಸಲು ರಚಿಸಲಾಗಿರುವ ಮಾದರಿ

2.4 ಮೀಟರ್ ಪ್ರತಿ ಇಂಗುಗುಂಡಿಯ ಸುತ್ತಳತೆ

₹50 ಸಾವಿರ ಒಂದು ಇಂಗು ಗುಂಡಿ ನಿರ್ಮಾಣದ ವೆಚ್ಚ

3,000 ಲೀಟರ್ ಒಂದು ಇಂಗುಗುಂಡಿ ಒಂದು ಬಾರಿ ಮಳೆನೀರು ಹಿಡಿದಿರುವ ಸಾಮರ್ಥ್ಯ

4.5 ಮೀಟರ್ ಪ್ರತಿ ಇಂಗುಗುಂಡಿಯ ಆಳ

'ಅಂತರ್ಜಲ ವೃದ್ಧಿಗೆ ಪ್ರಯತ್ನ'

'ಶಾಲೆಗಳ ಆವರಣದಲ್ಲಿ ಲಭ್ಯವಿರುವ ಜಾಗಕ್ಕೆ ಅನುಗುಣವಾಗಿ ಇಂಗು-ಗುಂಡಿಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಇಷ್ಟೇ ನೀರು ಇಂಗಲಿದೆ ಎಂಬುದನ್ನು ಮಾಪನ ಮಾಡುವ ಸಾಧನಗಳನ್ನು ಅಳವಡಿಸುತ್ತಿಲ್ಲ. ಆದ್ದರಿಂದ, ಪ್ರಮಾಣವನ್ನು ಹೇಳಲಾಗದು. ಮಳೆ ನೀರನ್ನು ಇಂಗಿಸಿ, ಅಂತರ್ಜಲ ಮಟ್ಟವನ್ನು ವೃದ್ಧಿಸಲು ಶಾಲೆಗಳ ಆವರಣದಲ್ಲಿ ಸಣ್ಣ ಪ್ರಯತ್ನ ಮಾಡಲಾಗುತ್ತಿದೆ' ಎಂದು ಬಿಬಿಎಂಪಿ ಶಿಕ್ಷಣ ವಿಭಾಗ ವಿಶೇಷ ಆಯುಕ್ತ ಪ್ರೀತಿ ಗೆಹ್ಲೋಟ್ ತಿಳಿಸಿದರು.

ಪ್ರೀತಿ ಗೆಹ್ಲೋಟ್

'ಸುರಕ್ಷಿತ ಚಾಲನೆಗಾಗಿ ಲೋಕೊ ಪೈಲಟ್‌ಗಳ ಉಸಿರು ಪರೀಕ್ಷೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರೈಲುಗಳ ಲೋಕೊ ಪೈಲಟ್ (ಚಾಲಕರು) ಮತ್ತು ರೈಲು ನಿರ್ವಾಹಕರು ಮತ್ತು ರೈಲು ಸಹಾಯಕ ಸಿಬ್ಬಂದಿ ಮಾದಕ ದ್ರವ್ಯ ಸೇವಿಸಿ ಕಾರ್ಯನಿರ್ವಹಿಸಬಾರದು. ಆರೋಗ್ಯ ಸರಿ ಇಲ್ಲದಾಗ ಕೆಲಸ ಮಾಡಬಾರದು ಎಂಬ ಕಾರಣಕ್ಕೆ ಕರ್ತವ್ಯಕ್ಕೆ ಹಾಜರಾಗುವ ಮೊದಲು ಉಸಿರು ತಪಾಸಣೆಯನ್ನು ಮಾಡಲಾಗುತ್ತಿದೆ' ಎಂದು ಬೆಂಗಳೂರು ವಿಭಾಗೀಯ ಎಲೆಕ್ಟ್ರಿಕಲ್ ಎಂಜಿನಿಯರ್ (ಟ್ರ್ಯಾಕ್ಸನ್ ಆಪರೇಶನ್) ಶಿವನಂಜಪ್ಪ ತಿಳಿಸಿದ್ದಾರೆ.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ಶನಿವಾರ ಸುದ್ದಿಗಾರರಿಗೆ ಅವರು ಮಾಹಿತಿ ನೀಡಿದರು.

ಮನುಷ್ಯನ ತಪ್ಪಿನಿಂದ ರೈಲಿನಲ್ಲಿ ಯಾವುದೇ ಅವಘಡ ಉಂಟಾಗ ಬಾರದು ಎಂಬ ಕಾರಣಕ್ಕೆ ಸಿಬ್ಬಂದಿಯ ಸುರಕ್ಷತೆಗೆ ಹೆಚ್ಚಿನ ಗಮನ ಕೊಡಲಾಗುತ್ತಿದೆ. ಯಾವುದೇ ರೈಲಿಗೆ ಲೋಕೊಪೈಲಟ್ ಮತ್ತು ಭದ್ರತಾ ಸಿಬ್ಬಂದಿಯನ್ನು ನಿಯೋಜಿಸುವ 16 ತಾಸುಗಳ ಮೊದಲು ಮಾಹಿತಿ ನೀಡಲಾಗುತ್ತದೆ. ಪ್ರತಿ ವಾರಕ್ಕೆ ಕನಿಷ್ಠ 30 ತಾಸು ವಿಶ್ರಾಂತಿ ನೀಡಲಾಗುತ್ತದೆ. ಪ್ರತಿ ಬಾರಿ ಕರ್ತವ್ಯಕ್ಕೆ ಹಾಜರಾಗುವಾಗ 'ಸಂಯೋಜಿತ ಲಾಬಿ'ಯಲ್ಲಿ ಬೆರಳಚ್ಚು ನೀಡಿ, ಉಸಿರು ತಪಾಸಣೆ ನಂತರ ಅವರ ಫೋಟೊವನ್ನು ಕಂಪ್ಯೂಟರ್ ಸೆರೆ ಹಿಡಿಯುತ್ತದೆ. ತಾಂತ್ರಿಕ ಸುತ್ತೋಲೆ ಓದಿದ ಮೇಲಷ್ಟೇ ಕೆಲಸಕ್ಕೆ ಹಾಜರಾಗಬಹುದು. ಉಸಿರಿನಲ್ಲಿ ಶೇ 1ರಷ್ಟು ತೊಂದರೆ ಇದ್ದರೂ ಸೈನ್ ಇನ್ ಆಗುವುದಿಲ್ಲ ಎಂದು ತಿಳಿಸಿದರು.

ರೈಲು ಸಂಚಾರ ಸಿಬ್ಬಂದಿಗೆ ಪ್ರಮುಖ ರೈಲು ನಿಲ್ದಾಣಗಳಲ್ಲಿ ವಿಶ್ರಾಂತಿ ಕೊಠಡಿಗಳನ್ನು ನಿರ್ಮಿಸಲಾಗಿದೆ. ಮೂಲ ನಿಲ್ದಾಣದಿಂದ ದೂರ ಇರುವ ನಿಲ್ದಾಣಗಳಲ್ಲಿ ಹವಾನಿಯಂತ್ರಿತ ಕೊಠಡಿಗಳಲ್ಲಿ ಕನಿಷ್ಠ 8 ಗಂಟೆ ವಿಶ್ರಾಂತಿ ತೆಗೆದುಕೊಳ್ಳಬಹುದು. ರಿಯಾಯಿತಿ ದರದಲ್ಲಿ ಪೌಷ್ಟಿಕ ಆಹಾರ ಒದಗಿಸಲಾಗುತ್ತದೆ. ಯೋಗ, ವ್ಯಾಯಾಮ ಕೊಠಡಿಗಳು, ಚೆಸ್, ಕೇರಂನಂಥ ಒಳಾಂಗಣ ಆಟಕ್ಕೆ ಅವಕಾಶಗಳನ್ನು ನೀಡಲಾಗಿದೆ ಎಂದರು.

ಕೆ.ಎಸ್.ಆರ್ ಬೆಂಗಳೂರು, ಎಸ್.ಎಂ.ವಿ.ಟಿ ಬೆಂಗಳೂರು, ಯಶವಂತಪುರ ಮತ್ತು ಬಂಗಾರಪೇಟೆ ರೈಲು ನಿಲ್ದಾಣಗಳಲ್ಲಿ ಒಟ್ಟು 191 ವಸತಿ ಸೌಕರ್ಯಗಳ ಕೊಠಡಿಗಳಿವೆ. ಶುದ್ಧ ಕುಡಿಯುವ ನೀರು, ಕಾಲು ಮಸಾಜ್ ಮಾಡುವ ಮಷಿನ್, ವಸತಿ ಕಟ್ಟಡದ ನಡುವೆಯೇ ಉದ್ಯಾನಗಳೂ ಇವೆ ಎಂದು ವಿವರಿಸಿದರು.

ಸಾರ್ವಜನಿಕ ಸಂಪರ್ಕ ಅಧಿಕಾರಿ ಪ್ರಾಣೇಶ್ ಕೆ.ಎನ್. ಉಪಸ್ಥಿತರಿದ್ದರು.

ಬೆಂಗಳೂರು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ 'ಸಂಯೋಜಿತ ಸಿಬ್ಬಂದಿ ಲಾಬಿ' ಮಷಿನ್‌ನಲ್ಲಿ ಸೈನ್ ಇನ್ ಆಗುತ್ತಿರುವ ಲೋಕೊಪೈಲಟ್

ಕಾರ್ಯಕ್ರಮದಲ್ಲಿ ಪ್ರೆಸಿಡೆನ್ಸಿ ಸಮೂಹಶಿಕ್ಷಣ ಸಂಸ್ಥೆಯ ಪ್ರಿನ್ಸಿ ಆಂಟೋನಿ ಅವರಿಗೆ ದೀರ್ಘ ಸೇವಾ ಪ್ರಶಸ್ತಿ ನೀಡಿ ಗೌರವಿಸಲಾಯಿತು

'ದಲಿತ ಸಿ.ಎಂ: ಸಮಯ ಬಂದಾಗ ಹೈಕಮಾಂಡ್ ನಿರ್ಧಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಲಿತ ಮುಖ್ಯಮಂತ್ರಿ ಬೇಡಿಕೆ ಮೊದಲಿನಿಂದಲೂ ಇದೆ. ಯಾವ ಸಮಯದಲ್ಲಿ, ಏನು ಮಾಡಬೇಕು ಎಂದು ಪಕ್ಷದ ಹೈಕಮಾಂಡ್ ನಿರ್ಧಾರ ಮಾಡುತ್ತದೆ ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.

ಮುನಿಯಪ್ಪ

ಸುದ್ದಿಗಾರರ ಜತೆ ಮಾತನಾಡಿದ ಅವರು, ಬೆಂಗಳೂರು ಗ್ರಾಮಾಂತರ ಭಾಗದ ರಸ್ತೆಗಳ ಅಭಿವೃದ್ಧಿ ಕುರಿತು ಚರ್ಚಿಸಲು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಮನೆಗೆ ಬಂದಿದ್ದರು. ಅಧಿಕಾರ ಬದಲಾವಣೆಯ ವಿಚಾರದ ಚರ್ಚೆ ನಡೆದಿಲ್ಲ. ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರಾಗಿ ಡಿ.ಕೆ. ಶಿವಕುಮಾರ್ ಇದ್ದಾರೆ. ಹೈಕಮಾಂಡ್ ಅವರಿಗೆ ಅವಕಾಶ ನೀಡಿದೆ. ಹಾಗಾಗಿ, ಬದಲಾವಣೆಯ ಚರ್ಚೆ ಅಪ್ರಸ್ತುತ ಎಂದು ಹೇಳಿದರು.

'ಸ್ವಾತಂತ್ರ್ಯ ನಂತರ ರಾಜ್ಯದಲ್ಲಿ ಪರಿಶಿಷ್ಟರಿಗೆ ಮುಖ್ಯಮಂತ್ರಿ ಸ್ಥಾನ ಸಿಕ್ಕಿಲ್ಲ ಎಂದು ನಮ್ಮ ಸಮಾಜದ ಸ್ವಾಮೀಜಿಗಳು ಹೇಳಿದ್ದಾರೆ. ಈ ಚರ್ಚೆ, ಬೇಡಿಕೆ ಹೊಸದಲ್ಲ. ಬಲಗೈ, ಎಡಗೈ ಎಂಬ ಭೇದವಿಲ್ಲ. ಎಲ್ಲರೂ ಸಹೋದರರೇ. ಧರ್ಮಸಿಂಗ್ ನಂತರ ಮಲ್ಲಿಕಾರ್ಜುನ ಖರ್ಗೆ ಮುಖ್ಯಮಂತ್ರಿಯಾಗಬೇಕು ಎಂದು ನಾನೇ ಹೇಳಿದ್ದೆ. 2013ರ ಚುನಾವಣೆಯಲ್ಲಿ ಸೋಲು ಕಂಡಿದ್ದರಿಂದ ಅಂದು ಕೆಪಿಸಿಸಿ ಅಧ್ಯಕ್ಷರಾಗಿದ್ದ ಜಿ. ಪರಮೇಶ್ವರ ಅವರಿಗೆ ಅವಕಾಶ ತಪ್ಪಿತ್ತು. ಸಾಮಾಜಿಕ ನ್ಯಾಯದ ಪ್ರಕಾರ ದಲಿತರಿಗೂ ಅವಕಾಶ ಸಿಗಬೇಕು. ಅಂತಹ ಸಮಯ ಬಂದಾಗ ವರಿಷ್ಠರು ನಿರ್ಧಾರ ಮಾಡುತ್ತಾರೆ' ಎಂದರು.

ಕ್ಯಾಪ್ಸಿಕಂ ಬೆಳೆ ನಾಶ

ಗೌರಿಬಿದನೂರು: ತಾಲ್ಲೂಕಿನಲ್ಲಿ ಶುಕ್ರವಾರ ರಾತ್ರಿ ಬಿದ್ದ ಅಕಾಲಿಕ ಮಳೆಗೆ ತೊಂಡೇಬಾವಿ ಗ್ರಾಮದ ತೋಟದಲ್ಲಿ ಬೆಳೆದಿದ್ದ ಒಂದು ಎಕರೆ ಕ್ಯಾಪ್ಸಿಕಂ ಸಂಪೂರ್ಣ ನಾಶವಾಗಿದೆ.

ಜೋರಾದ ಮಳೆಗೆ ನೆಟ್ ಕುಸಿದು ಬಿದ್ದಿದೆ. ₹5ಲಕ್ಷದಿಂದ ₹6ಲಕ್ಷದ ಬೆಳೆ ನಷ್ಟವಾಗಿದೆ ಎಂದು ರೈತ ವಿಜಯ್ ಕುಮಾರ್ ತಿಳಿಸಿದ್ದಾರೆ.

'ಪ್ರೆಸಿಡೆನ್ಸಿ' ಶಿಕ್ಷಕರಿಗೆ ಪ್ರಶಸ್ತಿ

ಯಲಹಂಕ: ಪ್ರೆಸಿಡೆನ್ಸಿ ಸಮೂಹ ಶಿಕ್ಷಣ ಸಂಸ್ಥೆಯ ಆಶ್ರಯದಲ್ಲಿ 'ಇನ್ಸ್ಪೈರ್ಡ್-2025 ಶಿಕ್ಷಕರ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಆಯೋಜಿಸಲಾಗಿತ್ತು.

ಪ್ರೆಸಿಡೆನ್ಸಿ ಶಿಕ್ಷಣ ಸಂಸ್ಥೆಗಳ ಅಂಗ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ 300 ಮಂದಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ 'ದೀರ್ಘ ಸೇವಾ, 'ಸಾಂಸ್ಥಿಕ ಪರಂಪರೆ ಹಾಗೂ 'ಅತ್ಯುತ್ತಮ ಶಿಕ್ಷಕ ವಿಭಾಗಗಳಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಈ ವೇಳೆ ಮಾತನಾಡಿದ ನಿವೃತ್ತ ಐಪಿಎಸ್ ಅಧಿಕಾರಿ ಸಂಜಯ್ ಸಹಾಯ್, ಯುವ ಮನಸ್ಸುಗಳನ್ನು ರೂಪಿಸುವಲ್ಲಿ ಮತ್ತು ಕಲಿಕೆಯ ಸಂಸ್ಕೃತಿಯನ್ನು ಬೆಳೆಸುವಲ್ಲಿ ಶಿಕ್ಷಕರ ಅಸಾಧಾರಣ ಕೊಡುಗೆ ಸ್ಮರಿಸಿ, ಪ್ರಶಸ್ತಿನೀಡಿ ಗೌರವಿಸಿರುವುದು ಶ್ಲಾಘನೀಯ ಎಂದರು.

ಪ್ರೆಸಿಡೆನ್ಸಿ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ನಿಸ್ಸಾರ್ ಅಹ್ಮದ್ ಮಾತನಾಡಿ, ಶಿಕ್ಷಣ ಕ್ಷೇತ್ರದಲ್ಲಿ ತಮ್ಮ ಐದು ದಶಕಗಳ ಪ್ರಯಾಣವನ್ನು ನೆನಪಿಸುತ್ತಾ, ಪ್ರೆಸಿಡೆನ್ಸಿ ಶಿಕ್ಷಣ ಸಂಸ್ಥೆಗಳಿಗೆ ಬರುವ ಪ್ರತಿಯೊಂದು ಮಗುವಿಗೂ ಗುಣಮಟ್ಟದ ಶಿಕ್ಷಣ ಒದಗಿಸುವ ತಮ್ಮ ಕನಸು, ಶಿಕ್ಷಕರ ಬದ್ಧತೆ, ಸಮರ್ಪಣಾ ಮನೋಭಾವ ಮತ್ತು ನಿಸ್ವಾರ್ಥ ಸೇವೆಯಿಂದ ಮಾತ್ರ ನನಸಾಗಲು ಸಾಧ್ಯ; ಮುಂಬರುವ ವರ್ಷಗಳಲ್ಲಿ ವಿದ್ಯಾರ್ಥಿ ಸಮುದಾಯಕ್ಕೆ ಸೇವೆ ಸಲ್ಲಿಸುವ ಪರಂಪರೆಯನ್ನು ನಿರ್ಮಿಸಲು ತಂಡದ ಪ್ರತಿಯೊಬ್ಬ ಸದಸ್ಯರೂ ಕೊಡುಗೆ ನೀಡಬೇಕು ಎಂದರು.

ಲೇಖಕಿ ಅನಿತಾನಾಯರ್, ಟ್ರಸ್ಟಿ ಕೌಸರ್ ನಿಸ್ಸಾರ್ ಅಹ್ಮದ್, ನಿರ್ದೇಶಕಿ ಡಾ.ನಫೀಸಾ ಅಹ್ಮದ್ ಉಪಸ್ಥಿತರಿದ್ದರು.

ಅಂತರರಾಜ್ಯ ವಂಚಕರ ಬಂಧನ

ಸಾರ್ವಜನಿಕರ ಹೆಸರಲ್ಲಿ ಬ್ಯಾಂಕ್ ಖಾತೆ ತೆರೆದು ಅಪರಾಧ ಕೃತ್ಯಗಳಿಗೆ ಬಳಕೆ

ಪ್ರಜಾವಾಣಿ ವಾರ್ತೆ

ಕೋಲಾರ: ಕಮಿಷನ್ ಆಸೆ ತೋರಿಸಿ ಸಾರ್ವಜನಿಕರಿಗೆ ಹೆಸರಲ್ಲಿ ಬ್ಯಾಂಕ್ ಖಾತೆ ತೆರೆದು ಆನ್‌ಲೈನ್ ವಂಚನೆಗೆ ಬಳಸುತ್ತಿದ್ದ ಆಂಧ್ರ ಪ್ರದೇಶ ಮೂಲದ ಮೂವರು ಅಂತರರಾಜ್ಯ ವಂಚಕರನ್ನು ಕೋಲಾರ ಸೈಬರ್ ಅಪರಾಧ ಹಾಗೂ ಮಾದಕ ವಸ್ತುಗಳ ನಿಯಂತ್ರಣ ಠಾಣೆ (ಸೆನ್) ಪೊಲೀಸರು ಬಂಧಿಸಿದ್ದಾರೆ.

ಕೊಮ್ಮಿರಿ ರಾಜ್ ಕುಮಾರ್, ಕೋಡಾ ಸುರೇಶ್ ಅಲಿಯಾಸ್ ಅಖಿಲ್ ಹಾಗೂ ಶೇಖ್ ಅವೀದ್ ಬಾಷಾ ಎಂಬುವರನ್ನು ಬಂಧಿಸಿ, ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಸಾರ್ವಜನಿಕರೇ ಎಚ್ಚರ

'ಸೈಬರ್ ವಂಚಕರು ಹಣದ ಆಮಿಷ ತೋರಿಸಿ ತಮ್ಮ ಹೆಸರಿನಲ್ಲಿರುವ ಬ್ಯಾಂಕ್ ಖಾತೆಯ ಪಾಸ್ ಬುಕ್, ಎಟಿಎಂ ಕಾರ್ಡ್, ಚೆಕ್ ಬುಕ್ ಹಾಗೂ ಖಾತೆಗೆ ಲಿಂಕ್ ಮಾಡಿಸಿದ ಸಿಮ್ ಕಾರ್ಡ್‌ಗಳನ್ನು ತಮ್ಮಿಂದ ಪಡೆದು ತಮ್ಮ ಬ್ಯಾಂಕ್ ಖಾತೆ ಬಳಸಿ ಸುಲಿಗೆ ಮಾಡಿದ ಹಣವನ್ನು ದೋಚಿಕೊಂಡು ತಾವು ಜೈಲು ಸೇರುವಂತೆ ಮಾಡಿ ಸೈಬರ್ ಅಪರಾಧಿಗಳು ಪರಾರಿಯಾಗುತ್ತಿದ್ದಾರೆ' ಎಂದು ಸೆನ್ ಪೊಲೀಸರು ಎಚ್ಚರಿಸಿದ್ದಾರೆ.

ಆರೋಪಿಗಳಿಂದ 137 ವಿವಿಧ ಬ್ಯಾಂಕ್‌ಗಳ ಎಟಿಎಂ ಕಾರ್ಡ್, 21 ಬ್ಯಾಂಕ್ ಪಾಸ್ ಪುಸ್ತಕ, 10 ಚೆಕ್ ಬುಕ್, 3 ಸಿಮ್ ಕಾರ್ಡ್, ಕೃತ್ಯಕ್ಕೆ ಬಳಸಿದ ಮೂರು ಮೊಬೈಲ್ ಫೋನ್ ವಶಕ್ಕೆ ಪಡೆದಿದ್ದಾರೆ. ಮೂವರನ್ನೂ ತನಿಖೆಗೆ ಒಳಪಡಿಸಲಾಗಿದೆ.

ವಂಚನೆಗೆ ಬ್ಯಾಂಕ್ ಖಾತೆ ಬಳಕೆ: ನರಸಾಪುರ ಕೈಗಾರಿಕಾ ಪ್ರದೇಶ ಹಾಗೂ ಜಿಲ್ಲೆಯ ಇತರೆಡೆ ಈ ಮೂವರು, ಜನರಿಗೆ ಕಮಿಷನ್ ಆಸೆ ತೋರಿಸಿ ಸಾರ್ವಜನಿಕರಿಂದ ವಿವಿಧ ಬ್ಯಾಂಕ್‌ಗಳಲ್ಲಿ ಖಾತೆ ತೆರೆಸುತ್ತಿದ್ದರು. ನಂತರ ಸೈಬರ್ ವಂಚಕರೊಂದಿಗೆ ಕೈಜೋಡಿಸಿ ಈ ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾಯಿಸಿಕೊಳ್ಳುತ್ತಿದ್ದರು. ಖಾತೆದಾರರಿಗೆ ಹಣ ನೀಡಿ ಅವರ ಪಾಸ್ ಬುಕ್, ಸಿಮ್ ಕಾರ್ಡ್, ಎಟಿಎಂ ಕಾರ್ಡ್, ಚೆಕ್ ಬುಕ್ ಪಡೆದು ಕೊರಿಯರ್ ಮೂಲಕ ರಾಜಸ್ಥಾನ, ಕೋಲ್ಕತ್ತ, ಜೈಪುರ ಹಾಗೂ ದೇಶದ ಇತರ ಕಡೆಯ ವಂಚಕರಿಗೆ ಕಳಿಸುತ್ತಿದ್ದರು.

ಆನ್‌ಲೈನ್‌ನಲ್ಲಿ ಲಪಟಾಯಿಸಿದ ಹಣವನ್ನು ಈ ಖಾತೆಗಳಿಗೆ ವರ್ಗಾಯಿಸಿಕೊಳ್ಳುತ್ತಿದ್ದ ವಂಚಕರು ನಂತರ ಚೆಕ್ ಮತ್ತು ಎಟಿಎಂ ಕಾರ್ಡ್ ಬಳಸಿ ಖಾಲಿ ಮಾಡುತ್ತಿದ್ದರು.

ಚಿತ್ರಾವಳಿ

ವಿಜಯನಗರ ದಿನ ಪತ್ರಿಕಾ ವಿತರಕರ ಬಳಗದ ವತಿಯಿಂದ ಏರ್ಪಡಿಸಿದ್ದ ಶ್ರೀರಾಮನವಮಿಯ ಪ್ರಯುಕ್ತ ಭಕ್ತರಿಗೆ ಮಜ್ಜಿಗೆ, ಪಾನಕ, ಫಲಾಹಾರ ವಿತರಿಸಲಾಯಿತು. ಸ್ಥಳೀಯ ಶಾಸಕ ಎಂ.ಕೃಷ್ಣಪ್ಪ ಭಾಗವಹಿಸಿದ್ದರು

ನಗರದ 1ನೇ ಕರ್ನಾಟಕ ಬೆಟಾಲಿಯನ್ ಎನ್‌ಸಿಸಿ ಘಟಕವು ಭಾರತೀಯ ಕ್ರೀಡಾ ಪ್ರಾಧಿಕಾರದ ಶೂಟಿಂಗ್ ರೇಂಜ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೇಂದ್ರ ಯುವಜನ ಮತ್ತು ಕೀಡಾ ಖಾತೆ ರಾಜ್ಯ ಸಚಿವೆ ರಕ್ಷಾ ನಿಖಿಲ್ ಎನ್‌ಸಿಸಿ ಕೆಡೆಟ್‌ಗಳೊಂದಿಗೆ ಸಂವಾದ ನಡೆಸಿದರು. ಬೆಂಗಳೂರಿನ ಗ್ರೂಪ್ 'ಎ' ವಿಆರ್‌ಸಿ ಗ್ರೂಪ್ ಕಮಾಂಡರ್ ಕರ್ನಲ್ ರಾಜೇಶ್ ಸಾ ಸೇರಿದಂತೆ ಕರ್ನಾಟಕ ಮತ್ತು ಗೋವಾ ನಿರ್ದೇಶನಾಲಯದ ಎನ್‌ಸಿಸಿ ಕೆಡೆಟ್‌ಗಳು ಭಾಗವಹಿಸಿದ್ದರು

ಗಾಂಧಿ ಭವನ ಮತ್ತು ಶಿವರಾಮ ಕಾರಂತ ವೇದಿಕೆ ಸಂಯುಕ್ತ ಆಶ್ರಯದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಕ್ತಿ ಮತ್ತು ಸಾಹಿತ್ಯ ಕುರಿತು ಉಪನ್ಯಾಸ ನೀಡಿದ ಲಕ್ಷ್ಮೀಶ ತೋಳ್ಪಾಡಿ ಅವರನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಸನ್ಮಾನಿಸಿದರು. ವೇದಿಕೆ ಸಂಸ್ಥಾಪಕ ಚಂದ್ರಶೇಖರ ಚಡಗ, ವೇದಿಕೆ ಅಧ್ಯಕ್ಷೆ ದೀಪಾ ಫಡ್ಕೆ, ರಘು ಸೌಪರ್ಣಿಕಾ ಉಪಸ್ಥಿತರಿದ್ದರು

ಬೀದಿಬದಿ ವ್ಯಾಪಾರಿಗಳ ಒಕ್ಕೂಟಕ್ಕೆ ವೈಟ್‌ಫೀಲ್ಡ್‌ನ ಎಲ್‌ಎನ್‌ಟಿ ರಸ್ತೆಯಲ್ಲಿ ಚಾಲನೆ ನೀಡಲಾಯಿತು

'ಬೀದಿಬದಿ ವ್ಯಾಪಾರಿಗಳ ಒಕ್ಕಲೆಬ್ಬಿಸಿದರೆ ಹೋರಾಟ'

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಸ್ವಂತ ದುಡಿಮೆಯಿಂದ ಜೀವನ ಕಟ್ಟಿಕೊಂಡಿರುವ ಬೀದಿಬದಿ ವ್ಯಾಪಾರಿಗಳನ್ನು ಹಲವು ಖಾಸಗಿ ಕಂಪನಿಗಳು ಒಕ್ಕಲೆಬ್ಬಿಸಲು ಮುಂದಾಗಿರುವುದನ್ನು ಖಂಡಿಸುತ್ತೇವೆ' ಎಂದು ಭಾರತೀಯರ ಸೇವಾ ಸಮಿತಿ ರಾಷ್ಟ್ರೀಯ ಅಧ್ಯಕ್ಷ ಹೂಡಿ ರಾಮಚಂದ್ರ ತಿಳಿಸಿದರು.

ಕೆ.ಆರ್.ಪುರ ಸಮೀಪದ ವೈಟ್ ಫೀಲ್ಡ್‌ನಲ್ಲಿ ಭಾರತೀಯರ ಸೇವಾ ಸಮಿತಿ ಹಾಗೂ ಬೀದಿಬದಿ ವ್ಯಾಪಾರಿಗಳ ಒಕ್ಕೂಟದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಣೆ ಹಾಗೂ ಒಕ್ಕೂಟದ ನಾಮಫಲಕ ಉದ್ಘಾಟಿಸಿ ಅವರು ಮಾತನಾಡಿದರು.

'ಸುಪ್ರೀಂ ಕೋರ್ಟ್ ಆದೇಶದಂತೆ ಇಲ್ಲಿನ ಬೀದಿಬದಿ ವ್ಯಾಪಾರಿಗಳು ನ್ಯಾಯಯುತವಾಗಿ ಲೈಸೆನ್ಸ್ ಪಡೆದು ವ್ಯಾಪಾರ ನಡೆಸುತ್ತಿದ್ದಾರೆ. ಇದನ್ನು ಸಹಿಸದ ಹಲವು ಕಿಡಿಗೇಡಿಗಳು ಹಣದಾಸೆಯಿಂದ ಬೀದಿಬದಿ ವ್ಯಾಪಾರಿಗಳ ಮೇಲೆ ಒತ್ತಡ ಹೇರಿ, ಅಲ್ಲಿಂದ ಹೋಗಲು ಹೇಳುತ್ತಿದ್ದಾರೆ. ಇಂತಹ ಹುನ್ನಾರ ನಡೆಯುತ್ತಿರುವವರ ವಿರುದ್ಧ ಹೋರಾಟ ನಡೆಸಲಾಗುತ್ತದೆ' ಎಂದರು.

ಬಿಎಸ್‌ಎಸ್ ರಾಜ್ಯಾಧ್ಯಕ್ಷ ಚಿಂತಾಮಣಿ ಅಮರ್ ಮಾತನಾಡಿ, 'ಬೀದಿಬದಿ ವ್ಯಾಪಾರಿಗಳು ಬಹುತೇಕ ಬಡವರೆ ಆಗಿದ್ದು ಸ್ವಾಭಿಮಾನದಿಂದ ದುಡಿದು ಜೀವನ ಕಟ್ಟಿಕೊಂಡಿರುತ್ತಾರೆ. ಇವರ ರಕ್ಷಣೆ ನಮ್ಮ ಸಂಘಟನೆಯ ಹೊಣೆಯಾಗಿದೆ' ಎಂದರು.

ಬಿಎಸ್‌ಎಸ್ ಕಾರ್ಮಿಕ ಘಟಕದ ರಾಜ್ಯಾಧ್ಯಕ್ಷ ಆಂಜಿನಪ್ಪ ಯಾದವ್, ವಕೀಲರಾದ ವಿಕ್ರಮ್ ಮುಖಂಡರಾದ ಶ್ರೀನಿವಾಸ್ ರೆಡ್ಡಿ, ಮುನಿರಾಜು, ಕೃಷ್ಣಪ್ಪ, ನಾರಾಯಣಸ್ವಾಮಿ ಉಪಸ್ಥಿತರಿದ್ದರು.

'ಸೇವಾ ಮನೋಭಾವನೆ ಎನ್‌ಎಸ್‌ಎಸ್ ಸಹಕಾರಿ'

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಎನ್‌ಎಸ್‌ಎಸ್ ಶಿಬಿರದಲ್ಲಿ ಭಾಗವಹಿಸುವದರಿಂದ ಶಿಸ್ತು, ಸಮಯಪ್ರಜ್ಞೆ, ನಾಯಕತ್ವ ಗುಣಗಳ ಜೊತೆಗೆ ಸೇವಾ ಮನೋಭಾವನೆಯನ್ನು ಬೆಳೆಸಿಕೊಳ್ಳಲು ಸಹಾಯ ಆಗುತ್ತದೆ ಎಂದು ಶ್ರೀವೆಂಕಟೇಶ್ವರ ವಿದ್ಯಾಸಂಸ್ಥೆಯ ಸಂಸ್ಥಾಪಕರಾದ ಕೆ.ವಿ. ಮುನಿಸ್ವಾಮಿ ಅಭಿಪ್ರಾಯಪಟ್ಟರು.

ಕೆ.ಆರ್.ಪುರ ಸಮೀಪದ ಇಟ್ಟಸಂದ್ರ ಗ್ರಾಮದಲ್ಲಿ ಶ್ರೀವೆಂಕಟೇಶ್ವರ ಪದವಿ ಕಾಲೇಜಿನಿಂದ ಹಮ್ಮಿಕೊಂಡಿದ್ದ ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಸಂಸ್ಥೆಯ ಆಡಳಿತ ಅಧಿಕಾರಿ ಡಾ.ಪುಟ್ಟರಾಜು, ವ್ಯವಸ್ಥಾಪಕ ನಿರ್ದೇಶಕ ವಿ.ಎಂ ರವಿ, ಶಿಬಿರದ ಅಧಿಕಾರಿ ಚಂದ್ರಯ್ಯ, ಪ್ರಾಂಶುಪಾಲ ಪ್ರಕಾಶ್ ಜಿ. ಇ., ಇಟ್ಟಸಂದ್ರ ಗ್ರಾ.ಪಂ. ಅಧ್ಯಕ್ಷೆ ರೂಪ ಚನ್ನಕೇಶವ, ಸದಸ್ಯರಾದ ಬಿಂದು ದೇವೇಗೌಡ ಇದ್ದರು.

ಡಾ.ಕೆ.ವಿ.ಮುನಿಸ್ವಾಮಿ ಅವರು ಶಿಬಿರ ಉದ್ಘಾಟಿಸಿದರು. ಡಾ.ಪುಟ್ಟರಾಜು, ವಿ.ಎಂ. ರವಿ ಎನ್‌ಎಸ್‌ಎಸ್ ಶಿಬಿರ ಅಧಿಕಾರಿ ಚಂದ್ರಯ್ಯ, ಕಾಲೇಜಿನ ಪ್ರಾಂಶುಪಾಲ ಡಾ.ಪ್ರಕಾಶ್ ಜಿ.ಇ., ಇದ್ದರು

ಭಯೋತ್ಪಾದಕ ಜಾಲ ಭೇದಿಸಿ, 13 ಜನರ ಬಂಧನ

ಚಂಡೀಗಢ (ಪಿಟಿಐ): ವಿದೇಶಗಳಿಂದ ನಡೆಸಲಾಗುತ್ತಿದ್ದ ಐಎಸ್‌ಐ ಬೆಂಬಲಿತ ಎರಡು ಖಾಲಿಸ್ತಾನಿ ಭಯೋತ್ಪಾದಕ ತರಬೇತಿ ಜಾಲಗಳನ್ನು (ಟೆರರ್ ಮಾಡ್ಯೂಲ್‌ಗಳನ್ನು) ಭೇದಿಸಿ, 13 ಜನರನ್ನು ಬಂಧಿಸಿರುವುದಾಗಿ ಪಂಜಾಬ್ ಪೊಲೀಸರು ಶನಿವಾರ ಹೇಳಿದ್ದಾರೆ.

ಬಂಧಿತರಿಂದ ಅಪಾರ ಪ್ರಮಾಣದ ಸ್ಫೋಟಕಗಳು ಮತ್ತು ಆರ್‌ಡಿಎಕ್ಸ್ ಸೇರಿದಂತೆ ಇತರ ಯುದ್ಧ ಸಾಮಗ್ರಿಗಳನ್ನು ವಶಕ್ಕೆ ಪಡೆದಿರುವುದಾಗಿ ಅವರು ಮಾಹಿತಿ ನೀಡಿದ್ದಾರೆ.

ಮೊದಲ ಭಯೋತ್ಪಾದಕ ಜಾಲವನ್ನು ಫ್ರಾನ್ಸ್ ಮೂಲದ ಸತ್ನಂ ಸಿಂಗ್ ಅಲಿಯಾಸ್ ಸತ್ತಾ ಹಾಗೂ ಎರಡನೆಯದನ್ನು ಗ್ರೀಸ್ ಮೂಲದ ಜಸ್ವಿಂದರ್ ಅಲಿಯಾಸ್ ಮನ್ನು ಅಗ್ವಾನ್ ನಿರ್ವಹಿಸುತ್ತಿದ್ದರು ಎಂದು ಪೊಲೀಸ್ ಮಹಾನಿರ್ದೇಶಕ ಗೌರವ್ ಯಾದವ್ ತಿಳಿಸಿದ್ದಾರೆ.

ಈ ಜಾಲಗಳು ಪಾಕಿಸ್ತಾನದ ಗೂಢಚಾರ ಸಂಸ್ಥೆ ಐಎಸ್‌ಐ ಬೆಂಬಲಿತವಾಗಿದ್ದವು ಎಂದಿದ್ದಾರೆ.

ಪಟ್ಟಲಮ್ಮ ದೇವಿ ಜಾತ್ರೆ ಸಕಲ ಸಿದ್ಧತೆಗೆ ಸೂಚನೆ

ಬೆಂಗಳೂರು: ಪಟ್ಟಲಮ್ಮ ದೇವಿಯ ಜಾತ್ರೆ, ಊರ ಹಬ್ಬದ ಅಂಗವಾಗಿ ಜಯನಗರ ಕಮ್ಯೂನಿಟಿ ಸೆಂಟರ್ ವಿದ್ಯಾಸಂಸ್ಥೆಯಲ್ಲಿ ಸಚಿವ ರಾಮಲಿಂಗಾರೆಡ್ಡಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಶಾಸಕ ಉದಯ್ ಬಿ. ಗರುಡಾಚಾರ್ ನೇತೃತ್ವದಲ್ಲಿ ಪೂರ್ವಭಾವಿ ಸಭೆ ನಡೆಯಿತು.

ಸಭೆಯಲ್ಲಿ ಬಿಬಿಎಂಪಿ, ಪೊಲೀಸ್, ಬೆಸ್ಕಾಂ, ಬೆಂಗಳೂರು ಜಲಮಂಡಳಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಪಾಲ್ಗೊಂಡಿದ್ದರು. ಪಟ್ಟಲಮ್ಮ ದೇವಿ ದೇವಸ್ಥಾನ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಕೆ.ಎಂ. ನಾಗರಾಜ್ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಆರ್. ಅಶೋಕ ಮಾತನಾಡಿ, 'ನೂರಾರು ವರ್ಷಗಳಿಂದ ಕನಕನಪಾಳ್ಯ, ಸಿದ್ದಾಪುರ,ಬೈರಸಂದ್ರ, ನಾಗಸಂದ್ರ, ಯಡಿಯೂರು ಗ್ರಾಮಗಳು ಹಾಗೂ ಬಿಬಿಎಂಪಿ ವ್ಯಾಪ್ತಿಯ ನಾಗರೀಕರು ಶಕ್ತಿದೇವತೆ ಪಟ್ಟಲಮ್ಮ ದೇವಿ ಮಹೋತ್ಸವ ಆಚರಿಸಿಕೊಂಡು ಬರುತ್ತಿದ್ದಾರೆ. ಮೇ 5ರಿಂದ 7ರವರೆಗೆ ನಡೆಯುವ ದೇವಿಯ ಮಹೋತ್ಸವಕ್ಕೆ ಯಾವುದೇ ರೀತಿಯ ಅಡಚಣೆಗಳು ಆಗದಂತೆ ಅಧಿಕಾರಿಗಳು ಎಚ್ಚರಿಕೆ ವಹಿಸಬೇಕು. ವಿದ್ಯುತ್, ರಸ್ತೆ, ಚರಂಡಿ ಸ್ವಚ್ಛತೆ, ಕುಡಿಯುವ ನೀರಿನ ಸೌಲಭ್ಯ ಮೂರು ದಿನಗಳವರೆಗೆ ಪೂರೈಕೆ ಮಾಡಬೇಕು' ಎಂದು ಸಲಹೆ ನೀಡಿದರು.

ರಾಮಲಿಂಗಾರೆಡ್ಡಿ ಮಾತನಾಡಿ, 'ಪಟ್ಟಲಮ್ಮ ದೇವಿಯ ಉತ್ಸವದ ಸಂದರ್ಭದಲ್ಲಿ ಪೊಲೀಸ್ ಭದ್ರತೆ, ಆರತಿ ಹೊತ್ತು ಬರುವ ಸಾವಿರಾರು ಹೆಣ್ಣುಮಕ್ಕಳ ಸುರಕ್ಷತೆಗೆ ಕ್ರಮ ಕೈಗೊಳ್ಳಬೇಕು. ತುರ್ತು ಚಿಕಿತ್ಸೆಗೆ ಆಂಬುಲೆನ್ಸ್ ಸೇವೆ, ಅಲ್ಲಲ್ಲಿ ಸಂಚಾರಿ ಶೌಚಾಲಯಗಳನ್ನು ತೆರೆಯಬೇಕು' ಎಂದು ಅಧಿಕಾರಿಗಳಿಗೆ ಸೂಚಿಸಿದರು.

ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಧರೆಗುರುಳಿದ ಮರ

ಬಿರುಗಾಳಿ ಮಳೆ: ಪಾಲಿಹೌಸ್‌ಗೆ ಹಾನಿ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ತಾಲ್ಲೂಕಿನಲ್ಲಿ ಶುಕ್ರವಾರ ಸಂಜೆ ಬಿರುಗಾಳಿ ಸಹಿತ ಮಳೆ ಸುರಿಯಿತು. ತೂಬಗೆರೆ, ಸಾಸಲು ಹೋಬಳಿಗಳಲ್ಲಿ ಪಾಲಿಹೌಸ್ ಹಾಗೂ ತರಕಾರಿ ಬೆಳೆಗಳಿಗೆ ಹಾನಿಯಾಗಿದೆ. ಹಲವೆಡೆ ಮನೆಗಳಿಗೆ ನೀರು ನುಗ್ಗಿ ಜನರು ತೊಂದರೆಗೆ ಒಳಗಾದರು.

ತಾಲ್ಲೂಕಿನಲ್ಲಿ ಒಟ್ಟು 17.76 ಮಿ.ಮೀ ಮಳೆ ಸುರಿದಿದ್ದು, ತೂಬಗೆರೆ ಹೋಬಳಿಯಲ್ಲಿ 21.6 ಮಿ.ಮೀ, ಕಸಬಾ ಹೋಬಳಿಯಲ್ಲಿ 16.2 ಮಿ.ಮೀ, ದೊಡ್ಡಬೆಳವಂಗಲ ಹೋಬಳಿ 8.8 ಮೀಮೀ, ಮಧುರೆ ಹೋಬಳಿ 5.4 ಮಿ.ಮೀ ಹಾಗೂ ಸಾಸಲು ಹೋಬಳಿ ಹೆಚ್ಚು 36.8 ಮಿ.ಮೀ ಮಳೆಯಾಗಿದೆ.

ತುರುವನಹಳ್ಳಿ ಗ್ರಾಮದಲ್ಲಿ ರೈತ ವೀರಭದ್ರಪ್ಪ ಅವರ ಪಾಲಿಹೌಸ್‌ನ ಹೊದಿಕೆಗಳು ಬಿರುಗಾಳಿ ಸಹಿತ ಮಳೆಗೆ ಹಾರಿಹೋಗಿವೆ. ಇದರಿಂದ ಲಕ್ಷಾಂತರ ರೂಪಾಯಿ ನಷ್ಟವಾಗಿದೆ. ಪಾಲಿಹೌಸ್‌ನಲ್ಲಿ ಬೆಳೆದಿದ್ದ ಡಚ್ ರೋಸ್‌ಗೆ ನೀರು ಹರಿದು ಹಾನಿಯಾಗಿದೆ.

ಕೆಲವೆಡೆ ತರಕಾರಿ ಹಾಗೂ ಹೂವಿನ ಬೆಳೆಗಳಿಗೆ ಹೆಚ್ಚಿನ ಹಾನಿಯಾಗಿದೆ. ಮಳೆ ಕಾರಣ ವಿದ್ಯುತ್ ವ್ಯತ್ಯಯವಾಗಿ ಸಾರ್ವಜನಿಕರು ಪರದಾಡಿದರು.

ದೊಡ್ಡಬಳ್ಳಾಪುರ ತಾಲ್ಲೂಕಿನ ತುರುವನಹಳ್ಳಿಯ ರೈತ ವೀರಭದ್ರಪ್ಪ ಅವರ ಪಾಲಿಹೌಸ್‌ನ ಹೊದಿಕೆಗಳು ಬಿರುಗಾಳಿ ಸಹಿತ ಮಳೆಗೆ ಹಾರಿಹೋಗಿವೆ

ಭಾರಿ ಮಳೆ (ಆನೇಕಲ್ ವರದಿ): ತಾಲ್ಲೂಕಿನಾದ್ಯಂತ ಸುರಿದ ಭಾರಿ ಮಳೆ ಹಿನ್ನೆಲೆಯಲ್ಲಿ ವಿವಿಧೆಡೆ ಹಲವು ಮರಗಳು ಧರೆಗುರುಳಿವೆ. ಯಮರೆ ಸಮೀಪದಲ್ಲಿ ಮಳೆ ಮತ್ತು ಗಾಳಿಗೆ ಜಾಹೀರಾತು ಫಲಕ ನೆಲಕ್ಕುರುಳಿದ್ದರಿಂದ ರಸ್ತೆ ಸಂಚಾರ ಕೆಲ ಸಮಯ ಅಸ್ತವ್ಯಸ್ತವಾಗಿದೆ. ಇದರಿಂದಾಗಿ ಪಕ್ಕದ ಕಟ್ಟಡಕ್ಕೂ ಹಾನಿಯಾಗಿದೆ. ಗುಡ್ಡನಹಳ್ಳಿ ಕೆರೆ ಸಮೀಪ ಮರವೊಂದು ನೆಲಕಚ್ಚಿದೆ.

ಪಟ್ಟಣದ ಎಎಸ್‌ಬಿ ಮೈದಾನದ ಮುಂಭಾಗದಲ್ಲಿಯೂ ಮರವೊಂದು ಕೆಳಗೆ ಉರುಳಿದೆ.

ಶನಿವಾರ ಸಂಜೆ 4ಕ್ಕೆ ಪ್ರಾರಂಭವಾದ ಮಳೆ ಎರಡು ಗಂಟೆಗೂ ಹೆಚ್ಚು ಸಮಯ ಸುರಿಯಿತು. ರಾಷ್ಟ್ರೀಯ ಹೆದ್ದಾರಿ 44 ಚಂದಾಪುರ, ಹೆಬ್ಬಗೋಡಿ, ಅತ್ತಿಬೆಲೆಯಲ್ಲಿಯೂ ಭಾರಿ ಮಳೆ ಸುರಿಯಿತು.

ಕೆಂಗುಂಟೆಯಲ್ಲಿ ನಡೆದ ನಗರಸಭೆ ಮಾಜಿ ಉಪಾಧ್ಯಕ್ಷ ಮುನಿವೆಂಕಟಪ್ಪ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಜ್ಞಾನಭಾರತಿ ವಾರ್ಡ್‌ನ ಸಂಘ–ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಜಯರಾಮಯ್ಯ ಅವರು ಪೌರಕಾರ್ಮಿಕರಿಗೆ ಸೀರೆ, ಸಿಹಿ ವಿತರಿಸಿದರು. ಬೆಂಗಳೂರು ಕೇಂದ್ರ ಜಿಲ್ಲಾ ಬಿಜೆಪಿ ಎಸ್‌ಸಿ ಮೋರ್ಚಾ ಉಪಾಧ್ಯಕ್ಷ ಮಲ್ಲತ್ತಹಳ್ಳಿ ಎಂ.ಮಂಜುನಾಥ್, ಶಿವಶಂಕರ ಉಪಸ್ಥಿತರಿದ್ದರು

ಚಿತ್ರ: ಭಾವು ಪತ್ತಾರ್

ಅರ್ಜಿಗಳ ವಿಲೇವಾರಿ ಮಾರ್ಚ್ 28 ರ ಮಾಹಿತಿಯಂತೆ

14,23,863	4,16,389	9,77,983
ಸಲ್ಲಿಕೆಯಾದ ಅರ್ಜಿಗಳು	ಜಿಲ್ಲಾಧಿಕಾರಿಯಿಂದ ತಿರಸ್ಕೃತ	ತಹಶೀಲ್ದಾರರಿಂದ ತಿರಸ್ಕರಿಸಲು ಪ್ರಸ್ತಾವನೆ

ಲಕ್ಷ ಲಕ್ಷ ಅರ್ಜಿ ವಜಾ ಏಕೆ?

ಒಂದನೇ ಪುಟದಿಂದ...

ಸರ್ಕಾರಿ ಜಮೀನು ಒತ್ತುವರಿ ತೆರವಿಗೆ ಸಂಬಂಧಿಸಿದಂತೆ ಸಾಕಷ್ಟು ಪ್ರಕರಣಗಳಲ್ಲಿ ನಮೂನೆ 50, 53 ಮತ್ತು 57 ರ ಅರ್ಜಿಗಳು ಭಾರಿ ಪ್ರಮಾಣದಲ್ಲಿ ಇತ್ಯರ್ಥಗೊಳ್ಳದೇ ಉಳಿದ ಕಾರಣ 2020 ರಲ್ಲಿ ಕರ್ನಾಟಕ ಹೈಕೋರ್ಟ್, ಬಗರ್‌ಹುಕುಂ ಸಮಿತಿಗಳ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿತ್ತು ಮತ್ತು ಇದನ್ನು ಗಂಭೀರವಾಗಿ ಪರಿಗಣಿಸಿತ್ತು. ಇದರ ಹಿನ್ನೆಲೆಯಲ್ಲಿ ಸುತ್ತೋಲೆ ಹೊರಡಿಸಿ ಕಂದಾಯ ಇಲಾಖೆ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ನಿರ್ಬಂಧಿತ ಅಂತರದಲ್ಲಿ ಬರುವ ಜಮೀನಿನ ಅನಧಿಕೃತ ಸಾಗುವಳಿ ಸಕ್ರಮಗೊಳಿಸುವುದನ್ನು ನಿರ್ಬಂಧಗೊಳಿಸಿತು. ಅಲ್ಲದೇ, 94-ಬಿ, 94-ಎ(4) ಅಡಿ ಸ್ವೀಕೃತಗೊಂಡ ಅರ್ಜಿಗಳ ಪೈಕಿ ಅನರ್ಹ ಅರ್ಜಿಗಳನ್ನು ತಿರಸ್ಕರಿಸಲು ಕರ್ನಾಟಕ ಭೂಕಂದಾಯ ನಿಯಮಗಳು, 1969 ರ ನಿಯಮ 108 ಸಿಸಿ ಮತ್ತು 108 ಸಿಸಿಸಿ ತಿದ್ದುಪಡಿ ತಂದು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಯಿತು.

ಈ ಹಿನ್ನೆಲೆಯಲ್ಲಿ ನಮೂನೆ 50, 53, ಮತ್ತು 57 ರ ಅಡಿ ಸಲ್ಲಿಕೆಯಾದ ಎಲ್ಲ ಅರ್ಜಿಗಳನ್ನು ಶೀಘ್ರವಾಗಿ ಮತ್ತು ಕಾಲಮಿತಿಯಲ್ಲಿ ವಿಲೇವಾರಿ ಮಾಡಬೇಕು ಮತ್ತು ಜಿಲ್ಲಾಧಿಕಾರಿಗಳು ಅನರ್ಹ ಅರ್ಜಿಗಳನ್ನು ಕೂಡಲೇ ತಿರಸ್ಕರಿಸಿ ಅರ್ಜಿಯಲ್ಲಿ ಕೋರಿರುವ ಜಮೀನನ್ನು ಸರ್ಕಾರದ ಸ್ವಾದೀನಕ್ಕೆ ತೆಗೆದುಕೊಳ್ಳಬೇಕು ಎಂದು ಕಂದಾಯ ಇಲಾಖೆಯ ಸುತ್ತೋಲೆಯಲ್ಲಿ ಸ್ಪಷ್ಟವಾಗಿ ತಿಳಿಸಿದೆ.

‘ರೈತರು ಅಕ್ರಮ- ಸಕ್ರಮ ಯೋಜನೆಯಡಿ ಅರ್ಜಿ ಸಲ್ಲಿಸಿ, ಸಾಗುವಳಿ ಮಾಡುತ್ತಿರುವ ಜಮೀನಿನ ಹಕ್ಕು ದಾಖಲೆಗಳ ನಿರೀಕ್ಷೆಯಲ್ಲಿದ್ದಾರೆ. ಆದರೆ, ಸರ್ಕಾರ ಅರ್ಜಿ ಮಂಜೂರಾತಿ ಪ್ರಕ್ರಿಯೆಗೆ ಕಠಿಣ ನಿಯಮಾವಳಿಗಳನ್ನು ರೂಪಿಸಿದ್ದು, ವಿವಿಧ ಕಾರಣಗಳಿಗೆ ಈ ಅರ್ಜಿಗಳನ್ನು ಬಗರ್ ಹುಕುಂ ಸಮಿತಿ ಮುಂದೆ ಮಂಡಿಸದೇ, ಅಧಿಕಾರಿಗಳಿಗೆ ಗುರಿಯನ್ನು ನಿಗದಿಪಡಿಸಿ ಜಿಲ್ಲಾಧಕಾರಿಗಳ ಹಂತದಲ್ಲೇ ತರಾತುರಿಯಲ್ಲಿ ಜಿಲ್ಲಾಧಿಕಾರಿಗಳ ಹಂತದಲ್ಲೇ ತಿರಸ್ಕರಿಸಲಾಗುತ್ತಿದೆ. ವಿಶೇಷವಾಗಿ ಕರಾವಳಿ ಪ್ರದೇಶದಲ್ಲಿ ಚಿಕ್ಕ ಚಿಕ್ಕ ತುಂಡು ಹಿಡುವಳಿ ಜಮೀನುಗಳಿದ್ದು, ಹೆಚ್ಚಿನ ಸರ್ಕಾರಿ ಜಮೀನುಗಳು ಕುಮ್ಕಿಯ ಕಾರಣಕ್ಕಾಗಿ ಹಾಗೂ ಇತರ ಕಾರಣಗಳಿಗಾಗಿ ಶೇ 90 ಕ್ಕಿಂತ ಹೆಚ್ಚಿನ ಅರ್ಜಿಗಳನ್ನು ಅನರ್ಹ ಎಂದು ಗುರುತಿಸಲಾಗಿದೆ. ಇದರಿಂದ ರೈತರು ತಾವು ಸುಮಾರು ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಸ್ವಾಧೀನ ಹೊಂದಿರುವ ಜಮೀನಿನ ಹಕ್ಕು ದಾಖಲೆ ಪಡೆಯುವುದು ಕಷ್ಟವಾಗಿದೆ’ ಎಂಬುದು ಕರಾವಳಿ ಭಾಗದ ಶಾಸಕರ ದೂರು.

‘ಮಲೆನಾಡು, ಕರಾವಳಿ ಭಾಗಗಳು ಸೇರಿ ರಾಜ್ಯದ ಬಹುತೇಕ ಎಲ್ಲ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಬಗರ್ ಹುಕುಂ ಸಮಿತಿ ರಚಿಸಲಾಗಿದೆ. ಅರ್ಜಿಗಳ ಅಂಗೀಕಾರ ಅಥವಾ ತಿರಸ್ಕಾರ ಈ ಸಮಿತಿಯಿಂದಲೇ ಆಗಬೇಕು. ಆದರೆ, ಅಧಿಕಾರಿಗಳು ಈ ವಿಚಾರವನ್ನು ಸಮಿತಿಯ ಸಭೆಯಲ್ಲಿ ಪ್ರಸ್ತಾಪಿಸದೇ ಏಕಪಕ್ಷೀಯವಾಗಿ ನಿರಾಕರಿಸುತ್ತಿದ್ದಾರೆ. ಲಕ್ಷಾಂತರ ಅರ್ಜಿಗಳನ್ನು ತಿರಸ್ಕರಿಸಲಾಗಿದೆ’ ಎಂದು ಬಿಜೆಪಿ ಶಾಸಕ ವಿ.ಸುನಿಲ್‌ಕುಮಾರ್ ಆರೋಪಿಸುತ್ತಾರೆ.

‘ಕಂದಾಯ ಸಚಿವರು ಬಗರ್ ಹುಕುಂ ವಿಚಾರ ಇತ್ಯರ್ಥಗೊಳಿಸಲು ಬದ್ಧ ಎಂದು ಹೇಳಿಕೆ ಕೊಟ್ಟಿದ್ದಾರೆ. ಆದರೆ, ಸಚಿವರ ಸೂಚನೆ ಮೇರೆಗೇ ಅರ್ಜಿ ಕೈಬಿಡಲಾಗಿದೆ ಎಂದು ಅಧಿಕಾರಿಗಳು ಸಬೂಬು ನೀಡುತ್ತಿದ್ದಾರೆ. ಹಲವು ವರ್ಷಗಳಿಂದ ಈ ಜಮೀನಿನಲ್ಲಿ ಕೃಷಿ ಚಟುವಟಿಕೆ ನಡೆಸುತ್ತಿರುವ ರೈತರು ಇದರಿಂದ ಕಂಗಾಲಾಗಿದ್ದಾರೆ. ಅರ್ಜಿ ತಿರಸ್ಕರಿಸುವಾಗ ಅಧಿಕಾರಿಗಳು ರೈತರ ಹೇಳಿಕೆ ದಾಖಲಿಸಿಕೊಳ್ಳುತ್ತಿಲ್ಲ. ಇಂಥ ಏಕಪಕ್ಷೀಯ ನಡವಳಿಕೆಯನ್ನು ತಕ್ಷಣ ನಿಲ್ಲಿಸಿ ರೈತರಿಗೆ ನ್ಯಾಯ ನೀಡಬೇಕು. ಅರ್ಹರಲ್ಲದ ಅರ್ಜಿಗಳನ್ನು ಕೈಬಿಟ್ಟರೆ ಪರವಾಗಿಲ್ಲ. ಆದರೆ ನೈಜ ಮತ್ತು ಅರ್ಹ ರೈತರನ್ನು ಸಣ್ಣಪುಟ್ಟ ಲೋಪಗಳನ್ನು ಮುಂದಿಟ್ಟುಕೊಂಡು ಕೈಬಿಡಬಾರದು’ ಎನ್ನುತ್ತಾರೆ ಸುನಿಲ್.

ಅಧಿಕಾರ ಮೊಟಕಾಗಿದೆ ಎನ್ನಲು ಆಗಲ್ಲ: ಶಾಸಕರ ಅಧಿಕಾರ ಮೊಟಕುಗೊಳಿಸಲಾಗಿದೆ ಎಂದು ಹೇಳಲಾಗುವುದಿಲ್ಲ. ಯಾಕೆಂದರೆ ಕೆಲವೊಮ್ಮೆ ಬಡವರು ಎರಡು–ಮೂರು ಸೆಂಟ್ ಜಾಗದಲ್ಲಿ ಸಕ್ರಮ ಮಾಡಿಕೊಂಡು ಮನೆ ಕಟ್ಟಿದ್ದರೂ ಕೆಡಹುವ ಪರಿಸ್ಥಿತಿ ಉಂಟಾದರೆ, ನಾವು ಬಡವರ ನೆರವಿಗೆ ನಿಲ್ಲಬೇಕಾಗುತ್ತದೆ. ಹಾಗಾಗಿ ಅಧಿಕಾರ ಇಲ್ಲ ಎಂದು ಹೇಳಲಾಗದು ಎನ್ನುತ್ತಾರೆ ಮೂಡಬಿದಿರೆ ಬಿಜೆಪಿ ಶಾಸಕ ಉಮಾನಾಥ್ ಕೋಟ್ಯಾನ್.

‘ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಬಗರ್ ಹುಕುಂ ಸಮಿತಿಯಲ್ಲಿ ಪಕ್ಷದ ಕಾರ್ಯಕರ್ತರಿಗೆ ಅಧಿಕಾರ ಕೊಡಲು ಶಾಸಕರ ಹಕ್ಕನ್ನು ಮೊಟಕುಗೊಳಿಸಿದೆ. ಸಮಿತಿಯ ತೀರ್ಮಾನಗಳಿಗೆ ಜಿಲ್ಲಾಧಿಕಾರಿಯ ಅನುಮೋದನೆ ಪಡೆಯಬೇಕಿದೆ. ಇದರಿಂದ ಶಾಸಕರಿಗೆ ವಿವೇಚನಾ ಅಧಿಕಾರ ಇಲ್ಲದಂತಾಗಿ ಬಡವರಿಗೆ ಸಣ್ಣ ಸಹಾಯ ಮಾಡಲು ಸಾಧ್ಯವಾಗುತ್ತಿಲ್ಲ. ಕಂದಾಯ ಸಚಿವರು ಬಡವರಿಗೆ ಭೂಮಿ ಮಂಜೂರಾತಿ ವಿಚಾರದಲ್ಲಿ ಬೆಂಗಳೂರು ಹಾಗೂ ಸುತ್ತಲಿನ ಜಿಲ್ಲೆಗಳ ಹೊರತಾಗಿ ರಾಜ್ಯದ ಇತರೆ ಜಿಲ್ಲೆಗಳತ್ತ ಗಮನಹರಿಸಲಿ’ ಎನ್ನುತ್ತಾರೆ ಜನತಾದಳ (ಎಸ್) ಪಕ್ಷದ ಶಿವಮೊಗ್ಗ ಗ್ರಾಮಾಂತರ ಶಾಸಕಿ ಶಾರದಾ ಪೂರ್ಯಾನಾಯಕ್.

‘ಬಗರ್ ಹುಕುಂ’ ಹಕ್ಕುಪತ್ರ ನೀಡಲು ಅಧಿಕಾರಿಗಳು ಕ್ರಮ ವಹಿಸುತ್ತಿಲ್ಲ. ಸುಮಾರು 40 ವರ್ಷಗಳಿಂದ ಎರಡು ಎಕರೆ ಜಮೀನು ಸಾಗುವಳಿ ಮಾಡುತ್ತಿದ್ದೇವೆ. 1999ರಲ್ಲಿ ಫಾರಂ ನಂ ‘50’, 2016ರಲ್ಲಿ ಫಾರಂ ನಂ ‘53’ ಹಾಗೂ 2022ರಲ್ಲಿ ಫಾರಂ ನಂ ‘57’ ಸಲ್ಲಿಸಿ, ಸ್ವೀಕೃತಿ ಪಡೆದಿದ್ದೇವೆ. ಒಟ್ಟು 16 ರೈತರು ತಲಾ ಎರಡು ಎಕರೆಯಂತೆ 32 ಎಕರೆ ಸಾಗುವಳಿ ಮಾಡುತ್ತಿದ್ದೇವೆ. ಆದರೆ, ಕಂದಾಯ ಇಲಾಖೆಯವರು ಅದನ್ನು ಗೋಮಾಳ ಜಾಗ ಎಂದು ಹೇಳಿ, ನಮ್ಮನ್ನು ಅಲ್ಲಿಂದ ಖಾಲಿ ಮಾಡಿಸಲು ಮುಂದಾಗಿದ್ದಾರೆ.

ನಾವು ಸಾಗುವಳಿ ಮಾಡುತ್ತಿರುವ ಜಮೀನಿನ ಪಕ್ಕದಲ್ಲೇ ಇಲಾಖೆಯೊಂದಕ್ಕೆ 60 ಎಕರೆ ಜಾಗ ಮಂಜೂರು ಮಾಡಿದ್ದಾರೆ. ನಮಗೆ ನೋಟಿಸ್ ಕೊಟ್ಟು ಕಿರುಕುಳ ನೀಡಲು ಆರಂಭಿಸಿದ್ದಾರೆ’ ಎನ್ನುವುದು ಧಾರವಾಡ ತಾಲ್ಲೂಕು ಮುಮ್ಮಿಗಟ್ಟಿಯ ಮಲ್ಲೇಶಪ್ಪ ಬಸಪ್ಪ ಕಿತ್ತೂರು ಆರೋಪಿಸುತ್ತಾರೆ.

ಕಂದಾಯ ಇಲಾಖೆ ಪರಿಚಯಿಸಿದ್ದ ‘ಬಗರ್ ಹುಕುಂ ತಂತ್ರಾಂಶ’ (ಆ್ಯಪ್) ಮೂಲಕ ರಾಜ್ಯದಲ್ಲೇ ಮೊದಲ ಬಾರಿಗೆ ಕಳೆದ ವರ್ಷ ಶಿರಸಿಯಲ್ಲಿ ನಾಲ್ವರು ರೈತರಿಗೆ ಡಿಜಿಟಲ್ ಸಾಗುವಳಿ ಚೀಟಿ ನೀಡಲಾಗಿತ್ತು. ಹಲವು ದಶಕಗಳಿಂದ ಸರ್ಕಾರಿ ಪಡಾದಲ್ಲಿ ಸಾಗುವಳಿ ಮಾಡಿಕೊಂಡು ಬಂದ ರೈತರಿಗೆ ಭೂಮಿ ಹಕ್ಕು ಒದಗಿಸಲು ವಿಳಂಬ ಮಾಡಲಾಗುತ್ತಿದೆ. ಶಾಸಕರ ಅಧ್ಯಕ್ಷತೆಯ ಸಮಿತಿಯಲ್ಲಿ ಸ್ಥಳೀಯ ಸಮಸ್ಯೆಗಳ ಅರಿವಿರುವವರನ್ನೇ ನಾಮನಿರ್ದೇಶಿತ ಸದಸ್ಯರನ್ನಾಗಿ ನೇಮಿಸಲಾಗುತ್ತದೆ. ನಿಯಮಾವಳಿ ಪ್ರಕಾರ ಓರ್ವ ಅರ್ಜಿದಾರನಿಗೆ ಗರಿಷ್ಠ 4.38 ಎಕರೆ ಜಾಗ ಮಂಜೂರು ಮಾಡಲು ಅವಕಾಶ ಇದೆ. ಆದರೆ, ಅಧಿಕಾರಿಗಳು ಇಲ್ಲಸಲ್ಲದ ನಿಯಮ ಹೇರಿ ರೈತರಿಗೆ ಭೂಮಿ ಹಕ್ಕು ಸಿಗದಂತೆ ತಡೆಹಿಡಿಯುತ್ತಾರೆ ಎನ್ನುವುದು ಉತ್ತರ ಕನ್ನಡ ಜಿಲ್ಲೆ ಕಿರವತ್ತಿಯ ರೈತ ರಾಘವೇಂದ್ರ ನಾಯ್ಕ ಅವರ ಆಪಾದನೆ.

‘ಬಗರ್‌ಹುಕುಂ ಅರ್ಜಿಗಳು ಭಾರಿ ಸಂಖ್ಯೆಯಲ್ಲಿ ತಿರಸ್ಕೃತಗೊಳ್ಳಲು ಅನರ್ಹರು ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿ ಸಲ್ಲಿಸುತ್ತಿರುವುದೇ ಕಾರಣ. ಅನರ್ಹರು ಯಾರು ಎಂಬುದನ್ನು ಕಾಯ್ದೆ ಸ್ಪಷ್ಟಪಡಿಸಿದೆ. ಅದರಲ್ಲಿ ಇರುವುದನ್ನು ಅಧಿಕಾರಿಗಳು ಚಾಚೂ ತಪ್ಪದೇ ಪಾಲಿಸುತ್ತಿದ್ದಾರೆ.ಒಂದುವೇಳೆಅಧಿಕಾರಿಗಳಿಂದ ತಪ್ಪುಗಳು ಆಗಿದ್ದರೆ, ಅದನ್ನು ಸರಿಪಡಿಸಲು ಅವಕಾಶವಿದೆ. ದುರಾದೃಷ್ಟವೆಂದರೆ, ಸರ್ಕಾರಿ ಭೂಮಿ ಹೊಡೆಯಬಹುದೆಂದು ಅನರ್ಹರೇ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿ ಹಾಕುತ್ತಿದ್ದಾರೆ. ಈ ಕಾರಣಕ್ಕೆ ಅರ್ಜಿಗಳು ತಿರಸ್ಕಾರಗೊಳ್ಳುತ್ತಿವೆ. ಯಾವ ಕಾರಣಗಳಿಗೆ ಅರ್ಜಿಗಳು ತಿರಸ್ಕೃತಗೊಂಡಿವೆ ಎಂಬ ಪಟ್ಟಿಯೇ ಇದೆ’ ಎನ್ನುತ್ತಾರೆ ಕಂದಾಯ ಇಲಾಖೆ ಆಯುಕ್ತ ಸುನಿಲ್ ಕುಮಾರ್.

ಬಗರ್ ಹುಕುಂ ಅಡಿ ನೈಜ ಅರ್ಜಿದಾರರಿಗೆ ಅನ್ಯಾಯ ಆಗಬಾರದು ಎಂಬ ಕಾರಣಕ್ಕೆ ಕೆಲವು ಕಠಿಣ ನಿಯಮಗಳನ್ನು ಜಾರಿ ಮಾಡಲಾಗಿದೆ. ಇದರಿಂದ ಭೂಮಾಫಿಯಾ ಮತ್ತು ಅನರ್ಹರು ಸರ್ಕಾರಿ ಭೂಮಿ ಕಬಳಿಸುವುದನ್ನು ತಡೆಯಬಹುದಾಗಿದೆ ಎನ್ನುತ್ತಾರೆ ಅವರು.

ಜಿಲ್ಲೆಗಳಲ್ಲಿ ಬಗರ್‌ಹುಕುಂ ಸ್ಥಿತಿಯೇನು?

ದಕ್ಷಿಣಕನ್ನಡ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾರ್ಚ್ 3ರ ವರೆಗೆ ಒಟ್ಟು 12,4,414 ಅರ್ಜಿಗಳು ಸಲ್ಲಿಕೆಯಾಗಿದ್ದು ಕೇವಲ 10,573 ಅರ್ಜಿಗಳು ಅರ್ಹವಾಗಿದ್ದವು. ಈ ಪೈಕಿ 1089 ಅರ್ಜಿಗಳನ್ನು ಪರಿಗಣಿಸಲು ಗುರಿ ಇತ್ತು. 654 ಅರ್ಜಿಗಳನ್ನು ಮಾತ್ರ ವಿಲೇವಾರಿ ಮಾಡಲಾಗಿದ್ದು ಒಟ್ಟು 60.06 ಗುರಿ ಸಾಧನೆ ಆಗಿದೆ. 10,0,183 ಅರ್ಜಿಗಳು ಪರಿಶೀಲನೆಗಾಗಿ ಗ್ರಾಮ ಲೆಕ್ಕಿಗಳ ಬಳಿ ಉಳಿದಿವೆ. 1210 ಅರ್ಜಿಗಳನ್ನು ಮಾತ್ರ ಗ್ರಾಮ ಲೆಕ್ಕಿಗರು ವಿಲೇವಾರಿ ಮಾಡಿದ್ದಾರೆ. 72 ಅರ್ಜಿಗಳು ತಹಶೀಲ್ದಾರ್ ಬಳಿ ಉಳಿದಿವೆ. 136 ಅರ್ಜಿಗಳು ಸಮಿತಿಯಲ್ಲೂ 9 ಅರ್ಜಿಗಳು ಡಿಎಫ್‌ಒ ಬಳಿಯೂ ಉಳಿದುಕೊಂಡಿವೆ. ಹಕ್ಕುಪತ್ರ ಸಿದ್ಧಗೊಳ್ಳಲು ತಹಶೀಲ್ದಾರ್ ಬಳಿ 122 ಅರ್ಜಿಗಳು ಉಳಿದುಕೊಂಡಿವೆ.

ಉಡುಪಿ: ಜಿಲ್ಲೆಯಲ್ಲಿ ಅಕ್ರಮ ಸಕ್ರಮದಡಿ ನಮೂನೆ 50ರಲ್ಲಿ 50,358 ಮಂದಿ ಅರ್ಜಿ ಸಲ್ಲಿಸಿದ್ದಾರೆ. ಅದರಲ್ಲಿ 11,186 ಅರ್ಜಿಗಳು ಮಂಜೂರಾಗಿವೆ. ನಮೂನೆ 53ರಲ್ಲಿ 58,382 ಅರ್ಜಿಗಳು ಸ್ವೀಕೃತವಾಗಿವೆ ಅವುಗಳಲ್ಲಿ 13,284 ಅರ್ಜಿಗಳು ಮಂಜೂರಾಗಿವೆ. ನಮೂನೆ 57ರಲ್ಲಿ 62,344 ಅರ್ಜಿಗಳು ಸ್ವೀಕೃತವಾಗಿವೆ.

ಶಿವಮೊಗ್ಗ: ಕಳೆದ ನಾಲ್ಕು ವರ್ಷಗಳಿಂದ ಶಿವಮೊಗ್ಗ ಜಿಲ್ಲಾಡಳಿತಕ್ಕೆ ಬಗರ್‌ಹುಕುಂ ಅಡಿ (ಫಾರಂ 57ರಲ್ಲಿ) 1.17 ಲಕ್ಷ ಅರ್ಜಿಗಳು ಸಲ್ಲಿಕೆಯಾಗಿವೆ. ಅದರಲ್ಲಿ ಇಲ್ಲಿಯವರೆಗೂ (ಮಾರ್ಚ್ 11) 50 ಸಾವಿರ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. 98 ಅರ್ಜಿಗಳು ಮಾತ್ರ ಪುರಸ್ಕೃತಗೊಂಡಿವೆ. ತಿರಸ್ಕೃತಗೊಂಡ ಅರ್ಜಿಗಳಲ್ಲಿ ಬಹುತೇಕ ಅರಣ್ಯ ಭೂಮಿ, ಕೆಪಿಸಿ, ನಿಗಮ ಮಂಡಳಿ, ಖಾಸಗಿ ಭೂಮಿಗೆ ಸಲ್ಲಿಸಿದ ಅರ್ಜಿಗಳಾಗಿವೆ. 18 ವರ್ಷ ತುಂಬದವರೂ ಅರ್ಜಿ ಸಲ್ಲಿಸಿದ್ದು, ಅವು ಕೂಡ ತಿರಸ್ಕೃತಗೊಂಡಿವೆ.

ಹಾಸನ: ಜಿಲ್ಲೆಯಲ್ಲಿ 1,67,348 ಅರ್ಜಿಗಳು ಸಲ್ಲಿಕೆಯಾಗಿದ್ದು, ಬಗರಹುಕುಂ ಸಮಿತಿಯಿಂದ 11,953 ಅರ್ಜಿಗಳನ್ನು ಜಿಲ್ಲಾಧಿಕಾರಿಗೆ ಸಲ್ಲಿಸಲಾಗಿದೆ. 99,031 ಅರ್ಜಿಗಳನ್ನು ತಿರಸ್ಕರಿಸಲು ತಹಶೀಲ್ದಾರರು ಶಿಫಾರಸು ಮಾಡಿದ್ದಾರೆ.

ಉತ್ತರಕನ್ನಡ: ಬಗರ್ ಹುಕುಂ ಸಮಿತಿಗೆ ಭೂಮಿ ಹಕ್ಕು ಮಂಜೂರಾತಿಗೆ 4,830 ಅರ್ಜಿಗಳು ಸಲ್ಲಿಕೆಯಾಗಿದ್ದು, 109 ಜನರ ಜಮೀನು ಸಕ್ರಮಗೊಳಿಸಲಾಗಿದೆ. ಅವರ ಪೈಕಿ 4 ಕುಟುಂಬಗಳಿಗೆ ಮಾತ್ರ ಹಕ್ಕುಪತ್ರ ಸಿಕ್ಕಿದೆ. ಬೆಟ್ಟ ಭೂಮಿ, ನಗರ ವ್ಯಾಪ್ತಿಯ ಪ್ರದೇಶದಲ್ಲಿರುವ ಭೂಮಿ ಸೇರಿದಂತೆ ಬಗರ್ ಹುಕುಂ ಅಡಿಯಲ್ಲಿ ಮಂಜೂರಾತಿಗೆ ಅವಕಾಶ ಇಲ್ಲದ ಕಾರಣಕ್ಕೆ 2,441 ಅರ್ಜಿಗಳು ತಿರಸ್ಕೃತಗೊಂಡಿವೆ. 2,280 ಅರ್ಜಿಗಳು ಇನ್ನೂ ಬಗರ್ ಹುಕುಂ ಸಮಿತಿ ಎದುರು ವಿಲೇವಾರಿಗೆ ಬಾಕಿ ಉಳಿದುಕೊಂಡಿವೆ.

ಬಗರ್ ಹುಕುಂ ತಿರಸ್ಕಾರ ಆದ ಪಟ್ಟಿ

- **7,792 :** 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಸಲ್ಲಿಸಿದ ಅರ್ಜಿ
- **712 :** ಕೃಷಿಕರಲ್ಲದ ಕೃಷಿ ಹೆಸರಿನಲ್ಲಿ ಅರ್ಜಿ ಸಲ್ಲಿಸಿದ ಅರ್ಜಿ
- **296 :** ತಾಲ್ಲೂಕಿನಲ್ಲಿ ಕಾಯಂ ನಿವಾಸಿ ಅಲ್ಲದೇ ಅರ್ಜಿ ಸಲ್ಲಿಸಿದವರು
- **3,661 :** ಸ್ವಾಧೀನದಲ್ಲಿ ಇಲ್ಲದ ರೈತರ ಅರ್ಜಿಗಳು
- **302 :** 4 ಎಕರೆ 38 ಗುಂಟೆಗೂ ಹೆಚ್ಚು ಭೂಮಿ ಹೊಂದಿದ ಅರ್ಜಿದಾರರು
- **44,094 :** ನಗರ ಮಿತಿಯ ಬಫರ್ ವಲಯದಲ್ಲಿ ಭೂಒತ್ತುವರಿ ಮಾಡಿದವರು
- **20,718 :** ಅರಣ್ಯ ಭೂಮಿ
- **1,28,991 :** ಇತರೆ ಭೂಮಿ
- **1,04,668 :** ಗ್ರಾಮ ವ್ಯಾಪ್ತಿಯಲ್ಲಿ ಸಾಕಷ್ಟು ಭೂಮಿ ಲಭ್ಯವಿಲ್ಲದಿರುವುದು
- **25,662 :** ಕೆಎಲ್‌ಆರ್ ಕಾಯ್ದೆ 1964 ರ ಪ್ರಕಾರ ಒತ್ತುವರಿ ಮಾಡಿದವರಿಗೆ ಭೂಮಂಜೂರಿಗೆ ಅವಕಾಶವಿಲ್ಲ. ಈ ರೀತಿ ಅರ್ಜಿ ಸಲ್ಲಿಸಿದವರು ಸಂಖ್ಯೆ

3,36,896 ಒಟ್ಟು ಅರ್ಜಿಗಳು

- **ನಮೂನೆ 50, 53 ಮತ್ತು 57:** ಕಂದಾಯ ಭೂಮಿಯನ್ನು ಅಕ್ರಮವಾಗಿ ಸಾಗುವಳಿ ಮಾಡಿದ ಭೂರಹಿತರು, ಸಣ್ಣ ಅಥವಾ ಬಡ ರೈತರಿಗೆ 4.35 ಎಕರೆವರೆಗಿನ ಜಮೀನಿನ ಸಾಗುವಳಿ ಹಕ್ಕು ನೀಡಲು ಕರ್ನಾಟಕ ಭೂ ಮಂಜೂರಾತಿ ನಿಯಮಗಳ ಅನ್ವಯ 1991–92ರಲ್ಲಿ ನಮೂನೆ 50 ಅಡಿ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಯಿತು.
- ನಮೂನೆ 53ರಲ್ಲಿ ಅರ್ಜಿ ಸಲ್ಲಿಸಲು 1998–1999ರಲ್ಲಿ ಅವಕಾಶ ನೀಡಲಾಯಿತು. ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 94 ಎ(4) ಅಡಿ ನಮೂನೆ 57ರ ಅಡಿ ಅರ್ಜಿ ಸಲ್ಲಿಸಲು 2018ರಲ್ಲಿ ಸರ್ಕಾರ ಮತ್ತೆ ಅವಕಾಶ ನೀಡಿತ್ತು.
- **94–ಬಿ, 94 ಎ(4):** 94–ಬಿ: ಕೆಲವು ವಿಶೇಷ ಸಂದರ್ಭಗಳಲ್ಲಿ ಫಲಾನುಭವಿಗಳಿಗೆ ಭೂಮಿ ಮಂಜೂರು ಕರ್ನಾಟಕ ಭೂ ಕಂದಾಯ ಕಾಯ್ದೆ–1998ಗೆ ಸೆಕ್ಷನ್ 94–ಬಿ ಸೇರಿಸಲಾಗಿದೆ.
- **94–ಎ (4):** 2005 ಕ್ಕಿಂತ ಮೊದಲು ಅನಧಿಕೃತವಾಗಿ ಆಕ್ರಮಿಸಿಕೊಂಡಿದ್ದ ಕಂದಾಯ (ಸರ್ಕಾರಿ) ಭೂಮಿಯನ್ನು 94–ಎ (4)ರ ಪ್ರಕಾರ ಒತ್ತುವರಿದಾರರಿಗೆ ಮಂಜೂರು ಮಾಡಬಹುದು. ಮಿತಿ 4.35 ಎಕರೆ.
- **108ಸಿಸಿ:** ಭೂಕಂದಾಯ ನಿಯಮಕ್ಕೆ 108ಸಿಸಿ ಸೇರಿಸಿ ನಮೂನೆ 50ರ ಅಡಿ ಬಗರ್‌ಹುಕುಂಗೆ ಅರ್ಜಿ ಸಲ್ಲಿಸಲು 108ಸಿಸಿಸಿ ಮೂಲಕ ನಮೂನೆ 53 ಅಡಿ ಮತ್ತೆ ಅರ್ಜಿ ಸಲ್ಲಿಕೆಗೆ ಅವಕಾಶ ನೀಡಲಾಯಿತು.

ಭೂಮಿ ಪಡೆಯಲು ಇರುವ ಅರ್ಹತೆಗಳೇನು?

- ಅನಧಿಕೃತ ಸಾಗುವಳಿ ಮಾಡುವ ಅವಧಿಗೆ ಅರ್ಜಿದಾರನಿಗೆ ವಯಸ್ಸು 18 ವರ್ಷ ಆಗಿರಬೇಕು.
- ಅರ್ಜಿದಾರನು ಭೂಮಿಯು ಇರುವ ಅಥವಾ ಪಕ್ಕದಲ್ಲಿರುವ ತಾಲ್ಲೂಕಿನಲ್ಲಿ ಆ ತಾಲೂಕಿನ ಪರಿಮಿತಿಯೊಳಗೆ ಕಾಯಂ ನಿವಾಸಿ ಆಗಿರಬೇಕು.
- ನಮೂನೆ 50 ಮತ್ತು 53 ರ ಅರ್ಜಿಗಳನ್ನು ಪರಿಗಣಿಸುವಾಗ ಅರ್ಜಿದಾರನು 1990 ರ 14 ನೇ ಏಪ್ರಿಲ್ ದಿನಕ್ಕೆ ಕಡೆಯ ಪಕ್ಷ ಹಿಂದಿನ ಮೂರು ವರ್ಷಗಳು ಕಡಿಮೆ ಇಲ್ಲದ ಅವಧಿಯ ನಿರಂತರ ಭೂಮಿಯ ಅನಧಿಕೃತ ಅಧಿಭೋಗದಾರನಾಗಿರಬೇಕು.
- ನಮೂನೆ 57 ಅರ್ಜಿಗಳನ್ನು ಪರಿಗಣಿಸುವಾಗ 2005 ರ ಜನವರಿ ಮೊದಲ ದಿನಕ್ಕೆ ಮೂರು ವರ್ಷಕ್ಕಿಂತ ಕಡಿಮೆ ಇಲ್ಲದ ಅವಧಿಯವರೆಗೆ ನಿರಂತರವಾಗಿ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರಬೇಕು.
- ಅನುಸೂಚಿತ ಜಾತಿ ಮತ್ತು ಪಂಗಡಗಳಿಗೆ ಸೇರಿದ ವ್ಯಕ್ತಿಗಳ ಸಂದರ್ಭದಲ್ಲಿ ಅಂತಹ ಅವಧಿಯು ಒಂದು ವರ್ಷಕ್ಕಿಂತ ಕಡಿಮೆ ಇರಬಾರದು.

ಕಾಯ್ದೆಯ ಪ್ರಮುಖ ಅಂಶಗಳು

- ಬಗರ್‌ಹುಕುಂ ಅರ್ಜಿ ಪರಿಶೀಲಿಸುವಾಗ ತಹಶೀಲ್ದಾರರು ಅರ್ಜಿದಾರರ ಪಡಿತರ ಚೀಟಿ, ಆಧಾರ್ ಸಂಖ್ಯೆ, ಚುನಾವಣಾ ಗುರುತಿನ ಚೀಟಿ, ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ, ವಾಸಸ್ಥಳ ದೃಢೀಕರಣ ಪತ್ರವನ್ನು ಗ್ರಾಮ ಆಡಳಿತಾಧಿಕಾರಿ/ರಾಜಸ್ವ ನಿರೀಕ್ಷಕರು/ಶಿರಸ್ತೆದಾರರ ವರದಿಗಳನ್ನು ಉಪಗ್ರಹ ಆಧಾರಿತ ಚಿತ್ರ ಪರಿಗಣಿಸಿ ಅರ್ಜಿ ಬಗ್ಗೆ ಸ್ಪಷ್ಟ ಅಭಿಪ್ರಾಯ ದಾಖಲಿಸಬೇಕು.
- ಗೋಮಾಳ, ಮೀಸಲುಕಾಡು, ಸಾರ್ವಜನಿಕ ಉದ್ದೇಶಕ್ಕೆ ಮೀಸಲಾದ ಜಮೀನು, ದೇವರಕಾಡು, ಉರ್ದುವೆ, ಗುಂಡುತೋಪು, ಕೆರೆಯ ತಳಪಾಯ, ಪೋಟ್ ಖರಾಬ್ ಹಳ್ಳ, ಸ್ಮಶಾನ ಜಾಗವನ್ನು ಮಂಜೂರಾತಿ ಮಾಡುವಂತಿಲ್ಲ.
- ಜಿಲ್ಲಾಧಿಕಾರಿ ಅನರ್ಹ ಅರ್ಜಿಯನ್ನು ಒಂದು ತಿಂಗಳೊಳಗೆ ತಿರಸ್ಕರಿಸಬೇಕು. ಈ ಅರ್ಜಿಯಲ್ಲಿ ನಮೂದಿಸಿದ ಭೂಮಿಯನ್ನು ಸರ್ಕಾರ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕು
- ಬಗರ್ ಹುಕುಂ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರು ಹಾಗೂ ಸದಸ್ಯ ಕಾರ್ಯದರ್ಶಿ- (ತಹಶೀಲ್ದಾರ್) ಅವರ ಆಧಾರ್ ಇ–ಕೆವೈಸಿ ಅನ್ನು ತಂತ್ರಾಂಶದಲ್ಲಿ ಕಡ್ಡಾಯವಾಗಿ ನಮೂದಿಸಬೇಕು. ಬಯೋಮೆಟ್ರಿಕ್ ಆಧಾರ್ ಇ–ಕೆವೈಸಿ ನಂತರವೇ ಸಭೆ ನಡೆಸಬೇಕು.
- ಬಗರ್‌ಹುಕುಂ ಸಮಿತಿ ರಚನೆ ಆದ ನಂತರ ಸಮಿತಿಗಳು ಕನಿಷ್ಠ ವಾರಕ್ಕೊಮ್ಮೆ ಸಭೆ ಸೇರಿ ಅರ್ಜಿ ಇತ್ಯರ್ಥಪಡಿಸಬೇಕು

ಒಮ್ಮೆ ಅನರ್ಹಗೊಂಡರೆ ಶಾಶ್ವತ ಅನರ್ಹ

ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ಭೂಮಿಯಲ್ಲಿ ರೈತ ಮನೆ ಕಟ್ಟಿಕೊಂಡಿದ್ದರೆ ಅರ್ಜಿ ಅನರ್ಹವಾಗುತ್ತದೆ ಎಂದು ಅಧಿಕಾರಿಗಳು ಹೇಳುತ್ತಾರೆ. ರೈತರು ಸಾಗುವಳಿ ಭೂಮಿಯಲ್ಲಿ ಮನೆ ಕಟ್ಟಿಕೊಳ್ಳದೇ ಇರಲು ಸಾಧ್ಯವೇ? ಹಲವು ದಶಕಗಳಿಂದ ಮನೆ ಕಟ್ಟಿಕೊಂಡು ಸಾಗುವಳಿ ಮಾಡುತ್ತಿರುವವರನ್ನು ಈ ನೆಪದಲ್ಲಿ ಒಮ್ಮೆ ಅರ್ಜಿ ತಿರಸ್ಕರಿಸಿದರೆ, ಶಾಶ್ವತವಾಗಿ ಅರ್ಜಿ ಸಲ್ಲಿಸಲು ಅನರ್ಹರಾಗುತ್ತಾರೆ. ಈ ಹಿಂದಿನಂತೆ ಅಧ್ಯಕ್ಷರೇ (ಶಾಸಕರು) ಅರ್ಜಿ ಪುರಸ್ಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಹೊಂದಿದ್ದಾಗ, ಇಂತಹ ಸೂಕ್ಷ್ಮ ವಿಷಯಗಳನ್ನು ಪರಿಗಣಿಸಿ ನ್ಯಾಯ ಒದಗಿಸಲು ಸಾಧ್ಯವಾಗುತ್ತಿತ್ತು. ಈಗಿನ ವ್ಯವಸ್ಥೆಯಲ್ಲಿ ಇದು ಸಾಧ್ಯವಾಗುತ್ತಿಲ್ಲ

ವಿ.ಸುನಿಲ್ ಕುಮಾರ್, ಶಾಸಕ, ಕಾರ್ಕಳ

ಸರ್ಕಾರವು ಸುತ್ತೋಲೆ ಬದಲು ಮಾಡಿ, ಅರ್ಜಿ ಸಲ್ಲಿಸಿದ ಎಲ್ಲರಿಗೂ ಭೂ ಮಂಜೂರಾತಿ ಮಾಡುವಂತೆ ಆದೇಶ ಮಾಡಬೇಕು. ತಿರಸ್ಕಾರವಾಗಿರುವ ಅರ್ಜಿಗಳನ್ನೂ ಪರಿಶೀಲಿಸಿ ಜಮೀನು ಮಂಜೂರು ಮಾಡಬೇಕು.

ಎಚ್‌.ಕೆ. ಸುರೇಶ್, ಶಾಸಕ, ಬೇಲೂರು

ಹೊಸ ಸುತ್ತೋಲೆಯಿಂದಾಗಿ ಅರ್ಜಿ ತಿರಸ್ಕೃತಗೊಂಡ ಸಂದರ್ಭದಲ್ಲಿ ಮೇಲ್ಮನವಿ ಸಲ್ಲಿಸಲು ರೈತರು ಜಿಲ್ಲಾಧಿಕಾರಿ ಮತ್ತು ಉಪವಿಭಾಗಾಧಿಕಾರಿ ಬದಲಿಗೆ, ಕೆಎಟಿ ಮತ್ತು ಹೈಕೋರ್ಟ್‌ಗೆ ಅಲೆಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಬಿ.ಶಿವರಾಂ, ಮಾಜಿ ಸಚಿವ

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಏಪ್ರಿಲ್ 20, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ಸಪ್ತಮಿ ಗಂ. 19-01 ನಕ್ಷತ್ರ: ಪೂರ್ವಾಷಾಢ ಗಂ. 11-49 ಯೋಗ: ಸಿದ್ಧ ಗಂ. 24-13 ಕರಣ: ವಿಷ್ಟಿ ಗಂ. 06-47, ಮೇಷ ಮಾಸದ 07 ನೇ ದಿನ.
ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ : 06-18 **ಸೂರ್ಯಾಸ್ತ :** 06-41
ಮುಸ್ಲಿಂ ದಿನಾಂಕ : 21 ಶವ್ವಾಲ್
ಅದೃಷ್ಟ ಸಂಖ್ಯೆ : 3, 8

ಮೇಷ: ನಿಮ್ಮ ವೃತ್ತಿಯಲ್ಲಿ ಹೆಚ್ಚಿನ ಬದಲಾವಣೆ ಕಂಡುಬರಲಿದೆ. ಕುಟುಂಬದಲ್ಲಿ ಸೌಖ್ಯವಿದ್ದು ಮನೋರಂಜನೆ ಪಡೆಯುವಿರಿ. ಸಮಾರಂಭಗಳ ಮುಂದಾಳತ್ವ ವಹಿಸುವವರು ಗಣಪತಿಯ ಆರಾಧನೆ ಮಾಡುವುದು ಅತ್ಯಗತ್ಯ.

ವೃಷಭ: ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕೆ ಬೇಕಾದ ವಿದೇಶಿ ಕಾಲೇಜುಗಳ ಮಾಹಿತಿ ಲಭಿಸುತ್ತದೆ. ತಂದೆ ತಾಯಿ ಅಥವಾ ಹಿರಿಯರ ಆರೋಗ್ಯದ ಬಗ್ಗೆ ಯಾವುದೇ ತರಹದ ಭಯ ಬೇಡ, ಇಂದು ಚೇತರಿಸಿಕೊಳ್ಳುವರು.

ಮಿಥುನ: ಕಿರು ಪ್ರವಾಸದಿಂದಾಗಿ ಕುಟುಂಬದಲ್ಲಿ ಅನಾರೋಗ್ಯ ಭೀತಿ ಉಂಟಾಗುವುದು. ಆಸಕ್ತಿಕರ ವಿಷಯದಲ್ಲಿ ಅವಕಾಶಗಳನ್ನು ಸರಿಯಾಗಿ ಬಳಸಿಕೊಂಡಲ್ಲಿ ನಿಮ್ಮ ಹೊಸ ಯೋಜನೆಗಳಿಗೆ ಸಹಾಯವಾಗಲಿದೆ.

ಕರ್ಕಾಟಕ: ಹಣ್ಣು-ತರಕಾರಿ ಬೆಳೆಗಾರರಿಗೆ ಅಧಿಕ ಲಾಭ ಸಿಗಲಿದೆ. ಆಸ್ತಿ ವ್ಯವಹಾರಗಳನ್ನು ಶಾಂತ ರೀತಿಯಲ್ಲಿ ಬಗೆಹರಿಸಿಕೊಳ್ಳಿರಿ. ವಿಷ ಜಂತುಗಳ, ನಂಜಿನ ಕೀಟಗಳಿಂದ ಅನಾಹುತಗಳಾಗುವ ಸಂಭವವಿದೆ. ಜಾಗ್ರತರಾಗಿರಿ.

ಸಿಂಹ: ನಿಮ್ಮ ಆರ್ಥಿಕ ಪರಿಸ್ಥಿತಿಯು ಸದೃಢವಾಗಿ ಉತ್ತಮಗೊಳ್ಳಲಿದೆ. ಅನೇಕ ಪ್ರಸಿದ್ಧ ವ್ಯಕ್ತಿಗಳ ಸಂಪರ್ಕದಿಂದ ಹಾಗೂ ಭೇಟಿಯಿಂದ ನಿಮ್ಮ ಕೆಲಸಗಳು ಬೇಗ ಮುಗಿಯುವಂತೆ ಒತ್ತಾಯ ಹೇರುವ ಸಾಧ್ಯತೆಯಿದೆ.

ಕನ್ಯಾ: ಮೇಲಧಿಕಾರಿಯ ಮೃದು ವರ್ತನೆಯಿಂದ ನಿಮಗೆ ಕೆಲಸ ಕಾರ್ಯಗಳಲ್ಲಿ ತೃಪ್ತಿಯುಂಟಾಗುವುದು. ಶ್ರೀ ಮಹಾವಿಷ್ಣುವಿನ ಆರಾಧನೆಯಿಂದ ಅಭಿವೃದ್ಧಿ ಕಾಣಬಹುದು. ದಂತ ವೈದ್ಯರನ್ನು ಸಂಪರ್ಕಿಸಬೇಕಾಗಬಹುದು.

ತುಲಾ: ವಿನ್ಯಾಸದ ಕೆಲಸಗಳು ಆದಾಯ ಮತ್ತು ಮಾನಸಿಕ ಒತ್ತಡವನ್ನು ಹೆಚ್ಚಿಸಲಿದೆ. ಚಿತ್ರ ವಿತರಣೆ ಹಾಗೂ ನಿರ್ಮಾಣ ಕೆಲಸಗಳು ಲಾಭದಾಯಕವೆನಿಸುತ್ತವೆ. ವಾಹನ ವ್ಯಾಪಾರ ವ್ಯವಹಾರಗಳು ಈ ದಿನದಲ್ಲಿ ಕೈಗೂಡಲಿದೆ.

ವೃಶ್ಚಿಕ: ಧಾರ್ಮಿಕ ಕೆಲಸಗಳಲ್ಲಿ ಹೆಚ್ಚಿನ ಆಸಕ್ತಿ ತೋರುವಿರಿ. ರಸ ಪದಾರ್ಥಗಳ ಮಾರಾಟಗಳಿಂದ ಆದಾಯ ಸಂಬಂಧಿತ ಸಮಸ್ಯೆ ಎದುರಾಗಬಹುದು. ನಿಮ್ಮ ಖರ್ಚುಗಳು ಹೆಚ್ಚೆನಿಸಿದರೂ ಆದಾಯಕ್ಕೆ ಕೊರತೆ ಇರುವುದಿಲ್ಲ.

ಧನು: ಸಗಟು ವ್ಯಾಪಾರಿಗಳಿಗೆ ಲಾಭವಾಗುವ ಲಕ್ಷಣವಿದೆ. ನಿಮ್ಮ ಸುತ್ತಲ ಪರಿಸರವು ಸಂತಸದಾಯಕವಾಗಿರುತ್ತದೆ. ಭೂ ವ್ಯವಹಾರಗಳಿಂದ ಹೆಚ್ಚಿನ ಲಾಭ ಸಿಗಲಿದೆ. ಬಿಳಿ ಬಣ್ಣವು ಶುಭವನ್ನು ಉಂಟುಮಾಡುವುದು.

ಮಕರ: ಇಂದು ಅನಿರೀಕ್ಷಿತ ಸುದ್ದಿಯೊಂದು ನಿಮಗೆ ಖುಷಿಯನ್ನು ಕೊಡುತ್ತದೆ. ವಿವಾಹದ ವಿಚಾರದಲ್ಲಿ ಪೂರ್ವ ತೀರ್ಮಾನದ ಅಂಶದಿಂದ ಹೊರಬಂದು ಆತ್ಮೀಯರ ಸಲಹೆಗಳಿಗೆ ಹೊಂದಿಕೊಳ್ಳುವಿರಿ. ಪ್ರಯಾಣದಲ್ಲಿ ಜಾಗ್ರತೆವಹಿಸಿ.

ಕುಂಭ: ಸಾರ್ವಜನಿಕ ವಲಯದಲ್ಲಿ ಹೆಚ್ಚಿನ ಸಮಯ ಕಳೆಯಬೇಕಾಗುತ್ತದೆ. ಲೇಖಕರಿಗೆ ತಮ್ಮ ಲೇಖನಗಳಿಗೆ ಬೇಕಾದ ಗೋಪ್ಯ ಅಥವಾ ಕುತೂಹಲಕಾರಿ ವಿಷಯಗಳು ಸಿಗಲಿವೆ. ವಿದೇಶ ಪ್ರಯಾಣದ ಯೋಗ ಸಿಗಲಿದೆ.

ಮೀನ: ಇಂದು ಪತ್ನಿಯೊಂದಿಗೆ ಚರ್ಚಿಸದೇ ಯಾವುದೇ ತೀರ್ಮಾನಗಳನ್ನು ತೆಗೆದುಕೊಳ್ಳುವುದು ಸರಿಯಲ್ಲ. ಹೂವಿನ ವ್ಯಾಪಾರಿಗಳಿಗೆ ಉತ್ತಮ ವ್ಯಾಪಾರವಾಗುವ ಸಾಧ್ಯತೆಯಿದೆ. ಮಗನ ವಿವಾಹ ಸಂಬಂಧ ಕೂಡಿ ಬರಲಿದೆ.

25 ವರ್ಷಗಳ ಹಿಂದೆ

ಗುರುವಾರ, 20-4-2000

● ನ್ಯಾಯಾಲಯದ ಆವರಣದಲ್ಲೇ ಸಮತಾ ನಾಯಕನ ಹತ್ಯೆ

ಪೂರ್ನಿಯಾ, ಏ. 19 (ಪಿಟಿಐ)– ಸಮತಾ ಪಕ್ಷದ ವಿವಾದಾತ್ಮಕ ನಾಯಕ ಹಾಗೂ ಹಲವು ಅಪರಾಧ ಪ್ರಕರಣಗಳಲ್ಲಿ ಶಾಮೀಲಾದ ಆಪಾದನೆ ಹೊತ್ತಿದ್ದ ಮಧುಸೂದನ್ ಸಿಂಗ್ ಅಲಿಯಾಸ್ ಬೂಟಾನ್ ಸಿಂಗ್ ಅವರನ್ನು ಇಂದು ಇಲ್ಲಿನ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಮೂವರು ಅಪರಿಚಿತರು ಗುಂಡಿಟ್ಟು ಕೊಂದಿದ್ದಾರೆ.

ಸಿಂಗ್ ಮೋಟಾರ್ ಸೈಕಲ್‌ನಲ್ಲಿ ನ್ಯಾಯಾಲಯದ ಆವರಣಕ್ಕೆ ಬರುತ್ತಿದ್ದಂತೆಯೇ ಪ್ರವೇಶ ದ್ವಾರದಲ್ಲಿ ಅವರನ್ನು ಗುಂಡಿಟ್ಟು ಕೊಲ್ಲಲಾಯಿತು ಎಂದು ಪೊಲೀಸ್ ಮಹಾನಿರ್ದೇಶಕ ತಿಳಿಸಿದರು.

50 ವರ್ಷಗಳ ಹಿಂದೆ

ಭಾನುವಾರ, 20-4-1975

● ಭಾರತದ ಪ್ರಥಮ ಉಪಗ್ರಹ ಬಾಹ್ಯಾಕಾಶಕ್ಕೆ

ನವದೆಹಲಿ, ಏ. 19– ಬೆಂಗಳೂರಿನಲ್ಲಿ ನಿರ್ಮಿಸಿದ ಪ್ರಥಮ ಭಾರತೀಯ ಉಪಗ್ರಹ ‘ಆರ್ಯಭಟ’ವನ್ನು ಇಂದು ರಷ್ಯಾದಲ್ಲಿ ಕಕ್ಷಾ ಪಥಕ್ಕೆ ಹಾರಿಸಿ, ಭಾರತವು ಬಾಹ್ಯಾಕಾಶ ಯುಗಕ್ಕೆ ಪದಾರ್ಪಣೆ ಮಾಡಿತು.

ಈ ಉಪಗ್ರಹವನ್ನು ಬೆಂಗಳೂರಿನ ಪೀಣ್ಯದಲ್ಲಿ ಭಾರತ ಬಾಹ್ಯಾಕಾಶ ಸಂಶೋಧನೆ ಸಂಸ್ಥೆಯ ವಿಜ್ಞಾನಿಗಳು ರೂಪಿಸಿ ನಿರ್ಮಿಸಿದ್ದಾರೆ.

360 ಕಿಲೊಗ್ರಾಮ್ ತೂಕದ ನೀಲಿ ಮತ್ತು ಬೂದು ಬಣ್ಣದ ಬಾಹ್ಯಾಕಾಶ ನೌಕೆಯನ್ನು ರಷ್ಯಾದ ಅಂತರ ಕಾಸ್ಮಾಸ್ ರಾಕೆಟನಿಂದ ಬಾಹ್ಯಾಕಾಶಕ್ಕೆ ಹಾರಿಸಲಾಯಿತು.

ಪದಬಂಧ 6017

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಎಳೆಯ ಪ್ರಾಯವಿದು (5)
3.ದೇವಾಲಯದ ಗೋಪುರದ ತುದಿ (3)
5.ಇಪ್ಪತ್ನಾಲ್ಕು ಗಂಟೆಯ ಅವಧಿ (2)
7.ನಂಟರ ಸಮೂಹ (3)
8.ತಪ್ಪಾಗಿ ಭಾವಿಸುವಿಕೆ (5)
11.ಹರನನ್ನು ಒಲಿಸಿಕೊಂಡಿರುವ ಶೂರ (3)
12.ಸೂಕ್ಷ್ಮವಾದ ಅಂಶ ಉಲ್ಟಾ ಕಾಣುತ್ತಿದೆ (2)
14.ಈತ ಜಿಪುಣನೇ ಬಿಡಿ (3)
15.ನೈಜವಾದ ಮೈಗುಣ (5)

ಮೇಲಿಂದ ಕೆಳಕ್ಕೆ
1.ಕೊನೆಗಿದ್ದ ರಾಣಿಯ ಬಳಿ ಈ ನೀಚನಿಗೇನು ಕೆಲಸ? (4)
2.ಮಲ್ಲ ಇಲ್ಲಿದ್ದಾನೆ (3)
4.ಸಭೆ ನಡೆಯುತ್ತಿರುವ ಜಾಗ (4)
6.ಹಳೆಯದನ್ನು ಹೊಸತು ಮಾಡುವಿಕೆ (5)
7.ಬಣ್ಣ ಹಚ್ಚಿ ಮಾಡಿದ ವರ್ಣನೆ (3)
8.ವರನು ಹಿಡಿದಿರುವ ಲೋಹ (3)
9.ಕಂದಾಯವನ್ನು ವಸೂಲು ಮಾಡುವುದು (4)
10.ಅಪಕೀರ್ತಿ ಹೀಗೆ ಬಂದಿದೆ (4)
13.ಆಜ್ಞಾನುಸಾರ ಕೆಲಸ ಮಾಡುವವನು ತಿರುಗಿದ್ದಾನಲ್ಲಾ! (3)



6016ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉಪಾಖ್ಯಾನ 3.ಕೋಲಾಹಲ
5.ಗುಡಾಣ 6.ತಿರುಪು
8.ಪುಲ್ಲಿಂಗ 9.ಅಂಕ
10.ಲಾಯ 11.ನಮಿಸು
12.ಸುಗಮ 14.ಚರಟಾ
16.ಗ್ರಹಚಾರ 17.ನಾರಿಕೇಳ

ಮೇಲಿಂದ ಕೆಳಕ್ಕೆ:
1.ಉನ್ನತಿ 2.ನಗು
3.ಕೋಣ 4.ಲವಂಗ
7.ಪುಷ್ಟೀಕರಿಸು 8.ಪುಸಲಾಯಿಸು
11.ನಖಾಗ್ರ 13.ಮರುಳ
14.ಚರ 15ಟಾನಾ

ಸುಡೊಕು 6402

	9			5			2	1
3		5	2		1	7		
	1			9			3	5
5		7				1		
	6			2			8	
9		8			4	5		2
1		2		8			6	
			5		6	2		3
6		3		4			5	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6401 ಸುಡೊಕು

6	3	4	2	9	7	1	5	8
9	1	2	5	3	8	4	6	7
8	5	7	4	6	1	3	2	9
2	9	3	7	8	4	6	1	5
1	4	8	9	5	6	7	3	2
5	7	6	1	2	3	8	9	4
3	6	9	8	4	5	2	7	1
7	8	5	6	1	2	9	4	3
4	2	1	3	7	9	5	8	6

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

'ಸರ್ಕಾರಿ ಆಸ್ತಿ ವಶಕ್ಕೆ ಗಾಂಧಿ ಕುಟುಂಬದ ಪಿತೂರಿ'

ಮುಂಬೈ (ಪಿಟಿಐ): 'ಈ ದೇಶದ ಆಸ್ತಿಯನ್ನು ತಮ್ಮ ವೈಯಕ್ತಿಕ ಬಳಕೆಗಾಗಿ ಗಾಂಧಿ ಕುಟುಂಬವು ಪಡೆದುಕೊಳ್ಳಲು ಪಿತೂರಿ ಮಾಡಿದೆ. ದೇಶದ ಆಸ್ತಿಯನ್ನು ರಕ್ಷಿಸುವ ಉದ್ದೇಶದಿಂದ ಜಾರಿ ನಿರ್ದೇಶನಾಲಯವು (ಇ.ಡಿ) ಕ್ರಮ ಕೈಗೊಂಡಿದೆ' ಎಂದು ಕೇಂದ್ರ ಸಚಿವ ಪೀಯೂಷ್ ಗೋಯಲ್ ಅವರು ಶನಿವಾರ ಅಭಿಪ್ರಾಯಪಟ್ಟರು.

'ನ್ಯಾಷನಲ್ ಹೆರಾಲ್ಡ್' ಪ್ರಕರಣಕ್ಕೆ ಸಂಬಂಧಿಸಿ ಪೀಯೂಷ್ ಗೋಯಲ್ ಅವರು ಪ್ರತಿಕ್ರಿಯಿಸಿದರು. 'ನ್ಯಾಷನಲ್ ಹೆರಾಲ್ಡ್ ಪತ್ರಿಕೆಯ ಮೂಲಕ ಸಾರ್ವಜನಿಕರಿಂದ ಮಿಲಿಯಲ್ಲಿ ಆಸ್ತಿಯನ್ನು ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರು ಕ್ರಮ ಮಾಡಿ ತಮ್ಮ ವಶ ಮಾಡಿಕೊಳ್ಳಲು ಯೋಜಿಸಿದರು' ಎಂದು ದೂರಿದರು.

ಪೀಯೂಷ್ ಗೋಯಲ್

'ಅದು ಕಾಂಗ್ರೆಸ್ ಪಕ್ಷದ ಪತ್ರಿಕೆಯಾಗಿತ್ತು. ವಿವಿಧ ರಾಜ್ಯಗಳಲ್ಲಿ ಇದ್ದ ಕಾಂಗ್ರೆಸ್ ಸರ್ಕಾರಗಳು ಪತ್ರಿಕೆಗೆ ಭೂಮಿ ನೀಡಿವೆ. ನಂತರ, ಆ ಪತ್ರಿಕೆ ಮುಚ್ಚಿಹೋಯಿತು. ಆಗ ಈ ಪತ್ರಿಕೆಯನ್ನು ಮರುವ ಯೋಜನೆ ರೂಪಿಸಿದರು. ಕಾಂಗ್ರೆಸ್ ನಾಯಕರ ನಿರ್ದೇಶನದ ಮೇರೆಗೆ, ಅಸೋಸಿಯೇಟೆಡ್ ಜರ್ನಲ್ ಲಿಮಿಟೆಡ್ (ಎಜೆಎಲ್) ₹38 ಕೋಟಿಯಷ್ಟು ಬೋಗಸ್ ಹಣ ಪಡೆದುಕೊಂಡರು' ಎಂದರು.

ಇ.ಡಿ ಕ್ರಮದಿಂದ ಹೆದರೆವು: ಖರ್ಗೆ

ನವದೆಹಲಿ(ಪಿಟಿಐ): 'ನಮ್ಮ ನಾಯಕರ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ಕ್ರಮ ಕೈಗೊಳ್ಳುವ ಮೂಲಕ ನಮ್ಮನ್ನು ಹೆದರಿಸಲಾಗದು' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಶನಿವಾರ ಹೇಳಿದ್ದಾರೆ.

ಪಕ್ಷದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಉಸ್ತುವಾರಿಗಳ ಸಭೆಯಲ್ಲಿ ಮಾತನಾಡಿದ ಅವರು, 'ನ್ಯಾಷನಲ್ ಹೆರಾಲ್ಡ್ ಪ್ರಕರಣ ಹಾಗೂ ವಕ್ಫ್ ಕಾಯ್ದೆ ವಿರುದ್ಧದ ಕಾನೂನು ಹೋರಾಟದಲ್ಲಿ ನಾವು ಗೆಲ್ಲುತ್ತೇವೆ' ಎಂದು ಹೇಳಿದ್ದಾರೆ.

'ನ್ಯಾಷನಲ್ ಹೆರಾಲ್ಡ್ ಪ್ರಕರಣದ ದೋಷಾರೋಪ ಪಟ್ಟಿಯಲ್ಲಿ ಪಕ್ಷದ ಮಾಜಿ ನಾಯಕರಾದ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರ ಹೆಸರು ಉಲ್ಲೇಖಿಸಲಾಗಿದೆ. ದೆಹಲಿ, ಲಖನೌ ಹಾಗೂ ಮುಂಬೈನಲ್ಲಿರುವ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಪ್ರತೀಕಾರದ ಭಾಗವಾಗಿ ಈ ಕ್ರಮ ಕೈಗೊಳ್ಳಲಾಗಿದೆ' ಎಂದು ಖರ್ಗೆ ಹೇಳಿದ್ದಾರೆ.

'ವಕ್ಫ್ ಕಾಯ್ದೆಗೆ ಸಂಬಂಧಿಸಿ ಕಾಂಗ್ರೆಸ್ ಹಾಗೂ ಇತರ ವಿರೋಧ ಪಕ್ಷಗಳು ಎತ್ತಿದ್ದ ಅಂಶಗಳಿಗೆ ಸುಪ್ರೀಂ ಕೋರ್ಟ್ ಮಹತ್ವ ನೀಡಿದೆ. ಈ ಕಾಯ್ದೆ ವಿಚಾರಕ್ಕೆ ಸಂಬಂಧಿಸಿ ವಿಪಕ್ಷಗಳಲ್ಲಿ ಕಾಂಗ್ರೆಸ್ ಒಗ್ಗಟ್ಟು ಮೂಡಿಸಿದೆ' ಎಂದೂ ಹೇಳಿದ್ದಾರೆ.

'ನಕಲಿ ಜಾಹೀರಾತು, ಬಾಡಿಗೆ ಒಪ್ಪಂದಗಳೇ ಹಗರಣದ ಮೂಲ'

ನವದೆಹಲಿ (ಪಿಟಿಐ): ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ನಕಲಿ ಬಾಡಿಗೆ ಒಪ್ಪಂದಗಳು, ಮುಂಗಡವಾಗಿ ಬಾಡಿಗೆ ಪಾವತಿ ಮತ್ತು ನಕಲಿ ಜಾಹೀರಾತುಗಳನ್ನು ಹಣ ಅಕ್ರಮ ವರ್ಗಾವಣೆಗೆ ಬಳಸಿಕೊಳ್ಳಲಾಗಿದೆ ಎಂದು ಬಿಜೆಪಿ ವಕ್ತಾರ ಪ್ರತ್ಯುಷ್ ಕಾಂತ್ ಶನಿವಾರ ಆರೋಪಿಸಿದ್ದಾರೆ.

'ಯಂಗ್ ಇಂಡಿಯನ್' ಎನ್‌ಜಿಒದಲ್ಲಿ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಶೇ 76ರಷ್ಟು ಪಾಲು ಹೊಂದಿದ್ದು, ಅಸ್ತಿತ್ವದಲ್ಲಿದ ಸಂಸ್ಥೆಗಳು ಮತ್ತು ವ್ಯಕ್ತಿಗಳಿಂದ ₹18.12 ಕೋಟಿ ದೇಣಿಗೆ ಪಡೆದಿದ್ದಾರೆ. ನ್ಯಾಷನಲ್ ಹೆರಾಲ್ಡ್ ಪತ್ರಿಕೆಯ ಮಾಲೀಕತ್ವ ಹೊಂದಿದ ಅಸೋಸಿಯೇಟೆಡ್ ಜರ್ನಲ್ ₹142 ಕೋಟಿ ಬಾಡಿಗೆ ಪಡೆದಿದೆ. ಆದರೆ, ಇದನ್ನು ಪುರಸ್ಕರಿಸುವ ಯಾವುದೇ ಒಪ್ಪಂದವೇ ಇಲ್ಲ. ಈ ಪತ್ರಿಕೆಗೆ ಕಾಂಗ್ರೆಸ್‌ನೊಂದಿಗೆ ನಂಟಿರುವ ಸಂಸ್ಥೆಗಳು ₹15.86 ಕೋಟಿ ಮೌಲ್ಯದ ಜಾಹೀರಾತು ನೀಡಿವೆ. ಕಾಂಗ್ರೆಸ್‌ನಲ್ಲಿ ಭ್ರಷ್ಟಾಚಾರವು ಅತಿಯಾಗಿ ಬೇರೂರಿದೆ ಎಂದರು.

ಮಾಲೆಗಾಂವ್ ಪ್ರಕರಣ: ಮೇ 8ಕ್ಕೆ ತೀರ್ಪು

ಮುಂಬೈ(ಪಿಟಿಐ): ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಕೋಮು ಸೂಕ್ಷ್ಮ ಪಟ್ಟಣವನ್ನು ಬೆಚ್ಚಿಬೀಳಿಸಿದ ಮಾಲೆಗಾಂವ್ ಸ್ಫೋಟ ಪ್ರಕರಣದ ವಿಚಾರಣೆಯನ್ನು 17 ವರ್ಷಗಳ ನಂತರ ಪೂರ್ಣಗೊಳಿಸಿರುವ ವಿಶೇಷ ಎನ್‌ಐಎ ನ್ಯಾಯಾಲಯವು ತನ್ನ ತೀರ್ಪನ್ನು ಶನಿವಾರ ಮೇ 8ಕ್ಕೆ ಕಾಯ್ದಿರಿಸಿದೆ.

ಮುಂಬೈನಿಂದ ಸುಮಾರು 200 ಕಿ.ಮೀ. ದೂರದಲ್ಲಿರುವ ಮಾಲೆಗಾಂವ್ ಪಟ್ಟಣದ ಮಸೀದಿಯೊಂದರ ಬಳಿ 2008ರ ಸೆ. 29ರಂದು ಬೈಕ್‌ನಲ್ಲಿ ಇಟ್ಟಿದ್ದ ಸಾಧನವೊಂದು ಸ್ಫೋಟಗೊಂಡು ಆರು ಜನ ಮೃತಪಟ್ಟಿದ್ದರು. 100ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು. ಶನಿವಾರ ಪ್ರಾಸಿಕ್ಯೂಷನ್ ಅಂತಿಮ ವಾದಗಳನ್ನು ಲಿಖಿತವಾಗಿ ಸಲ್ಲಿಸಿತು. ನಂತರ ವಿಶೇಷ ನ್ಯಾಯಾಧೀಶ ಎ.ಕೆ. ಲಾಹೋಟಿ ತೀರ್ಪು ಕಾಯ್ದಿರಿಸಿ ಪ್ರಕರಣವನ್ನು ಮೇ 8ಕ್ಕೆ ಮುಂದೂಡಿದರು.

'ಹಿಂದೆಂದೂ ಇಂತಹ ನಡೆ ಕಂಡಿರಲಿಲ್ಲ'

ನವದೆಹಲಿ (ಪಿಟಿಐ): ರಾಷ್ಟ್ರಪತಿ ಅವರು ತೀರ್ಮಾನ ಕೈಗೊಳ್ಳುವುದಕ್ಕೆ ನ್ಯಾಯಾಂಗವು ಕಾಲಮಿತಿ ವಿಧಿಸಿದ್ದನ್ನು ಆಕ್ಷೇಪಿಸಿದ್ದ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅವರ ನಡೆಯನ್ನು ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್ ಟೀಕಿಸಿದ್ದಾರೆ. 'ಧನಕರ್ ಅವರ ನಡೆ ಅಸಾಂವಿಧಾನಿಕ. ರಾಜ್ಯಸಭಾ ಸಭಾಪತಿಯೊಬ್ಬರು ಹೀಗೆ ರಾಜಕೀಯ ಹೇಳಿಕೆ ನೀಡುವುದನ್ನು ಹಿಂದೆಂದೂ ನೋಡಿಲ್ಲ' ಎಂದರು.

ಕರ್ನಾಟಕ ಸರ್ಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560001. ದೂರವಾಣಿ: 080–22215601, 22211246 ಫ್ಯಾಕ್ಸ್ : 22215602

ಸಂಖ್ಯೆ: ಡಿವೈಇಎಸ್/ತಾಂ.ಶಾ/ಕ್ರೀಯೋ/221/2024–25 ದಿನಾಂಕ: 15.04.2025

ಮರುಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ವಿಷಯ: ಉಪ–ನಿರ್ದೇಶಕರು (ಆಡಳಿತ), ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560 001 ಕರ್ನಾಟಕ, ಭಾರತ, ಇವರು, ಕರ್ನಾಟಕ ರಾಜ್ಯದಲ್ಲಿರುವ ಕೊಡಗು ಜಿಲ್ಲೆಯ ಪೊನ್ನಂಪೇಟೆಯಲ್ಲಿ ಪುರುಷರಿಗೆ ಮತ್ತು ಮಹಿಳೆಯರಿಗಾಗಿ ಕ್ರೀಡಾ ವಸತಿ ನಿಲಯ ನಿರ್ಮಿಸುವ ಕಾಮಗಾರಿಗೆ ಟೆಂಡರ್ ಮೂಲಕ ಕೈಗೊಳ್ಳಲು ಗುತ್ತಿಗೆದಾರರನ್ನು ನೇಮಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಟೆಂಡರ್ ಅನ್ನು ಆಹ್ವಾನಿಸಿದೆ.

ಕಾಮಗಾರಿ ವಿವರ : ಪೊನ್ನಂಪೇಟೆಯಲ್ಲಿ ಪುರುಷರಿಗೆ ಮತ್ತು ಮಹಿಳೆಯರಿಗಾಗಿ ಕ್ರೀಡಾ ವಸತಿ ನಿಲಯ ನಿರ್ಮಿಸುವ ಕಾಮಗಾರಿ ಕುರಿತು. (ಕಾಲ್–2). ಟೆಂಡರ್‌ಗಿಟ್ಟ ಮೊತ್ತ : ರೂ. 373.39 ಲಕ್ಷಗಳು, ಇಎಂಡಿ ಮೊತ್ತ : ರೂ. 5,60,094.00.

ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 15.05.2025 ಸಮಯ : 16.00 ಗಂಟೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 16.05.2025 ಸಮಯ: 16.31 ಗಂಟೆ.

ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/–
ಉಪ ನಿರ್ದೇಶಕರು (ಆಡಳಿತ)
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರ)

DIPR/CP/270/Zen/2025-26

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಖರೀದಿ ಶಾಖೆ, ಚಾವಿಸನಿನಿ, ಮೈಸೂರು–570017,
ದೂರವಾಣಿ: 9448994705 ಇ–ಮೇಲ್: gmpurc@cescmysore.org ವೆಬ್‌ಸೈಟ್: www.cescmysore.org

ಸಂಖ್ಯೆ: ಚಾವಿಸನಿನಿ/ಪ್ರ.ವ್ಯ/ಸ.ಪ್ರ.ವ್ಯ(ಖ)/ಸ.ಪ್ರ.ವ್ಯ(ಖ)–1/2025–26/1778 ದಿನಾಂಕ: 19.04.2025

ಇ–ಹರಾಜು ಪ್ರಕಟಣೆ (ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮಾತ್ರ)

ಚಾ.ವಿ.ಸ.ನಿ.ನಿ ವತಿಯಿಂದ ಈ ಕೆಳಕಂಡ ವಿಭಾಗೀಯ ಉಗ್ರಾಣಗಳಲ್ಲಿ ದಾಸ್ತಾನಿರುವ ರದ್ದಿ ವಿತರಣಾ ಪರಿವರ್ತಕಗಳು ಹಾಗೂ 33/11 ಕೆ.ವಿ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ದಾಸ್ತಾನಿರುವ ವಿವಿಧ ಸಾಮರ್ಥ್ಯದ ರದ್ದಿ ಶಕ್ತಿ ಪರಿವರ್ತಕಗಳನ್ನು ಮತ್ತು ಉಪಕೇಂದ್ರ ಸಾಮಗ್ರಿಗಳನ್ನು 'AS IS WHERE IS BASIS' ಆಧಾರದ ಮೇಲೆ ಇ–ಹರಾಜು ಮುಖೇನ ವಿಲೇವಾರಿ ಮಾಡಲು ಬಿಡ್ ಆಹ್ವಾನಿಸಿದೆ. ವಿಭಾಗೀಯ ಉಗ್ರಾಣಗಳ ಮತ್ತು ಇತರೆ ವಿವರಗಳು ಕೆಳಕಂಡಂತಿವೆ;

ಕ್ರ.ಸಂ.	ವಿಭಾಗ	ಮೊಬೈಲ್ ಸಂಖ್ಯೆ	ಕ್ರ.ಸಂ.	ವಿಭಾಗ	ಮೊಬೈಲ್ ಸಂಖ್ಯೆ
1	ಎನ್. ಆರ್. ಮೊಹಲ್ಲಾ	9448994715	10	ಸಕಲೇಶಪುರ	9480810365
2	ವಿ. ವಿ. ಮೊಹಲ್ಲಾ	9448994842	11	ಹೊಳೆನರಸೀಪುರ	9449598598
3	ನಂಜನಗೂಡು	9448994718	12	ಚನ್ನರಾಯಪಟ್ಟಣ	9449598520
4	ಹುಣಸೂರು	9449598554	13	ಅರಸೀಕೆರೆ	9449598544
5	ಕೆ.ಆರ್ ನಗರ	9448283391	14	ಮಂಡ್ಯ	8277889833
6	ಮಡಿಕೇರಿ	9449598541	15	ಮದ್ದೂರು	9449598525
7	ಕೊಳ್ಳೇಗಾಲ	9480841185	16	ಪಾಂಡವಪುರ	9449598596
8	ಚಾಮರಾಜನಗರ	9449598542	17	ಕೆ.ಆರ್.ಪೇಟೆ	8277883811
9	ಹಾಸನ	9449598597	18	ನಾಗಮಂಗಲ	9480816902

ರದ್ದಿ ಸಾಮಗ್ರಿಗಳ ಪರಿಮಾಣ ಮತ್ತು ಇತರೆ ವಿವರಗಳನ್ನು ಹಾಗೂ ಹರಾಜಿನ ದಿನಾಂಕ, ಸಮಯ ಮತ್ತು ಅರ್ಹ ಬಿಡ್‌ದಾರರು ಸದರಿ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಗ್ಗೆ ವಿವರಗಳನ್ನು https://kppp.karnataka.gov.in ನಲ್ಲಿ ದಿನಾಂಕ: 22-04-2025 ಅಥವಾ ನಂತರ ಪಡೆಯಬಹುದಾಗಿರುತ್ತದೆ. ಇ–ಪೋರ್ಟಲ್‌ನ ಬಗ್ಗೆ ಮಾಹಿತಿಗಾಗಿ ಸಹಾಯವಾಣಿ +91-8046010000, +91-8068948777ಗೆ ಅಥವಾ ಇ–ಮೇಲ್ ವಿಳಾಸ support@eprochelpdesk.comಗೆ ಸಂಪರ್ಕಿಸಬಹುದಾಗಿದೆ.

ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ : 1912

ಸಹಿ/–
ಪ್ರಧಾನ ವ್ಯವಸ್ಥಾಪಕರು(ಖರೀದಿ)
ಚಾವಿಸನಿನಿ, ಮೈಸೂರು

DIPR/MYS/KAVITA/73/2025-26

ಕರ್ನಾಟಕ ಸರ್ಕಾರ GOVERNMENT OF KARNATAKA
ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ ಕೇಂದ್ರ ಬಳ್ಳಾರಿ.

Reg.No:205/1995-96-Recognized by Medical Council of India, New Delhi vide No:MCI-57(3)/79-Med/1912, Dtd.16-04-1979 &Endst. No.MCI-37(1)(Recog.-18)(UG)/2017-Med./109629,Dt: 06/05/2019
DIRECTOR: 8147796529 PRINCIPAL :8147796527
CAO:8147796526 PA : 8147796539.
e-mail-ids:directorbmcrcballari@gmail.com, website : https://vims.karnataka.gov.inprincipalbmcrcballari@gmail.com

No: BMCRC/SUP/TEND/GDC/01/2025-26/08
Date:16.04.2025

ಇ–ಟೆಂಡರ್ ಅಧಿಸೂಚನೆ

ಬಿಎಂಸಿಆರ್ ಸಿ, ಸಂಸ್ಥೆ, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಕೇಂದ್ರ ಬಳ್ಳಾರಿ ಇಲ್ಲಿಗೆ ದಂತ ಉಪಕರಣಗಳನ್ನು ಪೂರೈಸಲು ಕೆ.ಟಿ.ಪಿ.ಪಿ ಅಧಿನಿಯಮ–1999–2000ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಇ–ಪೋರ್ಟಲ್ https://kppp.karnataka.gov.in ಮೂಲಕ ಇ–ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಆಸಕ್ತ ಬಿಡ್‌ದಾರರು ಮೇಲಿನ ಪೋರ್ಟಲ್ ನಲ್ಲಿ ಟೆಂಡರನ್ನು ದಿನಾಂಕ: 02.05.2025 ಸಂಜೆ 5.00 ಗಂಟೆಯ ಒಳಗಾಗಿ ಸಲ್ಲಿಸಲು ಕೋರಿದೆ. ಟೆಂಡರಿನ ಅಂದಾಜು ಮೊತ್ತ ರೂ. 123.42 ಲಕ್ಷಗಳಿರುತ್ತವೆ. ಹೆಚ್ಚಿನ ವಿವರಗಳನ್ನು ಮೇಲಿನ ವೆಬ್ ಸೈಟ್ www.bmcrcballari.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/– ಡೀನ್ ಹಾಗು ನಿರ್ದೇಶಕರು, ಬಿಎಂಸಿ ಆರ್ ಸಿ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/39/ಕೆವಿಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ
ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು

ದೂರವಾಣಿ: +91–8431186388, ಇ–ಮೇಲ್: sabvmcri@gmail.com

ಸಂಖ್ಯೆ: SABVMCRI/E-TENDER/ETP&STP/GG/29/2024-25 ದಿನಾಂಕ: 19–04–2025
TENDER No: DME/2024-25/SE0402/CALL-2

ಟೆಂಡರ್ ಅಧಿಸೂಚನೆ

ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇದರ ಅಧೀನದಲ್ಲಿ ಬರುವ ಸರ್ಕಾರಿ ಹೆಚ್.ಎಸ್.ಐ.ಎಸ್ ಘೋಷಾ ಆಸ್ಪತ್ರೆ ಮತ್ತು ಬಾಲಕಿಯರ ವಸತಿ ನಿಲಯಗಳಿಗೆ ಇ.ಟಿ.ಪಿ ಮತ್ತು ಎಸ್.ಟಿ.ಪಿ. ಯ ವಾರ್ಷಿಕ ನಿರ್ವಹಣೆಗಾಗಿ ಕೆಟಿಪಿಪಿ ನಿಯಮದಂತೆ ಇ–ಟೆಂಡರ್‌ಗಳನ್ನು ಅರ್ಹ ಆಸಕ್ತ ಸಂಸ್ಥೆಗಳಿಂದ ಆಹ್ವಾನಿಸಲಾಗಿದೆ.

1) ಟೆಂಡರ್ ಡಾಕ್ಯೂಮೆಂಟ್‌ನ್ನು ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭಿಸುವ ದಿನಾಂಕ: 19–04–2025 ರಿಂದ. 2) ಟೆಂಡರ್ ಬಗ್ಗೆ ಪ್ರಶ್ನಾವಳಿಗಳಿಗೆ ಕೊನೆಯ ದಿನಾಂಕ: 24–04–2025 ರ ಸಂಜೆ 5.30 ಗಂಟೆವರೆಗೆ. 3) ಇ–ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 28–04–2025 ರ ಸಂಜೆ 5.30 ಗಂಟೆವರೆಗೆ. 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 02–05–2025 ರಂದು ಬೆಳಗ್ಗೆ 10.30 ಗಂಟೆಗೆ. ವಿವರವಾದ ಮಾಹಿತಿಗಾಗಿ ವೆಬ್‌ಸೈಟ್: https://kppp.karnataka.gov.in ಗೆ ಭೇಟಿನೀಡಿ. ಯಾವುದೇ ಹೆಚ್ಚಿನ ಮಾಹಿತಿ ಬೇಕಾದ ಪಕ್ಷದಲ್ಲಿ ಕೆಲಸದ ದಿನಗಳಲ್ಲಿ ಈ ಸಂಸ್ಥೆಯ ನಿರ್ದೇಶಕರು ಹಾಗೂ ಡೀನ್ / ಸಹಾಯಕ ಆಡಳಿತಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ನಿರ್ದೇಶಕರು ಹಾಗೂ ಡೀನ್
ಶ್ರೀ.ಅ.ಬಿ.ವಾ.ವೈ.ಮ.ಸಂ.ಸಂ., ಬೆಂಗಳೂರು.

ವಾಸಾಸಂಇ/ವಾ.ಪ್ರ/272/ಅಡ್ವರ್ಟೋರ್/2025–26

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕೇಂದ್ರ ಕಛೇರಿ, ಉಗ್ರಾಣ ಮತ್ತು ಖರೀದಿ ವಿಭಾಗ, ಕೆ. ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–560 027

ಟೆಂಡರ್ ಆಹ್ವಾನಿಸುವ ನೋಟೀಸ್ ಸಂಖ್ಯೆ: 01 ದಿನಾಂಕ:18.04.2025

ಈ ಕೆಳಗೆ ತಿಳಿಸಿರುವ ಸಾಮಗ್ರಿಗಳನ್ನು ಸರಬರಾಜು ಮಾಡಲು/ ಸೇವೆಗಳನ್ನು ಒದಗಿಸಲು ಅರ್ಹ ಸರಬರಾಜುದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in. ಮೂಲಕ (ಪೂರ್ವ ಅರ್ಹತೆ ಮತ್ತು ಅಥವಾ ವಾಣಿಜ್ಯ ದರ) ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಇ – ಪೋರ್ಟಲ್ ನ ಟೆಂಡರ್ ಸಂಖ್ಯೆ	ಖರೀದಿಸುವ ಸಾಮಗ್ರಿಗಳ/ಸೇವೆಗಳ ವಿವರ	ಟೆಂಡರ್‌ನ ಮೊತ್ತ ಕೋಟಿ ರೂ.ಗಳಲ್ಲಿ (ಅಂದಾಜು)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ &ವೇಳೆ @17.00ಗಂಟೆ
KSRTC/2025-26/IND0199	ಫ್ಯೂಯಲ್, ಏರ್ ಮತ್ತು ಆಯಿಲ್ ಫಿಲ್ಟರ್ಸ್‌ಗಳ ಖರೀದಿ	12.00	19/05/2025
KSRTC/2025-26/IND0200	ಏರ್ ಸಸ್ಪೆನ್‌ಷನ್‌ನ ಬಿಡಿಭಾಗಗಳ ಖರೀದಿ	1.50	19/05/2025
KSRTC/2025-26/IND0201	ಎನ್ವಲಪ್ಸ್ ಮತ್ತು ಕ್ಯೂರಿಂಗ್ ಬ್ಯಾಗ್ಸ್‌ಗಳ ಖರೀದಿ	1.30	19/05/2025
KSRTC/2025-26/IND0202	GHT ಬೋಲ್ಟ್ & GHT U ಬೋಲ್ಟ್ ನೈಲಾಕ್ ನಟ್‌ಗಳ ಖರೀದಿ	1.37	19/05/2025
KSRTC/2025-26/IND0204	ಇಂಡಸ್ಟ್ರೀಯಲ್ ಗ್ಯಾಸ್‌ಗಳ ಖರೀದಿ (ಡಿಸಾಲ್ವ್ಡ ಅಸಿಟಲೀನ್, ಕಂಪ್ರೆಸ್ಡ್ ಆಕ್ಸಿಜೆನ್, ಸಿಒ2, ಒ2 & ಕಮರ್ಶಿಯಲ್ ಆರ್ಗಾನ್‌ಗಳ ಗ್ಯಾಸ್)	0.95	05/05/2025
KSRTC/2025-26/IND0205	ಇಂಜಿನ್ ವಾಲ್ವ್ ಗೈಡ್ಸ್ ಮತ್ತು ಇನ್ಸರ್ಟ್‌ಗಳ ಖರೀದಿ	1.10	19/05/2025
ಅಲ್ಪಾವಧಿ ಟೆಂಡರ್			
KSRTC/2024-25/IND0198	ಪ್ರಿಕ್ಯೂಡ್ ಟ್ರೆಡ್ ರಬ್ಬರ್ ಮತ್ತು ಪೂರಕ ಸಾಮಗ್ರಿಗಳ ಖರೀದಿ	12.00	25/04/2025
KSRTC/2025-26/IND0203	ರೆಟ್ರೋ ರಿಫ್ಲೆಕ್ಟಿವ್ ಟೇಪ್‌ಗಳು (QR code ಇಲ್ಲದ) ಖರೀದಿ	1.15	03/05/2025

ಮುಂದುವರೆದು, ಸಾಮಾಗ್ರಿಗಳ ತಾಂತ್ರಿಕ ವಿವರಗಳು, ವ್ಯಾಪ್ತಿ ಇತರೆ ನಿಯಮ ಮತ್ತು ನಿಬಂಧನೆಗಳಲ್ಲಿ, ದಿನಾಂಕಗಳಲ್ಲಿ ಯಾವುದೇ ಸೇರ್ಪಡೆ/ತಿದ್ದುಪಡಿ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿಯೇ ಮಾತ್ರ ಪ್ರಕಟಗೊಳಿಸಲಾಗುವುದು.

ಸೂಚನೆ:– ಸೂಚನೆ:–ಆಸಕ್ತಿಯುಳ್ಳ ಸರಬರಾಜುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿ ಹೊಂದಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in ಅಥವಾ ದೂರವಾಣಿ ಸಂಖ್ಯೆ: 080–46010000/080–68948777, ಕರೆಮಾಡಿ Support@eprochelpdesk.com, ಮೇಲ್ ಮಾಡಿ ಮಾಹಿತಿ ಪಡೆಯ ಬಹುದಾಗಿರುತ್ತದೆ. ಬಿಡ್ದುದಾರರಿಗೆ ಟೆಂಡರ್ ಸಂಬಂಧ ಯಾವುದೇ ಮಾಹಿತಿ ಅಗತ್ಯವಿದ್ದರೆ cosp@ksrtc.org, ನಲ್ಲಿ ಸಂಪರ್ಕಿಸ ಬಹುದಾಗಿದೆ. (ಸಂಪರ್ಕಿಸಿ: 7760990225, 7760990224)

ಸಹಿ/–
ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿಗಳು
(ಟೆಂಡರ್ ಕರೆಯುವ ಪ್ರಾಧಿಕಾರಿ)

ವಾಸಾಸಂಇ/ವಾಪ್ರ/ಜಿಎ/268/2025–26

ಪ್ರಧಾನ ಇಂಜಿನಿಯರ್‌ರವರ ಕಛೇರಿ, ಪಿ.ಆರ್.ಎ.ಎಂ.ಸಿ., ಪಿ.ಡಬ್ಲ್ಯೂ.ಡಿ., ಬೆಂಗಳೂರು–560001

ಸಂಖ್ಯೆ: ಪ್ರಇಂ/ಲೋಇ/05/ಪಿಆರ್‌ಎಎಂಸಿ/2025–26/89 ದಿನಾಂಕ: 19.04.2025

ಟೆಂಡರ್ ಪ್ರಕಟಣೆ

ಮಂಡ್ಯ ಹಾಗೂ ಯಾದಗಿರಿ ಜಿಲ್ಲೆಗಳ ರಸ್ತೆ ಸುರಕ್ಷತಾ ಕಾಮಗಾರಿಗಳಿಗೆ ಒಟ್ಟು ಆರು ಟೆಂಡರ್‌ಗಳನ್ನು ಕಾರ್ಯಪಾಲಕ ಇಂಜಿನಿಯರ್, ಪಿ.ಆರ್.ಎ.ಎಂ.ಸಿ., ರವರು ರಾಜ್ಯಪಾಲರ ಪರವಾಗಿ ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು ಕರ್ನಾಟಕ ಕೆಪಿಪಿ ಪೋರ್ಟಲ್‌ನಿಂದ (www.kppp.karnataka.gov.in) ದಿನಾಂಕ: 21.04.2025 ರಂದು ಸಂಜೆ 05:30ರ ನಂತರ ಪಡೆಯಬಹುದಾಗಿರುತ್ತದೆ.

ಸಹಿ/–
ಕಾರ್ಯಪಾಲಕ ಇಂಜಿನಿಯರ್, ಪಿಆರ್‌ಎಎಂಸಿ, ಲೋ.ಇ. ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/264/ಆಕಾರ್/2025–26

ಪಟ್ಟಣ ಪಂಚಾಯತ್ ಕಾರ್ಯಾಲಯ ಬೈಂದೂರು–576214, ಉಡುಪಿ ಜಿಲ್ಲೆ

ಸಂ: ಬೈ.ಪ.ಪ/ಕಿ.ಅ/SBM 2.0/ಸಿಆರ್/104/2025–26 ದಿ: 17/04/2025

ಈ–ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಆದ್ಯಾದೇಶ 1999 ನಿಯಮಾವಳಿಗಳು 2000 ರಂತೆ ಬೈಂದೂರು ಪಟ್ಟಣ ಪಂಚಾಯತ್ ವ್ಯಾಪ್ತಿಯ ಸ್ವಚ್ಛ ಭಾರತ್ ಮಿಷನ್ (ನಗರ) 2.0 ನಿಧಿಯಡಿಯಲ್ಲಿ ನಿರ್ವಹಿಸಬೇಕಾದ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ KPPP ಪೋರ್ಟಲ್ ನಲ್ಲಿ Standard Tender Document KW-3 ಮತ್ತು KW-4 ರಂತೆ ಟೆಂಡರ್ ಅನ್ನು ಆಹ್ವಾನಿಸಲಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿ: 03/05/2025 ರಂದು ಅಪರಾಹ್ನ ಸಮಯ:5.00 ಗಂಟೆ ಆಗಿರುತ್ತದೆ.

ಕಾಮಗಾರಿ ಹೆಸರು ಮತ್ತು ಟೆಂಡರ್ ಸಂಖ್ಯೆ: (1) Construction of (i) Sanitary Landfill (ii) Leacahte Collection Tank (iii) Ground Water tank & (iv)Septic Tank at Propsed SWM Site in the limits of Byndoor TP (DMA/2025-26/OW/WORK_INDENT38756), ಟೆಂಡರಿಗಿಟ್ಟ ಮೊತ್ತ: ರೂ.62,29,000,
ಇಎಮ್‌ಡಿ: ರೂ.1,05,172

(2) Construction of Processing shed of 30x50m for Waste Management in the limits of Byndoor TP (DMA/2025-26/BD/WORK_INDENT38754) ಟೆಂಡರಿಗಿಟ್ಟ ಮೊತ್ತ: ರೂ.1,39,00,000, ಇಎಮ್‌ಡಿ: ರೂ.2,00,000

(3) (I) Construction of office Building (II) Construction of Security Building (III) Construction of Toilet Building (IV) Development of Rain WaterHarvesting (RWH) (V) Construction of Compound Wall & Gate (VI)Sinking of Borewell and Installation of Submersible Pump (VII) Construction of Weigh Bridge Flatform (VIII) External electrification works (IX) Constrction of Internal CC Road (X) Constrction of Internal CC Drain at Propsed SWM Site in the limits of Byndoor TP (DMA/2025-26/OW/WORK_INDENT38758) ಟೆಂಡರಿಗಿಟ್ಟ ಮೊತ್ತ: ರೂ.1,52,00,000,
ಇಎಮ್‌ಡಿ: ರೂ.2,00,000

ಕಾಮಗಾರಿ ಆಸಕ್ತ ಗುತ್ತಿಗೆದಾರರು https://kppp.karnataka.gov.in/ ನಲ್ಲಿ ಟೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚುವರಿ ಮಾಹಿತಿಗಾಗಿ ಈ ಕಚೇರಿಯ ಕೆಲಸದ ವೇಳೆಯಲ್ಲಿ ಕಿರಿಯ ಅಭಿಯಂತರರ ವಿಭಾಗವನ್ನು ಸಂಪರ್ಕಿಸಬಹುದಾಗಿದೆ.

ಸಹಿ/–, ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ್, ಬೈಂದೂರು
ಸಹಿ/–, ಆಡಳಿತಾಧಿಕಾರಿಗಳು ಪಟ್ಟಣ ಪಂಚಾಯತ್, ಬೈಂದೂರು

ವಾಸಾಇ/ಸನಿಉ/ಕೆಎಸ್‌ಎಂಸಿಎ/41/25–26 ದಿ: 19.04.2025

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಪಂಚಾಯತ ರಾಜ ಇಂಜಿನೀಯರಿಂಗ್ ವಿಭಾಗ, ಹಾವೇರಿ

ನಂ: ಪಂರಾಇಂವಿ/ಹಾವೇರಿ/ಪಿಬಿ–2/ಟೆಂಡರ್/2025–26/257 ದಿನಾಂಕ: 15–04–2025

ಟೆಂಡರ ಪ್ರಕಟಣೆ ನಂ : 3/2025–26 (1ನೇ & 2ನೇ ಕರೆ)

(E-GOK ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಮಾತ್ರ)

ವಿವಿಧ ಲೆಕ್ಕ ಶೀರ್ಷಿಕೆ ಯೋಜನೆಯಡಿ ಹಾವೇರಿ, ಹಾಗನಲ್ಲ, ಹಿರೇಕೆರೂರ, ರಟ್ಟಿಹಳ್ಳಿ ಮತ್ತು ರಾಣೇಬೆನ್ನೂರ ತಾಲೂಕಗಳಲ್ಲಿ ರಸ್ತೆ ಮತ್ತು ಕಟ್ಟಡ ಕಾಮಗಾರಿಗಳಿಗೆ ಟೆಂಡರ ಕರೆಯಲಾಗಿದೆ.

1) ರಟ್ಟಿಹಳ್ಳಿ ತಾ: ಶಿರಗಂಬಿ ಗ್ರಾಮದ ಶ್ರೀ ಮಾರುತಿ ದೇವಸ್ಥಾನದ ಜೀರ್ಣೋದ್ದಾರ (INDENT12389/Call-2) 2) ಹಾನಗಲ್ಲ ತಾ: ದಶರಥಕೊಪ್ಪ ಗ್ರಾಮದ ನಂ.–2ನೇ ಅಂಗನವಾಡಿ ಕೇಂದ್ರ ನಿರ್ಮಾಣ (INDENT13285) 3) ಹಾನಗಲ್ಲ ತಾ: ಕರಗುದರಿ ಗ್ರಾಮದ ನಂ.–1ನೇ ಅಂಗನವಾಡಿ ಕೇಂದ್ರ ನಿರ್ಮಾಣ (INDENT13279) 4) ರಾಣೇಬೆನ್ನೂರ ತಾ: ಹುಲಿಕಟ್ಟಿ ಗ್ರಾಮದ ನಂ.–1ನೇ ಅಂಗನವಾಡಿ ಕೇಂದ್ರ ನಿರ್ಮಾಣ (INDENT12445/Call-2) 5) ಹಿರೇಕೆರೂರ ತಾ: ಹಾದರಿಹಳ್ಳಿ ಗ್ರಾಮದ ನಂ–2 ಅಂಗನವಾಡಿ ಕೇಂದ್ರ ನಿರ್ಮಾಣ (INDENT13863) 6) ಹಾವೇರಿ ತಾ: ಹಾವನೂರ ಗ್ರಾಮದ ನಂ–248 ಅಂಗನವಾಡಿ ಕೇಂದ್ರ ನಿರ್ಮಾಣ (INDENT13926) 7) ಹಾವೇರಿ ತಾ: ಆಲದಕಟ್ಟಿಯಿಂದ ಹಳೇ ಎಸ್.ಪಿ.ಆಫೀಸಿಗೆ ಹೋಗುವ ರಸ್ತೆ ಕಾಂಕ್ರೀಟ್ (2ಎ) (INDENT14080) 8) ರಾಣೇಬೆನ್ನೂರ ತಾ: ಕಜ್ಜರಿ–ದೇವರಗುಡ್ಡ ಕೂಡುವ ರಸ್ತೆಯಿಂದ ಶಿಡಗನಾಳ ಮೂಲಕ–ರಾಣೇಬೆನ್ನೂರ–ದೇವರಗುಡ್ಡ ಕೂಡುವ ರಸ್ತೆ ಅಭಿವೃದ್ಧಿ(ಎಸ್.ಸಿ) (INDENT14112) 9) ರಾಣೇಬೆನ್ನೂರ ತಾ: ಹೂಲಿಹಳ್ಳಿ (ಎನ್.ಹೆಚ್–48) ಯಿಂದ ಕೂನಬೇವು ವರೆಗೆ ಆಯ್ದ ಭಾಗಗಳಲ್ಲಿ ರಸ್ತೆ ಅಭಿವೃದ್ಧಿ (INDENT14144) 10) ರಾಣೇಬೆನ್ನೂರ ತಾ: ಗುಡ್ಡದಹೊಸಳ್ಳಿ ಗ್ರಾಮದ ಮಳೆಯಿಂದ ಹಾನಿಯಾದ ಅಲ್ಲಾಪೂರ ಹಳ್ಳಕ್ಕೆ ಸೇತುವೆ ನಿರ್ಮಾಣ (I) (INDENT14149) 11) ರಾಣೇಬೆನ್ನೂರ ತಾ: ತಿರುಮಲದೇವರಕೊಪ್ಪದಿಂದ ಯರೇಕುಪ್ಪಿ– ಜೋಯಿಸರಹರಳಹಳ್ಳಿ (ವಾಯಾ ಲಕ್ಷ್ಮಿಪುರ) ಕೂಡು ರಸ್ತೆ ಅಭಿವೃದ್ಧಿ (2ಎ) (INDENT14152) 12) ರಾಣೇಬೆನ್ನೂರ ತಾ: ಹೂಲಿಹಳ್ಳಿಯಿಂದ ಯರೇಕುಪ್ಪಿ–ಸರವಂದ ಕೂಡು ರಸ್ತೆ ಮೂಲಕ ಜೋಯಿಸರಹರಳಹಳ್ಳಿವರೆಗೆ ಆಯ್ದಾ ಭಾಗಗಳಲ್ಲಿ ರಸ್ತೆ ಸುಧಾರಣೆ (INDENT14161) 13) ಹಾವೇರಿ ತಾ: ಸಿದ್ದೇಶ್ವರ ತಾಂಡಾದಿಂದ ಕಬ್ಬೂರ ಸೂಡಂಬಿ ಕೂಡುವ ರಸ್ತೆ ಅಭಿವೃದಿ(ಎಸ್.ಸಿ) (INDENT14198) 14) ಹಾವೇರಿ ತಾ: ದೇವಗಿರಿ ಗ್ರಾಮದ ಶ್ರೀ ಮಾಯಮ್ಮದೇವಿ ದೇವಸ್ಥಾನದ ಕಟ್ಟಡ ಕಾಮಗಾರಿ (ಎಸ್.ಟಿ) (INDENT142046) 15) ಹಾವೇರಿ ತಾ: ಆಲದಕಟ್ಟಿಯಿಂದ ಅಮ್ಮಿನಕಟ್ಟಿ ಎಮ್.ಎ.ತಿಮ್ಮಾಪೂರ ಹೋಗುವ ರಸ್ತೆ ಅಭಿವೃದ್ಧಿ (INDENT14103)

1) ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಭರ್ತಿಮಾಡಿದ ಟೆಂಡರಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ :	23–04–2025ರ 16:00 ಗಂಟೆವರೆಗೆ
2) ಕೆ.ಪಿ.ಪಿ.ಪಿ ಪೋರ್ಟಲ್ ತಾಂತ್ರಿಕ & ಆರ್ಥಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ) ದಿನಾಂಕ	24–04–2025ರ 17:00 ಗಂಟೆಗೆ
3) ಕೆ.ಪಿ.ಪಿ.ಪಿ ಪೋರ್ಟಲ್ ಆರ್ಥಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ) ದಿನಾಂಕ	28–04–2025ರ 11:00 ಗಂಟೆಗೆ

ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E-GOK ಇ–ಪ್ರಕ್ಯೂರಮೆಂಟ್ ಪ್ಲಾಟ್ ಫಾರಂನಲ್ಲಿ www.kppp.karnataka.gov.in ರಲ್ಲಿ ಪಡೆಯಬಹುದು ಹಾಗೂ ವಿಭಾಗ ಕಛೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ್
ಪಂ.ರಾ.ಇಂ. ವಿಭಾಗ, ಹಾವೇರಿ

dipr/hvr/dipo/44/25-26

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ, ಕ.ನೀ.ನಿ.ನಿ., ಘ.ಬ.ದಂ.ಕಾ.ನಿ. ವಿಭಾಗ, ಸಂ. 3, ತಾಲ್ಲೂಕು: ಗೋಕಾಕ, ಜಿಲ್ಲಾ: ಬೆಳಗಾವಿ, ರಾಜ್ಯ: ಕರ್ನಾಟಕ, ಪಿನ್ – 591 307, ದೂರವಾಣಿ: 08332–225213.
ಇ–ಮೇಲ್: knnlgrbccd3.gokak@gmail.com

ಸಂಖ್ಯೆ : ಕ.ನೀ.ನಿ.ನಿ./ಜಿ.ಆರ್.ಬಿ.ಸಿ.ಸಿ.ವಿ.–3/ಡಿ.ಬಿ./ಟೆಂಡರ್/ಅರಭಾವಿ ಟ್ಯಾಂಕ್ ಫಿಲ್ಲಿಂಗ್ ಸ್ಟೇಜ್–2/2025–26/02 ದಿನಾಂಕ : 19–04–2025

ಟೆಂಡರ್ ಅಧಿಸೂಚನೆ ಎರಡನೇ ಕರೆ

(ಕೆ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕ.ನೀ.ನಿ.ನಿ., ಘ.ಬ.ದಂ.ಕಾ.ನಿ. ವಿಭಾಗ ಸಂ. 3, ಗೋಕಾಕ ಕಚೇರಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999 – 2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ - IV ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಕರೆಯಲಾಗಿದ್ದು, ಕೆಟಿಪಿಪಿ ಕಾಯ್ದೆಯ ರೂಲ್ 28 ರನ್ವಯ ದ್ವಿ–ಲಕೋಟೆ ವಿಧಾನವನ್ನು ಅನುಸರಿಸಿ ಅರ್ಹ ಗುತ್ತಿಗೆದಾರರು ತಮ್ಮ ಟೆಂಡರ್‌ನ್ನು ದ್ವಿ–ಲಕೋಟೆ ವಿಧಾನದಲ್ಲಿ ಸಲ್ಲಿಸಬೇಕು. ಘಟಪ್ರಭಾ ನದಿಯಿಂದ ಅರಭಾವಿ ವಿಧಾನಸಭಾ ವ್ಯಾಪ್ತಿಯ ಆಯ್ದ 13 ಕೆರೆಗಳಿಗೆ ನೀರು ತುಂಬುವ (ಟ್ಯಾಂಕ ಫಿಲ್ಲಿಂಗ್) ಸ್ಟೇಜ್–II ಟರ್ನ–ಕೀ ಆಧಾರಿತ ಕಾಮಗಾರಿಗೆ (ಕಾಮಗಾರಿಯ ಇಂಡೆಂಟ್ ನಂಬರ 2583) ಟೆಂಡರ್ ಕರೆಯಲಾಗಿದೆ.

ಈ ಕಾಮಗಾರಿಯ ಅಂದಾಜು ಮೊತ್ತ ರೂ. 107.66 ಕೋಟಿ ಇರುತ್ತದೆ. (ಜಿ.ಎಸ್.ಟಿ. ಹೊರತುಪಡಿಸಿ) (ಒಟ್ಟು ಕಾಮಗಾರಿ – 01)

ಕಾರ್ಯನಿರ್ವಾಹಕ ಅಭಿಯಂತರರು, ಕ.ನೀ.ನಿ.ನಿ., ಜಿ.ಆರ್.ಬಿ.ಸಿ.ಸಿ. ವಿಭಾಗ ನಂ. 3, ಗೋಕಾಕ ಕಚೇರಿಯ ಟೆಂಡರ್‌ಗಳನ್ನು ದಿನಾಂಕ : 21–04–2025 ರಿಂದ 22–05–2025 ರ ಸಂಜೆ 4.00 ಘಂಟೆಯವರೆಗೆ ಸಲ್ಲಿಸಬಹುದಾಗಿದೆ. ಟೆಂಡರ್ ಪೂರ್ವಭಾವಿ ಸಭೆ ದಿನಾಂಕ : 05–05–2025 ರ ಬೆಳಿಗ್ಗೆ 11.30 ಗಂಟೆಗೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕಾಫೀ ಬೋರ್ಡ್ ಬಿಲ್ಡಿಂಗ್, ಬೆಂಗಳೂರು ಕಚೇರಿಯಲ್ಲಿ ಕರೆಯಲಾಗಿದೆ. ಟೆಂಡರ್ ಕುರಿತ ಪ್ರಶ್ನೆಗಳಿಗಾಗಿ / ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ & ಸಮಯ : 12–05–2025 ರ ಸಂಜೆ 5.00 ಗಂಟೆಯವರೆಗೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ : 22–05–2025 ರ ಸಂಜೆ 4.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : 26–05–2025 ರ ಬೆಳಿಗ್ಗೆ 11.00 ಗಂಟೆಗೆ, ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು.

ಇತರೆ ವಿವರಗಳನ್ನು ಕರ್ನಾಟಕ ಸರ್ಕಾರದ https://www.kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದು. ಇನ್ನು ಮುಂದೆ ಸದರಿ ಟೆಂಡರ್‌ಗಳಲ್ಲಿ ಯಾವುದೇ ಬದಲಾವಣೆಗಳು / ಮಾರ್ಪಾಡುಗಳು ಅಥವಾ ಅವಧಿ ವಿಸ್ತರಣೆ ಇತ್ಯಾದಿ ತಿದ್ದುಪಡಿಗಳಾದಲ್ಲಿ, ಕೆ.ಪಿ.ಪಿ. ಪೋರ್ಟಲ್ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರು,
ಕ.ನೀ.ನಿ.ನಿ., ಜಿ.ಆರ್.ಬಿ.ಸಿ.ಸಿ. ವಿಭಾಗ ನಂ. 3,
ಗೋಕಾಕ.

ಡಿಐಪಿಆರ್/ಬೆಳಗಾವಿ/118/ಮಣಿಪಾಲ್/2025–26

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ

ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.

ಸಂಖ್ಯೆ: ಆಡಳಿತ(3)ಸಿ.ಆರ್/60/2024–25 ದಿನಾಂಕ: 19–04–2025

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಅಲ್ಪಾವಧಿ)

ಟೆಂಡರ್ ಅಧಿಸೂಚನೆ ಸಂಖ್ಯೆ: 02/2024–25, ದಿನಾಂಕ: 19–04–2025

ದಿನಾಂಕ: 01–05–2025 ರಿಂದ 01 ವರ್ಷದ ಅವಧಿಗೆ 2515–00–101–0–28–(034) ಮತ್ತು ಇತರೆ ಲೆಕ್ಕ ಶೀರ್ಷಿಕೆಯಡಿ ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಕಛೇರಿಯಲ್ಲಿ ಖಾಲಿ ಇರುವ **18 – ಡಾಟಾ ಎಂಟ್ರಿ ಆಪರೇಟರ್, 06 – ವಾಹನ ಚಾಲಕರು, 01 – ಆಡಳಿತ ಸಹಾಯಕ, 01 – ಲೆಕ್ಕ ಸಹಾಯಕ, 20 – 'ಡಿ' ಗ್ರೂಪ್, 01 – ಸ್ವಚ್ಛತಾಗಾರರು , 01 – ಕಾವಲುಗಾರರ ಸೇವೆಯನ್ನು ಪಡೆಯಲು** ಟೆಂಡರ್ ಕರೆದಿದ್ದು, ಟೆಂಡರ್ ಸಲ್ಲಿಸುವ ದಿನಾಂಕ: 28–04–2025 ರಂದು ಸಂಜೆ 4.00 ಗಂಟೆವರೆಗೆ ಕೊನೆಯ ದಿನವಾಗಿದ್ದು, ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್: https://kppp.karnataka.gov.in ಅನ್ನು ನೋಡುವುದು.

ಸಹಿ/– ಉಪ ಕಾರ್ಯದರ್ಶಿ
ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ,
ಬೆಂಗಳೂರು.

ವಾಸಾಸಂಇ/ವಾ.ಪ್ರ/271/ಅಡ್ವರ್ಟೋರ್/2025–26

ವಾಣಿಜ್ಯ ತೆರಿಗೆಗಳ ಇಲಾಖೆ

ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿ,
ವಾಣಿಜ್ಯ ತೆರಿಗೆಗಳ ಕಾರ್ಯಾಲಯ–1, ಗಾಂಧಿನಗರ, ಬೆಂಗಳೂರು–560009.

ಸಂಖ್ಯೆ: ಸಾಸಂ/ಪಿಟಿ/ಸಾರ್ವಜನಿಕ ಪ್ರಕಟಣೆ/2025–26 ದಿನಾಂಕ: 19.04.2025

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ಆಜೀವಿಕೆಗಳು ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಕಾಯ್ದೆ 1976ರ ಪ್ರಕರಣ 10ರ ಅನ್ವಯ ವೃತ್ತಿ ತೆರಿಗೆ ಪಾವತಿ ಮಾಡುವ ಬಗ್ಗೆ.

1. ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ಆಜೀವಿಕೆಗಳು ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಕಾಯ್ದೆ 1976ರ ಅಡಿಯಲ್ಲಿ ತೆರಿಗೆ ಪಾವತಿಸಲು ಬಾಧ್ಯರಾಗಿರುವ ಎಲ್ಲಾ ವ್ಯಕ್ತಿಗಳು ನೋಂದಣಿ/ಎನ್‌ರೋಲ್‌ಮೆಂಟ್ ಪಡೆದುಕೊಂಡು ರಿಟರ್ನ್ ಸಲ್ಲಿಸತಕ್ಕದ್ದು ಹಾಗೂ ತೆರಿಗೆ ಪಾವತಿಸತಕ್ಕದ್ದು.
2. ನೋಂದಣಿ ಪಡೆಯಲು ಅಥವಾ ಎನ್‌ರೋಲ್‌ಮೆಂಟ್ ಮಾಡಿಕೊಳ್ಳಲು ಬಾಧ್ಯತೆ ಹೊಂದಿರುವ ಪ್ರತಿ ಉದ್ಯೋಗದಾತ / ಸ್ವಯಂ ಉದ್ಯೋಗ ನಡೆಸುವ ಪ್ರತಿ ವ್ಯಕ್ತಿಯು ತನ್ನ ವೃತ್ತಿ, ವ್ಯಾಪಾರ, ಆಜೀವಿಕೆ ಮತ್ತು ಉದ್ಯೋಗ ಪ್ರಾರಂಭಿಸಿದ 30 (ಮೂವತ್ತು) ದಿನಗಳ ಒಳಗಾಗಿ ನೋಂದಣಿ / ಎನ್‌ರೋಲ್‌ಮೆಂಟನ್ನು ಆನ್‌ಲೈನ್ ಮುಖಾಂತರ ಪಡೆದು ತೆರಿಗೆ ಪಾವತಿಸತಕ್ಕದ್ದು.
3. ಈಗಾಗಲೇ ಎನ್‌ರೋಲ್‌ಮೆಂಟ್ ಹೊಂದಿರುವ ಉದ್ಯೋಗದಾತರು / ಸ್ವಯಂ ಉದ್ಯೋಗಸ್ಥರು 2025–26ನೇ ಸಾಲಿನ ವೃತ್ತಿ ತೆರಿಗೆಯನ್ನು ದಿನಾಂಕ: 30–04–2025 ರ ಒಳಗಾಗಿ ಪಾವತಿಸತಕ್ಕದ್ದು.
4. 2025ರ ಕರ್ನಾಟಕ ಅಧಿನಿಯಮ ಸಂಖ್ಯೆ: 33, ದಿನಾಂಕ: 15–04–2025 ರನ್ವಯ ವೃತ್ತಿ ತೆರಿಗೆ ಕಾಯ್ದೆ 1976ರಡಿಯಲ್ಲಿ ಮಾಡಲಾದ ಬದಲಾವಣೆಗಳು – 01–04–2025 ರಿಂದ ಅನ್ವಯಿಸುವಂತೆ, ತೆರಿಗೆ ಮುರುಗಡೆ ಪ್ರಾಧಿಕಾರವು ತಿಂಗಳಿಗೆ ರೂ.25,000/– ಕ್ಕಿಂತ ಹೆಚ್ಚು ಸಂಬಳ/ಮಜೂರಿ ಪಡೆಯುವ ವ್ಯಕ್ತಿಗಳಿಂದ ವೃತ್ತಿ ತೆರಿಗೆಯನ್ನು ಕಡಿತಗೊಳಿಸುವಾಗ ಫೆಬ್ರವರಿ ತಿಂಗಳಿಗೆ ಮಾತ್ರ ರೂ.200/– ರ ಬದಲಾಗಿ ರೂ.300/–ನ್ನು ಕಡಿತಗೊಳಿಸತಕ್ಕದ್ದು. ಮಿಕ್ಕಂತೆ ಉಳಿದ ತಿಂಗಳುಗಳಿಗೆ ಎಂದಿನಂತೆ ರೂ.200/– ನ್ನು ಕಡಿತಗೊಳಿಸುವುದು.
5. ಸದರಿ ಕಾಯ್ದೆಯಡಿ ನೋಂದಣಿ / ಎನ್‌ರೋಲ್‌ಮೆಂಟ್ ಬಾಧ್ಯತೆ ಹಾಗೂ ತೆರಿಗೆ ದರಗಳ ಬಗ್ಗೆ ತಿಳಿದುಕೊಳ್ಳಲು ಇಲಾಖೆಯ ಜಾಲತಾಣ: gst.kar.nic.in ಅಥವಾ pt.kar.nic.in ಇಲ್ಲಿಗೆ ಭೇಟಿ ನೀಡಬಹುದು.

ಸಹಿ/–
ಸಹಿ/– ವಾಣಿಜ್ಯ ತೆರಿಗೆಗಳ ಆಯುಕ್ತರು,
(ಕರ್ನಾಟಕ), ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/260/ಆಕಾರ್/2025–26

ಬೆಂಗಳೂರು ನಗರ ವಿಶ್ವವಿದ್ಯಾನಿಲಯ BENGALURU CITY UNIVERSITY

BE BOUNDLESS

ಸೆಂಟ್ರಲ್ ಕಾಲೇಜು ಆವರಣ, ಡಾ|| ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು–560001. ಫೋನ್.ನಂ.080–22961016/22131385
E-Mail ID: registrarbcu@gmail.com

ನಂ: ಬಿಸಿಯು/ಶೈಕ್ಷಣಿಕ/ಯು.ಜಿ ಪ್ರ/02/2025–26/ ದಿನಾಂಕ : 19.04.2025

ಅಧಿಸೂಚನೆ

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯ "ಜ್ಞಾನಜ್ಯೋತಿ–ಸೆಂಟ್ರಲ್ ಕಾಲೇಜ್ ಕ್ಯಾಂಪಸ್" ಆವರಣದಲ್ಲಿ ಮತ್ತು ವಿಶ್ವವಿದ್ಯಾನಿಲಯದ ಮಹಿಳಾ ಮಹಾವಿದ್ಯಾಲಯ, ಮಲ್ಲೇಶ್ವರಂ. 2025–26ನೇ ಸಾಲಿನ ಸ್ನಾತಕ ಕೋರ್ಸುಗಳ ಪ್ರವೇಶಾತಿಗೆ ಅರ್ಜಿಗಳನ್ನು ಆಹ್ವಾನಿಸುವ ಕುರಿತು.

ಬೆಂಗಳೂರು ನಗರ ವಿಶ್ವವಿದ್ಯಾನಿಲಯ **"ಜ್ಞಾನಜ್ಯೋತಿ–ಸೆಂಟ್ರಲ್ ಕಾಲೇಜ್ ಕ್ಯಾಂಪಸ್"** ಆವರಣದಲ್ಲಿ ವಿವಿಧ ಸ್ನಾತಕ ಪದವಿ ಹಂತದ ವ್ಯಾಸಂಗಕ್ಕಾಗಿ ಮತ್ತು **ಬೆಂಗಳೂರು ನಗರದ ಮಲ್ಲೇಶ್ವರಂ ಬಡಾವಣೆಯ 13ನೇ ಕ್ರಾಸ್‌ನಲ್ಲಿರುವ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ** ವಿಶ್ವವಿದ್ಯಾನಿಲಯದ ಮಹಿಳಾ ಮಹಾವಿದ್ಯಾಲಯ ಕಾಲೇಜಿನ ವಿವಿಧ ಸ್ನಾತಕ ವ್ಯಾಸಂಗಗಳ ಪ್ರವೇಶಾತಿಗಾಗಿ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

I. **"ಜ್ಞಾನಜ್ಯೋತಿ–ಸೆಂಟ್ರಲ್ ಕಾಲೇಜ್ ಕ್ಯಾಂಪಸ್" ಆವರಣದಲ್ಲಿ ಲಭ್ಯವಿರುವ ವಿಶೇಷ ಸ್ನಾತಕ ಪದವಿ ಕೋರ್ಸುಗಳು**

ಭಾಷೆಗಳು: ಕನ್ನಡ, ಆಂಗ್ಲ, ಹಿಂದಿ, ಫ್ರೆಂಚ್, ಮತ್ತು ಜರ್ಮನ್

1. ಬಿ.ಸಿ.ಎ (ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ & ಮೇಷಿನ್ ಲರ್ನಿಂಗ್)
2. ಬಿ.ಸಿ.ಎ (ಡೇಟಾ ಸೈನ್ಸ್)
3. ಬಿ.ಎಸ್ಸಿ (ಗಣಕ ವಿಜ್ಞಾನ, ಗಣಿತಶಾಸ್ತ್ರ, ಸಂಖ್ಯಾಶಾಸ್ತ್ರ)
4. ಬಿ.ಎಸ್ಸಿ (ಫ್ಯಾಶನ್ ಅಂಡ್ ಅಪ್ಯಾರಲ್ ಡಿಸೈನ್)
5. ಬಿ.ಬಿ.ಎ (ಬಿಸನೆಸ್ ಅನಾಲಿಟಿಕ್ಸ್)
6. ಇಂಡಸ್ಟ್ರಿ ಇಂಟಿಗ್ರೇಟೆಡ್ ಪ್ರೋಗ್ರಾಂಗಳು
   i) ಬಿ.ಕಾಂ (ಫೈನಾನ್ಸ್ & ಅಕೌಂಟಿಗ್)
   ii) ಬಿ.ಕಾಂ (ಫೈನಾನ್‌ಷಿಯಲ್ ಟೆಕ್ನಾಲಜಿ) **Self-Finance**
7. ಬಿ.ಎ (ಆಂಗ್ಲ, ಫ್ರೆಂಚ್, ಇತಿಹಾಸ, ಅರ್ಥಶಾಸ್ತ್ರ, ಪತ್ರಿಕೋದ್ಯಮ) ಯಾವುದೇ 3 ವಿಷಯ

II. **ಮಲ್ಲೇಶ್ವರಂ ಬಡಾವಣೆಯ 13ನೇ ಕ್ರಾಸ್‌ನಲ್ಲಿರುವ ವಿಶ್ವವಿದ್ಯಾನಿಲಯದ ಮಹಿಳಾ ಮಹಾವಿದ್ಯಾಲಯ ಕಾಲೇಜಿನ ಕೋರ್ಸುಗಳು:**

Sl.No	Courses	Subject
	Languages	Kannada, English, French, German, Sanskrit and Hindi
1	ಬಿ.ಸಿ.ಎ (ಸಾಮಾನ್ಯ)	ಕಡ್ಡಾಯ ವಿಷಯ
2	ಬಿ.ಬಿ.ಎ (ಸಾಮಾನ್ಯ)	ಕಡ್ಡಾಯ ವಿಷಯ
3	ಬಿ.ಕಾಂ (ಸಾಮಾನ್ಯ)	ಕಡ್ಡಾಯ ವಿಷಯ
4	ಬಿ.ಎಸ್ಸಿ	(ಗಣಕ ವಿಜ್ಞಾನ, ಗಣಿತಶಾಸ್ತ್ರ, ಸಂಖ್ಯಾಶಾಸ್ತ್ರ)
5	ಬಿ.ಎ	(ಆಂಗ್ಲ, ಫ್ರೆಂಚ್, ಇತಿಹಾಸ, ಅರ್ಥಶಾಸ್ತ್ರ, ಪತ್ರಿಕೋದ್ಯಮ) ಯಾವುದೇ 3 ವಿಷಯ

ಆಸಕ್ತ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ **Website: www.bcu.ac.in** ಮತ್ತು ಆನ್‌ಲೈನ್ ನೋಂದಣಿ ಮತ್ತು ಅರ್ಜಿ ಸಲ್ಲಿಕೆಗಾಗಿ ಕರ್ನಾಟಕ ಸರ್ಕಾರದ ಯು.ಯು.ಸಿ.ಎಂ.ಎಸ್ ಪೋರ್ಟಲ್ **https://uucms.karnataka.Gov.in** ಭೇಟಿ ನೀಡಲು ತಿಳಿಸಲಾಗಿದೆ. ಪ್ರವೇಶಾತಿ ಪ್ರಕ್ರಿಯೆಯ **ದಿನಾಂಕ: 21.04.2025** ರಿಂದ ಪ್ರಾರಂಭವಾಗುವುದು ಹೆಚ್ಚಿನ ವಿವರಗಳಿಗಾಗಿ ವಿಶ್ವವಿದ್ಯಾನಿಲಯದ ಜಾಲತಾಣ **www.bcu.ac.in** ಭೇಟಿ ನೀಡುವುದು.

ಅಗತ್ಯ ಸಂಖ್ಯೆಯ ಪ್ರವೇಶ ಅರ್ಜಿಗಳನ್ನು ಸ್ವೀಕೃತವಾಗದಿದ್ದಲ್ಲಿ ಅಂತಹ ಕೋರ್ಸುಗಳನ್ನು ಪ್ರಸ್ತುತ ವರ್ಷ ಪ್ರಾರಂಭಿಸಲಾಗುವುದಿಲ್ಲ.

ಸಹಿ/–
ಕುಲಸಚಿವರು

ವಾ.ಸಾ.ಸಂ.ಇ/ವಾಪ್ರ/275/ಎಸ್‌ಎಸ್‌ಸಿ/2025–26

ವಾಟರ್ ಮೆಟ್ರೊದಲ್ಲಿ ಪ್ರಯಾಣಿಸುತ್ತಾ... 9

ನಾಗವಲ್ಲಿ ಕಾಡುಪಾಪಗಳ ಜಾಡಿನಲ್ಲಿ...

ಉಪನ್ಯಾಸಕರೊಬ್ಬರ ಕುತೂಹಲ ಅಳಿವಿನಂಚಿನಲ್ಲಿರುವ ಕಾಡುಪಾಪಗಳ ಸಂರಕ್ಷಣೆಗೆ ಮುನ್ನುಡಿ ಬರೆಯಿತು. ತಾವು ಪಾಠ ಮಾಡುವ ಊರಿನ ಸುತ್ತಮುತ್ತ ಇದ್ದ ಕಾಡುಪಾಪಗಳ ಅಧ್ಯಯನದಲ್ಲಿ ತೊಡಗಿಸಿಕೊಂಡರು. ಹಾಗೆಯೇ ವಿದ್ಯಾರ್ಥಿಗಳು, ರೈತರು, ಗ್ರಾಮಸ್ಥರಲ್ಲಿ ಅರಿವು ಮೂಡಿಸಿ, ಅವರನ್ನೇ ಕಾಡುಪಾಪಗಳ ರಕ್ಷಕರನ್ನಾಗಿಸಿದರು

ಪ್ರಕಾಶ್ ಕೆ ನಾಡಿಗ್

ಜೀವಶಾಸ್ತ್ರ ಅಧ್ಯಯನ ಮಾಡಿದ್ದ ಬಿ.ವಿ. ಗುಂಡಪ್ಪ, 1995ರಲ್ಲಿ ತುಮಕೂರು ಜಿಲ್ಲೆಯ ಕುಣಿಗಲ್ ಬಳಿಯ ನಾಗವಲ್ಲಿ ಜೂನಿಯರ್ ಕಾಲೇಜಿಗೆ ಉಪನ್ಯಾಸಕರಾಗಿ ಬಂದರು. ಒಮ್ಮೆ ತರಗತಿಯಲ್ಲಿ ಅಳಿವಿನಂಚಿನಲ್ಲಿರುವ ಪ್ರಾಣಿಗಳ ಬಗ್ಗೆ ಪಾಠ ಮಾಡುತ್ತಾ, ಬೇರೆ ಪ್ರಾಣಿ ಪಕ್ಷಿಗಳ ಜೊತೆ ಇವರು ಕಾಡುಪಾಪಗಳ ಕುರಿತೂ ಹೇಳಿದರು. ಆಗ ವಿದ್ಯಾರ್ಥಿಗಳಲ್ಲಿ ಒಬ್ಬ 'ಸಾರ್, ಕಾಡುಪಾಪಗಳನ್ನು ನೋಡಿದ್ದೇನೆ' ಎಂದ. 'ಹೌದಾ! ಎಲ್ಲಿ?' ಎಂದಾಗ 'ಶಾಲೆಯ ಹೊರಗಿನ ಪೊದೆಯಲ್ಲಿ' ಎಂದ. ಗುಂಡಪ್ಪನವರಿಗೆ ಕುತೂಹಲ ಹೆಚ್ಚಾಯಿತು. ತರಗತಿ ಮುಗಿದ ಕೂಡಲೇ ಆ ವಿದ್ಯಾರ್ಥಿಯನ್ನು ಕರೆದುಕೊಂಡು ಕಾಡುಪಾಪಗಳನ್ನು ಹುಡುಕಿಕೊಂಡು ಹೊರಟೇಬಿಟ್ಟರು. ಆ ಜಾಗದಲ್ಲಿ ವಿಪರೀತ ಜಾಲಿ ಪೊದೆಗಳು. ಹೀಗೆ ಹುಡುಕಿಕೊಂಡು ಹೋದವರಿಗೆ ಒಂದಲ್ಲ, ಎರಡಲ್ಲ, ಒಟ್ಟು ನಾಲ್ಕು ಕಾಡುಪಾಪಗಳು ಮುದುಡಿಕೊಂಡು ಜಾಲಿಮರದ ಮೇಲೆ ಕುಳಿತಿರುವುದು ಕಾಣಿಸಿತು!

ಅಪರೂಪಕ್ಕೆ ಏನಾದರೂ ಇವು ಇಲ್ಲಿಗೆ ಬಂದಿರಬಹುದೇ, ಅಥವಾ ನಾಗವಲ್ಲಿಯ ಪರಿಸರ ಇವುಗಳ ವಾಸಸ್ಥಾನವೇ, ಇಲ್ಲವೇ ಇನ್ನು ಹೆಚ್ಚಿನ ಕಾಡುಪಾಪಗಳು ಈ ಭಾಗದಲ್ಲಿ ಇರಬಹುದೇ ಎಂದು ತಿಳಿದುಕೊಳ್ಳಲು ಬೇರೆ ತರಗತಿಯ ಹುಡುಗರಿಗೂ ಕೇಳಿದರು. ಆಗ ಹುಡುಗರು 'ತೋಟಗಳಲ್ಲಿ ಹೊಲಗದ್ದೆಗಳಲ್ಲಿ ಆಗೊಮ್ಮೆ ಈಗೊಮ್ಮೆ ನೋಡುತ್ತಿರುತ್ತೇವೆ' ಎಂದರು. ಕೆಲ ರೈತರಲ್ಲಿ ವಿಚಾರಿಸಿದಾಗ 'ಹೌದು, ರಾತ್ರಿ ಹೊಲಗದ್ದೆಗಳಲ್ಲಿ ಪಂಪ್‌ಸೆಟ್ ಹಾಕಿ ಹೊಲಕ್ಕೆ ನೀರು ಹರಿಸಲು ಹೋದಾಗ ಕಾಣುತ್ತವೆ. ಅವುಗಳ ಕಣ್ಣುಗಳು ದೊಡ್ಡದಿರುವುದರಿಂದ ಬ್ಯಾಟರಿ ಬೆಳಕಿನಲ್ಲಿ ಹೊಳೆಯುತ್ತವೆ' ಎಂದಿದ್ದರು.

ಕಾಡುಪಾಪಗಳನ್ನು ವೀಕ್ಷಿಸುತ್ತಿರುವ ವಿದ್ಯಾರ್ಥಿಗಳು

ಇದು ನಿಶಾಚರಿಯಾದ್ದರಿಂದ ರಾತ್ರಿ ಹೊತ್ತು ಚಟುವಟಿಕೆಯಿಂದ ಇರುತ್ತದೆ ಎಂಬ ವಿಷಯ ಗೊತ್ತಾಯಿತು. ಅಂದಿನಿಂದ ಕಾಡುಪಾಪಗಳ ಬಗ್ಗೆ ಒಲವು ಮೂಡಿ ಅವುಗಳ ಬಗ್ಗೆ ಅಧ್ಯಯನ ಮಾಡಬೇಕೆಂಬ ಉದ್ದೇಶದಿಂದ ಕಾಡುಪಾಪಗಳ ಜಾಡನ್ನು ಹಿಡಿದು ಹೊರಟರು.

ಇದಾದ ಕೆಲ ದಿನಗಳಲ್ಲೇ ತುಮಕೂರಿನಲ್ಲಿ 'ವಿಶ್ವ ವನ್ಯಜೀವಿ ನಿಧಿ ಸಂಸ್ಥೆ'ಯು ತುಮಕೂರಿನ 'ವನ್ಯಜೀವಿ ಜಾಗೃತಿ ನಿಸರ್ಗ ಸಂಸ್ಥೆ'ಯ ಜೊತೆಗೂಡಿ ವಿದ್ಯಾರ್ಥಿಗಳಿಗಾಗಿ ವಿಜ್ಞಾನ ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು. ಅದಕ್ಕಾಗಿ ಗುಂಡಪ್ಪನವರು ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಕಾಡುಪಾಪಗಳ ಬಗ್ಗೆಯೇ ಪ್ರಬಂಧ ಸಿದ್ಧಪಡಿಸಿದರು. ವಿಜ್ಞಾನ ಕಾರ್ಯಕ್ರಮದಲ್ಲಿ ಪ್ರಬಂಧ ಮಂಡಿಸಿದರು. ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲಿ ಮೊದಲ ಬಹುಮಾನ ಗಳಿಸಿ, ರಾಷ್ಟ್ರಮಟ್ಟಕ್ಕೆ ಆಯ್ಕೆಯಾಯಿತು.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ(ಐಐಎಸ್‌ಸಿ)ಯು ಪ್ರೊ. ಮಾಧವ ಗಾಡ್ಗೀಳ್ ಜೊತೆಗೂಡಿ ಕರ್ನಾಟಕದ ಜೀವವೈವಿಧ್ಯದ ಬಗ್ಗೆ ದಾಖಲಾತಿ ಮಾಡುತ್ತಿತ್ತು. ಅದರಲ್ಲಿ ಪಾಲ್ಗೊಂಡ ಇವರು ನಾಗವಲ್ಲಿ ಪಂಚಾಯಿತಿ ಪ್ರದೇಶವನ್ನು ತೆಗೆದುಕೊಂಡು, ತಮ್ಮ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ನಾಗವಲ್ಲಿಯ ಸುತ್ತಮುತ್ತ ಕೆರೆ ಕಟ್ಟೆ ತೋಟ ಹೊಲ ಗದ್ದೆಗಳಲ್ಲಿ ಎಲ್ಲೆಲ್ಲಿ ಕಾಡುಪಾಪಗಳು ಇರಬಹುದು ಎಂಬುದನ್ನು ಅಭ್ಯಾಸಿಸಿ, ಅವುಗಳು ಯಾವ ಪ್ರದೇಶದಲ್ಲಿ, ಯಾವ ಸಮಯದಲ್ಲಿ, ಎಲ್ಲೆಲ್ಲಿ ಇರುತ್ತವೆ ಎಂಬುದನ್ನು ತಿಳಿದುಕೊಂಡು ಅವುಗಳ ಬಗ್ಗೆ ಬರೆದು ಮ್ಯಾಪಿಂಗ್ ಮಾಡಿ ವರದಿ ಸಲ್ಲಿಸಿದರು. ಇದಕ್ಕೆ ಪ್ರಥಮ ಬಹುಮಾನವಾಗಿ ಹತ್ತು ಸಾವಿರ ರೂಪಾಯಿ ಬಂದಿತು. ಬಹುಮಾನದ ಮೊತ್ತವನ್ನು ಏನು ಮಾಡುವುದು ಎಂದು ಯೋಚಿಸಿದರು.

ಕಾಡುಪಾಪಗಳ ಅಧ್ಯಯನದಿಂದ ಬಂದ ಹಣವನ್ನು ಅವುಗಳ ಸಂರಕ್ಷಣೆಗೆ ವಿನಿಯೋಗಿಸಬೇಕು ಎಂದು ನಿರ್ಧರಿಸಿದರು. ಕಾಡುಪಾಪಗಳ ವಾಸ, ಅವು ಏನನ್ನು ತಿನ್ನುತ್ತವೆ, ಅವುಗಳ ಸ್ವಭಾವ ಹಾಗೂ ರೈತರಿಗೆ ಹೇಗೆ ಸಹಾಯಕವಾಗಿವೆ. ಸಂರಕ್ಷಿತ ಪ್ರಾಣಿಯಾಗಿರುವುದರಿಂದ ಅವನ್ನು ಹಿಡಿಯುವುದು ಅಪರಾಧ ಎಂಬ ಮಾಹಿತಿಯುಳ್ಳ ಫಲಕವೊಂದನ್ನು ಬರೆಸಿ ನಾಗವಲ್ಲಿಯ ರಸ್ತೆಬದಿಯಲ್ಲಿ ಹಾಕಿಸಿದರು.

ಮಕ್ಕಳಿಗೆ ಪರಿಸರದ ಬಗ್ಗೆ ಪ್ರಾಣಿ ಪಕ್ಷಿಗಳ ಬಗ್ಗೆ ಕುತೂಹಲ ಹೆಚ್ಚು. ಆ ಕುತೂಹಲವನ್ನು ಗುಂಡಪ್ಪನವರು ಬೆಳೆಸಿ ಪೋಷಿಸಿದರು. ಇವರ ಜೊತೆಯಲ್ಲಿ ಕಾಡುಪಾಪಗಳ ಅಧ್ಯಯನದಲ್ಲಿ ಪಳಗಿದ ಮಕ್ಕಳು ದೊಡ್ಡವರಾಗುತ್ತಾ ಕಾಡುಪಾಪಗಳ ಸಂರಕ್ಷಣೆಯಲ್ಲಿ ತೊಡಗಿರುವುದು ಗುಂಡಪ್ಪನವರಿಗೆ ಸಾರ್ಥಕ ಭಾವವನ್ನು ಉಂಟು ಮಾಡಿದೆ. ಕಾಡುಪಾಪಗಳು ನಿರುಪದ್ರವಿ ಪ್ರಾಣಿಯಾಗಿರುವುದುರಿಂದ ಬೇರೆ ಪ್ರಾಣಿ ಪಕ್ಷಿಗಳು ಇವುಗಳನ್ನು ಹಿಡಿಯುವುದು, ಕಣ್ಣನ್ನು ಕುಕ್ಕುವುದು, ಹಿಂಸಿಸುವುದು ಜಾಸ್ತಿ. ಹಾಗಾಗಿ ಆಗಾಗ ಈ ರೀತಿಯ ದಾಳಿಯಿಂದ ಗಾಯಗೊಂಡು ಬಿದ್ದ ಕಾಡುಪಾಪಗಳು ಸಿಕ್ಕರೆ ವಿದ್ಯಾರ್ಥಿಗಳು ಅವುಗಳನ್ನು ಗುಂಡಪ್ಪನವರ ಬಳಿ ತರುತ್ತಾರೆ. ನಂತರ ಪಶುವೈದ್ಯರಲ್ಲಿ ತೋರಿಸಿ ಸೂಕ್ತ ಚಿಕಿತ್ಸೆ ಕೊಡಿಸುತ್ತಾರೆ. ಅವಶ್ಯಕತೆ ಬಿದ್ದರೆ ಬ್ಯಾಂಡೇಜ್ ಕಟ್ಟಿ ಒಂದೆರಡು ದಿನದ ನಂತರ ಮತ್ತೆ ಅವುಗಳ ಸ್ವಸ್ಥಾನಕ್ಕೆ ಬಿಡುತ್ತಾರೆ.

ಪೊದೆಗಳನ್ನು ದಾಟುವಾಗ ಮಧ್ಯ ಹಾದು ಹೋದ ವಿದ್ಯುತ್ ತಂತಿಗಳನ್ನು ಸ್ಪರ್ಶಿಸಿ ಕೆಲವೊಮ್ಮೆ ಕಾಡುಪಾಪಗಳು ಸಾಯುತ್ತವೆ. ಅಷ್ಟೇ ಅಲ್ಲದೇ ರಾತ್ರಿ ರಸ್ತೆ ದಾಟುವಾಗ ಇವುಗಳು ನಿಧಾನವಾಗಿ ಹೋಗುವುದರಿಂದ ವಾಹನಗಳು ಹರಿದು ಸತ್ತು ಹೋಗುತ್ತವೆ, ಇಲ್ಲವೇ ಗಾಯಗೊಳ್ಳುತ್ತವೆ. ಇವರು ಕಾಡುಪಾಪಗಳ ಬಗ್ಗೆ ನಾಗವಲ್ಲಿಯಲ್ಲಿ ಜಾಗೃತಿ ಫಲಕ ಬರೆಸಿ ಹಾಕಿದ ಮೇಲೆ ಇಲ್ಲಿಗೆ ಬರುವ ಜೀವಶಾಸ್ತ್ರ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಯಿತು.

8ನೇ ಪುಟಕ್ಕೆ...

ಮಲ್ಲಕಂಬ ಪ್ರದರ್ಶನ
ಚಿತ್ರಗಳು: ಇಂದ್ರಕುಮಾರ ದಸ್ತೇನವರ್

ಮಲ್ಲಕಂಬಕ್ಕೊಂದೇ ತುಳಸಿಗೇರಿ

ಇಡೀ ಊರಿಗೆ ಊರು ಒಂದೇ ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವುದು, ಅದರಲ್ಲಿ ಸಾಧನೆ ಮಾಡುವುದು ವಿಶೇಷವೇ ಸರಿ. ಈ ಊರಿನ ಮಕ್ಕಳು ಕಳೆದ ಎರಡು ದಶಕಗಳಿಂದ ಮಲ್ಲಕಂಬ ಸಾಹಸ ಕ್ರೀಡೆಯಲ್ಲಿ ರಾಷ್ಟ್ರಮಟ್ಟದಲ್ಲಿ ದೊಡ್ಡ ಹೆಸರು ಮಾಡಿದ್ದಾರೆ. ಈ ಕುರಿತಾದ ಆಸಕ್ತಿದಾಯಕ ಲೇಖನ ನಿಮ್ಮ ಓದಿಗೆ.

ಬಸವರಾಜ ಹವಾಲ್ದಾರ

ಪೂರ್ವದಲ್ಲಿ ಸೂರ್ಯ ಆಗಷ್ಟೇ ಕಣ್ಣು ಬಿಡುತ್ತಿದ್ದ. ಶಿವಾನಂದ ಸೈಕಲ್ ಏರಿ ತಮ್ಮೂರಿನ ಓಣಿ ಓಣಿಗಳಲ್ಲಿ 'ಟ್ರಿಣ್..ಟ್ರಿಣ್...' ಎಂದು ಬೆಲ್ ಬಾರಿಸಿಕೊಂಡು ಹೋಗುತ್ತಿದ್ದ. ಉಳಿದವರು ಆ ಬೆಲ್ ಅನ್ನೇ ಸಿಗ್ನಲ್ ಎಂದು ಅರ್ಥೈಸಿಕೊಂಡು ಒಬ್ಬೊಬ್ಬರಾಗಿ ಆತನನ್ನು ಹಿಂಬಾಲಿಸಿಕೊಂಡು ಹೊರಟರು. ಆಗ ಹಿರಿಯರಿಬ್ಬರ ಸಂಭಾಷಣೆ ಹೀಗೆ ನಡೆಯುತ್ತಿತ್ತು–'ಒದಾದಕ್ಕ ಎದ್ದಾಳತಾರೋ, ಬಿಡತಾರೋ ಗೊತ್ತಿಲ್ಲ. ಆದ್ರ ಮಲ್ಲಕಂಬ ಆಡದಕ್ಕ ಮಾತ್ರ ಗಂಟಿ ಹೊಡದಂಗ ಹೋಗ್ತಾರ. ಅವ್ವ-ಅಪ್ಪಾ ಬೈದ್ರೂ ಕಿವ್ಯಾಗ ಬೀಳೋದೆ ಇಲ್ಲ. ಸಾಲಿಗೆ ಒಂಟಿಗಾಲಿನ್ಯಾಗ ಓಡಿ ಹೊಕ್ಕಾರ. ಏನಾದ್ರಗಲಿ ನಮ್ಮೂರಿನ ಹೆಸ್ರ ಜಗತ್ತಿಗೇ ಗೊತ್ತಾಗಂಗ ಮಾಡ್ಯಾರ'.

ಇತ್ತ ಕಡೆ ಶಾಲಾ ಮೈದಾನದತ್ತ ಹೆಜ್ಜೆ ಹಾಕುವ ಭರತ, ಮಂಜುನಾಥ, ಭೀಮಣ್ಣ, ಮುಂತಾದವರು ಸ್ನೇಹಿತರ ಮನೆಗಳತ್ತ ಕೂಗು ಹಾಕುತ್ತಾರೆ. ಕೆಲವರು ತಮ್ಮ ಮಗನನ್ನು ತಮ್ಮೊಂದಿಗೆ ಕರೆದುಕೊಂಡು ಹೋಗುವಂತೆ ಕೇಳಿಕೊಂಡರೆ, ಅಲ್ಲೊಬ್ಬರು, ಇಲ್ಲೊಬ್ಬರು 'ಕೆಲಸ, ಬೊಗಸಿ ಬಿಟ್ಟು ನಸಕಿನ್ಯಾಗಾ ಆಡಲಿಕ್ಕೆ ನೀನ ಹೋಗದಲ್ಲದ ನನ್ನ ಮಗನ್ನೂ ಕರಕೊಂಡ ಹೊಂಟಿಯಾ' ಎನ್ನುವ ಮಾತು ಪೋಷಕರಿಂದ ಬರುತ್ತಿತ್ತು. ಆದರೆ ಅವರು ಇಂಥ ಮಾತುಗಳನ್ನು ಕಿವಿ ಮೇಲೆ ಹಾಕಿಕೊಳ್ಳುತ್ತಿರಲಿಲ್ಲ.

ಮುಂಜಾನೆ ಆರೂವರೆ ಗಂಟೆಗೆ ಬಾಗಲಕೋಟೆ ತಾಲ್ಲೂಕಿನ ತುಳಸಿಗೇರಿಯ ಶಾಲಾ ಆವರಣದಲ್ಲಿ ಐವತ್ತಕ್ಕೂ ಹೆಚ್ಚು ಮಲ್ಲಕಂಬ ಕ್ರೀಡಾಪಟುಗಳ ಕಲರವವಿತ್ತು. ಅವರೆಲ್ಲ ಯೋಗದೊಂದಿಗೆ ಅಭ್ಯಾಸವನ್ನು ಆರಂಭಿಸಿದರು.

ಏಳು ವರ್ಷದಿಂದ ಹಿಡಿದು ಹದಿನಾಲ್ಕು ವರ್ಷದವರೆಗಿನ ವಿದ್ಯಾರ್ಥಿಗಳು ಸರಸರನೇ ಮಲ್ಲಕಂಬದ ತುದಿ ಏರಿದರೆ, ಇನ್ನೊಂದೆಡೆ ವಿದ್ಯಾರ್ಥಿನಿಯರು ಹಗ್ಗ ಹಿಡಿದು ಇಪ್ಪತ್ತು ಅಡಿಯಷ್ಟು ಎತ್ತರವನ್ನು ಕಣ್ಣುಮುಚ್ಚಿ ಕಣ್ಣು ಬಿಡುವುದರೊಳಗೆ ಏರಿ ವಿವಿಧ ಆಸನಗಳನ್ನು ತೋರಿಸಿದರು. ಉಸಿರು ಬಿಗಿ ಹಿಡಿದು ಕುಳಿತ ಪೋಷಕರು ತಮ್ಮ ಮಕ್ಕಳ ಸಾಹಸವನ್ನು ನೋಡುತ್ತಿದ್ದರು. ಮಕ್ಕಳು ಸಾಹಸ ಪ್ರದರ್ಶಿಸುವ ವೇಳೆ ರಕ್ಷಣೆಗೆಂದು ಕೆಳಗಡೆ ಬೆಡ್‌ಗಳನ್ನು ಹಾಕಲಾಗಿತ್ತು. ಆದರೂ, ಮಕ್ಕಳು ಆಯತಪ್ಪಿ ಬಿದ್ದುಬಿಟ್ಟಾರು ಎನ್ನುವ ಉದ್ವೇಗದಲ್ಲಿ ಕಣ್ಣು ಕೀಲಿಸದೇ ಅವರನ್ನೇ ನೋಡುತ್ತಿದ್ದರು. ಅಲ್ಲಿ ಮಕ್ಕಳು ಪ್ರದರ್ಶಿಸಿದ ವಿವಿಧ ಭಂಗಿಯ ಸಾಹಸ ಮೈನವಿರೇಳಿಸುವಂತಿತ್ತು.

ಮಲ್ಲಕಂಬ ಸಾಹಸ ಕ್ರೀಡೆಗಳಲ್ಲಿ ಒಂದು. ಇಂಥ ಕ್ರೀಡೆಗೆ ಸೇರಿಕೊಳ್ಳಲು ಮಕ್ಕಳು, ಸೇರಿಸಲು ಪೋಷಕರು ಹಿಂಜರಿಯುತ್ತಾರೆ. ಆದರೆ, ತುಳಸಿಗೇರಿಯಲ್ಲಿ ಮನೆಗೊಬ್ಬರು ಮಲ್ಲಕಂಬ ಕ್ರೀಡಾಪಟು ಸಿಗುತ್ತಾರೆ. ಗಂಡು, ಹೆಣ್ಣು ಎಂಬ ಭೇದಭಾವ ಇಲ್ಲ. ಕುಸ್ತಿ, ಕಬಡ್ಡಿ, ಸೈಕ್ಲಿಂಗ್‌ಗೆ ಮಕ್ಕಳನ್ನು ಕಳುಹಿಸುತ್ತಿದ್ದ ಪೋಷಕರು ಈಗ ಮಲ್ಲಕಂಬಕ್ಕೂ ಕಳುಹಿಸುತ್ತಾರೆ.

ಯೋಗಾಸನಗಳನ್ನು ನೆಲದ ಮೇಲೆ ಮಾಡುವುದೇ ಕಷ್ಟ. ಆದರೆ ಇಲ್ಲಿ ಮಕ್ಕಳು ಮಲ್ಲಕಂಬ ಹಾಗೂ ಹಗ್ಗದ ಮೇಲೆ ಪದ್ಮಾಸನ, ಸಂಖ್ಯಾಸನ, ನಟರಾಜಾಸನ, ಪರ್ವತಾಸನ ಸೇರಿದಂತೆ ಹಲವು ಆಸನಗಳನ್ನು ಪ್ರದರ್ಶಿಸುತ್ತಾರೆ. ಒಂದಾದ ಮೇಲೊಂದರಂತೆ ಆಸನಗಳನ್ನು ಪ್ರದರ್ಶಿಸುತ್ತಲೇ ಇರುತ್ತಾರೆ. ಒಂದೇ ಹಗ್ಗದಲ್ಲಿ ನಾಲ್ಕಾರು ಮಕ್ಕಳು ಒಂದೊಂದು ಆಸನ ಮಾಡಿ ಬೆರಗುಗೊಳಿಸುತ್ತಾರೆ.

ಹಾವೇರಿ ಜಿಲ್ಲೆಯ ಲಕ್ಷ್ಮೇಶ್ವರದಲ್ಲಿ 'ಕರ್ನಾಟಕ ರಾಜ್ಯ ಅಮೆಚೂರ್ ಮಲ್ಲಕಂಬ ಸಂಸ್ಥೆ' ನಡೆಸುತ್ತಿರುವ ಸಿಪಿಇಡಿ ಕಾಲೇಜಿನಲ್ಲಿ ದೈಹಿಕ ಶಿಕ್ಷಣ ಶಿಕ್ಷಕರಾಗಿದ್ದ ಚನ್ನಪ್ಪ ಚನ್ನಾಳ, 2003ರಲ್ಲಿ ತುಳಸಿಗೇರಿಯ ಸರ್ಕಾರಿ ಪ್ರೌಢಶಾಲೆಗೆ ದೈಹಿಕ ಶಿಕ್ಷಣ ಶಿಕ್ಷಕರಾಗಿ ನೇಮಕಗೊಂಡರು.

7ನೇ ಪುಟಕ್ಕೆ...

ಬಾಲಕಿಯಿಂದ ಮಲ್ಲಕಂಬ ಪ್ರದರ್ಶನ

ಮಲ್ಲಕಂಬದ ಶಾಲೆ

ರಾಜ್ಯದಲ್ಲಿ ಎಲ್ಲಿಯೇ ಹೋಗಿ ತುಳಸಿಗೇರಿ ಶಾಲೆ ಹೆಸರು ಹೇಳುತ್ತಿದ್ದಂತೆಯೇ 'ಮಲ್ಲಕಂಬ' ಹೆಸರಿನಲ್ಲಿಯೇ ಗುರುತಿಸುತ್ತಾರೆ. ರಾಜ್ಯ, ರಾಷ್ಟ್ರದ ಯಾವುದೇ ಮೂಲೆಯಲ್ಲಿ ಮಲ್ಲಕಂಬ ಕ್ರೀಡಾಕೂಟ ನಡೆಯಲಿ, ಅಲ್ಲಿ ತುಳಸಿಗೇರಿ ಶಾಲೆಯ ಮಕ್ಕಳು ಇರುತ್ತಾರೆ. ಪದಕದೊಂದಿಗೇ ಮರಳುತ್ತಾರೆ.

'ಐದು ಬಾರಿ ರಾಷ್ಟ್ರೀಯ ಮಟ್ಟದಲ್ಲಿ, ಖೇಲೋ ಇಂಡಿಯಾದಲ್ಲಿ ಆಡಿದ್ದೇನೆ. ಏಳು ವರ್ಷಗಳಿಂದ ಅಭ್ಯಾಸ ಮಾಡುತ್ತಿದ್ದೇನೆ. ಮಲ್ಲಕಂಬದಿಂದಾಗಿ ಊರವರು, ಸುತ್ತಲಿನ ಹಳ್ಳಿಯವರು ಗುರುತಿಸುತ್ತಾರೆ. ಆಗ ಹೆಮ್ಮೆ ಅನಿಸುತ್ತದೆ. ಈಗ ಶಾಲಾ ಕ್ರೀಡಾಕೂಟದಲ್ಲಿ ಸೇರ್ಪಡೆ ಮಾಡಿರುವುದರಿಂದ ಉದ್ಯೋಗಕ್ಕೂ ಅನುಕೂಲವಾಗಲಿದೆ' ಎಂದು ಕ್ರೀಡಾಪಟು ಇಂದಿರಾ ಎಸ್. ಅನುಭವ ಹಂಚಿಕೊಂಡರು.

"ಖೇಲೋ ಇಂಡಿಯಾ ಯೋಜನೆಯಡಿ ದೇಸಿ ಕ್ರೀಡೆಗಳಿಗೆ ಪ್ರಾಶಸ್ತ್ಯ ನೀಡಲಾಗುತ್ತಿದೆ. ಇದರಿಂದಾಗಿ ಮಲ್ಲಕಂಬದಂತಹ ಕ್ರೀಡೆಗಳಿಗೂ ಪ್ರಾಮುಖ್ಯತೆ ಸಿಕ್ಕಿದೆ"

ಸಿ.ಕೆ. ಚನ್ನಾಳ, ದೈಹಿಕ ಶಿಕ್ಷಣ ಶಿಕ್ಷಕ, ಸರ್ಕಾರಿ ಪ್ರೌಢಶಾಲೆ, ತುಳಸಿಗೇರಿ

ಕೋಟಿ ವೃಕ್ಷ ರಾಮಯ್ಯ

ಹಳ್ಳಿಯೊಂದರ ಸಾಮಾನ್ಯ ವ್ಯಕ್ತಿ ರಾಮಯ್ಯನ ಎದೆಯಲ್ಲಿ ತಾಯಿ ಬಿತ್ತಿದ ಬೀಜ ದೊಡ್ಡ ಫಲವನ್ನೇ ಕೊಟ್ಟಿದೆ. ರಾಮಯ್ಯ ತೆಲಂಗಾಣ ರಾಜ್ಯದ ಖಮ್ಮಂ ಜಿಲ್ಲೆಯಲ್ಲಿ ಬಿತ್ತಿ, ಬೆಳೆಸಿದ ಮರಗಳ ಸಂಖ್ಯೆ ಅಂದಾಜು ಒಂದು ಕೋಟಿಗೂ ಅಧಿಕ! ಇದಕ್ಕಾಗಿ ಇಡೀ ಜೀವನವನ್ನು ತೇಯ್ದ ರಾಮಯ್ಯ ಏಪ್ರಿಲ್ 12 ರಂದು ತಮ್ಮ 87 ನೇ ವಯಸ್ಸಿನಲ್ಲಿ ಪ್ರಕೃತಿಯಲ್ಲಿ ಲೀನವಾದರು.

ಮಂಜುನಾಥ್ ಚಾಂದ್

ದಾರಿಪಲ್ಲಿ ರಾಮಯ್ಯ 'ವನಜೀವಿ ರಾಮಯ್ಯ' ಎಂದೇ ಪ್ರಖ್ಯಾತರು. ತೆಲಂಗಾಣ ರಾಜ್ಯದ ಖಮ್ಮಂ ಜಿಲ್ಲೆಯ ರೆಡ್ಡಿಪಲ್ಲಿಯವರು. ಇದು ನಮ್ಮ ಕಲಬುರಗಿಯಂತೆ ಬಿಸಿಲನಾಡು. ಈ ನೆಲದ ತಾಪ ತಗ್ಗಿಸಬೇಕು ಎಂದು ಹೊರಟವರು, ಸುಮಾರು ಆರು ದಶಕಗಳು ಬೀಜಗಳನ್ನು ಬಿತ್ತುತ್ತ, ಗಿಡಗಳನ್ನು ನೆಡುತ್ತ ಹೋದರು. ತಮ್ಮ ಜೀವನವನ್ನೇ ಇದಕ್ಕಾಗಿ ಮುಡಿಪಿಟ್ಟರು. ಅವರು ಬಿತ್ತಿದ ಬೀಜಗಳು ಮರಗಳಾಗಿ ಬೆಳೆದವು. ದಾರಿಗುಂಟ ತಂಪು ಚೆಲ್ಲಿದವು. ಜನ ಅವುಗಳ ಅಡಿಯಲ್ಲಿ ದಣಿವಾರಿಸಿಕೊಂಡರು, ಪಕ್ಷಿಗಳು ಆಸರೆ ಪಡೆದವು. ಹಾಗೆಯೇ ಖಮ್ಮಂ ಜಿಲ್ಲೆಯ ಉದ್ದಗಲಕ್ಕೂ ಬೆಳೆದು ನಿಂತಿರುವ ಮರಗಳ ಸಂಖ್ಯೆ ಒಂದು ಕೋಟಿಗೂ ಅಧಿಕ! ಈ ಕಾರಣಕ್ಕಾಗಿ ಜನ ಅವರನ್ನು ಪ್ರೀತಿಯಿಂದ ಚೇಟ್ಲಾ (ಮರ) ರಾಮಯ್ಯ ಎಂದೂ ಕರೆಯುತ್ತಾರೆ.

ಪ್ರತಿ ಮಳೆಗಾಲದ ನಂತರ ರಾಮಯ್ಯನವರ ತಾಯಿ ಪುಲ್ಲಮ್ಮ ಮುಂದಿನ ಮಳೆಗಾಲಕ್ಕೆ ಬೀಜಗಳನ್ನು ಎತ್ತಿಡುತ್ತಿದ್ದರು. ಎಂಥ ಬೀಜ? ಅವರೇ ಬೆಳೆದ ಹೀರೇಕಾಯಿ ಬೀಜಗಳು. ಕಾಯಿಯನ್ನು ಬಿಲಿಸಿಗೆ ಒಣಗಿಸಿದರೆ ವರ್ಷವಿಟ್ಟರೂ ಏನೂ ಆಗುವುದಿಲ್ಲ. ಮತ್ತೆ ಮುಂಗಾರು ಬಂತೆಂದರೆ ಕಾಯಿ ಒಡೆದು ಬೀಜ ಬಿತ್ತಿದರೆ ಸಾಕು. ಹೊಸ ಜೀವ, ಹೊಸ ಫಲ. ಪ್ರತಿ ಹಳ್ಳಿಯ ಬಹುತೇಕ ಮನೆಗಳಲ್ಲಿ ಇಂತಹುದೊಂದು ರೂಢಿ ಇದ್ದೇ ಇರುತ್ತದೆ. ಆದರೆ ತಾಯಿ ಮಾಡುತ್ತಿದ್ದ ಈ 'ಬೀಜ ರಕ್ಷಣೆ' ವಿಧಾನ ಸುಮಾರು ಎಪ್ಪತ್ತು ವರ್ಷಗಳ ಹಿಂದೆಯೇ ರಾಮಯ್ಯನವರ ಮೇಲೆ ಗಾಢ ಪ್ರಭಾವ ಬೀರಿತ್ತು. ಎಷ್ಟರ ಮಟ್ಟಿಗೆ ಎಂದರೆ, ಅದನ್ನು ತಮ್ಮ ಇಡೀ ಜೀವನಕ್ಕೆ ಅಳವಡಿಸಿಕೊಳ್ಳುವಷ್ಟು. ಚಂದನ, ಬೇವು, ಅರಳಿ, ಬಿಲ್ವ, ಕದಂಬದಂತಹ ಸ್ಥಳೀಯ ಗಿಡಗಳ ಬೀಜಗಳನ್ನು ಸಂಗ್ರಹಿಸುವ ಅಭ್ಯಾಸವು ಅವರಲ್ಲಿ ಬೇರೂರುವಂತೆ ಮಾಡಿದ್ದು ತಾಯಿಯೇ.

ರಾಮಯ್ಯ ಕೊಟ್ಟ ಶಿಕ್ಷೆ ಏನು?

2022 ರಲ್ಲಿ ಖಮ್ಮಂನಲ್ಲಿ ನಡೆದ ಘಟನೆ ಇದು. ಅಂದು ಸಂಭವಿಸಿದ ಅಪಘಾತದಲ್ಲಿ ರಾಮಯ್ಯ ತೀವ್ರವಾಗಿ ಗಾಯಗೊಂಡಿದ್ದರು. ಆ ಅಪಘಾತಕ್ಕೆ ಕಾರಣನಾದ ವ್ಯಕ್ತಿಯ ವಿರುದ್ಧ ದೂರು ದಾಖಲಿಸುವಂತೆ ಅವರನ್ನು ಒತ್ತಾಯಿಸಲಾಯಿತು. ಆದರೆ ರಾಮಯ್ಯ ಮಾಡಿದ್ದೇನು? ಆ ವ್ಯಕ್ತಿಗೆ ನೂರು ಗಿಡಗಳನ್ನು ಕೊಟ್ಟು ಅವನ್ನು ಜೀವನವಿಡೀ ಕಾಪಾಡಿಕೊಂಡು ಬರುವಂತೆ ಹೇಳಿದರು!

ಬೀಜ ಬಿತ್ತುತ್ತಾ ಹೊರಟರು...

ಅಲ್ಲಿಂದ ಶುರುವಾಯಿತು ಬೀಜ ಬಿತ್ತುವ ಮಹಾಯಜ್ಞ. ಪ್ರತಿ ವರ್ಷ ಮಳೆ ಸುರಿಯಲು ಶುರುವಾಯಿತು ಎಂದರೆ, ರಾಮಯ್ಯ ಸೈಕಲ್ ಏರಿ ಹೊರಟು ಬಿಡುತ್ತಿದ್ದರು. ಸೈಕಲ್‌ಗೊಂದು ಚೀಲ, ಅದರ ತುಂಬಾ ಬಗೆ ಬಗೆಯ ಬೀಜಗಳು. ಅಂಗಿಯ ಕಿಸೆ ತುಂಬ ಬೀಜಗಳೇ. ಹಾದಿಗುಂಟ ಎಲ್ಲೆಲ್ಲಿ ಖಾಲಿ ಜಾಗ ಕಾಣಿಸುತ್ತದೋ ಅಲ್ಲಿ ಬೀಜಗಳನ್ನು ಬಿತ್ತಿ ಮುಂದೆ ಸಾಗುತ್ತಿದ್ದರು. ಆಸ್ಪತ್ರೆ, ಶಾಲೆ, ಗ್ರಂಥಾಲಯಗಳ ಆವರಣಗಳಲ್ಲಿ ಬೀಜಗಳನ್ನು ಬಿತ್ತುತ್ತಿದ್ದರು. ಒಂದಲ್ಲ, ಎರಡಲ್ಲ, ಮೈಲುಗಟ್ಟಲೆ ಸೈಕಲ್‌ನಲ್ಲಿ ಹೀಗೆ ಸಾಗುತ್ತಲೇ ಇರುತ್ತಿದ್ದರು. ತಮ್ಮ ಬೀಜದ ಕೋಠಿ ಖಾಲಿಯಾಗುವ ತನಕ.

ಸೈಕಲ್ ಏರಿ ರಾಮಯ್ಯ ಹೊರಟರು ಎಂದರೆ ಊರಿನ ಜನಕ್ಕೆ ಅರ್ಥವಾಗಿ ಬಿಡುತ್ತಿತ್ತು; ಭೂಮ್ತಾಯಿ ಮಡಿಲು ಇನ್ನಷ್ಟು ಹಸಿರಾಗಲು ಅಣಿಯಾಯಿತು ಎಂದು.

'ವಿಕಾಸದ ಅದ್ಭುತ ಜೀವಶಕ್ತಿ ಪುಟ್ಟ ಬೀಜದಲ್ಲಿದೆ. ತಂಪಾದ ಮಣ್ಣಿನಲ್ಲಿ ಅವಿತ ಬೀಜ ಮೊಳಕೆಯೊಡೆದು ಮರವಾಗಿ ತನ್ನೊಳಗಿನ ಪ್ರಪಂಚವನ್ನು ಮನುಕುಲಕ್ಕೆ ತೋರಿಸುತ್ತದೆ' ಎನ್ನುತ್ತಿದ್ದರು ರಾಮಯ್ಯ. ವಿಕಾಸವಾದದ ಅರಿವಿದ್ದರೂ ಮನುಷ್ಯ ಅರಿವುಗೇಡಿಯಂತೆ ವರ್ತಿಸುತ್ತಿರುತ್ತಾನೆ ಎಂಬ ಬೇಸರ ಅವರಲ್ಲಿತ್ತು. ದಾರಿಗುಂಟ ಗಿಡಗಳನ್ನು ನೆಡಲು ಜೇಬು ತುಂಬಾ ಹಣವಿರಬೇಕಿಲ್ಲ. ಬೇಕಿರುವುದು ಇಚ್ಛಾಶಕ್ತಿಯಷ್ಟೇ. ಒಬ್ಬ ಶಾಸಕನಾದವನು, ಸಂಸದನಾದವನು ತನ್ನ ಕ್ಷೇತ್ರದಲ್ಲಿ ಇಂತಹ ಕೆಲಸ ಮಾಡುವುದಿಲ್ಲ. ಅದಕ್ಕೆ ಒಬ್ಬ ರಾಮಯ್ಯನೇ ಬೇಕಿತ್ತು ಎಂಬುದು ಸತ್ಯ. ಅದನ್ನವರು ಅಕ್ಷರಶಃ ಜಾರಿಗೆ ತಂದಿದ್ದರು.

ಮೈಲುಗಟ್ಟಲೆ ಸೈಕಲ್ ತುಳಿದು ಬೀಜಗಳನ್ನು ಬಿತ್ತಿದರಷ್ಟೇ ಸಾಕೆ? ಅವು ಬೆಳೆದು ಮರಗಳಾಗುವುದು ಬೇಡವೇ? ನಿಜ, ಆ ಕೆಲಸವನ್ನೂ ರಾಮಯ್ಯ ಶಿಸ್ತುಬದ್ಧವಾಗಿ ಮಾಡಿದ್ದಕ್ಕೇ ಅವು ಬೆಳೆದು ನಿಂತಿವೆ. ಅವರ ಆಸಕ್ತಿ ಇಷ್ಟಕ್ಕೇ ನಿಂತಿರಲಿಲ್ಲ. ಮರಗಳ ಬಗ್ಗೆ ಮಾಹಿತಿ ಸಿಗುವ ಪುಸ್ತಕಗಳನ್ನೆಲ್ಲ ಸಂಗ್ರಹ ಮಾಡುತ್ತಿದ್ದರು. ಅವುಗಳನ್ನು ಪಟ್ಟಾಗಿ ಕುಳಿತು ಓದುತ್ತಿದ್ದರು. ಎಂಥ ಬೀಜಗಳನ್ನು ಬಿತ್ತಬೇಕು, ಎಂಥ ಗಿಡಗಳನ್ನು ನೆಡಬೇಕು ಎಂಬುದರ ಪೂರ್ಣ ಅರಿವು ಅವರಿಗಿತ್ತು.

ಸೈಕಲ್‌ನಲ್ಲಿ ಸಾಗುವ ರಾಮಯ್ಯ ಜನರು ಬೀದಿಬದಿಯಲ್ಲಿ ಎಸೆದ ಪ್ಲೇಟುಗಳು, ಡಬ್ಬಾದ ತುಂಡುಗಳನ್ನು ತಂದು ಅವುಗಳಿಗೆ ಬಣ್ಣ ಬಳಿಯುತ್ತಿದ್ದರು. ಅವುಗಳ ಮೇಲೆ ತೆಲುಗಿನಲ್ಲಿ 'ವೃಕ್ಷೋ ರಕ್ಷತಿ ರಕ್ಷಿತಃ' ಎಂದು ಘೋಷಣೆ ಬರೆಯುತ್ತಿದ್ದರು. ಮತ್ತೆ ಆ ಫಲಕಗಳನ್ನು ಹಳ್ಳಿ ಹಳ್ಳಿಯ ಮರಗಳಿಗೆ ನೇತು ಹಾಕುತ್ತಿದ್ದರು.

'ಒಬ್ಬ ಬೂದಿಬಡುಕ ಸ್ವಾಮೀಜಿಯನ್ನು ನಂಬುತ್ತೀರಿ. ಖಾಕಿ ತೊಟ್ಟ ಪೊಲೀಸರನ್ನು ನಂಬುತ್ತೀರಿ. ಹಸಿರು ಶಾಲು ಸುತ್ತಿಕೊಂಡ ನನ್ನ ಮಾತನ್ನೇಕೆ ಕೇಳುವುದಿಲ್ಲ' ಎಂದು ರಾಮಯ್ಯ ತಮ್ಮ ಟೀಕಾಕಾರರ ಬಾಯಿ ಮುಚ್ಚಿಸುತ್ತಿದ್ದರು. ಅನೇಕ ಸಂದರ್ಭಗಳಲ್ಲಿ ಫಲಕವೊಂದನ್ನು ತಮ್ಮ ತಲೆಗೆ ಕಿರೀಟದಂತೆ ಧರಿಸುತ್ತಿದ್ದ ಅವರು, 'ನಾನು ವಿಶ್ವ ಸುಂದರಿ ರೀತಿ ಕಾಣಿಸುವುದಿಲ್ಲವೇ? ಇದು ನನ್ನ ಅಸ್ತಿತ್ವ. ಇದೇ ನನ್ನ ರೂಪ' ಎನ್ನುತ್ತಿದ್ದರು.

ಪ್ರತಿ ಮಳೆಗಾಲಕ್ಕೂ ಮುನ್ನ ಮಕ್ಕಳಿಗೆ ತಮ್ಮ ಸಂಗ್ರಹದಲ್ಲಿದ್ದ ಬೀಜಗಳನ್ನು, ಗಿಡಗಳನ್ನು ವಿತರಿಸುತ್ತ, ಈ ಭೂಮ್ತಾಯಿಯನ್ನು ರಕ್ಷಿಸಿ ಅನ್ನುತ್ತಿದ್ದರು. ತೆಲಂಗಾಣದ ಹಸಿರುಕ್ರಾಂತಿಯ ಹರಿಕಾರ ಎಂದೇ ಜನಜನಿತರಾಗಿದ್ದ ಅವರಿಗೆ 2017ರಲ್ಲಿ ಕೇಂದ್ರ ಸರ್ಕಾರ ಪದ್ಮಶ್ರೀ ಪುರಸ್ಕಾರ ನೀಡಿ ಗೌರವಿಸಿತ್ತು.

ರಾಮಯ್ಯ ಸಾಮಾಜಿಕ ಅರಣ್ಯೀಕರಣದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿದರು. ಅವರು ತೆಲಂಗಾಣದ ಅನೇಕ ಗ್ರಾಮಗಳಿಗೆ ಭೇಟಿ ನೀಡಿ, ಜನರ ಕೈಗೆ ಗಿಡಗಳನ್ನು ಹಸ್ತಾಂತರಿಸಿ ಅದರ ಮಹತ್ವವನ್ನು ತಿಳಿಸುತ್ತಿದ್ದರು.

ತೆಲಂಗಾಣ ಸರ್ಕಾರ ಆರನೇ ತರಗತಿಯ ಸಮಾಜ ಪಠ್ಯ ಪುಸ್ತಕದಲ್ಲಿ ಅವರ ಜೀವನಯಾನದ ಅಧ್ಯಾಯವನ್ನು ಸೇರಿಸಿದೆ. ಮಹಾರಾಷ್ಟ್ರ ಸರ್ಕಾರ ಅಲ್ಲಿನ ತೆಲುಗು ಮಾಧ್ಯಮದ ಮಕ್ಕಳಿಗಾಗಿ 9ನೇ ತರಗತಿಯ ಪಠ್ಯದಲ್ಲಿ ರಾಮಯ್ಯನವರ ಸಾಧನೆಯನ್ನು ತಿಳಿಸಿದೆ. ಸುಸ್ಥಿರ ಪರಿಸರಕ್ಕಾಗಿ ನೀಡಿದ ಕೊಡುಗೆಗಾಗಿ 'ಅಕಾಡೆಮಿ ಆಫ್ ಯೂನಿವರ್ಸಲ್ ಗ್ಲೋಬಲ್ ಪೀಸ್ ಸಂಸ್ಥೆ' ಗೌರವ ಡಾಕ್ಟರೇಟ್ ನೀಡಿದೆ.

ವನಜೀವಿ ರಾಮಯ್ಯ ತೆಲಂಗಾಣಕ್ಕೆ ಸೀಮಿತ ಎಂದರೆ ತಪ್ಪಾದೀತು. ಅವರ ಜೀವನ ಈ ಧರೆಯ ಮೇಲಿರುವ ಪ್ರತಿಯೊಬ್ಬರಿಗೂ ಸ್ಫೂರ್ತಿ. 'ಪ್ರಕೃತಿಯಿಂದ ಬಂದವರು ನಾವು, ಮರಳಬೇಕಾಗಿರುವುದು ಪ್ರಕೃತಿಗೇ' ಎಂಬ ಸಂದೇಶವನ್ನು ಬಿತ್ತಿದ ರಾಮಯ್ಯ, ಪ್ರಕೃತಿಗೇ ಮರಳಿದ್ದಾರೆ.

ಪ್ರಕೃತಿ ಸಂರಕ್ಷಣೆ ಸಂದೇಶ ಚಂದ್ರಮಂಡಲ ಚರಿತೆ

ಅವಿನಾಶ್ ಬಿ.

ಸಂವಹನದ ಶಕ್ತಿಶಾಲಿ ಮಾಧ್ಯಮವಾಗಿರುವ ಯಕ್ಷಗಾನ ಕಲೆಯು ರಂಜನೆಯ ಜತೆಜತೆಗೇ ಸಾಮಾಜಿಕ ಜಾಗೃತಿ ಮೂಡಿಸುವಲ್ಲಿ ಕೂಡ ಹಿಂದೆ ಬಿದ್ದದ್ದಿಲ್ಲ. ಪರಿಸರ ರಕ್ಷಣೆ, ಸಾಕ್ಷರತೆ, ಅಸ್ಪೃಶತೆ ನಿವಾರಣೆ, ಕೋಮು ಸೌಹಾರ್ದತೆ, ಸಣ್ಣ ಉಳಿತಾಯ, ಆರೋಗ್ಯ ರಕ್ಷಣೆ ಮುಂತಾದ ಸಾಮಾಜಿಕ ಸಂದೇಶಗಳನ್ನು ಯಕ್ಷಗಾನ ಪ್ರದರ್ಶನ ಮತ್ತು ತಾಳಮದ್ದಳೆಗಳ ಮೂಲಕ ಜನಮಾನಸಕ್ಕೆ ತಲುಪಿಸಲು ಸಾಕಷ್ಟು ಪ್ರಯತ್ನಗಳು ಹಿಂದಿನಿಂದಲೂ ಆಗುತ್ತಿದ್ದವು. ಈ ಸಾಲಿಗೆ ಹೊಚ್ಚ ಹೊಸ ಸೇರ್ಪಡೆಯೆಂದರೆ, ಪರಿಸರ ನಾಶ ತಡೆದು, ನೆಲ-ಜಲ-ಪ್ರಕೃತಿಯ ಸುದೀರ್ಘ ಬಾಳಿಕೆಗಾಗಿ ಜಾಗೃತಿ ಸಂದೇಶ ಸಾರುವ 'ಚಂದ್ರಮಂಡಲ ಚರಿತೆ'.

ಮಾನವನ ದುರಾಸೆಯ ಫಲವಾಗಿ ಭೂಮಂಡಲದ ಜೀವಜಲ, ಮಣ್ಣು ಜೊತೆಗೆ ಮನಸುಗಳು ಕೂಡ ವಿಷಯುಕ್ತವಾಗಿವೆ. ಹೊಸ ತಲೆಮಾರಿನವರು ಸುಖಲೋಲುಪತೆಯತ್ತಲೇ ಮನ ಮಾಡುತ್ತಿರುವುದು ಈಗಿನ ಧಾವಂತದ ಯುಗದ ಪರಿಣಾಮ.

ಹ್ಯುಂಡೇ ಮೋಟಾರ್ ಇಂಡಿಯಾ ಪ್ರತಿಷ್ಠಾನದ ಆರ್ಟ್ ಫಾರ್ ಹೋಪ್ 2025ರ ರಾಷ್ಟ್ರ ಮಟ್ಟದ ಅನುದಾನಕ್ಕೆ ಆಯ್ಕೆಯಾಗಿರುವ ಮತ್ತು ಮೂಡಲಪಾಯದ ನಾಡಿನಲ್ಲಿ ಪಡುವಲಪಾಯ ಯಕ್ಷಗಾನದ ಸೊಗಡನ್ನು, ಕಂಪನ್ನು ಪಸರಿಸುತ್ತಾ, ದಶಮಾನೋತ್ಸವದ ಹೊಸ್ತಿಲಲ್ಲಿರುವ ತುಮಕೂರಿನ 'ಯಕ್ಷದೀವಿಗೆ'ಯ ಹೆಗ್ಗಳಿಕೆ 'ಚಂದ್ರಮಂಡಲ ಚರಿತೆ'. ಪ್ರಸಂಗಕರ್ತೃ ಹಿರಿಯ ಅರ್ಥಧಾರಿ, ನಿವೃತ್ತ ಪ್ರಾಂಶುಪಾಲ ಗಣರಾಜ ಕುಂಬ್ಳೆ. ತುಮಕೂರು ಕನ್ನಡ ಭವನದಲ್ಲಿ ಈ ಪ್ರಸಂಗವು ಫೆಬ್ರುವರಿಯಲ್ಲಿ ಮೊದಲ ಬಾರಿಗೆ ಪ್ರದರ್ಶನಗೊಂಡಿತಲ್ಲದೆ ಸುಳ್ಯ, ಪುತ್ತೂರುಗಳಲ್ಲಿಯೂ ತನ್ನ ಛಾಪು ಮೂಡಿಸಿದೆ. ಸಂದೇಶವುಳ್ಳ ಈ ಯಕ್ಷಗಾನವನ್ನು ಪ್ರದರ್ಶಿಸಿದವರು ಬಯಲುಸೀಮೆ ತುಮಕೂರಿನ ಮಕ್ಕಳು ಎಂಬುದು ಮತ್ತೊಂದು ವಿಶೇಷ. ಯಕ್ಷದೀವಿಗೆಯ ಮೂಲಕ ಹೊಸದಾಗಿ ಯಕ್ಷಗಾನದ ಹೆಜ್ಜೆಗಾರಿಕೆ ಕಲಿತು ಪ್ರದರ್ಶಿಸಿ ಗಮನ ಸೆಳೆದಿದ್ದಾರೆ.

ಯಕ್ಷಗಾನದ ಚೌಕಟ್ಟಿನಲ್ಲಿ

ಪಾತ್ರಗಳು, ಸನ್ನಿವೇಶಗಳು ಮತ್ತು ಅವುಗಳ ಆಹಾರ್ಯಕ್ಕೂ ವಿಶೇಷ ಗಮನ ನೀಡಿ ಯಕ್ಷಗಾನೀಯ ಚೌಕಟ್ಟಿನಲ್ಲಿ ಈ ಪ್ರಸಂಗವನ್ನು ಪ್ರದರ್ಶಿಸಲಾಗಿದೆ. ರಾಜ-ಮಂತ್ರಿ, ಘೋರ-ಗರಳ ಅಸುರರು, ಜಲದೇವಿ, ಭೂದೇವಿ, ಬಕಪಕ್ಷಿ, ಊರ ಜನರು, ಮುನಿಯ ಪಾತ್ರಗಳಿವೆ. ಚಂದ್ರಮಂಡಲ ಎಂಬ ಪ್ರಜಾ ಪರಿಪಾಲಕ ರಾಜನಿದ್ದರೆ, ವಿವೇಚನೆಯಿಲ್ಲದ ಮಂತ್ರಿಗಳ ಪ್ರತಿನಿಧಿಯಾಗಿ ವೃದ್ಧಿ ಎಂಬ ಸಚಿವ, ರಾಜ್ಯಕ್ಕೆ ಹೊಸ ಕೈಗಾರಿಕೆಗಳು ಬೇಕು, ಯಂತ್ರೋಪಕರಣಗಳು, ಕಡಿಮೆ ಶ್ರಮದಿಂದ ಹೆಚ್ಚು ಸಂಪಾದನೆ ಮಾಡುವಂತೆ ರಾಸಾಯನಿಕಗಳಿಂದಲೇ ಕೃಷಿ ಉತ್ಪಾದನೆ ಹೆಚ್ಚಿಸಬೇಕು, ಲಾಭ ಮಾಡಬೇಕು ಎಂದೆಲ್ಲ ವಾದಿಸುತ್ತಾನೆ. ಆಧುನಿಕ ಕಾಲದ ಹುಡುಗರ ಮೋಜು-ಮಸ್ತಿಯ ಮನೋಭಾವದ ಪ್ರತಿನಿಧಿಗಳಾಗಿ ಅಮರೇಶ ಮತ್ತವನ ಗೆಳೆಯ-ಗೆಳತಿಯರ ವಿಹಾರ ಗಮನ ಸೆಳೆಯುತ್ತದೆ. ಎಲ್ಲೂ ಸಪ್ಪೆಯಾಗದಂತೆ, ವೀರ, ಶೃಂಗಾರ, ಹಾಸ್ಯ, ಕರುಣ, ರೌದ್ರ, ಅದ್ಭುತ, ಶಾಂತ ರಸಗಳ ಸಮಪಾಕವಿಲ್ಲಿದೆ.

ಅಭಿವೃದ್ಧಿಯ ನಾಗಾಲೋಟದಲ್ಲಿ ಪ್ರಮುಖವಾಗಿ ಎದುರಿಸುತ್ತಿರುವ ಸಮಸ್ಯೆ ನೆಲ ಮತ್ತು ಜಲ. ನೆಲಕ್ಕೂ ವಿಷ ಉಣಿಸುತ್ತಿದ್ದೇವೆ, ಜಲವನ್ನೂ ಕಲುಷಿತಗೊಳಿಸುತ್ತಿದ್ದೇವೆ. ಇದರ ನಡುವೆ ಸಾಂಕ್ರಾಮಿಕ ರೋಗಗಳು ಮಾನವ ನಿರ್ಮಿತವಾಗಿ ಹುಟ್ಟಿಕೊಂಡು, ಮಾನವನಿಗೇ ಸವಾಲಾಗಿ, ಭಸ್ಮಾಸುರನಂತೆ ಬೆಳೆಯತೊಡಗಿವೆ. ಇದರ ಬಗೆಗೆ ಸಾಮಾನ್ಯ ಜನರಿಗೆ ಅರಿವು ಮೂಡಿಸಬೇಕಾದ ಅಗತ್ಯವಿರುವುದರಿಂದ ಯಕ್ಷಗಾನ ಎಂಬ ರಂಗ ಮಾಧ್ಯಮದ ಮೂಲಕ ಮನರಂಜನೆಯನ್ನೂ, ಬೋಧನೆಯನ್ನೂ ನೀಡುವಂತೆ ಕಥೆ ಹೆಣೆಯಲಾಗಿದೆ

> ಜನಪದ, ನಾಟಕ, ಯಕ್ಷಗಾನದಂಥ ಕಲೆಗಳೊಂದಿಗೆ ಪರಿಸರ ಜಾಗೃತಿ ಸಾರುವ ಯತ್ನಗಳು ಬಹಳ ಕಾಲದಿಂದ ನಡೆಯುತ್ತಿವೆ. ಅದೇ ಸಾಲಿಗೆ ಸೇರುತ್ತದೆ 'ಚಂದ್ರಮಂಡಲ ಚರಿತೆ' ಪ್ರಸಂಗ...

ಎಂದಿದ್ದಾರೆ ಪ್ರಸಂಗಕರ್ತೃ ಗಣರಾಜ ಕುಂಬ್ಳೆ.

ತುಮಕೂರಿನಲ್ಲಿ ಯಕ್ಷದೀವಿಗೆ ಸಂಸ್ಥೆಯ ಮೂಲಕ ಸ್ಥಳೀಯರನ್ನು ಸಜ್ಜುಗೊಳಿಸಿ ರಂಗಕ್ಕೇರಿಸಿದವರು ವೃತ್ತಿಯಲ್ಲಿ ಉಪನ್ಯಾಸಕರಾಗಿರುವ ಸಿಬಂತಿ ಪದ್ಮನಾಭ ಹಾಗೂ ಆರತಿ ಪಟ್ರಮೆ ದಂಪತಿ. ದಶಮಾನೋತ್ಸವ ವರ್ಷದಲ್ಲಿ ಮಕ್ಕಳಲ್ಲಿ ಕನ್ನಡ ಭಾಷೆ ಬೆಳೆಸುವ ಮತ್ತು ಸಂಸ್ಕಾರ ಮೂಡಿಸುವ ಯಕ್ಷಗಾನವನ್ನು ಇನ್ನಷ್ಟು ಶಾಲಾ-ಕಾಲೇಜುಗಳಲ್ಲಿ ಪ್ರದರ್ಶಿಸುವ ಮೂಲಕ ಜಾಗೃತಿ ಮೂಡಿಸುವ ಉದ್ದೇಶವಿದೆ ಎಂದಿದ್ದಾರೆ ಯಕ್ಷದೀವಿಗೆಯ ಅಧ್ಯಕ್ಷೆ ಆರತಿ ಪಟ್ರಮೆ.

ಇಂಥ ಸಂದೇಶವೊಂದು ವಿದ್ಯಾರ್ಥಿಗಳ ಮನದಲ್ಲಿ ಅಚ್ಚೊತ್ತಿದರೆ, ಯಕ್ಷಗಾನದ ವಿಸ್ತರಣೆಯೊಂದಿಗೆ ಪರಿಸರ ನಾಶದ ಬಗೆಗೆ ಕಾಳಜಿ ತೋರುವುದಕ್ಕೂ ಇದು ಪತ್ಯೇತರ ಕೊಡುಗೆಯಾದೀತು.

ಹಿನ್ನೋಟ...

1950ರ ದಶಕದಲ್ಲಿ ಜಾಪಾನಿ ಕೃಷಿ ವಿಜಯ (ಮಣೆಲ ಶಿವಶಂಕರ, ಪುಣಚಾ) ಅಲ್ಲದೆ ನಂತರವೂ 70 ರಿಂದ 90ರ ದಶಕಗಳಲ್ಲಿ ಸಾಕಷ್ಟು ಸಾಮಾಜಿಕ ಜಾಗೃತಿ ಮೂಡಿಸುವ ಪ್ರಸಂಗಗಳು ರಚನೆಯಾದವು. ಕುಟುಂಬ ಯೋಜನೆ ಅಥವಾ ಮಿತ ಸಂತಾನ ಮಹಿಮೆ (ಇಡಗುಂಜಿ ಶಿವರಾಮ ಭಂಡಾರಿ), ಮಿತ ಸಂತಾನ (ಗುಂಡೂ ಸೀತಾರಾಮ ರಾವ್), ಅಕ್ಷರ ವಿಜಯ ಮತ್ತು ನಿಸರ್ಗ ಸಂಧಾನ (ಹೊಸ್ತೋಟ ಮಂಜುನಾಥ ಭಾಗವತ), ಕುಟುಂಬ ಯೋಜನೆ (ಅಂಬೆಮೂಲೆ ಗೋವಿಂದ ಭಟ್), ಜನ ಕಲ್ಯಾಣ (ಸೂರ್ಯನಾರಾಯಣ ಭಟ್ ಬೆಳಾಲು), ಸಂತತಿ ನಿರೋಧ ಸಂಗ್ರಾಮ ಅಥವಾ ಕುಟುಂಬ ಕಲ್ಯಾಣ (ಕಡಬ ಅನಂತ ರಾವ್), ಇಳೆಯಣ್ಣನ ಕಥೆ (ಗೋಪಾಲಕೃಷ್ಣ ನಾಯರಿ), ಘೋರ ಮಾರಕ, ರುಧಿರ ಮೋಹಿನಿ, ಮದಿರಾಸುರ ಮರ್ದನ (ಅಮೃತ ಸೋಮೇಶ್ವರ), ಶೀಲ ಸಂಕ್ರಾಂತಿ (ದಿವಾಕರ ಹೆಗಡೆ), ಏಡ್ಸ್ ಮಹಾತ್ಮೆ (ಬಿ.ಎಂ.ಶೆಣೈ), ಏಡ್ಸಾಸುರ (ಮೂಕಾಂಬಿಕಾ ವಾರಂಬಳ್ಳಿ), ಸಂಜೀವಿನಿ (ಕದ್ರಿ ನವನೀತ ಶೆಟ್ಟಿ), ಗುನ್ಯಾಸುರ ವಧೆ (ಭಾಸ್ಕರ ರೈ ಕುಕ್ಕುವಳ್ಳಿ), ಮದ್ಯೋಚ್ಚಾಟನೆ (ಕೀರಿಕ್ಕಾಡು ಮಾಸ್ಟರ್ ವಿಷ್ಣು ಭಟ್), ಪೋಲಿಯಾಸುರ ಮರ್ದನ (ನಾರಾಯಣ ಪಿ. ಶೆಟ್ಟಿ) ಮುಂತಾದ ಪ್ರಸಂಗಗಳು ಹಲವೆಡೆ ರಂಗಸ್ಥಳದಲ್ಲಿ ಮೆರೆದಿವೆ. ಇತ್ತೀಚೆಗೆ ಕೋವಿಡ್ ಕಾಡಿದ ಕಾಲದಲ್ಲಿ 'ಕೊರೊನಾಸುರ ಕಾಳಗ' (ಎಂ.ಎ. ಹೆಗಡೆ ಮತ್ತು ಡಿ.ಎಸ್.ಶ್ರೀಧರ್) ಕೂಡ ಗಮನ ಸೆಳೆದಿತ್ತು.

ಯಕ್ಷಗಾನ ಚಂದ್ರಮಂಡಲ ಚರಿತೆಯಲ್ಲಿ ರಾಜ ಚಂದ್ರಮಂಡಲ ಹಾಗೂ ಮಂತ್ರಿ ವೃದ್ಧಿ

ಮಾಗಿದ ಮನಗಳ ಸಂಭ್ರಮ

'ಅಮರ ಮಧುರ ಪ್ರೇಮ' ನಾಟಕದಲ್ಲಿ ಸುಂದರ್ ವೀಣಾ, ಯಶವಂತ ಸರದೇಶಪಾಂಡೆ, ವೀಣಾ ಸುಂದರ್

ರಶ್ಮಿ ಎಸ್

ರಂಗಭೂಮಿ

ನಿವೃತ್ತರಾದ ಅಮರನಾಥ ಕಟಗೇರಿ ಹೆಂಡತಿಯನ್ನು ಕಳೆದುಕೊಂಡವರು, ಮನೆಯ ಜವಾಬ್ದಾರಿ ನಿಭಾಯಿಸುವುದರಲ್ಲಿ ಐದು ದಶಕ ಜೀವ ತೇಯ್ದು, ಕೀರ್ತನಕಾರಳಾಗಿರುವ ಮಧುರಾ ಕಾಮತ್, ಬದುಕಿನ ಎರಡನೆಯ ಇನ್ನಿಂಗ್ಸ್‌ನಲ್ಲಿ ಜೊತೆಗಾರರಿದ್ದರೆ ಸೊಗಸು ಎಂದು ನಂಬಿ, ಸಂಗಾತಿಗಳನ್ನು ಜೊತೆಗೂಡಿಸುವವ ಪ್ರೇಮ್ ಸ್ವರೂಪ್.

ಈ ಮೂವರ ಸಂಗಮವೇ 'ಅಮರ ಮಧುರ ಪ್ರೇಮ' ನಾಟಕ. ಹೀಗೆ ಮೂರು ಸಾಲುಗಳಲ್ಲಿ ಹೇಳಿ ಮುಗಿಸುವಷ್ಟು ಸರಳವಲ್ಲ ಕತೆ. ಈ ಕತೆಯೊಳಗೆ ವೃದ್ಧಾಪ್ಯದ ಒಂಟಿತನದ ವೇದನೆ ಇದೆ. ಹಲವಾರು ದಶಕಗಳನ್ನು ಒಂಟಿಯಾಗಿ ಕಳೆದ ಹೆಣ್ಣುಮಗಳೊಬ್ಬಳು ಸೂಕ್ತ ಸಾಂಗತ್ಯಕ್ಕಾಗಿ ಹಾತೊರೆಯುವ ಸಂವೇದನೆ ಇದೆ. ಇವರಿಬ್ಬರನ್ನೂ ಒಟ್ಟುಗೂಡಿಸುವ ಭರದಲ್ಲಿ ಮಧ್ಯಸ್ಥಿಕೆ ವಹಿಸಿರುವ ಪ್ರೇಮ್ ಸ್ವರೂಪ್ ಪಾತ್ರವೂ ಪ್ರೇಮದ ಬಲೆಗೆ ಬೀಳುವ ಕತೆಯೂ ಸೇರಿದೆ.

ಎಂದಿನಂತೆ ಯಶವಂತ ಸರದೇಶಪಾಂಡೆ ಅವರ ಉತ್ತರ ಕರ್ನಾಟಕದ ಭಾಷೆ ನಾಟಕದ ಪ್ಲಸ್ ಪಾಯಿಂಟಾಗಿದ್ದರೆ, ಈ ಸಲ ವೀಣಾ ಸುಂದರ್ ಮತ್ತು ಸುಂದರ್ ವೀಣಾ ಅವರ ಶಿಷ್ಟ ಭಾಷೆಯೂ ಜೊತೆಗೂಡಿದೆ.

ಸ್ವಾತಂತ್ರ್ಯಪೂರ್ವದಲ್ಲಿ ಪಾಕಿಸ್ತಾನದಿಂದ ಬಂದ ಕುಟುಂಬವೊಂದರ ಮೂರು ಮತ್ತು ನಾಲ್ಕನೆ ತಲೆಮಾರು ವಧು–ವರ ವೇದಿಕೆಯನ್ನು ನಡೆಸುತ್ತಿದೆ. ಆದರೆ ಈಗ ಅದು ಮಾಗಿದ ಮನಸುಗಳ ಸಂಗಮವೆಂಬ ಟ್ಯಾಗ್‌ಲೈನಿನೊಂದಿಗೆ ಸೆಕೆಂಡ್ ಇನ್ನಿಂಗ್ಸ್‌ನಲ್ಲಿ ಸಾಂಗತ್ಯ ಬಯಸುವ ಜೋಡಿಗಳನ್ನು ಬೆಸೆಯುವ ಕೆಲಸ ನಡೆಸುತ್ತಿದೆ.

ಸ್ವಾತಂತ್ರ್ಯಪೂರ್ವದ ಕತೆ, ದೇಶ ಇಬ್ಭಾಗವಾಗುವ ಸಂದರ್ಭದಲ್ಲಿ ಮಿಡಿದ ಮಾನವೀಯತೆ, ಆ ಸಂದರ್ಭದ ಋಣ ಸಂದಾಯ ಇವೆಲ್ಲವೂ ನಾಟಕದ ಒಂದು ಭಾಗ. ಇನ್ನೊಂದು ಇಬ್ಬರನ್ನು ಕೂಡಿಸುವ ಪಣ ತೊಟ್ಟ ಪ್ರೇಮ್ ಸ್ವರೂಪ್ ಸಹ ಮೇಲಿಂದ ಮೇಲೆ ಭೇಟಿಯಾಗುತ್ತ, ತಾನೂ ಮಧುರಾ ಪಾತ್ರವನ್ನು ಪ್ರೇಮಿಸತೊಡಗುತ್ತಾರೆ. ಪ್ರೇಮ್ ಸ್ವರೂಪ್ ಇಲ್ಲಿ ತಮ್ಮ ಮೋಹಕ್ಕೆ ಸೋಲುತ್ತಾರೋ, ಕರ್ತವ್ಯವನ್ನು ನೆನಪಿಸಿಕೊಂಡು ಪ್ರೇಮವನ್ನು ತ್ಯಾಗ ಮಾಡುತ್ತಾರೋ? ಮಧುರಾಳ ಒಲವು ಯಾರಿಗೆ ದೊರೆಯಿತು? ಎನ್ನುವುದೇ ಕುತೂಹಲ.

ರಂಗಭೂಮಿಯಲ್ಲಿ ಯಾವತ್ತಿಗೂ ಅಂತರಂಗವೆಂಬುದು ಬಹಿರಂಗವಾಗಿ ತೋರುತ್ತಿದ್ದರೆ, ಬಹಿರಂಗವಾಗಿ ಕಂಡಿದ್ದು ಅಂತರಂಗದಲ್ಲಿ ಆಲೋಚನಾಸುಳಿಯನ್ನು ಹುಟ್ಟಿಸುತ್ತದೆ. ಅದು ಪಕ್ಕಾ ಮನೋರಂಜನೆಗಾಗಿ ಇರುವ ನಾಟಕ ಎಂದು ಹೇಳಿದ ಮೇಲೂ ಪ್ರೇಕ್ಷಕನ ತಲೆಗೆ ಗುಂಗಿಹುಳ ಬಿಡುವ ಕೆಲಸ ಮಾಡುತ್ತದೆ. ಈ ನಾಟಕ ರಚಿಸಿದ ಕಾಲದಲ್ಲಿ ಬಹುಶಃ ವಿವಾಹ ವಿಚ್ಛೇದನಗಳು ಸಾಮಾನ್ಯವಾಗಿರಲಿಲ್ಲ. ವಿಧವಾ ವಿವಾಹವೂ ವಿಧುರರ ವಿವಾಹದಷ್ಟು ಮನ್ನಣೆ ಪಡೆದಿರಲಿಲ್ಲವೇ ಎಂಬ ಪ್ರಶ್ನೆ ಮೂಡುತ್ತದೆ. ವಿಧುರನ ಸಾಂಗತ್ಯಕ್ಕೆ ಕುಮಾರಿಯ ಶೋಧವೇ ಯಾಕಾಯಿತು ಎಂದು ಕೂದಲು ಸೀಳುವ ಪ್ರಶ್ನೆಯನ್ನಿರಿಸಿಕೊಂಡು ನೋಡಿದರೆ ನಾಟಕವನ್ನು ಆನಂದಿಸಲಾಗುವುದಿಲ್ಲ. ಆದರೆ ನಾಟಕದ ಅಂತರಂಗವಾಗಿರುವ ಸಾಂಗತ್ಯ ಅದೆಷ್ಟು ಮುಖ್ಯ ಎಂಬ ಪ್ರಶ್ನೆಯನ್ನು ಬಿಡಿಸುತ್ತ ಹೋದರೆ, ಉಳಿದವೆಲ್ಲವೂ ಗೌಣವೆನಿಸತೊಡಗುತ್ತವೆ.

ಮೂಲ ಮರಾಠಿಯ ಈ ನಾಟಕವನ್ನು ಹೇಮಂತ ಎದಲಾಬಾದಕರ ಅವರು ರಚಿಸಿದ್ದಾರೆ. ಕನ್ನಡಕ್ಕೆ ಯಶವಂತ ಸರದೇಶಪಾಂಡೆ ತಂದಿದ್ದಾರೆ. ಎಂದಿನಂತೆ ಉತ್ತರ ಕನ್ನಡದ ಲವಲವಿಕೆಯ ಭಾಷೆ ಇದು ಮೂಲ ಕನ್ನಡದ್ದೇ ರಚನೆ ಎನ್ನುವಷ್ಟು ಆಪ್ತವಾಗಿದೆ.

ಸಂಗೀತವನ್ನು ಪ್ರವೀಣ ಡಿ. ರಾವ್ ಅವರು ನೀಡಿದ್ದು, ರಂಗಸಜ್ಜಿಕೆಯನ್ನು ಜೀವನ್ ಫರ್ನಾಂಡಿಸ್ ನಿರ್ವಹಿಸಿದ್ದಾರೆ. ವೇದಿಕೆಯ ಮೇಲೆ ಮೂರು ನಾಲ್ಕು ಸೆಟ್ಟುಗಳನ್ನು ಪಟಪಟನೆ ಬದಲಿಸುತ್ತ ದೇಗುಲದ ದೃಶ್ಯ, ಜಾಗರ್ಸ್ ಪಾರ್ಕ್ ದೃಶ್ಯ, ಕಚೇರಿಯ ದೃಶ್ಯ ವೇದಿಕೆಯ ಮೇಲೆ ಕಳೆಗಟ್ಟುತ್ತವೆ. ಬೆಳಕಿನ ವಿನ್ಯಾಸವನ್ನು ನಾಗರಾಜ ಪಾಟೀಲ್ ಮಾಡಿದ್ದಾರೆ. ವಸ್ತ್ರಾಲಂಕಾರದ ಹೊಣೆಯನ್ನು ಮಾಲತಿ ಸರದೇಶಪಾಂಡೆ ಹೊತ್ತುಕೊಂಡಿದ್ದಾರೆ. ಮಧುರಾ ಪಾತ್ರ ಉಡುವ ನೌ ವಾರಿ ಸೀರೆ, ನತ್ತು ಗಮನ ಸೆಳೆಯುತ್ತವೆ.

ವೀಣಾ ಸುಂದರ್ ಮತ್ತು ಸುಂದರ್ ವೀಣಾ ಅವರ ಪಾತ್ರಗಳು ಶಿಷ್ಟ ಭಾಷೆಯಲ್ಲಿ ಜನರನ್ನು ಸೆಳೆಯುತ್ತವೆ. ಅವರಿಬ್ಬರ ನಡುವಿನ ಬಾಂಧವ್ಯದ ಸಲುಗೆ ಮತ್ತು ಸದ್ಭಾವಗಳೆರಡೂ ಈ ನಾಟಕದ ಒಳಗುಣಗಳಾಗಿ ಹರಿಯುತ್ತಲೇ ಇರುತ್ತವೆ.

ಮಾತಿನಿಂದಲೂ ನಗೆಹೊನಲು, ಮಾಗಿದ ಆಂಗಿಕ ಚಲನೆಯಿಂದಲೂ ನಗುವಿನ ನದಿ ಸದಾ ಹರಿಯುವಂತೆ ವೇದಿಕೆಯನ್ನು ನಿಭಾಯಿಸುತ್ತಾರೆ.

ಇಡೀ ನಾಟಕವನ್ನು ನೋಡಿದ ಮೇಲೆ ಪ್ರೇಕ್ಷಕನಿಗೆನಿಸುವುದು, ಸಾಂಗತ್ಯವೆಂಬುದು ಕೇವಲ ಅವಲಂಬನೆಯಲ್ಲ. ಕೆಲಸಕ್ಕಾಗಿ, ನೋಡಿಕೊಳ್ಳಲು, ದೇಖುರೇಕಿಗಾಗಿ ಅಲ್ಲವೇ ಅಲ್ಲ. ಸಾಂಗತ್ಯವೆಂದರೆ ನೀನೆನಗೆ, ನಾನಿನಗೆ ಜೇನಾಗುವ, ರಸಗಂಗೆಯಲ್ಲಿ ಮೀನಾಗುವ ಹಾಡಿದ್ದಂತೆ. ಒಲಿದ ಜೀವಗಳು ಜೀವನವನ್ನು ಸವೆಸುವುದಿಲ್ಲ. ಸವಿಯುತ್ತಾರೆ. ಆ ಸವಿ ಸವಿಯಲು ಯಾವ ವಯಸ್ಸಾದರೇನು ಎಂಬ ನಿರಂತರ ಜವ್ವನದ ನೀತಿಯೊಂದು ಹೇಳಿ ಸಾಗುತ್ತದೆ. ❖

ಮಲ್ಲಕಂಬಕ್ಕೊಂದೇ...

6ನೇ ಪುಟದಿಂದ...

2004 ರಿಂದ ಇಲ್ಲಿ ಆರಂಭವಾದ ಮಲ್ಲಕಂಬದ ಕ್ರೀಡೆಯ ಸಾಧನೆ ರಾಷ್ಟ್ರದಾದ್ಯಂತ ಹರಡಿಕೊಂಡಿದೆ. ಮಲ್ಲಕಂಬಕ್ಕೆ ವಿಶೇಷ ದೈಹಿಕ ಸಿದ್ಧತೆ ಹೊಂದಿರಬೇಕಾದ ಅವಶ್ಯಕತೆಯಿಲ್ಲ. ಆದರೆ ಮಾನಸಿಕ ದೃಢತೆ ಹೊಂದಿರಬೇಕು. ಏಕೆಂದರೆ ಮಲ್ಲಕಂಬದಲ್ಲಿ ಹತ್ತುವ ಇಳಿಯುವ ಕಸರತ್ತು, ಹಿಂದೆ–ಮುಂದೆ ಬಾಗುವುದು ಸೇರಿದಂತೆ ವಿವಿಧ ಭಂಗಿಗಳಿವೆ.

ಪ್ರತಿ ವರ್ಷ ಪ್ರಾಥಮಿಕ, ಪ್ರೌಢಶಾಲೆಯ ಮೂವತ್ತರಿಂದ ನಲವತ್ತು ವಿದ್ಯಾರ್ಥಿಗಳು ಮಲ್ಲಕಂಬದ ಕಸರತ್ತಿಗೆ ಮುಂದಾಗುತ್ತಾರೆ. ಶಾಲಾ ಮೈದಾನದಲ್ಲಿ ಮೂರು ಮಲ್ಲಕಂಬಗಳನ್ನು ಸ್ಥಾಪಿಸಲಾಗಿದೆ. ಗ್ರಾಮದಲ್ಲಿ ಐದುನೂರಕ್ಕೂ ಹೆಚ್ಚು ಮಲ್ಲಕಂಬದ ಕ್ರೀಡಾಪಟುಗಳಿದ್ದಾರೆ. ಗ್ರಾಮದ ಮಕ್ಕಳ ಉಸಿರಿನೊಳಗೆ ಮಲ್ಲಕಂಬ ಸೇರಿಕೊಂಡಿದೆ. ಗ್ರಾಮದ ಹೆಸರನ್ನು ಜಿಲ್ಲಾ, ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಬೆಳಗಿದ್ದಾರೆ, ಬೆಳಗುತ್ತಿದ್ದಾರೆ.

ಸಾಧನೆಯ ಹಾದಿ...

ಮಾರುತಿ ಬಾರಕೇರ ರಾಷ್ಟ್ರಮಟ್ಟದಲ್ಲಿ ಆರು ಬಾರಿ ಸ್ಥಾನ ಗಳಿಸಿದ್ದಾರೆ. ಸುರೇಶ ಲಾಯಣ್ಣವರ, ವಿಜಯ ಶಿರಬೂರ, ಲಕ್ಷ್ಮಣ ಸೊನ್ನದ, ಮಂಜುನಾಥ ಲಾಯಣ್ಣವರ, ಭೀಮಣ್ಣ ಹಡಪದ ಸೇರಿದಂತೆ ಎಪ್ಪತ್ತಕ್ಕೂ ಹೆಚ್ಚು ಕ್ರೀಡಾಪಟುಗಳು ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಿದ್ದಾರೆ.

ರಾಜ್ಯಮಟ್ಟದಲ್ಲಿ ಸಮರ್ಥ ಹಡಪದ, ಕಾರ್ತಿಕ ವಾಲೀಕಾರ, ಅನುಪಮಾ ಕೆರಕಲಮಟ್ಟಿ, ರೂಪಾ ಶಿರಬೂರ, ಭರತ ಹಡಪದ, ದೀಪಾ ಶಿರಬೂರ, ಹನಮವ್ವ ಲಾಯಣ್ಣವರ ಸೇರಿದಂತೆ ಹಲವರು ಪದಕಗಳನ್ನು ಗೆದ್ದುಕೊಂಡಿದ್ದಾರೆ.

ಇಲ್ಲಿ ಮಲ್ಲಕಂಬ ಕಲಿತ ಹಲವರು ಸಿರಿಗೆರೆ ಮಠ, ಸುತ್ತೂರು ಮಠ, ಕಲಾದಗಿ ಸೇರಿದಂತೆ ಹಲವು ಕಡೆಗಳಲ್ಲಿ ಮಲ್ಲಕಂಬ ತರಬೇತಿ ನೀಡುತ್ತಿದ್ದಾರೆ. ಶಿಕ್ಷಕ ಚನ್ನಾಳ ಅವರು, ತುಳಸಿಗೇರಿಗೆ ತಂದಿದ್ದ ಮಲ್ಲಕಂಬ ಈಗ ಆಲದಮರದಂತೆ ವಿಸ್ತಾರವಾಗಿ ಹರಡಿಕೊಂಡಿದೆ. ಅವರ ಮಾರ್ಗದರ್ಶನದಲ್ಲಿ ಕಲಿತ ಹಲವಾರು ವಿದ್ಯಾರ್ಥಿಗಳು ಉದ್ಯೋಗ ಕಂಡುಕೊಂಡಿದ್ದಾರೆ.

ಶಾಲಾ ಕ್ರೀಡೆಗಳಿಗೆ ಸೇರ್ಪಡೆ

ಮೊದಲು ಮಲ್ಲಕಂಬ ಶಾಲಾ ಕ್ರೀಡಾಕೂಟದಲ್ಲಿ ಸೇರ್ಪಡೆಯಾಗಿರಲಿಲ್ಲ. ಈಗ ಇದನ್ನು ಸೇರಿಸಲಾಗಿದೆ. ಆದ್ದರಿಂದ ರಾಷ್ಟ್ರಮಟ್ಟದಲ್ಲಿ ಗೆಲ್ಲುವವರಿಗೆ ಹಲವಾರು ಸೌಲಭ್ಯಗಳು ದೊರೆಯಲಿವೆ. ರಾಷ್ಟ್ರೀಯ ಕ್ರೀಡೆಗಳಲ್ಲಿ ಪ್ರದರ್ಶನ ಕ್ರೀಡೆಯಾಗಿದ್ದ ಮಲ್ಲಕಂಬ ಈಗ ಪದಕ ಕ್ರೀಡೆಯಾಗಿದೆ ಎಂದು ಭಾರತೀಯ ಒಲಿಂಪಿಕ್ ಸಂಸ್ಥೆ ತಿಳಿಸಿದೆ.

ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಮೊದಲ ಬಾರಿಗೆ ನಡೆದ ರಾಜ್ಯಮಟ್ಟದ ಮಲ್ಲಕಂಬ ಸ್ಪರ್ಧೆಯನ್ನು ತುಳಸಿಗೇರಿ ಶಾಲೆಯಲ್ಲಿ ಆಯೋಜಿಸಲಾಗಿತ್ತು.

ಚನ್ನಾಳರ ಛಲ ಮಲ್ಲಕಂಬ ಫಲ

ಎರಡು ದಶಕಗಳ ಹಿಂದೆ ಹಾವೇರಿಯಿಂದ ತುಳಸಿಗೇರಿ ಸರ್ಕಾರಿ ಪ್ರೌಢಶಾಲೆಗೆ ಬಂದ ಚನ್ನಪ್ಪ ಚನ್ನಾಳರಿಗೆ ಇಲ್ಲಿಯೂ ಮಲ್ಲಕಂಬ ಕ್ರೀಡೆ ಬೆಳೆಸಬೇಕು ಎಂಬ ಛಲ. ಅದರ ಪರಿಣಾಮ ಗ್ರಾಮದ ಮನೆ, ಮನೆಯಲ್ಲಿ ಕ್ರೀಡಾಪಟುಗಳಿದ್ದಾರೆ.

2003 ರಲ್ಲಿ ಮಲ್ಲಕಂಬ ಕ್ರೀಡೆ ಅಭ್ಯಾಸ ಆರಂಭಿಸಿದಾಗ ಕಂಬದ ಮೇಲೆ ಕಠಿಣ ಅಭ್ಯಾಸ ಮಾಡಬೇಕಾಗಿದ್ದರಿಂದ ಪೆಟ್ಟಾದರೆ ಹೇಗೆ ಎಂಬ ಕಾರಣಕ್ಕೆ ಹಲವು ಪೋಷಕರು ಮಕ್ಕಳನ್ನು ಕಳುಹಿಸಲು ಹಿಂದೇಟು ಹಾಕಿದ್ದರು. ಮನೆ, ಮನೆಗೆ ತೆರಳಿ ಪೋಷಕರ ಮನವೊಲಿಸಿದ್ದರು.

ಅಭ್ಯಾಸ ಮಾಡಿಸುವಾಗ ಮುಂಚೂಣಿಯಲ್ಲಿ ನಿಲ್ಲುವ ಚನ್ನಾಳರು, ಮಕ್ಕಳೊಂದಿಗೆ ಫೋಟೊಕ್ಕೆ ಕರೆಯುತ್ತಿದ್ದಂತೆಯೇ ಹಿಂದಕ್ಕೆ ಸರಿದರು. 'ಎಲ್ಲವೂ ನಮ್ಮ ಮುಖ್ಯ ಶಿಕ್ಷಕರ, ಶಿಕ್ಷಕರ, ಪೋಷಕರ ಸಹಕಾರವೇ ಕಾರಣ. ಅವರನ್ನೇ ಮಾತನಾಡಿಸಿ' ಎಂದರು ಸಂಕೋಚದಿಂದಲೇ.

'ಚನ್ನಾಳರ ಪರಿಶ್ರಮವೇ ಸಾಧನೆಗೆ ಕಾರಣ. ಅವರೊಂದಿಗೆ ನಾವೂ ಕೈಜೋಡಿಸಿದ್ದೇವೆ ಅಷ್ಟೇ' ಎಂದು ಹೆಮ್ಮೆಯಿಂದ ಹೇಳುತ್ತಾರೆ ಮುಖ್ಯ ಶಿಕ್ಷಕ ಎಂ.ವಿ. ಫಕೀರಣ್ಣವರ.

'ಬೆಳಿಗ್ಗೆ–ಸಂಜೆ ಅಭ್ಯಾಸ ಮಾಡುವುದರಿಂದ ಓದಿಗೆ ಯಾವುದೇ ತೊಂದರೆಯಾಗುವುದಿಲ್ಲ. ಮಲ್ಲಕಂಬ ಅಭ್ಯಾಸದಿಂದ ದಿನಪೂರ್ತಿ ಚಟುವಟಿಕೆಯಿಂದ ಇರುತ್ತೇವೆ. ಆರೋಗ್ಯವೂ ಚೆನ್ನಾಗಿರುತ್ತದೆ. ಓದಿನಲ್ಲೂ ಮುಂದಿದ್ದೇವೆ' ಎನ್ನುತ್ತಾರೆ ತರಬೇತಿಯಲ್ಲಿದ್ದ ವಿದ್ಯಾರ್ಥಿಗಳು.

ಈ ಊರಿನ ವಿದ್ಯಾರ್ಥಿಗಳು ಬೇರೆ ಕ್ರೀಡೆಗಳಲ್ಲಿ ಭಾಗವಹಿಸುತ್ತಾರಾದರೂ, ಮಲ್ಲಕಂಬಕ್ಕೆ ಮೊದಲ ಆದ್ಯತೆ ನೀಡುತ್ತಾರೆ. ಈ ಕ್ರೀಡೆ ಬಗ್ಗೆ ಅವರು ಹೊಂದಿರುವ ಉತ್ಸಾಹ ನೋಡಿದರೆ ಮಲ್ಲಕಂಬ ಕ್ರೀಡೆಯು ಅವರ ಮನದಲ್ಲಿ ಅಚ್ಚೊತ್ತಿರುವುದು ಕಂಡು ಬರುತ್ತದೆ.

ಗ್ರಾಮದಲ್ಲಿ ಕುಸ್ತಿ, ಸೈಕ್ಲಿಂಗ್ ಕ್ರೀಡಾಪಟುಗಳಿದ್ದಾರೆ. ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿ ಪದಕ ಗಳಿಸಿದ್ದಾರೆ. ಅವರಲ್ಲಿ ಕೆಲವರು ರೈಲ್ವೆ ಸೇರಿದಂತೆ ವಿವಿಧೆಡೆ ಕ್ರೀಡಾ ಕೋಟಾದಲ್ಲಿ ಕೆಲಸವನ್ನೂ ಗಿಟ್ಟಿಸಿಕೊಂಡಿದ್ದಾರೆ. ಶಾಲಾ ಕ್ರೀಡಾಕೂಟದಲ್ಲಿ ಇಲ್ಲದ ಕಾರಣ ಮಲ್ಲಕಂಬ ವಿದ್ಯಾರ್ಥಿಗಳಿಗೆ ಉದ್ಯೋಗವಕಾಶಗಳು ಸಿಗುತ್ತಿರಲಿಲ್ಲ. ಹಾಗಾಗಿ, ಕೆಲವರ ಮನೆಯಲ್ಲಿ ಬೈಯುತ್ತಿದ್ದರು. ಆದರೂ, ವಿದ್ಯಾರ್ಥಿಗಳ ಉತ್ಸಾಹ ಕುಂದಿರಲಿಲ್ಲ. ಎರಡು ದಶಕಗಳಿಂದ ಅಭ್ಯಾಸ ಮಾಡಿಕೊಂಡೇ ಬಂದಿದ್ದಾರೆ. ಈಗ ಶಾಲಾ ಕ್ರೀಡಾಕೂಟದಲ್ಲಿ ಸೇರಿಸಿವುದರಿಂದ ಉದ್ಯೋಗವಕಾಶದ ಬಾಗಿಲು ತೆರೆಯಲಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ವಿದ್ಯಾರ್ಥಿಗಳು ಅಭ್ಯಾಸಕ್ಕೆ ಸೇರಿದರೆ ಅಚ್ಚರಿಯಿಲ್ಲ.

ಬದ್ಧತೆ, ವೃತ್ತಿ ಬಗೆಗೆ ಅಪಾರ ಪ್ರೀತಿ ಮತ್ತು ಗೌರವ ಹೊಂದಿರುವ ದೈಹಿಕ ಶಿಕ್ಷಣ ಶಿಕ್ಷಕ ಮನಸು ಮಾಡಿದರೆ ಇಂಥ ಅದ್ಭುತ ಸಾಧ್ಯವಾಗುತ್ತದೆ ಎನ್ನುವುದಕ್ಕೆ ತುಳಸಿಗೇರಿ ಮಕ್ಕಳ ಸಾಧನೆಯೇ ಸಾಕ್ಷಿ. ❖

ಹೆಣ್ಣುಮಕ್ಕಳಿಂದ ಮಲ್ಲಕಂಬ ಪ್ರದರ್ಶನ

ಮುನ್ನೋಟ 20-04-2025 ರಿಂದ 26-04-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಆತ್ಮವಿಶ್ವಾಸ ಹೆಚ್ಚಾಗಿರುತ್ತದೆ. ಆದಾಯವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ವ್ಯಾಪಾರ ವ್ಯವಹಾರಗಳಲ್ಲಿ ಎಚ್ಚರವಾಗಿರಿ, ನಿಮ್ಮ ಲಾಭ ಬೇರೆಯವರ ಪಾಲಾಗಬಹುದು. ಕೃಷಿಯಿಂದ ಹೆಚ್ಚಿನ ಆದಾಯವನ್ನು ನಿರೀಕ್ಷಿಸುವಂತಿಲ್ಲ. ಮಕ್ಕಳ ಬೆಳವಣಿಗೆ ಕುರಿತು ಉತ್ತಮ ವಾರ್ತೆಗಳನ್ನು ಕೇಳುವಿರಿ. ಆಡಳಿತಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಪ್ರಗತಿ ಇರುತ್ತದೆ. ಕೆಲವರಿಗೆ ಚರ್ಮ ರೋಗಗಳು ಕಾಡಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ವ್ಯಾಪಾರದಲ್ಲಿ ಆದಾಯ ಹೆಚ್ಚು ಮಾಡಿಕೊಳ್ಳಬಹುದು. ಕೃಷಿಯಿಂದ ನಿರೀಕ್ಷೆ ಮಾಡಿದಷ್ಟು ಆದಾಯ ಬರುವುದಿಲ್ಲ. ಸರ್ಕಾರಿ ಸಂಘ,ಸಂಸ್ಥೆಗಳಿಂದ ಆಸ್ತಿ ಪಡೆಯುವ ಯೋಗವಿದೆ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲ ಇರುತ್ತದೆ. ಮೂತ್ರ ಸಂಬಂಧಿ ದೋಷಗಳಿರುವವರು ಎಚ್ಚರವಹಿಸಿ. ವಿವಾಹ ಆಕಾಂಕ್ಷಿತರಿಗೆ ಸಂಬಂಧಗಳು ಕೂಡಿಬರುವ ಸಾಧ್ಯತೆಗಳಿವೆ. ಕೆಲವರಿಗೆ ಅನಿರೀಕ್ಷಿತ ಧನ ಲಾಭವಾಗಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ನಿಮ್ಮ ನಡವಳಿಕೆಯಿಂದ ವೃತ್ತಿಯಲ್ಲಿ ಉತ್ತಮ ಸ್ಥಾನವನ್ನು ಪಡೆಯಬಹುದು. ಭೂಮಿಯ ವ್ಯವಹಾರ ಮಾಡುವವರಿಗೆ ಅಂತಹ ಲಾಭವಿರುವುದಿಲ್ಲ. ವಿದೇಶದಲ್ಲಿ ಓದಬೇಕೆನ್ನುವವರಿಗೆ ಈಗ ಅವಕಾಶಗಳು ಒದಗಿ ಬರುತ್ತವೆ. ಕೃಷಿಯಿಂದ ಆದಾಯವನ್ನು ನಿರೀಕ್ಷೆ ಮಾಡಬಹುದು. ಸಂಗಾತಿಯ ಸಂತೋಷಕ್ಕಾಗಿ ಹೆಚ್ಚು ಹಣ ಖರ್ಚಾಗುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಕೆಲಸ, ಕಾರ್ಯಗಳು ಸ್ವಲ್ಪ ನಿಧಾನ ಗತಿಯಲ್ಲಿ ಸಾಗುತ್ತವೆ. ಹಿರಿಯರಿಂದ ಆಸ್ತಿ ದೊರೆಯುವ ಸಂದರ್ಭವಿದೆ. ವಿದ್ಯಾರ್ಥಿಗಳು ಹೆಚ್ಚು ಶ್ರಮ ಹಾಕಿ ಓದಲೇಬೇಕು. ಹಣಕಾಸಿನ ಸಂಸ್ಥೆಗಳನ್ನು ನಡೆಸುವವರಿಗೆ ಆದಾಯ ಹೆಚ್ಚುತ್ತದೆ. ಸಂಗಾತಿಯಿಂದ ನಿಮ್ಮ ನ್ಯಾಯಯುತವಾದ ಕೆಲಸಗಳಿಗೆ ಸಹಕಾರ ದೊರೆಯುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಕೃಷಿಗಾಗಿ ಮಾಡಿದ ಖರ್ಚು ವ್ಯರ್ಥವೆನಿಸಬಹುದು. ವೃತ್ತಿಯಲ್ಲಿ ವೇತನ ಏರಿಕೆಯನ್ನು ನಿರೀಕ್ಷೆ ಮಾಡಬಹುದು. ಮಾಂಸಖಂಡಗಳ ನೋವುಗಳು ಕೆಲವರನ್ನು ಭಾದಿಸಬಹುದು. ಸಂಗಾತಿಯು ಸಂಸಾರಕ್ಕಾಗಿ ಹೆಚ್ಚು ಶ್ರಮ ಹಾಕುತ್ತಾರೆ. ಗಣಿಗಾರಿಕೆ ಮಾಡುವವರಿಗಿದ್ದ ತೊಡಕುಗಳು ನಿವಾರಣೆಯಾಗುತ್ತವೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಮನಸ್ಸಿನಲ್ಲಿ ಒಂದು ರೀತಿಯ ಖಿನ್ನತೆ ತುಂಬಿರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಕೃಷಿಯಿಂದ ಹೆಚ್ಚು ಆದಾಯವನ್ನು ನಿರೀಕ್ಷೆ ಮಾಡಬಹುದು. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಹೆಚ್ಚಿನ ಗಮನ ಹರಿಸಿ. ಸಂಗಾತಿಯ ಆರೋಗ್ಯದಲ್ಲಿ ಸ್ವಲ್ಪ ವ್ಯತ್ಯಾಸವಾಗಬಹುದು. ಸರಕಾರಿ ಕೆಲಸ ಕಾರ್ಯಗಳಲ್ಲಿ ನಿಧಾನಗತಿ ಇರುತ್ತದೆ. ಹಿರಿಯರಿಂದ ಧನ ಸಹಾಯವನ್ನು ನಿರೀಕ್ಷೆ ಮಾಡಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಬಣ್ಣ ಬಣ್ಣದ ಮಾತುಗಳನ್ನಾಡಿ ಜನಗಳನ್ನು ನಂಬಿಸುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಸಂಸಾರದಲ್ಲಿ ಸುಖವಿದ್ದರೂ ಸ್ವಲ್ಪ ಕಾವು ಇರುತ್ತದೆ. ಮಕ್ಕಳ ವಿಚಾರದಲ್ಲಿ ಅಂತಹ ಶುಭ ವಾರ್ತೆಗಳಿರುವುದಿಲ್ಲ. ರಕ್ತ ಸಂಬಂಧಿ ದೋಷಗಳಿರುವವರು ಎಚ್ಚರ ವಹಿಸಿ. ಸಂಗಾತಿಯ ಸಹಕಾರದಿಂದ ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಸರಾಗತೆಯನ್ನು ಕಾಣಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಹಿರಿಯರ ನೆರವಿನೊಂದಿಗೆ ನಿಮ್ಮ ಕೆಲಸ ಕಾರ್ಯಗಳನ್ನು ಸಾಧಿಸುವಿರಿ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಬಂಧುಗಳು ನಿಮ್ಮ ಕೆಲಸ ಕಾರ್ಯಗಳಿಗೆ ಸಹಕಾರ ನೀಡುವವರು. ನವೀನ ರೀತಿಯ ಕೃಷಿ ಉಪಕರಣಗಳನ್ನು ತಯಾರಿಸುವವರಿಗೆ ಲಾಭವಿರುತ್ತದೆ. ಅವಿವಾಹಿತರಿಗೆ ವಿವಾಹ ಸಂಬಂಧಗಳು ಒದಗಿ ಬರುತ್ತವೆ. ಕಣ್ಣಿನ ಸೋಂಕು ಇರುವವರು ಎಚ್ಚರ ವಹಿಸಿ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಸಮಾಜದ ಏಳಿಗೆಗಾಗಿ ದುಡಿಯುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ವಿರುದ್ಧ ಷಡ್ಯಂತ್ರ ಮಾಡುತ್ತಿರುವವರನ್ನು ಕರೆದು ಬುದ್ಧಿ ಹೇಳುವಿರಿ. ವಿದೇಶದಲ್ಲಿರುವವರು ಸ್ವದೇಶದಲ್ಲಿ ಸ್ಥಿರಾಸ್ತಿ ಮಾಡಿಕೊಳ್ಳಬಹುದು. ಆಸ್ತಿ ವ್ಯವಹಾರಗಳನ್ನು ಮಾಡುವಾಗ ದಾಖಲೆಯ ಬಗ್ಗೆ ಗಮನಹರಿಸಿ. ಲೇವಾದೇವಿ ವ್ಯವಹಾರಗಳು ಅಷ್ಟು ಒಳಿತಲ್ಲ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಶ್ರದ್ಧೆಯಿಂದ ಕೆಲಸ ಮಾಡುವಿರಿ. ಆದಾಯವು ಕಡಿಮೆ ಇರುತ್ತದೆ. ಸಂಘ, ಸಂಸ್ಥೆಗಳಿಂದ ಆಸ್ತಿ ಪಡೆಯುವ ಯೋಗವಿದೆ. ವಿದ್ಯಾರ್ಥಿಗಳಿಗೆ ನಿರೀಕ್ಷೆಗೆ ಮೀರಿ ಫಲಿತಾಂಶ ಪಡೆಯುವ ಯೋಗವಿದೆ. ನಿಮ್ಮ ಆಹಾರ ಬದಲಾವಣೆಯಿಂದ ಆರೋಗ್ಯವನ್ನು ಸುಧಾರಿಸಿಕೊಳ್ಳಬಹುದು. ನಿಮಗೆ ಸಂಬಂಧಿಕರ ನೆರವು ದೊರೆಯುತ್ತದೆ. ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಅನಿರೀಕ್ಷಿತ ಪ್ರಗತಿಯನ್ನು ಕಾಣಬಹುದು.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಸಮಾಜಮುಖಿಯಾಗಿ ಕೆಲಸ ಮಾಡುವಿರಿ. ಹಿರಿಯರ ಸಹಕಾರ ನಿಮಗೆ ದೊರೆಯುತ್ತದೆ. ಮನೆಪಾಠ ಮಾಡುವವರಿಗೆ ಉತ್ತಮ ಆದಾಯವಿರುತ್ತದೆ. ನಿಮ್ಮ ಸ್ವಪ್ರಯತ್ನದಿಂದ ಆದಾಯವನ್ನು ವೃದ್ಧಿಸಿಕೊಳ್ಳಬಹುದು. ಗಣಿತ ವಿದ್ಯಾರ್ಥಿಗಳಿಗೆ ಸಾಕಷ್ಟು ಪ್ರಗತಿ ಇರುತ್ತದೆ. ಸಂಗಾತಿಯಿಂದ ಸಂಪೂರ್ಣ ಸಹಕಾರ ದೊರೆಯುತ್ತದೆ. ಭೂಮಿಯ ವ್ಯವಹಾರಗಳಲ್ಲಿ ಲಾಭವಿರುವುದಿಲ್ಲ. ವೃತ್ತಿ ಸ್ಥಳದಲ್ಲಿ ಹಿತ ಶತ್ರುಗಳು ಕಾಡಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಆದಾಯವು ಉತ್ತಮವಾಗಿರುತ್ತದೆ. ಧಾರ್ಮಿಕತೆ ಕಡೆಗೆ ಮನಸ್ಸು ಎಳೆಯುತ್ತದೆ. ಪಾಲುದಾರಿಕೆಯ ವ್ಯವಹಾರಗಳಲ್ಲಿ ನಿಮಗೆ ಅವಕಾಶ ದೊರೆತು ಲಾಭ ಹೆಚ್ಚುತ್ತದೆ. ಕ್ರೀಡಾಪಟುಗಳಿಗೆ ಕಲಿಯಲು ಉತ್ತಮ ಸೌಲಭ್ಯ ದೊರೆಯುತ್ತದೆ. ಗಂಟಲಿನ ತೊಂದರೆ ಕೆಲವರನ್ನು ಕಾಡಬಹುದು. ಸಂಗಾತಿಯ ನಿರ್ಲಿಪ್ತತೆ ನಿಮಗೆ ಬೇಸರ ತರಿಸಬಹುದು. ಆಭರಣ ತಯಾರಕರಿಗೆ ಲಾಭ ಹೆಚ್ಚುತ್ತದೆ.

ಪದಬಂಧ 2888



ಮೇಲಿನಿಂದ ಕೆಳಕ್ಕೆ

1. ದರ್ಶನಕ್ಕೆಂದೇ ಪ್ರಪಂಚ ಪಡೆದ ಆಕಾರ 4
2. ಎಲ್ಲಿಂದ ಎಲ್ಲಿಗಾದರೂ ಓಡಾಡಲು ಸಿಗುವ ಮುಕ್ತ ಪಥದ ಚೀಟಿ 4
3. ಹೆಚ್ಚು ಕಡಿಮೆಯಿಲ್ಲದೆ ಹಂಚುವ ಪಾಲು 4
4. ತಿರುತಿರುಗಿ ಶ್ರೇಷ್ಠ ಪಾತ್ರೆಯಲ್ಲಿ ಭಿಕ್ಷೆ ಎತ್ತುವವ 4
7. ಒಟ್ಟೊಟ್ಟಿಗೆ ಶತ್ರುನಾಶ ಸಂಭವಿಸಿದ ನಂತರ ಕೊನೆಯಲ್ಲಿ ಹಾರ 5
8. ಇವನು ಪಕ್ಕಾ ಅಚ್ಚುಕಟ್ಟಾಗಿ ಕಾರ್ಯಮಾಡುವವ 5
9. ಎಲ್ಲವೂ ನಷ್ಟವಾಗಿ ಅಳಿದು ಹೋಗುವಂತೆ ಮಾಡು 5
10. ಒಳ್ಳೆಯ ಪರಿಮಳವನ್ನುಂಟು ಮಾಡುವಂತದ್ದು 5
15. ಯಮನನ್ನೇ ಮೂರು ವರಗಳನ್ನು ಕೇಳಿದ ಬಾಲಕ 4
16. ಆಗತಾನೇ ಹುಟ್ಟಿದ್ದು 4
18. ಸಾಲುಗಳಲ್ಲೇ ದ್ರವ್ಯ ವಸ್ತುವನ್ನು ಸೃಷ್ಟಿಸುವ ಕಾವ್ಯ ಬ್ರಹ್ಮ 4
19. ಬೇಡವೆಂದು ಒರಟುತನದಿಂದ ತಳ್ಳಿಹಾಕು 4

ಎಡದಿಂದ ಬಲಕ್ಕೆ

1. ಈಶನೆಂಬ ಪ್ರಪಂಚದೊಡೆಯ 4
3. ಸರಸ್ಸಿನಿಂದ ಹರಿವ ಗುಪ್ತಗಾಮಿನಿ ವಿದ್ಯಾಧಿದೇವತೆ 4
5. ಕುಂಡದಲ್ಲಿ ಮಾಡುವ ಅಗ್ನಿಕಾರ್ಯಕ್ಕೆ ಜೋಡಿ ಹೆಸರು 5
6. ಒಂದು ರೀತಿಯ ಸೇವಾವೃತ್ತಿ 5
9. ಸರ್ಪರಾಜ ಶಿವನ ಕೊರಳಲ್ಲಿ ವಾಸ ಮಾಡಿ ಪಡೆದ ಹೆಸರು 5
11. ಕನ್ನಡ ಕವಿಯಾಗಿ ರಮಾಪತಿ 3
12. ಶಬ್ದಕ್ಕೆ ನಾಚದೆ ಚಿಂತೆಯಿಲ್ಲದವ ನೆಲೆಸಿ ನಡೆಸುವ ಬಾಳ್ವೆ 4
13. ನಿಮ್ಮನ್ನು ಇದೀಗ ಬಂಧಿಸಿರುವ ಶಬ್ದಗಳ ಚೌಕ 4
14. ಮಾಯಾ ಮೋಡಿಯ ಶ್ರೀಕೃಷ್ಣ 3
15. ಕೋತಿಯಿಂದ ಮನುಷ್ಯನಾದವ ಈಗ ಮನುಷ್ಯ ಮೊದಲು ಕೋತಿ ಆಮೇಲೆ 5
17. ದೇವ ಲೋಕದ ಸಮುದ್ರವನ್ನು ಹೀಗೆನ್ನಬಹುದೆ? 5
20. ಹುಟ್ಟಿದ ಕುಲವನ್ನು ಗುರುತಿಸುವ ಪದ 5
21. ಅಲೆಯಲೆಗಳಿಂದ ಕೂಡಿಬಂದದ್ದು 4
22. ಪ್ರಪಂಚವೇ ಭೂಮಿಯಾಗಿರುವ ಸಂವತ್ಸರ 4

ಪದಬಂಧ ಉತ್ತರ -2887

ಮೇಲಿಂದ ಕೆಳಕ್ಕೆ

1.ದಗಲ 2. ಹಿತವಚನ 3.ವಸುಧಾಧೀಶ 4.ಪರಿಧಿ 6.ವಸುಂಧರ 9.ಪತ್ನಿಸಂದೇಹ 10.ದೇಶಾಭಿಮಾನ 11. ಪದಕ 12.ವರಜ 13.ಸಲಾಮುಹೊಡಿ 14.ಲಕ್ಷ್ಮೀದೇವಿ 15.ನವಗಾಯಕ 17.ಗುಡಾರ 19. ಯಕ್ಷಿಣಿ

ಎಡದಿಂದ ಬಲಕ್ಕೆ

1.ದನಗಾಹಿ 3.ವರಿಪ 5.ತಡವರಿಸು 7.ಲಜ್ಜಾಭಾವ 8.ಧಾನ್ಯಾಧಿಪ 10.ದೇವಗಾನಪರವಶ 13.ಸಕಲಜನಸಮೂಹ 16.ನಗುಮೋಮು 18. ಗಾಳಿರಾಯ 20.ಹೊಸವಿಷಯ 21.ರಬಡಿ 22.ಕರಿಮಣಿ

ನೆನೆವುದೆನ್ನ ಮನ ಶೇಕ್ಸ್‌ಪಿಯರ್ ಸ್ಮಾರಕ

ಶೇಕ್ಸ್‌ಪಿಯರ್‌ನ ಹುಟ್ಟೂರಾದ ಸ್ಟ್ರಾಟ್‌ಫರ್ಡ್ ಅಪಾನ್ ಏವನ್‌ನ ಬೀದಿ

ಜನಪ್ರಿಯ ಇಂಗ್ಲಿಷ್ ನಾಟಕಕಾರ ಶೇಕ್ಸ್‌ಪಿಯರ್‌ನ ಜನ್ಮಸ್ಥಳ ಇಂಗ್ಲೆಂಡ್‌ನ ವಾರ್‌ಶೈರ್‌ನಲ್ಲಿರುವ ಸ್ಟ್ರಾಟ್‌ಫರ್ಡ್ ಅಪಾನ್. ಈಗ ಪ್ರಮುಖ ಪ್ರವಾಸಿ ತಾಣವಾಗಿರುವ ಈ ಊರಲ್ಲಿ ಶೇಕ್ಸ್‌ಪಿಯರ್‌ನ ಸ್ಮಾರಕವಿದೆ. ಜೊತೆಗೆ 16ನೇ ಶತಮಾನದಲ್ಲಿ ಮರದಿಂದಲೇ ನಿರ್ಮಾಣಗೊಂಡ ಈತನ ಮನೆ ಕೂಡ ಇಲ್ಲಿನ ಪ್ರಮುಖ ಆಕರ್ಷಣೆ...

ಎಂ.ಎಸ್. ರಘುನಾಥ್

ಈತನ ನಾಟಕಗಳಲ್ಲಿ ಇಲ್ಲದ ಪಾತ್ರಗಳು ಇಲ್ಲವೇ ಇಲ್ಲ ಎನ್ನಬಹುದು. ಪಾತ್ರಗಳೋ ವೈವಿಧ್ಯಮಯ. ಪುನರಾವರ್ತನೆ ಇಲ್ಲವೇ ಇಲ್ಲ ಎನ್ನುವಷ್ಟರ ಮಟ್ಟಿಗೆ. ತಾನೇ ಒಂದು ಜಗತ್ತನ್ನು ಸೃಷ್ಟಿಸಿದ. ಒಂದೊಂದು ನಾಟಕವೂ ತನ್ನದೇ ಆದ ಜಗತ್ತು. ಅದರ ಪಾತ್ರಗಳೋ ಅನನ್ಯ. ವಾಸ್ತವತೆಗೆ ಒತ್ತುಕೊಟ್ಟ ಕಾರಣಕ್ಕೋ, ಜೀವನದಲ್ಲಿ ಕಾಣಬಹುದಾದ ಬಹುತೇಕ ಪಾತ್ರಗಳನ್ನು ರಂಗದ ಮೇಲೆ ಜೀವಂತವಾಗಿರಿಸಿ, ನೈಜವಾದ ಮತ್ತೊಂದು ಜಗತ್ತನ್ನು ಸೃಷ್ಟಿ ಮಾಡಿದ್ದಕ್ಕೋ ಈತನ ನಾಟಕಗಳ ಕುರಿತು ಇಂದಿಗೂ ಚರ್ಚೆ ನಡೆಯುತ್ತಲೇ ಇದೆ. ಬಹುಶಃ ಮುಂದೆಯೂ ನಡೆಯುತ್ತಲೇ ಇರುತ್ತದೆ. ಅವನೇ ವಿಶ್ವಮಾನ್ಯ ನಾಟಕಕಾರ ವಿಲಿಯಂ ಶೇಕ್ಸ್‌ಪಿಯರ್.

ತಂದೆ ಜಾನ್ ಶೇಕ್ಸ್‌ಪಿಯರ್ ವಾರ್‌ವಿಕ್‌ಶೈರ್‌ನಲ್ಲಿ ಕೈಗವಸು ತಯಾರಿಸುವ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದನು. ಇವನಿಗೆ ಮೇಯರ್ ಆಗುವ ಅವಕಾಶ ಬಂದಿದ್ದಕ್ಕೆ ಮಗ ಗ್ರಾಮರ್ ಸ್ಕೂಲಿಗೆ ಹೋಗುವ ಸಂದರ್ಭ ಒದಗಿತು.

ಶೇಕ್ಸ್‌ಪಿಯರ್‌ನ ಜನ್ಮಸ್ಥಳ ಇಂಗ್ಲೆಂಡ್ ಬಳಿಯ ವಾರ್‌ಶೈರ್‌ನ ಸ್ಟ್ರಾಟ್‌ಫರ್ಡ್ ಅಪಾನ್ ಏವನ್‌ನ ಹೆನ್ಲೀ ಬೀದಿಯಲ್ಲಿದೆ. ಅವನು ತನ್ನ ಬಾಲ್ಯ ಕಳೆದದ್ದೂ ಅಲ್ಲಿಯೇ. ಆತ ಹುಟ್ಟಿದ ಮನೆ ಹದಿನಾರನೇ ಶತಮಾನದಲ್ಲಿ ನಿರ್ಮಾಣಗೊಂಡಿದ್ದು. ಭಾಗಶಃ ಮರದಲ್ಲಿಯೇ ಕಟ್ಟಿದ ಆ ಮನೆಯನ್ನು ಈಗ ನವೀಕರಿಸಲಾಗಿದೆ. ಅದು ಈಗ ಮ್ಯೂಸಿಯಂ ಆಗಿದೆ. ಸಾರ್ವಜನಿಕರಿಗೆ ಪ್ರವೇಶವಿರುವುದರಿಂದ ಜಾಗತಿಕ ಮಟ್ಟದ ಜನಪ್ರಿಯ ತಾಣವಾಗಿದೆ. ಆ ಸಾಲಿನಲ್ಲಿ ಮೊದಲು ಕಾಣುವುದು ಶೇಕ್ಸ್‌ಪಿಯರ್‌ನ ಪತ್ನಿ ಆ್ಯನ್ ಹಾತ್‌ವೇಳ ಸರಳವಾದ ಮನೆ. ಲಂಡನ್‌ನಿಂದ ಬಸ್‌ನಲ್ಲಿ ಹೊರಟರೆ, ದೂರದಿಂದ ಆ ಸ್ಥಳ ಕಾಣುತ್ತಿದ್ದಂತೆ, ಓಡಿ ಹೋಗಿ ಆ ಸ್ಥಳ ತಲುಪುವ ಕಾತರ ಉಂಟಾಗುತ್ತದೆ. ಸಾಹಿತ್ಯ ಪ್ರೇಮಿಗಳಿಗೆ, ರಂಗಾಸಕ್ತರಿಗೆ, ಮೈಪುಳಕಗೊಳಿಸುವ ಸ್ಥಳ ಅದು.

ಈಗಿನ ಕಟ್ಟಡ ಬಹಳ ಸರಳವಾದುದು ಎಂಬ ಭಾವನೆ ಮೂಡುತ್ತದೆ. ಆದರೆ, ಶೇಕ್ಸ್‌ಪಿಯರ್‌ನ ಕಾಲಕ್ಕೆ ಈ ಕಟ್ಟಡ ಬಹಳ ಬೆಲೆಯುಳ್ಳದ್ದಾಗಿರಬೇಕು.

ಶೇಕ್ಸ್‌ಪಿಯರ್ ಮನೆ

ಪ್ರವೇಶದ್ವಾರದ ನಂತರ ಕಾಣುವುದೇ ಅವನು ಹುಟ್ಟಿದ ಕೊಠಡಿ. ಪಕ್ಕದಲ್ಲೇ ಶೇಕ್ಸ್‌ಪಿಯರ್ ಕೇಂದ್ರವಿದೆ. ಈ ಕೇಂದ್ರದಿಂದಲೇ ಶೇಕ್ಸ್‌ಪಿಯರ್ ಜನ್ಮಸ್ಥಳ ಟ್ರಸ್ಟ್ ಕಾರ್ಯ ನಿರ್ವಹಿಸುತ್ತದೆ.

ಈ ಟ್ರಸ್ಟ್ ಇಡೀ ಜನ್ಮಸ್ಥಳ ಸ್ಮಾರಕವನ್ನು ನಿರ್ವಹಿಸುತ್ತಾ ಅದರ ಸಂರಕ್ಷಣೆ ಕಾರ್ಯದಲ್ಲಿ ತೊಡಗಿದೆ. ಶೇಕ್ಸ್‌ಪಿಯರ್ ಬಳಸುತ್ತಿದ್ದ ಗರಿ ತರಹದ ಲೇಖನಿ ಹಾಗೂ ಇತರ ವಸ್ತುಗಳನ್ನು, ಅವನ ಕಾಲದ ನಾಣ್ಯಗಳು, ಅವನ ಕೈ ಬರಹದ ಕೃತಿಗಳು, ಮುಂತಾದವುಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ.

ಶೇಕ್ಸ್‌ಪಿಯರ್ ಎಂದರೆ, ತಕ್ಷಣ ನೆನಪಾಗುವುದು ಅವನ ನಾಟಕಗಳ ಪ್ರಸಿದ್ಧ ಸಾಲುಗಳು. ಆಯ್ದ ಸಾಲುಗಳನ್ನು ಅಲ್ಲಿ ಒಂದೆಡೆ ಕೆತ್ತಲಾಗಿದೆ.

ಈ ಕಟ್ಟಡದ ಪಕ್ಕದಲ್ಲಿ ಶೇಕ್ಸ್‌ಪಿಯರ್ ನಾಟಕ ಸಭಾಂಗಣವಿದೆ. ಆಗಾಗ್ಗೆ, ಇವನ ನಾಟಕಗಳ ರಂಗ ಪ್ರದರ್ಶನ ಏರ್ಪಡಿಸಲಾಗುತ್ತದೆ. ಈ ಪ್ರದರ್ಶನ ವೀಕ್ಷಣೆಗೆ ಮುಂಗಡ ಬುಕ್ಕಿಂಗ್ ಮಾಡಿ ರಂಗಾಸಕ್ತರು ಅಧಿಕ ಸಂಖ್ಯೆಯಲ್ಲಿ ಸೇರುತ್ತಾರೆ.

ಮತ್ತೊಂದೆಡೆ, ಶೇಕ್ಸ್‌ಪಿಯರ್‌ನ ನಾಟಕ ಕೃತಿಗಳು ಮಾರಾಟಕ್ಕೆ ಲಭ್ಯ ಇವೆ. ಇವುಗಳನ್ನೆಲ್ಲಾ ಕುತೂಹಲದಿಂದ ವೀಕ್ಷಿಸಿ, ಹೊರ ಬಂದರೆ ರಸ್ತೆ ಮಧ್ಯದಲ್ಲಿ ನಿಲ್ಲಿಸಿರುವ ಅವನ ಬೃಹತ್ತಾದ ಪುತ್ಥಳಿ ಗಮನ ಸೆಳೆಯುತ್ತದೆ.

ಒಂದು ಸಣ್ಣ ಪಟ್ಟಣದಂತೆಯೇ ನಿರ್ಮಾಣವಾಗಿರುವ, ಏವನ್ ನದಿಯ ಸೇತುವೆ ಮೇಲೆ ಹರಡಿರುವ ಸ್ಟ್ರಾಟ್‌ಫರ್ಡ್ ಅಪಾನ್ ಏವನ್, ಜಗತ್ತಿನ ಅತಿ ದೊಡ್ಡ ನಾಟಕಕಾರನ ನೆನಪಿಗೆ ಸ್ಥಾಪನೆ ಮಾಡಿರುವ, ಅತಿ ವಿಶಿಷ್ಟ, ವಿನೂತನವಾದ ಸ್ಮಾರಕವೆನ್ನಬಹುದು.

ಇಲ್ಲಿಯ ಎಲ್ಲವನ್ನೂ, ಆ ಮಹಾನ್ ನಾಟಕಕಾರನ ಜನ್ಮ ದಿನಾಚರಣೆ ಸಂದರ್ಭಕ್ಕೆ ಸರಿಯಾಗಿ, ಹೊಸರೂಪ ನೀಡಲಾಗಿದೆ ಎಂದು ಶೇಕ್ಸ್‌ಪಿಯರ್ ಜನ್ಮಸ್ಥಳ ಟ್ರಸ್ಟ್ ತಿಳಿಸಿದೆ.

ಈ ವಿಶಿಷ್ಟವಾದ ಸ್ಮಾರಕವನ್ನು ನೋಡಿ ಹೊರ ಬರುತ್ತಿದ್ದಂತೆ ನಮ್ಮ ದೇಶ, ರಾಜ್ಯದಲ್ಲಿ ಆಗಿ ಹೋಗಿರುವ ಕವಿ, ಕಲಾವಿದರನ್ನು ನೆನಪಿಸಿಕೊಳ್ಳಲು ನಾವೇನು ಮಾಡಿದ್ದೇವೆ ಎನ್ನುವ ಪ್ರಶ್ನೆ ಕಾಡುತ್ತಿತ್ತು.

ಕುಮಟಾದ ಸಿಹಿ ಜಡೆಈರುಳ್ಳಿ

ಸುರೇಂದ್ರ ಪೈ

ಈರುಳ್ಳಿಯನ್ನು ಸಾಮಾನ್ಯವಾಗಿ ಬಹುತೇಕ ಖಾದ್ಯಗಳನ್ನು ತಯಾರಿಸಲು ಬಳಸುತ್ತೇವೆ. ಅಡುಗೆಮನೆಯಲ್ಲಿ ಇತರ ತರಕಾರಿಗಳಿಂಗಿಂತಲೂ ಹೆಚ್ಚಾಗಿ ಈರುಳ್ಳಿ ಇದ್ದೆ ಇರುತ್ತದೆ. ಈರುಳ್ಳಿಯನ್ನು ಕತ್ತರಿಸುವಾಗ ಕಣ್ಣಲ್ಲಿ ನೀರು ಬರುತ್ತದೆ. ಆದರೆ ಕಣ್ಣಲ್ಲಿ ನೀರು ತರಿಸದ, ಸಿಹಿಯಾದ ಈರುಳ್ಳಿಯ ಬಗ್ಗೆ ಕೇಳಿದ್ದೀರಾ?

ಹೌದು, ರುಚಿಯಲ್ಲಿ ಸಿಹಿಯಾಗಿಯೂ, ಕತ್ತರಿಸುವಾಗ ಕಣ್ಣಲ್ಲಿ ನೀರು ತರಿಸದ ಅಪರೂಪದ ಸಿಹಿ ಈರುಳ್ಳಿಯನ್ನು ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನಲ್ಲಿ ರೈತರು ಬೆಳೆಯುತ್ತಾರೆ. ಇದನ್ನು ಆ ಭಾಗದಲ್ಲಿ ಜಡೆ ಈರುಳ್ಳಿ, ಪೊತ್ತೆ ಈರುಳ್ಳಿ ಎಂಬುದಾಗಿಯೂ ಕರೆಯುತ್ತಾರೆ. ಅಷ್ಟೇ ಅಲ್ಲ, ಈ ವಿಶೇಷ ಈರುಳ್ಳಿಯು ಕುಮಟಾ ಭಾಗದಲ್ಲಿ ಮಾತ್ರ ದೊರಕುವುದರಿಂದ 'ಕುಮಟಾ ಈರುಳ್ಳಿ' ಎಂತಲೂ ಕರೆಯುತ್ತಾರೆ.

ಈ ಈರುಳ್ಳಿ ಬೆಳೆಯನ್ನು ಮಾರ್ಚ್ ಮತ್ತು ಏಪ್ರಿಲ್ ಸಮಯದಲ್ಲಿ ಕುಮಟಾ, ಹಂದಿಗೋಣ, ಚಿಟ್ಟಿಹಕ್ಕಲ, ಅಳ್ವೇಕೋಡಿ, ವನ್ನಳ್ಳಿ, ಗೋಕರ್ಣ ಭಾಗದಲ್ಲಿ ಬೆಳೆಯಲಾಗುತ್ತದೆ. ಸಾಮಾನ್ಯವಾಗಿ ಈ ಜಡೆ ಈರುಳ್ಳಿಯನ್ನು ರೈತರು ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದರ ಜೊತೆಗೆ ಕುಮಟಾ–ಹೊನ್ನಾವರ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿ ರಾಶಿ ಇಟ್ಟು ಮಾರಾಟ ಮಾಡುವ ದೃಶ್ಯಗಳು ಈ ಸಮಯದಲ್ಲಿ ಸಾಮಾನ್ಯವಾಗಿ ಕಾಣಸಿಗುತ್ತದೆ.

ಈ ಸಿಹಿ ಈರುಳ್ಳಿಯನ್ನು ಜುಟ್ಟು ಸಮೇತ ಮಣ್ಣಿನಿಂದ ತೆಗೆಯಲಾಗುತ್ತದೆ. ಬಳಿಕ ಒಣಗಿದ ಜುಟ್ಟನ್ನು ಹೆಂಗಳೆಯರು ತಮ್ಮ ಕೂದಲನ್ನು ಹೇಗೆ ಹೆಣೆದು ಕಟ್ಟಿಕೊಳ್ಳುತ್ತಾರೋ, ಹಾಗೇ ಹೆಣೆದು ಜುಟ್ಟದ ರೀತಿಯಲ್ಲಿ ಕಟ್ಟಿ ಅದನ್ನು ನೇತು ಹಾಕಿರುತ್ತಾರೆ. ಹಾಗಾಗಿ ಇದು ನೋಡಲು ಜಡೆಯ ರೀತಿಯ ಇರುವುದರಿಂದ 'ಜಡೆ ಈರುಳ್ಳಿ' ಎಂದು ಕರೆಯುತ್ತಾರೆ.

ಮೊದಲೆಲ್ಲಾ ಇವುಗಳ ಗೊಂಚಲುಗಳನ್ನು ಅಡುಗೆ ಮನೆಯ ಮೇಲ್ಭಾಗದಲ್ಲಿ ಬಿದಿರಿನ ಗಳಕ್ಕೆ ಕಟ್ಟಿಡುತ್ತಿದ್ದರು. ಆಗ ಕಟ್ಟಿಗೆ ಒಲೆಯನ್ನು ಬಳಸುತ್ತಿದ್ದರಿಂದ ಅಡುಗೆ ಒಲೆಯ ಹೊಗೆಯು ಈರುಳ್ಳಿಯನ್ನು ಇನ್ನಷ್ಟು ದಿನ ಹಾಳಾಗದಂತೆ ಕಾಪಾಡುತ್ತಿತ್ತು. ಹಾಗಾಗಿ ವರ್ಷಗಟ್ಟಲೇ ಕೆಡದಂತೆ ಇರುತ್ತಿದ್ದವು. ಈಗ ಕಟ್ಟಿಗೆ ಒಲೆ ಇಲ್ಲದಿದ್ದರೂ ಚಾವಣಿಯಲ್ಲಿ ಕಟ್ಟಿಡುವುದನ್ನು ಕಾಣಬಹುದು.

ಹಿರಿಯರು ಹೇಳಿಕೊಟ್ಟ ಈ ಬೆಳೆಯನ್ನು ಈಗಲೂ ಈ ಭಾಗದ ರೈತರು ತಪ್ಪದೇ ನಾಟಿ ಮಾಡಿಕೊಂಡು ಬರುತ್ತಿದ್ದಾರೆ. ಮುಂಗಾರು ಭತ್ತದ ಕೊಯ್ಲು ಮುಗಿದ ತಕ್ಷಣ (ಡಿಸೆಂಬರ್) ಈರುಳ್ಳಿ ಬೀಜದ ನಾಟಿ ಮಾಡುತ್ತಾರೆ. ಈ ಬೆಳೆಯನ್ನು ಸಂಪೂರ್ಣವಾಗಿ ಸಾವಯುವ ಕೃಷಿ ಪದ್ಧತಿ ಮೂಲಕ ಬೆಳೆಯಲಾಗುತ್ತದೆ. ಅಷ್ಟೇ ಅಲ್ಲದೇ ಈ ಭಾಗದ ಉಸುಕು ಮಿಶ್ರಿತ ಮಣ್ಣು ಸಹ ಈ ಬೆಳೆಯನ್ನು ಬೆಳೆಯಲು ಸಹಾಯಕವಾಗಿದೆ. ನಾಟಿ ಮಾಡಿದ ಮೂರು ತಿಂಗಳಲ್ಲಿ ಈರುಳ್ಳಿ ಕಟಾವಿಗೆ ಬರುತ್ತದೆ. ಆಗ ರೈತರು ಅದನ್ನು ಜುಟ್ಟು ಸಮೇತ ಕೀಳುತ್ತಾರೆ. ನಂತರ ಅವುಗಳನ್ನು ಐದರಿಂದ ಹತ್ತು ಕೆ. ಜಿ. ತೂಕದ ಒಂದೊಂದೆ ಪೊತ್ತೆಗಳನ್ನು ಕಟ್ಟಿ ಮಾರುಕಟ್ಟೆಗೆ ತರುತ್ತಾರೆ.

ಕಾರವಾರ, ಗೋವಾ , ಉಡುಪಿ, ಮಂಗಳೂರು ಪ್ರಯಾಣಿಸುವವರು ರಸ್ತೆಬದಿಯಲ್ಲಿ ಈ ಸಿಹಿ ಈರುಳ್ಳಿಯ ಪೋತ್ತೆಯನ್ನು ಖರೀದಿಸುತ್ತಾರೆ. ಅಷ್ಟೇ ಅಲ್ಲದೇ ಕೇರಳ, ಮಹಾರಾಷ್ಟ್ರ ರಾಜ್ಯಗಳಿಗೂ ರವಾನೆ ಆಗುತ್ತದೆ. ಇದು ಸೀಮಿತ ಅವಧಿಯಲ್ಲಿ ಬೆಳೆಯುವ ಬೆಳೆಯಾದ್ದರಿಂದ ಇದರ ರುಚಿ ನೋಡಿದವರು ವರ್ಷಕ್ಕೆ ಆಗುವಷ್ಟನ್ನು ಒಮ್ಮೆಲೇ ಖರೀದಿ ಮಾಡುತ್ತಾರೆ. ಇದರ ಬೆಲೆ ಕಾಲಕ್ಕೆ ತಕ್ಕಂತೆ ರೈತರು ನಿಗದಿಪಡಿಸುತ್ತಾರೆ. ಅಂದಹಾಗೆ ಈ ಈರುಳ್ಳಿ ಬೆಲೆ ಮಾರುಕಟ್ಟೆಯಲ್ಲಿ ಸಾಮಾನ್ಯವಾಗಿ ಸಿಗುವ ಈರುಳ್ಳಿ ದರಕ್ಕಿಂತ ಹೆಚ್ಚಿರುತ್ತದೆ. ಇದನ್ನು ಊಟದ ಜೊತೆಗೆ, ಚಟ್ನಿ, ಮೀನಿನ ಸಾಂಬಾರು, ಈರುಳ್ಳಿ ದೋಸೆಗೆ ಬಳಸುತ್ತಾರೆ. ನೀವೇನಾದರೂ ಈಗ ಅತ್ತ ಹೊರಟಿದ್ದರೆ ಜಡೆ ಈರುಳ್ಳಿಯ ಸಿಹಿಯನ್ನು ಸವಿಯಬಹುದು.

ನಾಗವಲ್ಲಿ ಕಾಡುಪಾಪಗಳ...

ಕಾಡುಪಾಪದೊಂದಿಗೆ....

6ನೇ ಪುಟದಿಂದ...

ಜವಾಹಾರಲಾಲ್ ಸಂಶೋಧನ ಕೇಂದ್ರದ ವಿದ್ಯಾರ್ಥಿಗಳು, ಮೈಸೂರು ವಿಶ್ವವಿದ್ಯಾಲಯದ ಪ್ರಾಣಿಗಳ ಮನಶಾಸ್ತ್ರ ಅಧ್ಯಯನ ಮಾಡುವ ಪ್ರೊ. ಮೇವಾ ಸಿಂಗ್ ಅವರ ಸಂಶೋಧನಾ ವಿದ್ಯಾರ್ಥಿ ಕುಮಾರ್, ಗುಂಡಪ್ಪನವರ ಮಾರ್ಗದರ್ಶನದಲ್ಲಿ ಅಧ್ಯಯನ ಮಾಡಿದ್ದಾರೆ. ಪುಣೆ ವಿಶ್ವವಿದ್ಯಾಲಯ, ಬಾಂಗ್ಲಾ ವಿಶ್ವವಿದ್ಯಾಲಯ ಹಾಗೂ ಆಫ್ರಿಕಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಇವರು ಕಾಡುಪಾಪಗಳ ಅಧ್ಯಯನದಲ್ಲಿ ಮಾರ್ಗದರ್ಶನ ಮಾಡಿದ್ದಾರೆ.

ನಾಗವಲ್ಲಿಗೆ ಹೋಗಿ ಕಾಡುಪಾಪಗಳನ್ನು ನೋಡುತ್ತೇವೆ ಎಂದರೆ ಅವು ಸಿಗುವುದಿಲ್ಲ. ಅವು ಎಲ್ಲಿರುತ್ತವೆ, ಎಷ್ಟೊತ್ತಿಗೆ ಹೊರಗೆ ಬರುತ್ತವೆ ಎಂದು ಗುಂಡಪ್ಪನವರಿಗೆ ನಿಖರವಾಗಿ ಗೊತ್ತು. ಕಾಡುಪಾಪಗಳನ್ನು ಹುಡುಕಿಕೊಂಡು ಹೋದರೂ ಅವು ಮರ-ಪೊದೆಗಳಲ್ಲಿ ಇರುತ್ತವೆ. ಅವು ನಿಮ್ಮ ಕಣ್ಣಮುಂದೆ ಇದ್ದರು ಗುರುತಿಸಲಾರಿರಿ. ಅದಕ್ಕೆ ಗುಂಡಪ್ಪನವರ ಮಾರ್ಗದರ್ಶನ ಬೇಕು. ಸದ್ಯ ಗುಬ್ಬಿ ತಾಲ್ಲೂಕಿನ ಸಿ.ಎಸ್. ಪುರದ ಕಾಲೇಜಿನಲ್ಲಿ ಉಪ ಪ್ರಾಂಶುಪಾಲರಾಗಿ ಕೆಲಸ ಮಾಡುತ್ತಿದ್ದಾರೆ. ಎರಡು ವಾರ ಇಲ್ಲವೇ ತಿಂಗಳಿಗೊಮ್ಮೆ ನಾಗವಲ್ಲಿಗೆ ಹೋಗಿ ಬರುತ್ತಾರೆ. ಅಲ್ಲದೇ ಇವರ ವಿದ್ಯಾರ್ಥಿಗಳು ಇವರಿಗೆ ಮಾಹಿತಿ ನೀಡುತ್ತಿರುತ್ತಾರೆ.

ಇಂಗ್ಲಿಷ್‌ನಲ್ಲಿ ಲೊರಿಸ್ (Loris) ಎಂದು ಕರೆಯಲ್ಪಡುವ ಇವುಗಳಲ್ಲಿ ಬೂದು ಮತ್ತು ಕಂದು ಬಣ್ಣದವು ಇವೆ. ಕರ್ನಾಟಕದಲ್ಲಿ ತುಮಕೂರಿನ ನಾಗವಲ್ಲಿ, ದೇವರಾಯನ ದುರ್ಗ, ಶಿರಾ, ಮಾಗಡಿ, ಕನಕಪುರ, ರಾಮನಗರ ಹಾಗೂ ಚಾಮರಾಜನಗರ ಭಾಗದಲ್ಲಿಯೂ ಇವೆ. ಆದರೆ ನಾಗವಲ್ಲಿ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಇವುಗಳು ಇಲ್ಲಿನ ತೋಟಗಳು, ಹೊಲಗದ್ದೆಗಳಲ್ಲಿ ಕಂಡುಬರುವುದರಿಂದ 'ಕಾಡುಪಾಪ ಸಂರಕ್ಷಿತ ಪ್ರದೇಶ' ಎಂದು ಘೋಷಿಸುವುದು ಕಷ್ಟ. ಆದರೂ ಗುಂಡಪ್ಪನವರು ಅರಣ್ಯ ಇಲಾಖೆಗೆ ಇವುಗಳ ಸಂರಕ್ಷಣೆಯ ಬಗ್ಗೆ ಮನವರಿಕೆ ಮಾಡಿಕೊಟ್ಟಿದ್ದಾರೆ.

ಅಳಿವಿನಂಚಿನಲ್ಲಿರುವ ನಿರುಪದ್ರವಿ ಪ್ರಾಣಿಯ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸಿ ಅದರ ಸಂರಕ್ಷಣೆಯಲ್ಲಿ ಸದ್ದಿಲ್ಲದೇ ತೊಡಗಿಸಿಕೊಂಡಿರುವ ಗುಂಡಪ್ಪನವರ ಕಾರ್ಯ ಅನನ್ಯ. ಇವರು 'ನ್ಯಾಷನಲ್ ಗ್ರೀನ್ ಟೀಚರ್' ಪ್ರಶಸ್ತಿಯನ್ನು ಎಂ.ಎಸ್. ಸ್ವಾಮಿನಾಥನ್ ಅವರಿಂದ ಸ್ವೀಕರಿಸಿದ್ದಾರೆ.

ಮೊದಲ ಓದು

ಜಾರಿಯಲ್ಲಿರುವ ಕತೆಗಳಿವು


ಪು: 120
₹175

ಕತೆ ಜಾರಿಯಲ್ಲಿರಲಿ
ಲೇ:ಪೂರ್ಣಿಮಾ ಭಟ್ಟ ಸಣ್ಣಕೇರಿ
ಪ್ರ: ಸಸಿ ಪ್ರಕಾಶನ
ಸಂ: 9513018456

ಮನುಷ್ಯರ ಮನೋವ್ಯಾಪಾರದ ಒಳಹೊರಗನ್ನೆಲ್ಲ ಇಲ್ಲಿಯ ಕತೆಗಳಲ್ಲಿ ಹರಡಿದ್ದಾರೆ ಪೂರ್ಣಿಮಾ ಭಟ್ಟ ಸಣ್ಣಕೇರಿ.

'ಕತೆ ಜಾರಿಯಲ್ಲಿರಲಿ'ಯ ಶಾಂತಕ್ಕನ ಸಾವು, 'ಸೀಕ್ರೆಟ್ ಸಾಂತಾ'ದಲ್ಲಿ ಪುರುಷಾಹಂಕಾರವನ್ನು ಮಣ್ಣಿಗಿಳಿಸುವ ಬಗೆಯಾಗಲಿ, 'ಸಿನ್ನರ್ಸ್ ಅಂಡ್ ಸೋಬರ್ಸ್'ನಲ್ಲಿ ಅಂತಃಸಾಕ್ಷಿಯೊಡನೆ ಮಾತಿಗಿಳಿಯುವುದಾಗಲಿ, 'ಜೀವನ ಕದನದ ತೆರನೆ'ಯ ಮನೋಯುದ್ಧಗಳಾಗಲಿ.. ಇತರೆ ಎಂಟು ಕತೆಗಳು ಹತ್ತೆಂಟು ಭಾವಗಳನ್ನು ಬಿಡುಗಡೆಗೊಳಿಸುತ್ತ ಹೋಗುತ್ತವೆ.

ಅದ್ಹೆಂಗೆ? ಅದ್ಯಾಕೆ ಎಂಬ ಪ್ರಶ್ನೆಗಳನ್ನಿರಿಸಿಕೊಂಡೇ ಕತೆಗಾರ್ತಿ ಕಟ್ಟುವಿಕೆಯ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಇನ್ನೇನು ನೇಪಥ್ಯಕ್ಕೆ ಸರಿದೇ ಹೋದವು ಎಂಬಂಥ ಪದಗಳು ಕತೆಯಲ್ಲಿ ಸರಾಗವಾಗಿ ಕಂಡು, ಅರೆರೆ.. ಇದನ್ನ ಮರೆತೆ ಹೋಗಿದ್ವಿ ನಾವು ಎಂಬಂತೆ ಸೋಜಿಗ ಹುಟ್ಟಿಸುತ್ತವೆ. ಆಡುಮಾತಿನ ಸಶಕ್ತ ಅಭಿವ್ಯಕ್ತಿ ಇಲ್ಲಿ ಓದುವಾಗಲೂ ಓದುಗ ಹೂಂಗುಡುವಂತೆ ಮಾಡುತ್ತವೆ. ಸುಳ್ಳು ನೆಪಕ್ಕೆ ಬಳಸುವ ಹಳೆ ಎಂಬ ಪದವನ್ನು ಇತ್ತೀಚೆಗೆ ಎಲ್ಲಿಯೂ ಓದಿಯೇ ಇರಲಿಲ್ಲ. ಇಂಥ ಹಲವಾರು ಪದಗಳಿಲ್ಲಿ ಸಹಜವೆಂಬಂತೆ ಕತೆಗಳಲ್ಲಿ ಮೂಡಿಬಂದಿವೆ. ವಿದೇಶವಾಸದ ಚಿಗುರು, ದೇಸಿ ಬೇರು ಎರಡರ ಘಮ ಇರುವ ಫಸಲು ಈ ಕತೆಗಳು. ಮೂಲತಃ ಮನುಷ್ಯ ಜೀವಕ್ಕೆ ಮತ್ತು ಜೀವನಕ್ಕೆ ಇರುವ ಪ್ರೀತಿಯ ತಹತಹ, ವ್ಯಾಲಿಡಿಟಿಯ ತಹತಹ, ಅಹಮಿಕೆಯ ಗೋಡೆ ಇವನ್ನೆಲ್ಲ ಭೇದಿಸುತ್ತಲೇ ಕತೆಗಳು ಒಳಗಿಳಿಯುತ್ತವೆ. ಬಹುಕಾಲದವರೆಗೆ ನೆನಪಿನಲ್ಲಿ ಉಳಿಯುತ್ತವೆ.

ಭಿನ್ನ ರುಚಿಯ ಫುಡ್ ಫಿಲಾಸಫಿ


ಪು: 238
₹300

ಭಿನ್ನ ರುಚಿ: ಅಡುಗೆ ಪ್ರಬಂಧಗಳು
ಲೇ: ರಾಜೇಂದ್ರ ಪ್ರಸಾದ್
ಪ್ರ: ಸಂಕಥನ, ಮಂಡ್ಯ
ಸಂ: 9019529494

ಮಿಶ್ರಾಹಾರ ಬಯಕೆಯ ಮನುಷ್ಯನ ಚಾಪಲ್ಯದ ಇಂಗಿತವನ್ನು ಮತ್ತು ಅದರ ಹಿಂದಿನ ಹುಡುಕಾಟವನ್ನು ಇಲ್ಲಿನ ಪ್ರಬಂಧಗಳು ಶೋಧಿಸುತ್ತವೆ. ಮಾಂಸ, ಸಸ್ಯ, ಎರಡು ಬಳಸಿ ತಯಾರಿಸಿದ ಬಗೆ ಬಗೆಯ ಅಡುಗೆಗಳ ಪರಿಚಯ ಮತ್ತು ತಯಾರಿಸುವ ಬಗೆಯನ್ನು ಸ್ವಾರಸ್ಯಕರವಾಗಿ ಲೇಖಕ ರಾಜೇಂದ್ರ ಪ್ರಸಾದ್ ಇಲ್ಲಿ ವಿವರಿಸುತ್ತಾರೆ.

'ಅಡುಗೆಯ ಆತ್ಮಸಂಗಾತ', 'ಅಡುಗೆಯು ಒಂದು ಕಲೆಯೇ?', 'ರಕ್ತ ರುಚಿ', 'ಅಡುಗೆ ಎಣ್ಣೆಯ ಸಮಾಚಾರ', 'ನಾಟಿಕೋಳಿ ಸಾರಿಗೆ ನೂರು ನಾಲಗೆ', 'ಸೂಪು ಮತ್ತು ಸೂಪಶಾಸ್ತ್ರ' ಹೀಗೆ 47 ಪ್ರಬಂಧಗಳನ್ನು ಈ ಕೃತಿ ಒಳಗೊಂಡಿದೆ. ಪ್ರತಿ ಪ್ರಬಂಧಗಳ ಹೆಸರೂ ಅಷ್ಟೇ ಆಕರ್ಷಣೀಯವಾಗಿವೆ. ಅಡುಗೆ ಕಲೆಯೇ ಎಂಬ ಜಿಜ್ಞಾಸೆಯನ್ನು 'ವಿಜ್ಞಾನ ಅನ್ನುವುದೇ ಕಲೆಯಿಂದ ಹುಟ್ಟಿಕೊಂಡ ಪರಿಜ್ಞಾನ' ಎಂದು ಲೇಖಕ ಸರಳವಾಗಿ ಬಿಡಿಸುತ್ತಾರೆ.

'ಭೀಮಸೇನ–ನಳಮಹರಾಜರು ಗಂಡಸರಲ್ಲವೇ?' ಬರಹ, ಬಿಂಬದೊಳಗಿನ ಪ್ರತಿಬಿಂಬದಂತೆ ನಳನ 'ಪಾಕ ದರ್ಪಣ' ಮತ್ತು ಭೀಮಸೇನನ 'ಸೂಪಶಾಸ್ತ್ರ' ಎಂಬ ಸಂಸ್ಕೃತ ಮೂಲದ ಕೃತಿಗಳ ವಿವರವನ್ನು ಪ್ರತಿಫಲಿಸುತ್ತದೆ. ಅಡುಗೆ ಹೆಣ್ಣಿನ ಕೆಲಸ ಎನ್ನುವ ಸಾಂಪ್ರದಾಯಿಕ ನಂಬಿಕೆಯನ್ನು ಮುರಿಯಬೇಕು ಎನ್ನುವ ಆಶಯದಿಂದಲೇ ಇಲ್ಲಿನ ಬರಹಗಳು ರಚನೆಯಾಗಿವೆ. ಅದಕ್ಕೆ ಸಾದೃಶ್ಯವಾಗಿ ನಿಸರ್ಗದ ಪ್ರಾಣಿ ಮತ್ತು ಸಸ್ಯ ಸಂಕುಲವನ್ನು ರಾಜೇಂದ್ರ ಪ್ರಸಾದ್ ನೀಡುತ್ತಾರೆ. ಜೀವಸಂಕುಲದ ಪ್ರತಿ ಜೀವವೂ ತನ್ನ ಆಹಾರವನ್ನು ತಾನೇ ಕಂಡುಕೊಳ್ಳುತ್ತದೆ ಎಂದು ವಿವರಿಸುತ್ತಾರೆ.

ಮೊಟ್ಟೆ, ಮೀನು, ಮಾಂಸ, ಸೊಪ್ಪು, ಕಾಳು, ಅಣಬೆ, ತರಕಾರಿ ಬಳಸಿ ತಯಾರಿಸುವ ಹಲವು ಬಗೆಯ ತಿಂಡಿ–ತಿನಿಸುಗಳ ರಸಸ್ವಾದವನ್ನು ಇಲ್ಲಿ ಮಾಡಿಸಿದ್ದಾರೆ. 'ಹಸಿಸಾರು ನೂರಾರು' ಪ್ರಬಂಧವು ಉಪ್ಪುಗೊಜ್ಜು, ಹಸಿಗೊಜ್ಜು, ಹಸಾಳೆ, ತಂಬುಳಿಯನ್ನು ಸುಲಭವಾಗಿ ಮಾಡುವ ಬಗೆಯನ್ನು ಕಲಾತ್ಮಕವಾಗಿ ನಿರೂಪಿಸಿದ್ದಾರೆ.

ಗಣ್ಯರ ಸಾಧನೆಯ ಮೆಲುಕು


ಪು: 116
₹200

ಉದಾರಚರಿತರ ದಾರಿಯಲ್ಲಿ
ಲೇ: ಬಿ.ಆರ್.ಜಯರಾಮರಾಜೇ ಅರಸ್
ಪ್ರ: ಮಹರ್ಷಿ ಪ್ರಕಾಶನ
ಸಂ:9986403894

ಪುಸ್ತಕದ ಹೆಸರೇ ಸೂಚಿಸುವಂತೆ ಇದು ನಾಡಿಗೆ ಕೊಡುಗೆ ನೀಡಿದ ಗಣ್ಯರನ್ನು ಸ್ಮರಿಸುವ ಕೃತಿ. ಇದರಲ್ಲಿ ಒಟ್ಟು ಹದಿನೇಳು ಲೇಖನಗಳಿದ್ದು, ವ್ಯಕ್ತಿ, ಸಂಸ್ಥೆಗಳ ಪರಿಚಯಗಳನ್ನೂ ಒಳಗೊಂಡಿದೆ. ಮೊದಲ ಲೇಖನ 'ವಿಶ್ವದ ಬೆಳಕು: ಬುದ್ಧ' ಆತನ ಕುರಿತಾಗಿ ಕಿರುಪರಿಚಯವನ್ನು ಮಾಡಿಕೊಡುತ್ತದೆ. ಆದರೆ ಈಗಾಗಲೇ ಬುದ್ಧನ ಕುರಿತಾಗಿ ಸಾಕಷ್ಟು ಕಡೆ ಓದಿರುವ ವಿಷಯಗಳೇ ಇಲ್ಲಿ ಪುನರಾವರ್ತನೆಗೊಂಡಿವೆ.

ಜಿಲ್ಲಾಧಿಕಾರಿಯಾಗಿದ್ದ ಲೇಖಕ, ತಾವು ನಿಯುಕ್ತಿಗೊಂಡ ಜಿಲ್ಲೆಗಳಲ್ಲಿ ಸಿಕ್ಕ ಗಣ್ಯರ ಕುರಿತು ಮಾಹಿತಿ ದಾಖಲಿಸಿದ್ದಾರೆ. 'ಕವಿ–ವೀಚಿ' ಇದೇ ದಾಟಿಯ ಲೇಖನ. ತುಮಕೂರಿನ ಕವಿ ಚಿಕ್ಕವೀರಯ್ಯ ಅವರ ಸಾಹಿತ್ಯ ಪಯಣದ ಪರಿಚಯ ಇದರಲ್ಲಿದೆ. ಲೇಖಕರೊಂದಿಗೆ ಕವಿಯ ಒಡನಾಟದ ವಿಷಯಗಳೇ ಹೆಚ್ಚಿವೆ. ಕಾಳೇಗೌಡ ನಾಗವಾರ ಕುರಿತಾದ ಲೇಖನ ಓದುವಾಗಲೂ ಇದೇ ಅನುಭವವಾಗುತ್ತದೆ.

'ಕ್ಲಾರಿನೆಟ್ ವಾದಕ –ನರಸಿಂಹಲು ವಡವಾಟಿ' ಲೇಖನ ಸಂಗೀತ ಕ್ಷೇತ್ರಕ್ಕೆ ವಡವಾಟಿ ಕೊಡುಗೆಯನ್ನು ತಿಳಿಸಿಕೊಡುತ್ತದೆ. ಅಮೆರಿಕದ 'ಅಕ್ಕ' ಸಂಸ್ಥೆ, 2010ರ ವಿಶ್ವ ಕನ್ನಡ ಸಮ್ಮೇಳನದ ಕುರಿತಾಗಿಯೂ ಒಂದು ಲೇಖನಗಳಿವೆ. 'ಮುಮ್ಮಡಿ ಕೃಷ್ಣರಾಜ ಒಡೆಯರ್ ಓರ್ವ ದುರಂತ ನಾಯಕ' ಎಂಬ ಲೇಖನ ಆಸಕ್ತಿದಾಯಕವಾಗಿದೆ. ಒಡೆಯರ್ ಕುರಿತು ಒಂದಷ್ಟು ಗೊತ್ತಿಲ್ಲದ ವಿಷಯಗಳನ್ನು ತಿಳಿಸಿಕೊಡುತ್ತದೆ. ಲೇಖಕ ತಾವು ಒಡನಾಡಿದ ವ್ಯಕ್ತಿಗಳು, ಸಂಸ್ಥೆಗಳು, ಬರೆದ ಲೇಖನಗಳು ಎಲ್ಲವನ್ನೂ ಒಟ್ಟಾಗಿಸಿ ಪ್ರಕಟಿಸಿದ್ದಾರೆ. ಬರವಣಿಗೆಯ ಶೈಲಿ ಆಪ್ತವಾಗಿದೆ.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಬೆಚ್ಚಲ್

ಬೆಚ್ಚಲ್ (ನಾ). ಬೆದರುಗೊಂಬೆ; ಬೆಚ್ಚು

ಕುಂಭಕರ್ಣನ ಆಕ್ರಮಣಕ್ಕೆ ವಾನರರ ಸಹಸ್ರ ಸಹಸ್ರ ಸೈನ್ಯ ನೆಲಕ್ಕೆ ಉರುಳಿತು. ಅವರು ಆಯುಧಗಳನ್ನು ಎಸೆದು ಕಿತ್ತೋಡುತ್ತಿದ್ದರು. ಅದನ್ನು ಕಂಡು ರಾಮಚಂದ್ರನು ಲಕ್ಷ್ಮಣನನ್ನು ಕರೆದನು. ಅಂಗದನಿಗೆ ಧೈರ್ಯ ತುಂಬಿ, ಕಪಿವಾಹಿನಿಯನ್ನು ತಡೆಯಲು ಹೇಳಿದನು. ಅಂಗದನು ಲಕ್ಷ್ಮಣನ ಕರೆ ಕೇಳಿ ತನ್ನ ತಂದೆಯನ್ನು ನೆನೆದು ಕಪಿಸೈನ್ಯವನ್ನು ಕರೆದನು.

'ಬನ್ನಿ ವೀರರೇ ಬನ್ನಿ! ಇದು ಭೂತ ಅಲ್ಲ. ರಾಕ್ಷಸರು ಯುದ್ಧರಂಗದ ಹೊಲದ ರಕ್ಷಣೆಗೆ ಮುಂದಿಟ್ಟುಕೊಂಡು ನುಗ್ಗುತ್ತಿರುವ ಹುಲ್ಲಿನ ಬೆದರುಗೊಂಬೆ ಇದು. ಇದಕ್ಕೆ ಅಳುಕಿ ಮೂಢ ಮೃಗಪಕ್ಷಿಗಳಂತೆ ಪಲಾಯನ ಪಟುಗಳಾಗುವಿರಾ?' ಎಂದು ಪ್ರಶ್ನಿಸಿ, ಧೈರ್ಯ ತುಂಬಿದನು. ಈ ಕಾವ್ಯಭಾಗದಲ್ಲಿ ಕುವೆಂಪು ಬೆದರುಗೊಂಬೆಗೆ 'ಬೆಚ್ಚಲ್' ಪದ ಸೃಷ್ಟಿಸಿ ಪ್ರಯೋಗಿಸಿದ್ದಾರೆ.

ರಕ್ಕಸರ್ ಕಳನ ಕಳಮೆಯ ವೊಲದ ರಕ್ಷಣೆಗೆ
ಮುಂದೊಡ್ಡಿಕೊಂಡು ನುಗ್ಗುತ್ತಿರ್ಪ ಈ ತೃಣದ
ಬೆಚ್ಚಲ್ಗಳುಕಿ ಪಲಾಯನ ಪಟುಗಳಾಗುವಿರ
ಮೂಢ ಮೃಗಪಕ್ಷಿಗಳವೋಲ್!

ಕಾಮಧನು

ಕಾಮಧನು (ನಾ). 1. ಮನ್ಮಥನ ಬಿಲ್ಲು 2. ಮಳೆಬಿಲ್ಲು; ಇಂದ್ರ ಧನುಸ್ಸು

(ಕಾಮ + ಧನು)

ಇಷ್ಟಬಂದ ರೂಪವನ್ನು ಧರಿಸಬಲ್ಲ ಕಾಮರೂಪಿಯಾದ ಮಾರೀಚನು ಪುಷ್ಪಕ ವಿಮಾನದಲ್ಲಿ ರಾವಣನ ಜೊತೆಗೆ ಬರುವನು. ಅವನು ಮೇಘರೂಪವನ್ನು ಪಡೆದು ಪುಷ್ಪಕದ ನೆರಳನ್ನು ಸೇತುವೆಯಾಗಿಸಿಕೊಂಡು ಇಳಿದು ಬರುವನು. ಆಗ ಅವನ ಶರೀರವು ಮಳೆಬಿಲ್ಲಿನ ಸಪ್ತವರ್ಣಗಳನ್ನು ಹೊಂದಿದ್ದು, ಅವನು ರಾಮಸತಿ ಇದ್ದ ಎಡೆಗೆ ಇಳಿದನು. ಅದನ್ನು ಬಣ್ಣಿಸುವಾಗ ಕವಿಯು ಏಳುಬಣ್ಣಗಳ ಇಂದ್ರ ಧನುಸ್ಸನ್ನು 'ಕಾಮಧನು' ಎಂಬ ಪದ ರಚಿಸಿ ಪ್ರಯೋಗಿಸಿದ್ದಾರೆ.

ಮೇಘರೂಪಂಬೆತ್ತು ನಿಂದ ಪುಷ್ಪಕದ ಆ
ನೆಳಲೆ ಸೇತುವೆಯಾಗೆ, ಕಾಮಧನು ತನುವಾಗೆ,
ರಾಮಸತಿಯಲರ್ಗೊಯ್ಯುತಿರ್ದಡವಿಗಿಳಿದನಾ
ಮಾರೀಚನುಪಮಾತೀತ ಕಾಮರೂಪಿ

ಕೌರುಗಂಪು

ಕೌರುಗಂಪು (ನಾ). ಸುಟ್ಟವಾಸನೆ; ಕಂಟುನಾತ

(ಕೌರು (< ಕಮರು + ಕಂಪು)

ಸೀತೆಯು ಯುದ್ಧದ ಒಂದು ಬೆಳಗ್ಗೆ ದೂರ ಸಮುದ್ರ ತೀರದಲ್ಲಿ ಏಳುತ್ತಿದ್ದ ಧೂಮದುಶ್ಯಕುನವನ್ನು ನೋಡುತ್ತಾಳೆ. ಆ ಹೊಗೆಯ ಮಬ್ಬು ಅಶೋಕವನ ಮಧುಧಾಮವನ್ನು ಕವಿಯುತ್ತದೆ. ಆಗ ಮೂಗು ಸಹಿಸಲಾಗದ ಸುಟ್ಟವಾಸನೆಯ ಗಾಳಿ ಬೀಸುತ್ತದೆ. ಅದಕ್ಕೆ ಕಾರಣವೇನೆಂದು ಸಖಿ ತ್ರಿಜಟೆಯನ್ನು ಕೇಳುತ್ತಾಳೆ. ಅವಳು ಯುದ್ಧದಲ್ಲಿ ಸತ್ತವರ ಹೆಣಗಳನ್ನು ಮೆದೆಯಂತೆ ಒಟ್ಟಿ ಸುಡುತ್ತಿರುವ ಭಯಂಕರ ವಿಷಯ ತಿಳಿಸುತ್ತಾಳೆ. ಆ ಸಹಿಸಲಾಗದ ಕಂಟುನಾತವನ್ನು ಕವಿಯು 'ಕೌರುಗಂಪು' ಪದ ಬಳಸಿ ವಿವರಿಸಿದ್ದಾರೆ.

ಮೂಗು ಮುರಿಯಲ್ ಬೀಸಿದುದು ಗಾಳಿ
ಕೌರುಗಂಪಂ. ಮೂಗುವಟ್ಟವು ಪರಮೆ ಪಕ್ಕಿಗಳ್,
ಪೆಣವೊಗೆಗೆ ಪೇಸಿದೋಲಂತೆ.

ಕಥೆ
ಎಂ.ವಿ. ಶಶಿಭೂಷಣ ರಾಜು ಅವರ **ತೀರ್ಪು**
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಶಿ ಕಾ ಬಡಿಗೇರ ಅವರ **ಎಚ್ಚರಿಕೆ...**
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಸಾದರ ಸ್ವೀಕಾರ
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in



ನೀರಿನಲ್ಲಿ ಸಾಗುವ ಮೆಟ್ರೊ ಇದೇ ನೋಡಿ...

ವಾಟರ್ ಮೆಟ್ರೊದಲ್ಲಿ ಪ್ರಯಾಣಿಸುತ್ತಾ...

ವಿನಾಯಕ ಭಟ್

ಕೇರಳದ ಕೊಚ್ಚಿಯಲ್ಲಿ ಪೆರಿಯಾರ್ ನದಿಯ ಹಿನ್ನೀರು ಹೊಂಬೆಳಕಿನಿಂದ ಪ್ರತಿಫಲಿಸುತ್ತಿತ್ತು. ಮುಸ್ಸಂಜೆ ವೇಳೆಗೆ ವಾಟರ್ ಮೆಟ್ರೊದಲ್ಲಿ ಕುಳಿತು ಸಾಗುತ್ತಿದ್ದಂತೆ ಬಣ್ಣ ಬಣ್ಣದ ದೀಪಗಳಿಂದ ಕಂಗೊಳಿಸುತ್ತಿದ್ದ ವಾಣಿಜ್ಯ ನಗರಿಯ ರಮ್ಯನೋಟ ದೂರದಿಂದಲೇ ಸೆಳೆಯುತ್ತಿತ್ತು. ಮುಂದೆ ಹೋದಂತೆಲ್ಲ ಮೀನು ಹಿಡಿಯಲು ಹಾಕಿದ್ದ ಚೀನಾ ಮಾದರಿಯ ಮೀನಿನ ಬೃಹತ್ ಬಲೆಗಳು ಕಿನಾರೆಯುದ್ದಕ್ಕೂ ಸ್ವಾಗತಿಸುತ್ತಿದ್ದವು.

ಪೋರ್ಟ್ ಕೊಚ್ಚಿ ನಿಲ್ದಾಣದಿಂದ ವಾಟರ್ ಮೆಟ್ರೊದಲ್ಲಿ ಕುಳಿತು ಜಲ ವಿಹಾರ ಆರಂಭಿಸಿದಾಗ, ದ್ವೀಪಗಳ ನಿವಾಸಿಗಳು ನಗರದೊಂದಿಗೆ ಸಂಪರ್ಕ ಸಾಧಿಸಲು ಕೇರಳ ಸರ್ಕಾರ ಆರಂಭಿಸಿರುವ ಜಲ ಸಾರಿಗೆ ವಾಟರ್ ಮೆಟ್ರೊದಲ್ಲಿ ದೇಶ-ವಿದೇಶಗಳ ಪ್ರವಾಸಿಗರೂ ಸುತ್ತಾಡಿ ಆನಂದಿಸುತ್ತಿದ್ದರು.

ರಸ್ತೆ ಮಾರ್ಗಕ್ಕೆ ಪರ್ಯಾಯವಾಗಿ ದ್ವೀಪಗಳ ನಡುವೆ ಸಂಪರ್ಕ ಸಾಧಿಸಲು ಕೇರಳ ಸರ್ಕಾರ ಆರಂಭಿಸಿದ ಕೊಚ್ಚಿ ವಾಟರ್ ಮೆಟ್ರೊ ಜಲ ಸಾರಿಗೆ ಸೇವೆಗೆ 2023ರ ಏಪ್ರಿಲ್ 25ರಂದು ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಿದರು. ವಾಟರ್ ಮೆಟ್ರೊವನ್ನು ದೇಶದಲ್ಲಿ ಮೊದಲು ಆರಂಭಿಸಿದ ರಾಜ್ಯ ಎಂಬ ಕೀರ್ತಿಗೆ ಕೇರಳ ಪಾತ್ರವಾಗಿದೆ. ಕೇವಲ ಎರಡು ವರ್ಷಗಳ ಅವಧಿಯಲ್ಲಿ ವಾಟರ್ ಮೆಟ್ರೊದಲ್ಲಿ 4.05 ಕೋಟಿ ಜನ ಪ್ರಯಾಣ ಮಾಡಿರುವುದು ಇದರ ಗರಿಮೆಯಾಗಿದೆ. ಪ್ರತಿ ದಿನ ನಾಲ್ಕೈದು ಸಾವಿರ ಜನ ಸಂಚರಿಸುತ್ತಾರೆ. ವಾರಾಂತ್ಯ ಹಾಗೂ ಬೇಸಿಗೆ ರಜೆಯಲ್ಲಿ ದಿನಕ್ಕೆ ಹತ್ತು ಸಾವಿರದವರೆಗೂ ಜನ ಪ್ರಯಾಣಿಸುತ್ತಾರೆ.

> ಕೊಚ್ಚಿಯ ವಾಟರ್ ಮೆಟ್ರೊದ ಯಶಸ್ಸಿನ ಬೆನ್ನಲ್ಲೇ ಕರ್ನಾಟಕದ ಮಂಗಳೂರು ಸೇರಿ ದೇಶದ ಕೆಲವೆಡೆ ವಾಟರ್ ಮೆಟ್ರೊ ಸೇವೆ ಆರಂಭಿಸಲು ಸಿದ್ಧತೆ ನಡೆಯುತ್ತಿದೆ.

ಕೊಚ್ಚಿ ಸುತ್ತಲಿನ ಹತ್ತು ದ್ವೀಪಗಳ ನಿವಾಸಿಗಳು ಜಲ ಸಾರಿಗೆ ಮೂಲಕ ನಗರದೊಂದಿಗೆ ಸುಲಭವಾಗಿ ಸಂಪರ್ಕ ಸಾಧಿಸುವಂತಾಗಬೇಕು. ಆ ಮೂಲಕ ದ್ವೀಪದ ಜನರಿಗೆ ಬದುಕು ಕಟ್ಟಿಕೊಳ್ಳಲು, ವ್ಯಾಪಾರ-ವಹಿವಾಟು, ಉದ್ಯೋಗ ಮಾಡಲು ಅನುಕೂಲ ಕಲ್ಪಿಸಿಕೊಡಬೇಕು. ಜೊತೆಗೆ ಈ ಜಲ ಸಾರಿಗೆ ಯೋಜನೆಯ ಮೂಲಕ ಪ್ರವಾಸೋದ್ಯಮಕ್ಕೂ ಉತ್ತೇಜನ ನೀಡಬೇಕು ಎಂಬ ಮಹತ್ವಾಕಾಂಕ್ಷೆಯಿಂದ ವಾಟರ್ ಮೆಟ್ರೊ ಸೇವೆ ಆರಂಭಿಸಲಾಗಿದೆ.

ವಾಟರ್ ಮೆಟ್ರೊ ಪ್ರಯಾಣಿಕರನ್ನು ನೀರಿನ ಮೇಲೆ ಕರೆದುಕೊಂಡು ಹೋಗುತ್ತದೆ ಎಂಬುದನ್ನು ಹೊರತುಪಡಿಸಿದರೆ, ನಿಲ್ದಾಣದೊಳಗಿನ ನಿರ್ವಹಣೆಯ ವ್ಯವಸ್ಥೆಯು ಬಹುತೇಕ ಮೆಟ್ರೊ ರೈಲಿನ ಮಾದರಿಯಲ್ಲೇ ನಡೆಯುತ್ತದೆ. 'ಕೊಚ್ಚಿ ಮೆಟ್ರೊ ರೈಲ್ ಲಿಮಿಟೆಡ್' ಕಂಪನಿ ಮೂಲಕ ಜಲ ಸಾರಿಗೆಯನ್ನು ಅನುಷ್ಠಾನಗೊಳಿಸಲಾಗಿದ್ದು, ಅಂದಾಜು ₹1,136 ಕೋಟಿ ಮೊತ್ತದ ಯೋಜನೆ ಇದಾಗಿದೆ.



ಆಕಾಶದೆತ್ತರದಿಂದ ವಾಟರ್ ಮೆಟ್ರೊ ನಿಲ್ದಾಣ ಹೀಗೆ ಕಾಣುತ್ತದೆ...

ಕೊಚ್ಚಿ ವಾಟರ್ ಮೆಟ್ರೊ ಲಿಮಿಟೆಡ್ ಕಂಪನಿಯು ಜಲ ಸಾರಿಗೆಯನ್ನು ನಿರ್ವಹಣೆ ಮಾಡುತ್ತಿದೆ.

ಹವಾನಿಯಂತ್ರಿತ ಸ್ವದೇಶಿ ಮೆಟ್ರೊ

ಹವಾನಿಯಂತ್ರಿತ ವಾಟರ್ ಮೆಟ್ರೊದಲ್ಲಿ ಪ್ರಯಾಣಿಸುತ್ತಿದ್ದಾಗ, ಕೊಚ್ಚಿ ಬಂದರಿಗೆ ಬಂದ ಬೃಹತ್ ಹಡಗು ಪಕ್ಕದಲ್ಲೇ ನಿಂತಿತ್ತು. ಹಡಗು, ಬೋಟ್‌ಗಳು ಹಾಗೂ ದಾರಿಯುದ್ದಕ್ಕೂ ಕಂಡುಬರುತ್ತಿದ್ದ ಚೈನಿಸ್ ಫಿಶಿಂಗ್ ನೆಟ್‌ಗಳ ಫೋಟೊ ಕ್ಲಿಕ್ಕಿಸಲು ಪ್ರಯಾಣಿಕರು ಪೈಪೋಟಿಗೆ ಇಳಿದಿದ್ದರು.

ವಾಟರ್ ಮೆಟ್ರೊದಲ್ಲಿ 48 ಜನ ಕುಳಿತು ಅಷ್ಟೇ ಜನ ನಿಂತುಕೊಂಡು ಹೋಗಲು ಅವಕಾಶವಿದೆ. ಪ್ರಯಾಣಿಕರ ಸುರಕ್ಷತೆಗಾಗಿ ಪ್ರತಿ ಸೀಟಿನ ಕೆಳಗಡೆ ಜೀವರಕ್ಷಕ ಜಾಕೆಟ್ ಇಡಲಾಗಿದೆ. ಸಿಸಿಟಿವಿ ಕ್ಯಾಮೆರಾ ಕಣ್ಗಾವಲು ಇದೆ. ಶಿಶುವಿಗೆ ಎದೆಹಾಲು ಉಣಿಸಲು ಪ್ರತ್ಯೇಕ ಆಸನದ ವ್ಯವಸ್ಥೆಯನ್ನು ಮಾಡಲಾಗಿದೆ. ಮೊಬೈಲ್ ಚಾರ್ಜಿಂಗ್ ಪಾಯಿಂಟ್ ಇದೆ. ಅಂಗವಿಕಲರು ಗಾಲಿ ಕುರ್ಚಿಯ ಮೂಲಕ ಸುಲಭವಾಗಿ ಒಳಗೆ ಬರಬಹುದು. ಈ ಅತ್ಯಾಧುನಿಕ ಮೆಟ್ರೊವನ್ನು ಕೇರಳದ ಕೊಚ್ಚಿ ಶಿಪ್ ಯಾರ್ಡ್ ಲಿಮಿಟೆಡ್ ಕಂಪನಿಯೇ ನಿರ್ಮಿಸಿದ್ದು, 'ಮೇಕ್ ಇನ್ ಇಂಡಿಯಾ' ಲಾಂಛನ ರಾರಾಜಿಸುತ್ತಿದೆ.

'ಸದ್ಯ ಎಂಟು ಕಡೆ ನಿಲ್ದಾಣ (ಟರ್ಮಿನಲ್)ಗಳನ್ನು ನಿರ್ಮಿಸಲಾಗಿದೆ. 2035ರ ವೇಳೆಗೆ 70 ನಿಲ್ದಾಣಗಳಿಗೆ ವಿಸ್ತರಿಸಲು ಸರ್ಕಾರ ಚಿಂತನೆ ನಡೆಸಿದೆ. ಆ ವೇಳೆಗೆ ಪ್ರತಿದಿನ 1.50 ಲಕ್ಷ ಜನ ವಾಟರ್ ಮೆಟ್ರೊದಲ್ಲಿ ಸಂಚರಿಸುವಂತಾಗಬೇಕು ಎಂಬ ಗುರಿ ಹೊಂದಿದೆ. ದ್ವೀಪದಲ್ಲಿ ವಾಸಿಸುವ ಜನ ಜನದಟ್ಟಣೆ ಸಮಯದಲ್ಲಿ ರಸ್ತೆಯ ಮೂಲಕ ನಗರಕ್ಕೆ ಬರಲು ಒಂದೂವರೆ ಗಂಟೆಯಾಗುತ್ತದೆ. ಅದರ ಬದಲು ವಾಟರ್ ಮೆಟ್ರೊದಲ್ಲಿ ಬಂದರೆ 20-30 ನಿಮಿಷಗಳಲ್ಲಿ ತಲುಪುತ್ತಾರೆ. ಜಲ ಮಾರ್ಗದ ಮೂಲಕ ಸಂಚರಿಸುವುದರಿಂದ ದ್ವೀಪದ ನಿವಾಸಿಗಳಿಗೆ ಸಮಯ ಹಾಗೂ ಹಣ ಉಳಿಯುತ್ತಿದೆ. ದೇಶ-ವಿದೇಶಗಳ ಪ್ರವಾಸಿಗರು ವಾಟರ್ ಮೆಟ್ರೊದಲ್ಲಿ ಕುಳಿತು ಹಿನ್ನೀರಿನಲ್ಲಿ ವಿಹರಿಸಿ ಪ್ರಕೃತಿಯ ಸೌಂದರ್ಯವನ್ನು ಸವಿಯುತ್ತಿದ್ದಾರೆ' ಎಂದು ನಮ್ಮ ಜೊತೆಗಿದ್ದ ಎರ್ನಾಕುಲಂ ಡಿಸ್ಟ್ರಿಕ್ಟ್ ಟೂರಿಸಂ ಪ್ರೊಮೋಷನ್ ಕೌನ್ಸಿಲ್‌ನ ಕಾರ್ಯದರ್ಶಿ ಲಿಜೊ ಜೋಸೆಫ್ ಮಾಹಿತಿ ನೀಡಿದರು.

ಮೆಟ್ರೊ ರೈಲಿನಿಂದ ವಾಟರ್ ಮೆಟ್ರೊವರೆಗೆ...

ಕೊಚ್ಚಿಯಲ್ಲಿ ಹೆಚ್ಚುತ್ತಿರುವ ವಾಹನ ದಟ್ಟಣೆಗೆ ಪರಿಹಾರ ಕಂಡುಕೊಳ್ಳಲು ಹಾಗೂ ಸಾರ್ವಜನಿಕ ಸಾರಿಗೆಗೆ ಒತ್ತು ನೀಡಲು ಮೆಟ್ರೊ ರೈಲು ಆರಂಭಿಸಲು ಕೇರಳ ಸರ್ಕಾರ 1999ರಲ್ಲೇ ಮುಂದಾಗಿತ್ತು. ಆದರೆ ಯೋಜನೆಯ ಕಾರ್ಯಸಾಧ್ಯತೆ ಬಗ್ಗೆ ಕೇಂದ್ರ ಸರ್ಕಾರಕ್ಕೆ ವಿಶ್ವಾಸ ಮೂಡದ ಪರಿಣಾಮ ಹಸಿರು ನಿಶಾನೆ ಸಿಗದೆ ನನೆಗುದಿಗೆ ಬಿದ್ದಿತ್ತು.

2011ರಲ್ಲಿ ಕೇರಳ ಸರ್ಕಾರವು ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಮೆಟ್ರೊ ರೈಲು ಆರಂಭಿಸಲು ಪುನಃ ಯೋಜನೆ ರೂಪಿಸಿತು. 2013ರಲ್ಲಿ ಮೆಟ್ರೊ ರೈಲು ನಿರ್ಮಾಣ ಕಾಮಗಾರಿಯೂ ಆರಂಭಗೊಂಡಿತು. ಮೆಟ್ರೊ ರೈಲಿಗಾಗಿ ಕೊಚ್ಚಿ ನಗರದಲ್ಲಿ ಹಳಿ ನಿರ್ಮಾಣ ಕಾರ್ಯ ಆರಂಭಿಸಿದಾಗ ಟ್ರಾಫಿಕ್ ಸಮಸ್ಯೆ ಇನ್ನಷ್ಟು ಹೆಚ್ಚಾಯಿತು. ಆಗ ಕೇರಳ ರಾಜ್ಯ ಜಲ ಸಾರಿಗೆ ಇಲಾಖೆಯು ವಿಟ್ಟಿಲಾ ಹಾಗೂ ಕಕ್ಕನಾಡ ನಡುವೆ 2013ರಲ್ಲಿ ಬೋಟ್ ಸೇವೆ ಆರಂಭಿಸಿತು. 9 ಕಿಲೋಮೀಟರ್ ದೂರವನ್ನು 25 ನಿಮಿಷಗಳಲ್ಲಿ ಬೋಟ್ ಮೂಲಕ ಕ್ರಮಿಸಲಾಗುತ್ತಿತ್ತು.

ಸಾರ್ವಜನಿಕ ಜಲ ಸಾರಿಗೆಯಿಂದಾದ ಅನುಕೂಲತೆಗಳನ್ನು ಮನಗಂಡ ಕೊಚ್ಚಿ ಮೆಟ್ರೊ ರೈಲಿನ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಇಲಿಯಾಸ್ ಜಾರ್ಜ್ ಅವರು ದ್ವೀಪಗಳ ನಿವಾಸಿಗಳಿಗೆ ನಗರಕ್ಕೆ ಬರಲು ಮೆಟ್ರೊ ಮಾದರಿಯಲ್ಲೇ ಜಲ ಸಾರಿಗೆ ಆರಂಭಿಸುವ ಬಗ್ಗೆ ಚಿಂತನೆ ನಡೆಸಿ, ಯೋಜನೆ ರೂಪಿಸಿದರು. ನಂತರ 2017ರಲ್ಲಿ ಕೇರಳ ಸರ್ಕಾರವು ಕೊಚ್ಚಿ ವಾಟರ್ ಮೆಟ್ರೊ ಜಲ ಸಾರಿಗೆ ಆರಂಭಿಸುವುದಾಗಿ ಘೋಷಿಸಿತು. 2023ರಲ್ಲಿ ವಾಟರ್ ಮೆಟ್ರೊ ಸೇವೆ ಸಾರ್ವಜನಿಕರಿಗೆ ಮುಕ್ತವಾಯಿತು.

ವಾಟರ್ ಮೆಟ್ರೊಗೆ ಸುಮಾರು 75 ಕಿ.ಮೀ ಜಲಮಾರ್ಗವನ್ನು ನಿಗದಿಪಡಿಸಲಾಗಿದೆ. 15 ರೂಟ್‌ಗಳನ್ನು ರೂಪಿಸಲಾಗಿದ್ದು, 75 ಇ-ಬೋಟ್‌ಗಳು(ವಿದ್ಯುತ್ ಚಾಲಿತ) ಪ್ರಯಾಣಿಕರನ್ನು ಸಾಗಿಸುತ್ತಿವೆ. ದೂರದ ಆಧಾರ ಮೇಲೆ ನಿಲ್ದಾಣಗಳ ನಡುವಿನ ಪ್ರಯಾಣ 20 ರಿಂದ 30 ನಿಮಿಷಗಳವರೆಗೆ ಆಗಲಿದೆ. ವಾಟರ್ ಮೆಟ್ರೊದ ಪ್ರಯಾಣ ದರವು ಕನಿಷ್ಠ ₹20 ರಿಂದ ಗರಿಷ್ಠ ₹40 ವರೆಗೆ ಇದೆ. ಅರಬ್ಬಿ ಸಮುದ್ರದ ರಾಷ್ಟ್ರೀಯ ಜಲಮಾರ್ಗ (ಎನ್‌ಡಬ್ಲ್ಯು-3), ಕೊಚ್ಚಿ ಪೋರ್ಟ್ ಟ್ರಸ್ಟ್‌ನ ಜಲಮಾರ್ಗ, ಪೆರಿಯಾರ್ ಮತ್ತು ಮುವಟ್ಟುಪೂಝಾ ನದಿಗಳ ಹಿನ್ನೀರಿನಲ್ಲಿ ವಾಟರ್ ಮೆಟ್ರೊಗಳು ಸಾಗುತ್ತವೆ.

ತುರ್ತು ಸೇವೆಗೆ ಸಜ್ಜು

ಕೊಚ್ಚಿ ವಾಟರ್ ಮೆಟ್ರೊಕ್ಕೆ ಇದೀಗ ತುರ್ತು ಸಂದರ್ಭಗಳಲ್ಲಿ ಸ್ಪಂದಿಸುವ ಅತ್ಯಾಧುನಿಕ ಬೋಟ್ ಕೂಡಾ ಸೇರ್ಪಡೆಯಾಗಿದೆ. ಅಪಘಾತ, ಅಗ್ನಿ ಅವಘಡ, ಪ್ರಕೃತಿ ವಿಕೋಪದಂತಹ ಸಂದರ್ಭಗಳಲ್ಲಿ ತಕ್ಷಣಕ್ಕೆ ಜಲಮಾರ್ಗದ ಮೂಲಕ ಸ್ಥಳಕ್ಕೆ ತೆರಳಿ ಸ್ಪಂದಿಸುವ ಸಾಮರ್ಥ್ಯವನ್ನು ಈ ಅತ್ಯಾಧುನಿಕ ಬೋಟ್ ಹೊಂದಿದೆ. ಜೀವರಕ್ಷಕ ಉಪಕರಣಗಳು ಹಾಗೂ ತರಬೇತಿ ಪಡೆದ ಸಿಬ್ಬಂದಿ ಇರುವ ಈ ಬೋಟ್, ತುರ್ತು ಸಂದರ್ಭಗಳಲ್ಲಿ ಕೊಚ್ಚಿಯ ಸುತ್ತಲಿನ ಜಲಮಾರ್ಗದಲ್ಲಿ ಸಂಚರಿಸಿ ನೆರವಿಗೆ ಧಾವಿಸಲಿದೆ.

ವಾಟರ್ ಮೆಟ್ರೊದಲ್ಲಿ ಸಾಗುತ್ತಿದ್ದಾಗ ಪ್ರಯಾಣಿಕರನ್ನು ಹೊತ್ತ ಖಾಸಗಿ ಬೋಟ್‌ಗಳೂ ನಮ್ಮನ್ನು ಎದುರುಗೊಳ್ಳುತ್ತಿದ್ದವು. ಕೊಚ್ಚಿ ಹೈಕೋರ್ಟ್ ನಿಲ್ದಾಣಕ್ಕೆ ಬಂದಿಳಿದಾಗ, ಕೇರಳ ಸರ್ಕಾರ ಜಲ ಸಾರಿಗೆಯನ್ನು ಪ್ರವಾಸೋದ್ಯಮಕ್ಕೆ ಹೇಗೆ ಸದ್ಬಳಕೆ ಮಾಡಿಕೊಂಡಿದೆ ಎಂಬುದು ಗೊತ್ತಾಯಿತು.

(ಲೇಖಕರು ಕೇರಳ ಸರ್ಕಾರದ ಪ್ರವಾಸೋದ್ಯಮ ಇಲಾಖೆ ಆಹ್ವಾನದ ಮೇರೆಗೆ ತೆರಳಿದ್ದರು)

ಪೋರ್ಟ್ ಕೊಚ್ಚಿ ವಾಟರ್ ಮೆಟ್ರೊ ನಿಲ್ದಾಣದ ಹೊರ ನೋಟ

ವಾಟರ್ ಮೆಟ್ರೊದಲ್ಲಿ ಪ್ರವಾಸಿಗರು ಪ್ರಯಾಣಿಸುತ್ತಿರುವುದು
ಚಿತ್ರ: ವಿನಾಯಕ ಭಟ್

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ತೆಗೆ	+	ದಾರಿ	+	ಳಿ	=	
2	ತೆಗೆ	+	ಕರಿ	+	ಟ್ಟು	=	
3	ತೆಗೆ	+	ಕುರಿ	+	ಹಾ	=	
4	ತೆಗೆ	+	ದರಿ	+	ರ	=	
5	ತೆಗೆ	+	ಭಾರಿ	+	ರ	=	

ಮೋಜಿನ ಇಂಗ್ಲಿಷ್
CRATE IS GREAT

Crate ಇದೊಂದು ಸ್ವಾರಸ್ಯಕರ ಶಬ್ದ. ಈ ಶಬ್ದದಲ್ಲಿನ ಅಕ್ಷರ ಬಳಸಿಕೊಂಡು ನಿಘಂಟಿನ ಪ್ರಕಾರ 32 ಪದಗಳನ್ನು ಮಾಡಬಹುದು.

ಉದಾ: ace, acre, act, arc, are, art, ate, cart, race, ear, tea...ನೀವೂ ಪ್ರಯತ್ನಿಸಿ.

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಕಂಬ ಸಾಲಿನ 'ನವಕರರ ಕವನ' ಬರಹದ ಪ್ರತಿ ಅಕ್ಷರ ಹಿಂದೆ-ಮುಂದೆ ಪದ ಪಟ್ಟಿಯಿಂದ ಒಂದೊಂದು ಪದ ಆರಿಸಿ ಹಿಗ್ಗಿಸಿ ತುಂಬಿದರೆ ಮೂರಕ್ಷರದ ಪದಗಳಾಗುತ್ತವೆ. ತುಂಬಲು ಪ್ರಯತ್ನಿಸಿ.

1		ನ	
2		ವ	
3		ಕ	
4		ರ	
5		ರ	
6		ಕ	
6		ವ	
6		ನ	

ಪದಪಟ್ಟಿ

ಕಾಲು	ಸಳ	ನಲಿ	ಸತಿ
ನಸು	ಜನ	ಹವಿ	ಮರ

ಸಂಖ್ಯಾ ಪಿರಮಿಡ್
ತಾರ್ಕಿಕ ಗಣಿತ



ಇಲ್ಲಿ ಕೊಟ್ಟಿರುವ ಸಂಖ್ಯಾ ಪಿರಮಿಡ್‌ನಲ್ಲಿ ಬಿಟ್ಟಿರುವ ಸಂಖ್ಯೆಗಳನ್ನು ನಿಮ್ಮ ತಾರ್ಕಿಕ ಶಕ್ತಿಯಿಂದ ಯೋಚಿಸಿ ತುಂಬಿ. ಕೆಳಗಿನ ಎರಡು ವೃತ್ತಗಳ ಸಂಖ್ಯೆ ಮೊತ್ತ ಅದರ ಮೇಲಿನ ವೃತ್ತದ ಸಂಖ್ಯೆಗೆ ಸಮವಾಗಿರುತ್ತದೆ. ಗಮನಿಸಿ.

ದಶ್ಯ ಚಿತ್ತು ಶೀರ್ಷಿಕೆ ಕಥೆಯ — ಜೇನುಗೂಡಲ್ಲ..ಕೂದಲು..

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ದಟ್ಟವಾದ ಗುಂಗುರು ಕೂದಲು ಹೊಂದಿದ್ದ ಮಹಿಳೆಯೊಬ್ಬಳು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಳು. ಎದುರಿಗಿದ್ದ ಮರದಲ್ಲಿ ಹೆಜ್ಜೇನಿನ ಗೂಡನ್ನು ಆಕೆ ನೋಡಿದಳು. ಜೇನುನೊಣಗಳು ಹಾರಿಬಂದು ಗೂಡು ಸೇರುತ್ತಿರುವುದನ್ನು ಖುಷಿಯಿಂದ ಗಮನಿಸುತ್ತಾ ನಿಂತಿದ್ದಳು. ಕೆಲ ಹೊತ್ತಿನಲ್ಲೇ ಆಕೆಯ ದಟ್ಟವಾದ ಕೂದಲನ್ನು ನೋಡಿದ ಜೇನುನೊಣಗಳು ಅದನ್ನು ಬೇರೊಂದು ಜೇನುನೊಣಗಳ ಗುಂಪೆಂದು ಭಾವಿಸಿ ಅಟ್ಟಿಸಿಕೊಂಡು ಹೋದವು. ಭಯದಿಂದ ಆಕೆ ಅಲ್ಲಿಂದ ಓಡಿಹೋದಳು.

ಗಣಿತದಲ್ಲಿ ಗರ್ದಿಗಮ್ಮತ್ತು ವರ್ಗಸಂಖ್ಯಾ ಸ್ವಾರಸ್ಯ

ಇವು ವರ್ಗ ಸಂಖ್ಯೆಗಳ ಗುಣಲಬ್ಧದಿಂದ ಬರುವ ಫಲಿತಾಂಶದಲ್ಲಿ ಸ್ವಾರಸ್ಯ ಅಡಗಿರುವ ವಿಶೇಷ ಗುಣಾಕಾರಗಳು.

1. $(406,406)^2 = 165,165,836,836$
ಗುಣ್ಯದಲ್ಲಿ ಒಂದೇ ಸಂಖ್ಯೆ ಎರಡು ಬಾರಿ ಬಂದಂತೆ, ಗುಣಲಬ್ಧದಲ್ಲೂ ಒಂದೇ ಸಂಖ್ಯೆ ಎರಡು ಬಾರಿ ಬಂದಿವೆ.
2. $(798644)^2 = 637832/238736$
ಉತ್ತರದಲ್ಲಿ ಎರಡು ಭಾಗ ಮಾಡಿದರೆ ವಿಲೋಮ ಸಂಖ್ಯೆ ದೊರೆಯುತ್ತದೆ.
3. $(74162)^2 = 55,00,00,22,44$
$(97779)^2 = 9560732841$
ಉತ್ತರದಲ್ಲಿ 0-9 ಹತ್ತು ಅಂಕಿಗಳು ಒಮ್ಮೆ ಮಾತ್ರ ಬಂದಿವೆ.
4. $(11826)^2 = 139854276$
ಉತ್ತರದಲ್ಲಿ 1-9 ಅಂಕಿಗಳು ಒಮ್ಮೆ ಮಾತ್ರ ಬಂದಿವೆ.

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.
ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.
ಉತ್ತರ ಕಳುಹಿಸಲು ಇಮೇಲ್ ವಿಳಾಸ:
majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಕಲಾವಿಭಾಗ 2.ಜನಗಣತಿ 3.ದರಕಡಿತ 4.ಮಹಾನಗರ 5.ಬೇಸಿಗೆಮಳೆ

ಜಾಣಪದ ಆಟ: 1.ಸವತಿ ಮತ್ಸರ ಬಿಡಿರಿ 2.ಗಣಿತ ಬೇಸಿಗೆ ಶಿಬಿರ 3.ನನಗೆ ನೀಡಲು ತನ್ನಿರಿ 4.ಅವರ ಆಳ್ವಿಕೆ ಇರದು 5.ಸೇತುವೆ ಹತ್ತಿರ ಇಡುವೆ 6.ಬೇಗನೆ ಆಕಳು ಕಟ್ಟಿರಿ

ಮ್ಯಾಚಿಕ್:



ಅಸಾಧ್ಯತೆಯಲ್ಲೂ ಸಾಧ್ಯತೆ:
$9 + 9 + 9 + 9 + 1 = 37$

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಸಂಸ್ಕೃತಿ ಎಸ್.ಆರ್.
ಮಡಿಕೇರಿ

ಸ್ವಧಾ ದೇಸಾಯಿ
ಬೆಂಗಳೂರು

ಶಾರ್ವರಿ ಎಸ್.
ಹೂವಿನಹಡಗಲಿ



ದೀವಾ ಸಚಿನ್ ಯಾದವಾಡ
ಗೋಕಾಕ್

ಟಿ.ಪ್ರಣವ
ಸಂಡೂರು

ಧ್ರುವ ಪಟ್ಟಣಶೆಟ್ಟಿ
ಹಾವೇರಿ

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100ಕ್ಕೆ ₹440
12 ಕ್ಕೆ ₹60
ಮೈಸೂರು
100ಕ್ಕೆ ₹440

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹193
ಆರ್‌ಎಸ್‌ಎಸ್-5 ₹188
ಗುಡ್ ಲಾಟ್ ₹180
(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹270-551
ದ್ವಿತಳಿ (ಬಿ.ವಿ) ₹315-768

ದ್ವಿಪಕ್ಷೀಯ ವ್ಯಾಪಾರ ಒಪ್ಪಂದ: 23ರಿಂದ ಮಾತುಕತೆ ಆರಂಭ

ನವದೆಹಲಿ (ಪಿಟಿಐ): ಭಾರತ ಮತ್ತು ಅಮೆರಿಕದ ನಡುವಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದ ಮಾತುಕತೆಯು ಏಪ್ರಿಲ್ 23ರಿಂದ ಮೂರು ದಿನಗಳವರೆಗೆ ವಾಷಿಂಗ್ಟನ್‌ನಲ್ಲಿ ನಡೆಯಲಿದೆ.

ಯಾವ ಸರಕುಗಳಿಗೆ ಎಷ್ಟು ಸುಂಕ ವಿಧಿಸಬೇಕು ಹಾಗೂ ಸುಂಕ ವಿನಾಯಿತಿ ನೀಡಬೇಕು ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಪ್ರಸ್ತಾವಗಳನ್ನು ಸಿದ್ಧಪಡಿಸಿದೆ ಎಂದು ಮೂಲಗಳು ತಿಳಿಸಿವೆ.

ಭಾರತದ ಮೇಲೆ ಟ್ರಂಪ್ ಆಡಳಿತವು ಶೇ 26ರಷ್ಟು ಪ್ರತಿ ಸುಂಕ ಹೇರಿದ್ದು, ಇದರ ಜಾರಿಗೆ 90 ದಿನಗಳವರೆಗೆ ವಿರಾಮ ಘೋಷಿಸಿದೆ. ಹಾಗಾಗಿ, ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಮಾತುಕತೆಗಳಿಗೆ ಬಲ ಬಂದಿದೆ.

ವಾಣಿಜ್ಯ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ರಾಜೇಶ್ ಅಗರವಾಲ್ ಅವರು, ಔಪಚಾರಿಕ ಮಾತುಕತೆ ನಡೆಸುವ ಕೇಂದ್ರದ ಅಧಿಕಾರಿಗಳ ತಂಡದ ನೇತೃತ್ವವಹಿಸಿದ್ದಾರೆ.

ವದಂತಿಗೆ ಕಿವಿಗೊಡಬೇಡಿ: ಕೇಂದ್ರ ಹಣಕಾಸು ಸಚಿವಾಲಯ ಮನವಿ

ಯುಪಿಐ ಪಾವತಿಗೆ ಜಿಎಸ್‌ಟಿ ಇಲ್ಲ

ನವದೆಹಲಿ (ಪಿಟಿಐ): ಯುಪಿಐ (ಏಕೀಕೃತ ಪಾವತಿ ವ್ಯವಸ್ಥೆ) ಪಾವತಿ ಮೇಲೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವಿಧಿಸುವ ಯಾವುದೇ ಪ್ರಸ್ತಾವವು ಕೇಂದ್ರ ಸರ್ಕಾರದ ಮುಂದಿಲ್ಲ. ಹಾಗಾಗಿ, ಗ್ರಾಹಕರು ವದಂತಿಗಳಿಗೆ ಕಿವಿಗೊಡಬಾರದು ಎಂದು ಕೇಂದ್ರ ಹಣಕಾಸು ಸಚಿವಾಲಯವು ಸ್ಪಷ್ಟನೆ ನೀಡಿದೆ.

₹2 ಸಾವಿರಕ್ಕಿಂತ ಹೆಚ್ಚು ಮೌಲ್ಯದ ವಹಿವಾಟಿನ ಮೇಲೆ ಜಿಎಸ್‌ಟಿ ವಿಧಿಸಲು ಕೇಂದ್ರ ಮುಂದಾಗಿದೆ. ಶೀಘ್ರವೇ, ಇದು ಕಾರ್ಯರೂಪಕ್ಕೆ ಬರಲಿದ್ದು, ಗ್ರಾಹಕರಿಗೆ ಹೊರೆಯಾಗಲಿದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿ ಹರಿದಾಡಿತ್ತು. ಇದರಿಂದ ಗ್ರಾಹಕರು ಆತಂಕಗೊಂಡಿದ್ದರು.

ಇದಕ್ಕೆ ಸ್ಪಷ್ಟನೆ ನೀಡಿರುವ ಸಚಿವಾಲಯವು, 'ಇದೊಂದು ಸುಳ್ಳು ಸುದ್ದಿಯಷ್ಟೇ. ದಿಕ್ಕು ತಪ್ಪಿಸುವ ಇಂತಹ ಸುದ್ದಿಗಳನ್ನು ಜನರು ನಂಬಬಾರದು' ಎಂದು ಹೇಳಿದೆ.

ಮುಖ್ಯಾಂಶಗಳು

- 2020ರ ಜನವರಿಯಿಂದ ಎಂಡಿಆರ್ ಶುಲ್ಕ ರದ್ದು
- ಸಣ್ಣ ಮೊತ್ತದ ಏಕೀಕೃತ ಪಾವತಿ ವ್ಯವಸ್ಥೆಗೆ ಉತ್ತೇಜನ

ಗ್ರಾಹಕರು ವರ್ತಕರಿಗೆ ಪಾವತಿಸುವ ಮೊತ್ತದಲ್ಲಿ ನೀಡಬೇಕಿರುವ ಮರ್ಚಂಟ್ ಡಿಸ್ಕೌಂಟ್ ರೇಟ್ (ಎಂಡಿಆರ್) ಶುಲ್ಕವನ್ನು 2020ರ ಜನವರಿಯಿಂದ ಅನ್ವಯವಾಗುವಂತೆ ಕೇಂದ್ರೀಯ ನೇರ ತೆರಿಗೆಗಳ ಮಂಡಳಿಯು (ಸಿಬಿಡಿಟಿ) ರದ್ದುಪಡಿಸಿದೆ. ಇದರಿಂದ ಯುಪಿಐ ಪಾವತಿಗೆ ಎಂಡಿಆರ್ ಶುಲ್ಕ ಇಲ್ಲ. ಹಾಗಾಗಿ, ಜಿಎಸ್‌ಟಿ ಕೂಡ ಅನ್ವಯವಾಗುವುದಿಲ್ಲ ಎಂದು ಹೇಳಿದೆ.

ದೇಶದಲ್ಲಿ ಯುಪಿಐ ವಹಿವಾಟು ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿದೆ. 2019-20ರಲ್ಲಿ ₹21.3 ಲಕ್ಷ ಕೋಟಿ ವಹಿವಾಟು ನಡೆದರೆ, ಪ್ರಸಕ್ತ ವರ್ಷದ ಮಾರ್ಚ್ ಅಂತ್ಯಕ್ಕೆ ₹260.56 ಲಕ್ಷ ಕೋಟಿಗೆ ಮುಟ್ಟಿದೆ. ಯುಪಿಐ ಪಾವತಿ ವಹಿವಾಟಿಗೆ ಮತ್ತಷ್ಟು ಉತ್ತೇಜನ ನೀಡಲು ಕೇಂದ್ರ ಬದ್ಧವಾಗಿದೆ ಎಂದು ತಿಳಿಸಿದೆ.

ಸಣ್ಣ ಮೊತ್ತದ ಏಕೀಕೃತ ಪಾವತಿ ವ್ಯವಸ್ಥೆಯ ಉತ್ತೇಜನಕ್ಕೆ ಕೇಂದ್ರ ಒತ್ತು ನೀಡಿದೆ. ಇದಕ್ಕಾಗಿ 2021-22ರಿಂದ ಪ್ರೋತ್ಸಾಹ ಯೋಜನೆಯನ್ನು ಜಾರಿಗೊಳಿಸಿದೆ. ಕಡಿಮೆ ಮೊತ್ತ ಪಾವತಿಸುವವರಿಗೆ (ಗ್ರಾಹಕನಿಂದ ವರ್ತಕನಿಗೆ) ಉತ್ತೇಜನ ನೀಡುವುದು ಇದರ ಉದ್ದೇಶ. ಗ್ರಾಹಕರು ವರ್ತಕರಿಗೆ ಪಾವತಿಸುವ ಮೊತ್ತದಲ್ಲಿ ನೀಡಬೇಕಿರುವ ಎಂಡಿಆರ್ ಶುಲ್ಕವನ್ನು ಸರ್ಕಾರವೇ ಭರಿಸುತ್ತದೆ. ಡಿಜಿಟಲ್ ಪಾವತಿಗೆ ಬಲವರ್ಧನೆ ನೀಡುವುದು ಇದರ ಆಶಯವಾಗಿದೆ.

ಈ ಪ್ರೋತ್ಸಾಹ ಯೋಜನೆಯಡಿ 2022-23ರಲ್ಲಿ ₹2,210 ಕೋಟಿ ಹಾಗೂ 2023-24ರಲ್ಲಿ ₹3,631 ಕೋಟಿಯನ್ನು ಸರ್ಕಾರವೇ ಭರಿಸಿದೆ. ಈ ಯೋಜನೆಯು ಸಣ್ಣ ವರ್ತಕರು ಡಿಜಿಟಲ್ ಪಾವತಿ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಉತ್ತೇಜನ ನೀಡಿದೆ. ಡಿಜಿಟಲ್ ಪಾವತಿಗೆ ಉತ್ತೇಜನ ನೀಡುವ ಸರ್ಕಾರದ ನಿರ್ಧಾರಕ್ಕೆ ಇದು ಕನ್ನಡಿ ಹಿಡಿದಿದೆ ಎಂದು ಸಚಿವಾಲಯ ಹೇಳಿದೆ.

ಎನ್‌ಪಿಸಿಐಗೆ ಅಧಿಕಾರ: ಪ್ರಸ್ತುತ ಯುಪಿಐ ಮೂಲಕ ವ್ಯಕ್ತಿಯಿಂದ ವ್ಯಕ್ತಿಗೆ ಮತ್ತು ಗ್ರಾಹಕನಿಂದ ವರ್ತಕನಿಗೆ ವಹಿವಾಟು ಮಿತಿಯು ₹1 ಲಕ್ಷವಿದೆ. ಕೆಲವು ನಿರ್ದಿಷ್ಟ ಪ್ರಕರಣಗಳಲ್ಲಿ ₹2 ಲಕ್ಷ ಮತ್ತು ಇತರೆಗೆ ₹5 ಲಕ್ಷವಿದೆ.

ಈ ಮೊತ್ತದ ಮಿತಿ ಪರಿಷ್ಕರಿಸುವ ಅಧಿಕಾರವನ್ನು ಆರ್‌ಬಿಐ, ರಾಷ್ಟ್ರೀಯ ಪಾವತಿ ನಿಗಮಕ್ಕೆ (ಎನ್‌ಪಿಸಿಐ) ನೀಡಿದೆ.

ಸಂಕ್ಷಿಪ್ತ ಸುದ್ದಿ

ಐಸಿಐಸಿಐ ಬ್ಯಾಂಕ್ ಲಾಭ ಏರಿಕೆ

ಮುಂಬೈ (ಪಿಟಿಐ): 2024-25ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ದೇಶದ ಖಾಸಗಿ ವಲಯದ ಐಸಿಐಸಿಐ ಬ್ಯಾಂಕ್‌ನ ನಿವ್ವಳ ಲಾಭದಲ್ಲಿ ಶೇ 15.7ರಷ್ಟು ಏರಿಕೆಯಾಗಿದೆ.

ಮಾರ್ಚ್ ತ್ರೈಮಾಸಿಕದಲ್ಲಿ ಒಟ್ಟು ₹13,502 ಕೋಟಿ ಲಾಭ ಗಳಿಸಲಾಗಿದೆ ಎಂದು ಬ್ಯಾಂಕ್, ಷೇರುಪೇಟೆಗೆ ಶನಿವಾರ ತಿಳಿಸಿದೆ.

ಬಡ್ಡಿ ವರಮಾನದಿಂದ ₹21,193 ಕೋಟಿ ಹಾಗೂ ಬಡ್ಡಿಯೇತರ ವರಮಾನದಿಂದ ₹7,021 ಕೋಟಿ ಗಳಿಸಲಾಗಿದೆ. ಬ್ಯಾಂಕ್‌ನ ವಸೂಲಾಗದ ಸಾಲದ ಸರಾಸರಿ ಪ್ರಮಾಣವು ಶೇ 1.96ರಿಂದ ಶೇ 1.67ಕ್ಕೆ ತಗ್ಗಿದೆ ಎಂದು ತಿಳಿಸಿದೆ.

₹17,616 ಕೋಟಿ ಎಚ್‌ಡಿಎಫ್‌ಸಿ ಬ್ಯಾಂಕ್‌ಗೆ ಲಾಭ

ನವದೆಹಲಿ (ಪಿಟಿಐ): 2024-25ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ದೇಶದ ಖಾಸಗಿ ವಲಯದ ಅತಿದೊಡ್ಡ ಬ್ಯಾಂಕ್ ಆದ ಎಚ್‌ಡಿಎಫ್‌ಸಿ ಬ್ಯಾಂಕ್, ₹17,616 ಕೋಟಿ ನಿವ್ವಳ ಲಾಭ ಗಳಿಸಿದೆ.

2023-24ನೇ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ₹16,512 ಕೋಟಿ ಲಾಭ ಗಳಿಸಲಾಗಿತ್ತು. ಈ ಲಾಭದ ಪ್ರಮಾಣಕ್ಕೆ ಹೋಲಿಸಿದರೆ ಶೇ 6.6ರಷ್ಟು ಹೆಚ್ಚಳವಾಗಿದೆ ಎಂದು ಬ್ಯಾಂಕ್, ಶನಿವಾರ ಷೇರುಪೇಟೆಗೆ ತಿಳಿಸಿದೆ.

ಮಾರ್ಚ್ ತ್ರೈಮಾಸಿಕದಲ್ಲಿ ₹89,488 ಕೋಟಿ ವರಮಾನ ಗಳಿಸಿದೆ.

ಪ್ರತಿ ಷೇರಿಗೆ ₹22 ಲಾಭಾಂಶ ನೀಡುವ ಬ್ಯಾಂಕ್‌ನ ಆಡಳಿತ ಮಂಡಳಿಯು ಅನುಮೋದನೆ ನೀಡಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣವು ಶೇ 1.24ರಿಂದ ಶೇ 1.33ಕ್ಕೆ ಹೆಚ್ಚಳವಾಗಿದೆ. ನಿವ್ವಳ ಎನ್‌ಪಿಎ ಶೇ 0.33ರಿಂದ ಶೇ 0.43ಕ್ಕೆ ಏರಿಕೆಯಾಗಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಾಲ್ಕನೇ ಪುಣ್ಯ ಸ್మರಣೆ

ಶ್ರೀ ಕೆ. ಮುನಿಯಪ್ಪ
(ಮಾರೇನಹಳ್ಳಿ ಪಾಳ್ಯ, ಜೆ.ಪಿ.ನಗರ)
(10-03-1942) (20-04-2021)
ಈ ದಿನದಂದು ನಮ್ಮನ್ನು ಅಗಲಿ ನಾಲ್ಕು ವರ್ಷವಾಯಿತು.
ಈ ಸಂದರ್ಭದಲ್ಲಿ ನಮ್ಮ ಹೃದಯದಲ್ಲಿ ಶಾಶ್ವತವಾಗಿ ನೆಲಸಿದ್ದೀರಿ.
ನೀವೆಂದಿಗೂ ನಮ್ಮ ಮನದಲ್ಲಿ ಚಿರಸ್ಥಾಯಿಯಾಗಿರುವಿರಿ.
AMEYA Sriameya Projects India Pvt. Ltd.
ದುಃಖತಪ್ತರು ಕುಟುಂಬವರ್ಗದವರು
ಶ್ರೀ ಆಮೆಯ ಪ್ರಾಜೆಕ್ಟ್ಸ್ ಪ್ರೈ.ಲಿ.
ಜೆ.ಪಿ.ನಗರ 2ನೇ ಹಂತ, ಬೆಂಗಳೂರು-560 078

ತಾಜಾ ಸುದ್ದಿಗಳಿಗಾಗಿ prajavani.net ನೋಡಿ

8ನೇ ವರ್ಷದ ಪುಣ್ಯಸ್ಮರಣೆ

ಶ್ರೀಯುತ ಉಮೇಶ್ ರವರು
ಅಡುಗೆ ಕಂಟ್ರಾಕ್ಟರ್, ಅಡೇಪೇಟೆ, ನೆಲಮಂಗಲ
ನಿಧನ 20-04-2017
ನೀವು ನಮ್ಮನ್ನು ಅಗಲಿ ಇಂದಿಗೆ ಎಂಟು ವರ್ಷಗಳು ಕಳೆದರೂ. ನಿಮ್ಮ ಸವಿನೆನಪು ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ. ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ.
ತಮ್ಮ ಸ್ಮರಣೆಯಲ್ಲಿರುವ
ಕುಟುಂಬದವರು, ಆತ್ಮೀಯ ಗೆಳೆಯರು ಹಾಗೂ ಬಂಧು ಬಾಂಧವರು

ಮೊದಲ ಬಾರಿಗೆ ಹಡಗಿನ ಮೂಲಕ ರವಾನೆ

ಅಮೆರಿಕ ತಲುಪಿದ ದಾಳಿಂಬೆ

ನವದೆಹಲಿ (ಪಿಟಿಐ): ಭಾರತವು ಮೊದಲ ಬಾರಿಗೆ ಹಡಗಿನ ಮೂಲಕ 14 ಟನ್ ದಾಳಿಂಬೆ ಹಣ್ಣನ್ನು ಅಮೆರಿಕಕ್ಕೆ ರಫ್ತು ಮಾಡಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಶನಿವಾರ ತಿಳಿಸಿದೆ.

ದಾಳಿಂಬೆ ರಫ್ತು ಯಶಸ್ವಿಯಾಗಿರುವುದರಿಂದ ಮುಂದಿನ ದಿನಗಳಲ್ಲಿ ಮಾವಿನ ಹಣ್ಣನ್ನು ಇದೇ ವಿಧಾನ ಅನುಸರಿಸಿ ರಫ್ತು ಮಾಡುವ ಸಾಧ್ಯತೆಯಿದೆ.

ಸರಕು ಸಾಗಣೆ ವಿಮಾನಗಳ ಮೂಲಕ ದಾಳಿಂಬೆ ರಫ್ತು ಮಾಡಲಾಗುತ್ತಿತ್ತು. ಇದಕ್ಕೆ ಅಧಿಕ ವೆಚ್ಚ ಭರಿಸಬೇಕಿತ್ತು. ವೆಚ್ಚ ತಗ್ಗಿಸುವ ಜೊತೆಗೆ ಸಮುದ್ರ ಸಾರಿಗೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ನಿಟ್ಟಿನಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಸಚಿವಾಲಯ ಹೇಳಿದೆ.

ಭಗವಾ ತಳಿಯ ದಾಳಿಂಬೆ ತುಂಬಿದ್ದ ಒಟ್ಟು 4,620 ಬಾಕ್ಸ್‌ಗಳು ಮಾರ್ಚ್ ಎರಡನೇ ವಾರ ನ್ಯೂಯಾರ್ಕ್‌ಗೆ ತಲುಪಿವೆ. ಐದು ವಾರಗಳಲ್ಲಿ ರವಾನಿಸಲಾಗಿದೆ ಎಂದು ಹೇಳಿದೆ.

ಈ ಯಶಸ್ಸಿನ ಹಿಂದೆ ಸೊಲ್ಲಾಪುರದ ರಾಷ್ಟ್ರೀಯ ದಾಳಿಂಬೆ ಸಂಶೋಧನಾ ಕೇಂದ್ರದ ವಿಜ್ಞಾನಿಗಳ ಪಾತ್ರ ಹೆಚ್ಚಿದೆ. ಭಾರತೀಯ ಕೃಷಿ ಅನುಸಂಧಾನ ಪರಿಷತ್ (ಐಸಿಎಆರ್) ಅಡಿ ಈ ಕೇಂದ್ರ ಕಾರ್ಯ ನಿರ್ವಹಿಸುತ್ತದೆ. 60 ದಿನದವರೆಗೆ ಹಣ್ಣುಗಳು ಕೆಡದಂತೆ ಇಲ್ಲಿ ಸಂರಕ್ಷಿಸಲಾಗುತ್ತದೆ.

'ಹಣ್ಣಿನ ಗುಣಮಟ್ಟದ ಬಗ್ಗೆ ಅಮೆರಿಕದ ಗ್ರಾಹಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ' ಎಂದು ಸಚಿವಾಲಯ ಹೇಳಿದೆ.

'ಭಾರತದ ದಾಳಿಂಬೆ ಹಣ್ಣಿನ ರುಚಿಗೆ ವಿದೇಶಿಗರು ಮನ ಸೋಲುತ್ತಾರೆ. ನ್ಯೂಯಾರ್ಕ್ ತಲುಪಿರುವ ಹಣ್ಣುಗಳು ಉತ್ಕೃಷ್ಟ ಗುಣಮಟ್ಟದಿಂದ ಕೂಡಿವೆ. ದೇಶೀಯ ತಾಜಾ ಹಣ್ಣುಗಳು ಅಮೆರಿಕದ ಜನರಿಗೆ ಇಷ್ಟವಾಗಲಿವೆ' ಎಂದು ರಫ್ತುದಾರರೊಬ್ಬರು ಹೇಳಿದ್ದಾರೆ.

2023ರಲ್ಲಿ ವಿಮಾನದ ಮೂಲಕ ಪ್ರಾಯೋಗಿಕವಾಗಿ ದಾಳಿಂಬೆ ಹಣ್ಣನ್ನು ಅಮೆರಿಕಕ್ಕೆ ರವಾನಿಸಲಾಗಿತ್ತು. ಕಳೆದ ವರ್ಷ ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರವು (ಎಪಿಇಡಿಎ) 12 ಟನ್‌ನಷ್ಟು ಹಣ್ಣುಗಳನ್ನು ಪ್ರಾಯೋಗಿಕವಾಗಿ ಹಡಗುಗಳ ಮೂಲಕ ರವಾನಿಸಿತ್ತು.

ಯಾವ ರಾಷ್ಟ್ರಗಳಿಗೆ ರಫ್ತು

ಭಾರತವು ಇಡೀ ವಿಶ್ವದಲ್ಲಿಯೇ ಅತಿಹೆಚ್ಚು ಪ್ರಮಾಣದಲ್ಲಿ ತೋಟಗಾರಿಕೆ ಬೆಳೆ ಬೆಳೆಯುವ ಎರಡನೇ ಅತಿದೊಡ್ಡ ರಾಷ್ಟ್ರವಾಗಿದೆ. ಕರ್ನಾಟಕ, ಮಹಾರಾಷ್ಟ್ರ, ಗುಜರಾತ್, ರಾಜಸ್ಥಾನ ಮತ್ತು ಆಂಧ್ರಪ್ರದೇಶದಲ್ಲಿ ಅತಿಹೆಚ್ಚು ಪ್ರಮಾಣದಲ್ಲಿ ದಾಳಿಂಬೆ ಬೆಳೆಯಲಾಗುತ್ತದೆ.

'ವಾರ್ಷಿಕ 3,500 ಟನ್ ಮಾವಿನ ಹಣ್ಣುಗಳು ಅಮೆರಿಕಕ್ಕೆ ರಫ್ತಾಗುತ್ತವೆ. ಮುಂಬರುವ ವರ್ಷಗಳಲ್ಲಿ ದಾಳಿಂಬೆ ಕೂಡ ಹೆಚ್ಚು ರಫ್ತಾಗುವ ನಿರೀಕ್ಷೆಯಿದೆ' ಎಂದು ಎಪಿಇಡಿಎ ಅಧ್ಯಕ್ಷ ಅಭಿಷೇಕ್ ದೇವ್ ಹೇಳಿದ್ದಾರೆ.

2023-24ರಲ್ಲಿ ಭಾರತವು ₹590 ಕೋಟಿ ಮೌಲ್ಯದ 71,011 ಟನ್‌ನಷ್ಟು ದಾಳಿಂಬೆಯನ್ನು ವಿದೇಶಕ್ಕೆ ರಫ್ತು ಮಾಡಿದೆ. ಪ್ರಮುಖವಾಗಿ ಯುಎಇ, ಬಾಂಗ್ಲಾದೇಶ, ನೇಪಾಳ, ನೆದರ್ಲೆಂಡ್ಸ್, ಸೌದಿ ಅರೇಬಿಯಾ, ಶ್ರೀಲಂಕಾ, ಥಾಯ್ಲೆಂಡ್, ಬಹರೇನ್ ಮತ್ತು ಅಮೆರಿಕಕ್ಕೆ ರಫ್ತು ಮಾಡಲಾಗುತ್ತದೆ.

ಚೆನ್ನೈ: ಹವಾನಿಯಂತ್ರಿತ ಎಮು ರೈಲು ಸೇವೆಗೆ ಚಾಲನೆ

ಚೆನ್ನೈ (ಪಿಟಿಐ): ಉಪನಗರ ರೈಲ್ವೆ ಸಂಪರ್ಕ ವ್ಯವಸ್ಥೆ ಸುಧಾರಿಸುವ ನಿಟ್ಟಿನಲ್ಲಿ ದಕ್ಷಿಣ ರೈಲ್ವೆ ವಲಯವು ಚೆನ್ನೈ ಬೀಚ್-ಚೆಂಗಲ್‌ಪಟ್ಟು ಮಾರ್ಗದಲ್ಲಿ ಹವಾನಿಯಂತ್ರಿತ ಎಮು (ಎಲೆಕ್ಟ್ರಿಕ್ ಮಲ್ಟಿಪಲ್ ಯುನಿಟ್) ಸೇವೆಗೆ ಶನಿವಾರ ಚಾಲನೆ ನೀಡಿದೆ.

ಬೆಳಿಗ್ಗೆ 7 ಗಂಟೆಗೆ ಆರಂಭವಾದ ಚೊಚ್ಚಲ ಸಂಚಾರದಲ್ಲಿ ನೂರಾರು ಪ್ರಯಾಣಿಕರು ಪ್ರಯಾಣಿಸಿ ಸಂತಸ ವ್ಯಕ್ತಪಡಿಸಿದರು.

'ರೈಲು 12 ಹವಾನಿಯಂತ್ರಿತ ಬೋಗಿಗಳನ್ನು ಒಳಗೊಂಡಿರಲಿದ್ದು, ಚೆನ್ನೈನ ಐಸಿಎಫ್ ಕೋಚ್ ಕಾರ್ಖಾನೆಯಲ್ಲಿ ತಯಾರಾಗಿದೆ. ಹಲವು ಅತ್ಯಾಧುನಿಕ ಸೌಕರ್ಯಗಳನ್ನು ಹೊಂದಿದ್ದು, 'ಮೆಟ್ರೊ'ದಲ್ಲಿ ಪ್ರಯಾಣಿಸಿದ ಅನುಭವ ದೊರಕಲಿದೆ' ಎಂದು ದಕ್ಷಿಣ ರೈಲ್ವೆ ತಿಳಿಸಿದೆ.

ಹವಾನಿಯಂತ್ರಿತ ಕೋಚ್, ಸ್ವಯಂಚಾಲಿತ ಬಾಗಿಲುಗಳು, ಸ್ಟೇನ್‌ಲೆಸ್ ಸ್ಟೀಲ್ ಸೀಟು ವ್ಯವಸ್ಥೆ, ಜಿಪಿಎಸ್ ಆಧಾರಿತ ಎಲ್‌ಇಡಿ ಪರದೆ, ಸಿ.ಸಿ.ಟಿ.ವಿ ಕಣ್ಗಾವಲು ವ್ಯವಸ್ಥೆ, ತುರ್ತು ಪರಿಸ್ಥಿತಿ ವೇಳೆ ಪ್ರಯಾಣಿಕರಿಗೆ ಟಾಕ್-ಬ್ಯಾಕ್ ವ್ಯವಸ್ಥೆ ಹೊಂದಿದೆ.

ಕಚೇರಿಗೆ ತೆರಳುವವರು ಹಾಗೂ ಮಹಿಳಾ ಪ್ರಯಾಣಿಕರನ್ನು ಗಮನದಲ್ಲಿಟ್ಟು ಕೊಂಡು ಮುಂಬೈನಲ್ಲಿ ಮೊದಲಿಗೆ ಹವಾನಿಯಂತ್ರಿತ 'ಎಮು' ರೈಲು ವ್ಯವಸ್ಥೆಯನ್ನು ಜಾರಿಗೊಳಿಸಲಾಯಿತು.

ಭಾನುವಾರ ಹೊರತುಪಡಿಸಿ, ಚೆನ್ನೈ ಬೀಚ್- ಚೆಂಗಲ್‌ಪಟ್ಟು ನಡುವೆ 4 ಟ್ರಿಪ್, ಚೆನ್ನೈ ಬೀಚ್- ತಂಬರಮ್ ನಡುವೆ ಎರಡು ಟ್ರಿಪ್‌ಗಳು ಇರಲಿವೆ ಎಂದು ದಕ್ಷಿಣ ರೈಲ್ವೆ ತಿಳಿಸಿದೆ.

10 ಕಿ.ಮೀವರೆಗಿನ ಕನಿಷ್ಠ ಪ್ರಯಾಣ ದರವು ₹35 ಇರಲಿದ್ದು, 60 ಕಿ.ಮೀ. ಪ್ರಯಾಣಕ್ಕೆ ₹105 ಇರಲಿದೆ. ಮಾಸಿಕ ಸೀಸನ್ ಟಿಕೆಟ್ ದರ ಪ್ರಯಾಣದ ದೂರಕ್ಕೆ ಅನುಗುಣವಾಗಿ ₹620ರಿಂದ ₹2,115ರವರೆಗೆ ಇರಲಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

ರಿಯಲ್ ಎಸ್ಟೇಟ್ ಸೆಲ್ಲಿಂಗ್

Flat

Kanakapura Road

FLATS FOR Sale Near Metro Stations. Maya Indraprasta, Shravanti, Surya Nalaya, Akme Maverick, Garudadri Lavender, Ganesh Residency. Starting From 35 Lakhs. Sarakki Homes, 9663676464.

Sites

Out-Station

ಕುಕ್ಕೆ ಶ್ರೀ ಸುಬ್ರಮಣ್ಯದಲ್ಲಿ ಲಾಡ್ಜ್ ಮತ್ತು ಮನೆ ಕಟ್ಟಲು ಯೋಗ್ಯವಾದ ಕನ್ವರ್ಷನ್ ಆದ ಸೈಟುಗಳು ಜಾಗ ಮಾರಾಟಕ್ಕಿದೆ. ಸಂಪರ್ಕಿಸಿ : 7975898488, 7483280599

ಉದ್ಯೋಗಾವಕಾಶ

Drivers

ಅನುಭವವುಳ್ಳ ವಾಹನ ಚಾಲಕರು ಬೇಕಾಗಿದ್ದಾರೆ. Heavy_vehicle ಲೈಸನ್ಸ್ ಹೊಂದಿರಬೇಕು. ಸಂಪರ್ಕಿಸಿ:ಗಾಯತ್ರಿ ಅಸೋಸಿಯೆಟ್ಸ್, ಬೈರತಿ, ಬೆಂಗಳೂರು 560077. 8453353646/ 6362872796/ 9448488536.

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Teachers/ Professors

WANTED PRIMARY and High School Teachers for all subjects, contact: MES residential School, Anjeneya extension Davangere 9880436414

ಪ್ರಾಚೀನ ಗಾಂಧಾರಿ ಯೋಗ ವಿದ್ಯೆ

7 ರಿಂದ 20 ವರ್ಷ ಒಳಗಿನ ಮಕ್ಕಳಿಗೆ ಮಾತ್ರ ತರಬೇತಿ. ಕೇವಲ 10 ದಿನಗಳು. ಈ ವಿದ್ಯೆ ಕಲಿತ ಮಕ್ಕಳು ಕಣ್ಣುಗಳಿಗೆ ಬಟ್ಟೆ ಕಟ್ಟಿಕೊಂಡು ಪುಸ್ತಕ ಓದುತ್ತಾರೆ, ಬಣ್ಣಗಳನ್ನು ಗುರುತಿಸುತ್ತಾರೆ, ಸೈಕಲ್ ತುಳಿಯುತ್ತಾರೆ, ಬೈಕ್ ಓಡಿಸುತ್ತಾರೆ, ಡ್ರಾಯಿಂಗ್ ಮತ್ತು ಶಾಲೆ ಹೋಂವರ್ಕ್ ಮಾಡುತ್ತಾರೆ, ಬಚ್ಚಿಟ್ಟ ವಸ್ತು-ವ್ಯಕ್ತಿಗಳನ್ನು ಪತ್ತೆ ಮಾಡುತ್ತಾರೆ. ವ್ಯಕ್ತಿಯ ಮನಸ್ಸನ್ನು ಅಧ್ಯಯನ ಮಾಡುತ್ತಾರೆ. ಹೀಗೆ ಅನೇಕ ಇವೆ. ಈ ವಿದ್ಯೆ ಕಲಿತವರ ಚಮತ್ಕಾರಗಳು ನೋಡುಗರನ್ನು ಮೂಕವಿಸ್ಮಿತರಾಗಿಸಿದರೂ ನಿಜ. ಈ ತರಬೇತಿ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಅನುಕೂಲವಾಗುತ್ತದೆ. ಯೋಗ, ಪ್ರಾಣಾಯಾಮ, ಧ್ಯಾನ ಮತ್ತು ಇತರೆ ಚಟುವಟಿಕೆಗಳ ಮೂಲಕ ಮಕ್ಕಳ ಬೌದ್ಧಿಕ, ಮಾನಸಿಕ ಮತ್ತು ಜ್ಞಾಪಕ ಶಕ್ತಿ ವೃದ್ಧಿಗೆ ಈ ತರಬೇತಿ.
ಊಟ ಮತ್ತು ವಸತಿಯುತ ಕಾರ್ಯಕ್ರಮ
ಆಶ್ರಮದಲ್ಲಿ ಮಾತ್ರ- No Branches
ತರಬೇತಿ ಆರಂಭದ ದಿನಾಂಕ:
26/04/2025 ರಿಂದ 05/05/2025
17/05/2025 ರಿಂದ 26/05/2025
ಗಾಂಧಾರಿ ಯೋಗ ವಿದ್ಯೆಯ ಮಕ್ಕಳ ಪ್ರಾತ್ಯಕ್ಷಿಕೆಗಾಗಿ Ananda Yoga Pranayama Trust ನ ಯೂಟ್ಯೂಬ್ ವೀಕ್ಷಿಸಿ
ಪೂಜ್ಯ ಶ್ರೀ ಮಂಜುನಾಥ ಗುರೂಜಿ
ಆನಂದ ಯೋಗಾಶ್ರಮ (ರಿ.) ಜೋಗಿಸರದ ಹತ್ತಿರ, ಉಜ್ಜಿನ ರಸ್ತೆ, ಕೊಟ್ಟೂರು ವಿಜಯನಗರ ಜಿಲ್ಲೆ 583134
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಪೂಜ್ಯ ಶ್ರೀ ಮಂಜುನಾಥ ಗುರೂಜಿ
9900603013/9663921094

ಪುರಾತನ ಶ್ರೀ ಮುನೇಶ್ವರಸ್ವಾಮಿ
ದೇವಸ್ಥಾನದ 225ನೇ ಜಾತ್ರಾ ಮಹೋತ್ಸವ
ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಆವಲಹಳ್ಳಿ ಗ್ರಾಮ, ಬೆಂಗಳೂರು-49



ಶ್ರೀ ಮುನೇಶ್ವರಸ್ವಾಮಿ ರಥೋತ್ಸವ
ದಿನಾಂಕ: 23.04.2025ನೇ ಬುಧವಾರ
ಮಧ್ಯಾಹ್ನ 02:00 ಗಂಟೆಗೆ
ಶ್ರೀಮತಿ ಯಶೋದಮ್ಮ ವಿ. ವಾಸುದೇವ್ ಕುಟುಂಬದವರು
ಜಾತ್ರೆ ದಿನಾಂಕ:
21.4.2025ನೇ ಸೋಮವಾರ ದಿಂದ
24.4.2025ನೇ ಗುರುವಾರ ವರೆಗೆ
ಸರ್ವರಿಗೂ ಆದರದ ಸ್ವಾಗತ

ವ್ಯಾಪಾರ

Business Offers

Distributors

ಆತ್ಯಾಕರ್ಷಕ ವ್ಯಾಪಾರ ಅವಕಾಶ! ಮದ್ರಾಸ್ ಕಾಫಿ ಕ್ಲಬ್ ಗೃಹಿಣಿಯರು ಮತ್ತು ಮಹಿಳಾ ಉದ್ಯಮಿಗಳನ್ನು ನಮ್ಮೊಂದಿಗೆ ಕೈಜೋಡಿಸಿ ನಮ್ಮ ಪ್ರೀಮಿಯಂ ಶ್ರೇಣಿಯ ಕಾಫಿ ಬೀಜಗಳು ಮತ್ತು ಅಧಿಕೃತ ಫಿಲ್ಟರ್ ಕಾಫಿ ಪುಡಿಯನ್ನು ಮಾರಾಟ ಮಾಡಲು ಆಹ್ವಾನಿಸುತ್ತದೆ. ಯಾವುದೇ ಠೇವಣಿ ಅಗತ್ಯವಿಲ್ಲ! ಆಕರ್ಷಕ ಪ್ರೋತ್ಸಾಹಗಳು. ಹೊಂದಿಕೊಳ್ಳುವ, ಗೃಹಾಧಾರಿತ ಆದಾಯಕ್ಕೆ ಸೂಕ್ತವಾಗಿದೆ. 95134 80595 ಗೆ , ಕರೆ ಮಾಡಿ ಮತ್ತು ಇಂದು ಈ ರುಚಿಕರವಾದ ಪ್ರಯಾಣದ ಭಾಗವಾಗಿರಿ!

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 18.04.2025,09.05.2025 31.05.2025 9ದಿನಗಳು ಈಶಾನ್ಯ ಭಾರತದ ನಾಗಲ್ಯಾಂಡ್ ಮಣಿಪುರ,ಮಿಜೋರಾಂ,ತ್ರಿಪುರ ರಾಜ್ಯದ ಧಿಮಾಪುರ ಕೋಹಿಮಾ,ಇಂಪಾಲ,ಮೋರೆ ಐಜ್ವಲ್,ಉನಕೋಟಿ,ಅಗರ್ತಲ ಮಾತಾಬರಿ,ನೀರ್‌ಮಹಲ್. 05.07.2025 ಅಮರನಾಥ್, ಅಮೃತ್‌ಸರ್,ವೈಷ್ಣೋದೇವಿ, ಲಡಾಕ್ 5/11/13ದಿನಗಳು. 14.05.2025 12ದಿನಗಳು ಆದಿಕೈಲಾಸ ಓಂಪರ್ವತ ಪಾತಾಳ,ಭುವನೇಶ್ವರ,ಜಾಗೇಶ್ವರ ಬಾಬಾಗುಹೆ,ದಾರ್ಚುಲಾ ಮುನ್ಸಿಯಾರಿ.10.06.2025 10ದಿನಗಳು ನೇಪಾಳ ರಾಷ್ಟ್ರ ಪ್ರವಾಸ.29.05.2025, 12.06.2025 ಚಾರ್‌ದಾಮ್ ಯಾತ್ರೆ 12ದಿನಗಳು 9743351212 9206979202 9606032154

14 ದಿನಗಳ ಚಾರ್ಧಾಮ್ ಯಾತ್ರ 29.5.2025. 8 ದಿನಗಳ ಅಮರನಾಥ್ ಯಾತ್ರ 2.7.2025. ಶ್ರೀಮಹದೇಶ್ವರ ಟೂರ್ಸ್ ಅಂಡ್ ಟ್ರಾವೆಲ್ಸ್. ಸಂಪರ್ಕಿಸಿ: 9611801143, 9742810701.

ಜುಲೈ 3 ರಿಂದ 13 ದಿನಗಳು ಅಮರ್ನಾಥ್, ಶ್ರೀನಗರ, ಅಮೃತಸರ, ವೈಷ್ಣೋಮಾತ, ಕುರುಕ್ಷೇತ್ರ. ಶ್ರೀಗಂಗಾ ಟೂರಿಸ್ಟ್ ಸಂಪರ್ಕಿಸಿ:9480253807, 8105522123.

ಭವಿಷ್ಯ

Astrology

★||ನಂ.1.ವಶೀಕರಣ ಸ್ಪೆಷಲಿಸ್ಟ್||★ ಸ್ತ್ರೀ ವಶೀಕರಣ ಸಂಭೋಗ ವಶೀಕರಣ ನೋಡುವ_ಮೂಲಕ ಹೆಸರಿನ_ಮೂಲಕ ಹನ್ನೊಂದು ಗಂಟೆಯಲ್ಲಿ ಶಾಶ್ವತ ಪರಿಹಾರ. ಪಂಡಿತ್. ಸಾಯಿಭಟ್. 9900222591

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9886213331
+91 9845114560 | +91 9900428036
*Conditions apply

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

22ರಿಂದ ಮೋದಿ ಸೌದಿ ಅರೇಬಿಯಾ ಪ್ರವಾಸ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಇದೇ 22ರಿಂದ ಎರಡು ದಿನ ಸೌದಿ ಅರೇಬಿಯಾ ಪ್ರವಾಸ ಮಾಡಲಿದ್ದಾರೆ.

ಮೋದಿ ಮತ್ತು ಸೌದಿ ಅರೇಬಿಯಾ ರಾಜ ಮೊಹಮ್ಮದ್ ಬಿನ್ ಸಲ್ಮಾನ್ ಅಲ್ ಸೌದ್ ಅವರ ನಡುವಿನ ಮಾತುಕತೆಯ ಬಳಿಕ ಹಲವು ಮಹತ್ವದ ಒಪ್ಪಂದಗಳಿಗೆ ಸಹಿ ಬೀಳಲಿದೆ.

'ಉಭಯ ದೇಶಗಳ ನಡುವಿನ ಸಂಬಂಧವನ್ನು ಮತ್ತಷ್ಟು ವೃದ್ಧಿಸಿಕೊಳ್ಳುವ ಅವಕಾಶಗಳು ಪ್ರಧಾನಿ ಅವರ ಪ್ರವಾಸದಿಂದ ಲಭಿಸಲಿದೆ. ಇಂಧನ ವಲಯಕ್ಕೆ ಸಂಬಂಧಿಸಿದ ಸಹಕಾರಕ್ಕೆ ಹೊಸ ರೂಪ ನೀಡುವ ಪ್ರಯತ್ನ ಮಾಡಲಾಗುತ್ತದೆ' ಎಂದು ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ತಿಳಿಸಿದ್ದಾರೆ.

ಹೆಣ್ಮಕ್ಕಳಿಗೆ ಶೇ 50 ಸೀಟು ಕಡ್ಡಾಯ

ಒಂದನೇ ಪುಟದಿಂದ...

'ಕರ್ನಾಟಕ ಶಿಕ್ಷಣ ಕಾಯ್ದೆ, ಉಚಿತ ಮತ್ತು ಕಡ್ಡಾಯ ಶಿಕ್ಷಣ, ಸಿಬಿಎಸ್‌ಇ, ಐಸಿಎಸ್‌ಇ ಬೈ-ಲಾಗಳ ನಿಯಮಗಳಂತೆ ಸರ್ಕಾರ ನಿರ್ಧಾರ ಕೈಗೊಂಡಿರುವುದು ಸ್ವಾಗತಾರ್ಹ. ಎಷ್ಟೇ ಕಠಿಣ ಕ್ರಮ ಕೈಗೊಂಡರೂ, ಖಾಸಗಿ ಶಾಲೆಗಳು ಮಾರ್ಚ್, ಏಪ್ರಿಲ್ ಒಳಗೆ ಪ್ರವೇಶ ಪ್ರಕ್ರಿಯೆ ಪೂರ್ಣಗೊಳಿಸುತ್ತವೆ. ಕಳೆದ ನವೆಂಬರ್, ಡಿಸೆಂಬರ್ ವೇಳೆಗೆ ಸುತ್ತೋಲೆ ಹೊರಡಿಸಿದ್ದರೆ ಅನುಕೂಲವಾಗುತ್ತಿತ್ತು' ಎನ್ನುತ್ತಾರೆ ಪೋಷಕರಾದ ನಾಗರತ್ನ ಕೋರಿಶೆಟ್ಟಿ, ಅಕ್ಷತಾ ನಾಯಕ್.

ಮೀಸಲಾತಿಯೂ ಅನ್ವಯ: ಭಾಷಾ ಮತ್ತು ಧಾರ್ಮಿಕ ಅಲ್ಪಸಂಖ್ಯಾತ ಶಾಲೆಗಳನ್ನು ಹೊರತುಪಡಿಸಿ, ಅನುದಾನಿತ ಹಾಗೂ ಅನುದಾನರಹಿತ ಖಾಸಗಿ ಶಾಲೆಗಳು ಬಾಲಕಿಯರಿಗೆ ಶೇ 50ರಷ್ಟು ಸೀಟು ಮೀಸಲಿಡುವ ಜತೆಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳಿಗೆ ನಿಗದಿಪಡಿಸಿದ ಮೀಸಲಾತಿಯನ್ನು ಪಾಲಿಸಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಶಾಲೆಗಳಲ್ಲಿ ಶೇ 50ರಷ್ಟು ಸೀಟುಗಳನ್ನು ಅದೇ ಸಮುದಾಯದ ಮಕ್ಕಳಿಗೆ ಪ್ರವೇಶ ನೀಡಬೇಕು ಎಂದು ಸೂಚಿಸಲಾಗಿದೆ.

ಪ್ರತಿ ವರ್ಷವೂ ಶೈಕ್ಷಣಿಕ ವರ್ಷ ಆರಂಭಕ್ಕೆ ಮುನ್ನವೇ ವೇಳಾಪಟ್ಟಿ, ಶಾಲೆಯಲ್ಲಿ ಲಭ್ಯವಿರುವ ತರಗತಿವಾರು ಸೀಟುಗಳು, ಶುಲ್ಕದ ಮಾಹಿತಿಯನ್ನು ಪ್ರಕಟಿಸಬೇಕು. ಪಾರದರ್ಶಕವಾಗಿ ದಾಖಲಾತಿ ಮಾಡಿಕೊಳ್ಳಬೇಕು. ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಯ ಶಾಲೆಗಳ ಮುಖ್ಯಸ್ಥರ ಸಭೆ ಕರೆದು ನಿಯಮಗಳನ್ನು ಮನವರಿಕೆ ಮಾಡಿಕೊಡಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಪೋಷಕರು ಪಟ್ಟಿ ಪರಿಶೀಲಿಸಿ, ಸೂಕ್ತ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಡೊನೇಷನ್ ಸೇರಿದಂತೆ ಅಧಿಕ ಶುಲ್ಕ ವಸೂಲು ಮಾಡಿದರೆ, ಮೀಸಲಾತಿ ಪಾಲನೆಯಾಗದಿದ್ದರೆ ಆಯಾ ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ದೂರು ಸಲ್ಲಿಸಬಹುದು ಎಂದು ಸಲಹೆ ನೀಡಲಾಗಿದೆ.

ಜೆಇಇ: ಕುಶಾಗ್ರ ರಾಜ್ಯಕ್ಕೇ ಅಗ್ರ

ಒಂದನೇ ಪುಟದಿಂದ...

ಫಲಿತಾಂಶ ಕುರಿತು 'ಪ್ರಜಾವಾಣಿ' ಜತೆ ಮಾತನಾಡಿದ ಅವರು, 'ರ್‍ಯಾಂಕ್ ಗಳಿಸುವ ಗುರಿಗಿಂತ ಓದಿನ ಸಿದ್ಧತೆಗೆ ಆದ್ಯತೆ ನೀಡಿದ್ದೆ. ಹಿಂದಿನ ಫಲಿತಾಂಶಕ್ಕಿಂತ ಮುಂದಿನ ಪರೀಕ್ಷೆಯಲ್ಲಿ ಮುನ್ನಡೆ ಕಾಯ್ದುಕೊಳ್ಳುವ ಛಲ ಇಟ್ಟುಕೊಂಡಿದ್ದೆ. ಕಾಲೇಜಿನಲ್ಲಿ ನಿತ್ಯವೂ ಪರೀಕ್ಷೆಗಳನ್ನು ನಡೆಸುತ್ತಿದ್ದರು. ಪ್ರತಿದಿನ ಹೊಸ ಪ್ರಶ್ನೆಗಳನ್ನು ಹುಡುಕುತ್ತಿದ್ದೆವು. 12ರಿಂದ 13 ಗಂಟೆ ಓದುತ್ತಿದ್ದೆ. ಇಂತಹ ಪರಿಶ್ರಮವೇ ಉನ್ನತ ಸ್ಥಾನ ಪಡೆಯಲು ದಾರಿಯಾಯಿತು' ಎಂದರು.

ಕುಶಾಗ್ರ ಅವರು ಜೆಇಇ ಅಡ್ವಾನ್ಸ್‌ಗೆ ಸಿದ್ಧತೆ ನಡೆಸಿದ್ದು, ಬಾಂಬೆ ಐಐಟಿಯಲ್ಲಿ ಕಂಪ್ಯೂಟರ್ ವಿಜ್ಞಾನ ವಿಷಯ ಅಧ್ಯಯನ ನಡೆಸುವ ಆಶಯ ಹೊಂದಿದ್ದಾರೆ. ಗಣಿತ, ಭೌತವಿಜ್ಞಾನ, ಕ್ರೀಡೆ ಇಷ್ಟಪಡುವ ಅವರು, ಎಂಜಿನಿಯರ್ ಕ್ಷೇತ್ರದತ್ತ ಹೆಚ್ಚಿನ ಒಲವು ಹೊಂದಿದ್ದಾರೆ.

ಕಾರ್ಮಿಕರ ಉಗುರು ಕಿತ್ತು ಚಿತ್ರಹಿಂಸೆ

ಕೊರಬಾ (ಪಿಟಿಐ): ಐಸ್‌ಕ್ರೀಮ್ ಕಾರ್ಖಾನೆಯಲ್ಲಿ ಕಳ್ಳತನ ಮಾಡಿದ್ದಾರೆಂಬ ಶಂಕೆಯ ಮೇರೆಗೆ ಇಬ್ಬರು ಕಾರ್ಮಿಕರಿಗೆ ವಿದ್ಯುತ್ ಶಾಕ್ ನೀಡಲಾಗಿದೆ. ಅಲ್ಲದೆ ಬೆರಳಿನ ಉಗುರುಗಳನ್ನು ಕಿತ್ತು, ಚಿತ್ರಹಿಂಸೆ ನೀಡಲಾಗಿದೆ. ಛತ್ತೀಸಗಢದ ಕೊರಬಾ ಜಿಲ್ಲೆಯಲ್ಲಿ ಈ ಘಟನೆ ನಡೆದಿದೆ.

ಪಿಎಫ್‌ಬಿಆರ್ ಮುಂದಿನ ವರ್ಷ ಆರಂಭ

ನವದೆಹಲಿ (ಪಿಟಿಐ): ಕಲ್ಪಕಂನಲ್ಲಿ ದೇಶದ ಮೊದಲ 'ಫಾಸ್ಟ್ ಬ್ರೀಡರ್ ರಿಯಾಕ್ಟರ್ ಮಾದರಿ'ಯು (ಪಿಎಫ್‌ಬಿಆರ್) ಮುಂದಿನ ವರ್ಷ ಆರಂಭವಾಗುವ ನಿರೀಕ್ಷೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪಿಎಫ್‌ಬಿಆರ್ ಕಾರ್ಯ ಆರಂಭಿಸುವುದು ದೇಶದ ಮೂರು ಹಂತಗಳ ಅಣುಶಕ್ತಿ ಯೋಜನೆಯ ಎರಡನೆಯ ಹಂತ. ಇದು ವಿಕಿರಣಶೀಲ ತ್ಯಾಜ್ಯದ ಸಂಗ್ರಹವನ್ನು ಕಡಿಮೆ ಮಾಡಲು ಬಳಕೆಯಾದ ಇಂಧನದ ಪುನರ್ ಬಳಕೆಯ ಗುರಿ ಹೊಂದಿದೆ.

'ಉದ್ದೇಶವು ಅಪರಾಧಿಯ ಒಳಮನಸ್ಸಿನಲ್ಲಿ ಇರುತ್ತದೆ'

ನವದೆಹಲಿ: ಕ್ರಿಮಿನಲ್ ಪ್ರಕರಣಗಳಲ್ಲಿ ಅಪರಾಧದ ಹಿಂದೆ ಬಲವಾದ 'ಉದ್ದೇಶ' ಇತ್ತು ಎಂಬುದೊಂದೇ ಅಪರಾಧ ನಿರ್ಣಯಕ್ಕೆ ಸಾಕಾಗುವುದಿಲ್ಲ. ಹಾಗೆಯೇ, 'ಉದ್ದೇಶ' ಇರಲಿಲ್ಲ ಎಂಬ ಒಂದೇ ಕಾರಣಕ್ಕೆ ಆರೋಪಿಯನ್ನು ದೋಷಮುಕ್ತಗೊಳಿಸಲು ಕೂಡ ಆಗುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಸುಧಾಂಶು ಧುಲಿಯಾ ಮತ್ತು ಕೆ. ವಿನೋದ್ ಚಂದ್ರನ್ ಅವರು ಇರುವ ವಿಭಾಗೀಯ ಪೀಠವು, ಮಗನನ್ನು ಕೊಂದ ತಂದೆಗೆ ಶಿಕ್ಷೆ ವಿಧಿಸಿರುವುದನ್ನು ಎತ್ತಿಹಿಡಿದಿದೆ. ತಂದೆಯು ತನ್ನ ಒಬ್ಬನೇ ಮಗನನ್ನು ಕೊಲ್ಲುವ ಸಾಧ್ಯತೆಯೇ ಇಲ್ಲ ಎಂಬ ವಾದವನ್ನು ಪೀಠವು ತಳ್ಳಿಹಾಕಿದೆ.

'ಪ್ರತ್ಯಕ್ಷದರ್ಶಿಗಳ ಹೇಳಿಕೆಗಳು ತೃಪ್ತಿಕರವಾಗಿ ಇಲ್ಲದಿದ್ದಾಗ, ಬಲವಾದ ಉದ್ದೇಶವೊಂದು ಇದ್ದರೆ ಅದು ಅಪರಾಧ ನಿರ್ಣಯಕ್ಕೆ ಸಾಕಾಗುತ್ತದೆ. ಅದೇ ರೀತಿಯಲ್ಲಿ, ಸನ್ನಿವೇಶಗಳು ಬಹಳ ಖಚಿತವಾಗಿ ಇದ್ದರೆ, ಅದು ಆರೋಪಿಯು ಅಪರಾಧ ಎಸಗಿದ್ದಾನೆ ಎಂಬ ಒಂದೇ ನಿರ್ಣಯಕ್ಕೆ ಬರುವಂತೆ ಇದ್ದರೆ, ಬೇರೆ ಯಾವುದೇ ಊಹೆಗಳಿಗೆ ದಾರಿ ಮಾಡಿಕೊಡುವಂತೆ ಇಲ್ಲದಿದ್ದರೆ, ಉದ್ದೇಶವೇ ಇರಲಿಲ್ಲ ಎನ್ನುವುದರಿಂದ ಯಾವ ಪರಿಣಾಮವೂ ಆಗುವುದಿಲ್ಲ' ಎಂದು ಪೀಠವು ಸ್ಪಷ್ಟಪಡಿಸಿದೆ.

ಕೆಳ ಹಂತದ ನ್ಯಾಯಾಲಯಗಳು ತಮಗೆ ಜೀವಾವಧಿ ಶಿಕ್ಷೆ ವಿಧಿಸಿದ್ದನ್ನು ಸುಭಾಷ್ ಅಗರ್ವಾಲ್ ಎನ್ನುವವರು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು.

'ಉದ್ದೇಶವು ಅಪರಾಧ ಮಾಡಿದವನ ಮನಸ್ಸಿನ ಒಳಗೂಡಿನಲ್ಲಿ ಕುಳಿತಿರುತ್ತದೆ' ಎಂದು ಪೀಠ ಹೇಳಿದೆ.

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ.
ಆಸ್ತಿ ಅಧಿಕಾರಿಯವರ ಕಛೇರಿ, ಇರುವಕ್ಕಿ, ಆನಂದಪುರ- 577412 ಸಾಗರ ತಾಲ್ಲೂಕು ಶಿವಮೊಗ್ಗ ಜಿಲ್ಲೆ
ಇ-ಮೇಲ್: eo@uahs.edu.in Ph:9480838979
ಸಂ: ಕೆಶಿನಾಕೃತೋವಿವಿ(ಇ)/ಆಅ/ಉಖಅ/01/2025-26 ದಿ:17.04.2025
ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಂಖಾಂತರ ಮಾತ್ರ)
ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಇರುವಕ್ಕಿಗೆ ಅವಶ್ಯವಿರುವ ಉಪಕರಣಗಳನ್ನು ಸರಬರಾಜು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಜಿ-2 ನಿಬಂಧನೆಗೊಳಪಟ್ಟಂತೆ ನೋಂದಯಿಸಲ್ಪಟ್ಟ ಆಸಕ್ತಿಯುಳ್ಳ ಅರ್ಹ ಕಂಪನಿಗಳಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನೋಟಿಫಿಕೇಷನ್, ಶೆಡ್ಯೂಲ್ ಹಾಗೂ ಟೆಂಡರ್‌ನ ವಿವರಗಳು ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತದೆ.
ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ: 1. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 29.04.2025 ಸಮಯ ಸಂಜೆ 4.00 ಗಂಟೆಯವರೆಗೆ 2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 02.05.2025 ಸಮಯ ಸಂಜೆ 4.30 ಗಂಟೆಗೆ 3. ಹಣಕಾಸು ಬಿಡ್ ತೆರೆಯುವ ದಿನಾಂಕ : 03.05.2025 ಸಮಯ ಬೆಳಿಗ್ಗೆ 10.00 ಗಂಟೆಗೆ
ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಭಾಗವಹಿಸಲು ಯೂಸರ್ ಐಡಿ ಮತ್ತು ಪಾಸ್‌ವರ್ಡ ಪಡೆದುಕೊಳ್ಳಬೇಕು ಹೆಚ್ಚಿನ ವಿವರಗಳಿಗಾಗಿ ಇ-ಪೋರ್ಟಲ್ ವೆಬ್‌ಸೈಟ್ ಇ-ಮೇಲ್ @hphelpdesk.blr@intarvo.com ಅಥವಾ ಸಹಾಯವಾಣಿ ಸಂಖ್ಯೆ:91-8046010000 ಕೆಲಸದ ಎಲ್ಲಾ ದಿವಸಗಳಲ್ಲೂ ಮತ್ತು ಉಗ್ರಾಣ ಖರೀದಿ ಅಧಿಕಾರಿ, ಕೇಂದ್ರ ಉಗ್ರಾಣ, ಕೆಶಿನಾಕೃತೋವಿವಿ, ಇರುವಕ್ಕಿ, ಆನಂದಪುರ -577412, ಸಾಗರ ತಾಲ್ಲೂಕು, ಶಿವಮೊಗ್ಗ ಇವರನ್ನು ಸಂಪರ್ಕಿಸಬಹುದು.
ಸಹಿ/- ಆಸ್ತಿ ಅಧಿಕಾರಿಗಳು, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಇರುವಕ್ಕಿ. ಶಿವಮೊಗ್ಗ-577412.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25-26/91/04/89

ಸಂಕ್ಷಿಪ್ತ ಸುದ್ದಿ

ಕೆಕೆಆರ್ ತಂಡಕ್ಕೆ ಮರಳಿದ ನಾಯರ್

ಕೋಲ್ಕತ್ತ (ಪಿಟಿಐ): ಭಾರತ ಕ್ರಿಕೆಟ್ ತಂಡದ ಸಹಾಯಕ ಕೋಚ್ ಹುದ್ದೆಯಿಂದ ವಜಾಗೊಂಡಿರುವ ಅಭಿಷೇಕ್ ನಾಯರ್ ಅವರು ಕೋಲ್ಕತ್ತ ನೈಟ್ ರೈಡರ್ಸ್‌ನ ನೆರವು ಸಿಬ್ಬಂದಿ ತಂಡವನ್ನು ಮರಳಿ ಸೇರಿಕೊಂಡಿದ್ದಾರೆ. ಆದರೆ, ತಂಡದಲ್ಲಿ ಅವರ ಪಾತ್ರದ ಕುರಿತು ಇನ್ನೂ ಬಹಿರಂಗವಾಗಿಲ್ಲ.

ಅಭಿಷೇಕ್

'ಮರಳಿ ಮನೆಗೆ ಸ್ವಾಗತ, ಅಭಿಷೇಕ್ ನಾಯರ್' ಎಂದು ಕೆಕೆಆರ್ ತನ್ನ 'ಎಕ್ಸ್' ಖಾತೆಯಲ್ಲಿ ಶನಿವಾರ ಪೋಸ್ಟ್ ಮಾಡಿದೆ. ಆ ಮೂಲಕ ನಾಯರ್ ಅವರು ತಂಡಕ್ಕೆ ಮರಳಿರುವುದನ್ನು ದೃಢಪಡಿಸಿದೆ.

ಇದಕ್ಕೂ ಮೊದಲು ಪೋಸ್ಟ್ ಮಾಡಿ, ನಾಯರ್ ಅವರು ಸಹಾಯಕ ಕೋಚ್ ಆಗಿ ತಂಡಕ್ಕೆ ಮರಳಿದ್ದಾರೆ ಎಂದು ಬರೆದುಕೊಂಡಿತ್ತು. ಆದರೆ, ಕೆಲವೇ ಹೊತ್ತಿನಲ್ಲಿ ಆ ಪೋಸ್ಟ್ ಅನ್ನು ಡಿಲೀಟ್ ಮಾಡಲಾಗಿದೆ.

ಯೂತ್ ಅಥ್ಲೆಟಿಕ್ಸ್: ಆರತಿಗೆ ಕಂಚು

ನವದೆಹಲಿ (ಪಿಟಿಐ): ಭಾರತದ ಆರತಿ ಅವರು ಸೌದಿ ಅರೇಬಿಯಾದ ದಮ್ಮಮ್‌ನಲ್ಲಿ ನಡೆಯುತ್ತಿರುವ ಏಷ್ಯನ್ 18 ವರ್ಷದೊಳಗಿನವರ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಬಾಲಕಿಯರ 200 ಮೀಟರ್ ಓಟದಲ್ಲಿ ಕಂಚಿನ ಪದಕ ಗೆದ್ದರು.

17 ವರ್ಷ ವಯಸ್ಸಿನ ಅಥ್ಲೀಟ್‌ಗೆ ಇದು ಈ ಕೂಟದ ಎರಡನೇ ಪದಕವಾಗಿದೆ. ಬುಧವಾರ ಅವರು 100 ಮೀಟರ್ ಓಟದಲ್ಲೂ ಕಂಚಿನ ಪದಕ ಗೆದ್ದಿದ್ದರು.ಶುಕ್ರವಾರ ನಡೆದ 200 ಮೀಟರ್ ಫೈನಲ್‌ನಲ್ಲಿ ಆರತಿ 24.31 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ಯುಎಇಯ ಮರಿಯಮ್ ಕರೀಂ (23.99 ಸೆ) ಮತ್ತು ಜಪಾನ್‌ನ ಶಿಬಾಟಾ ಮಿಸಾಟೊ (24.16 ಸೆ) ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕ ಗೆದ್ದರು.

ರಿಲೆ ತಂಡಕ್ಕೆ ಬೆಳ್ಳಿ: ಭಾರತದ ಬಾಲಕರ ತಂಡವು ಮೆಡ್ಲೆ ರಿಲೆ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಜಯಿಸಿತು.

ಚಿರಂತ್ ಪಿ, ಸೈಯದ್ ಸಬೀರ್, ಸಾಕೇತ್ ಮಿಂಜ್ ಮತ್ತು ಕದೀರ್ ಖಾನ್ ಅವರನ್ನು ಒಳಗೊಂಡ ತಂಡವು 1 ನಿಮಿಷ 52.15 ಸೆಕೆಂಡ್‌ಗಳಲ್ಲಿ ಗುರಿ ತಲುಪಿತು. ಇದು ರಾಷ್ಟ್ರೀಯ ಯೂತ್ ದಾಖಲೆಯಾಗಿದೆ.

ಚೀನಾ (1 ನಿ.51.68ಸೆ.) ಮತ್ತು ಸೌದಿ ಅರೇಬಿಯಾ (1ನಿ.52.36ಸೆ) ಕ್ರಮವಾಗಿ ಚಿನ್ನ ಮತ್ತು ಕಂಚು ಗೆದ್ದಿತು.

ಕೊಡವ ಕೌಟುಂಬಿಕ ಹಾಕಿ ಟೂರ್ನಿ

ಪರದಂಡ ತಂಡಕ್ಕೆ ಗೆಲುವು

ಪ್ರಜಾವಾಣಿ ವಾರ್ತೆ

ಮಡಿಕೇರಿ: ಪ್ರಜ್ವಲ್ ಪೂವಣ್ಣ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಪರದಂಡ ತಂಡವು ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನ ಮೈದಾನದಲ್ಲಿ ನಡೆಯುತ್ತಿರುವ 'ಮುದ್ದಂಡ ಕಪ್' ಕೊಡವ ಕೌಟುಂಬಿಕ ಹಾಕಿ ಟೂರ್ನಿಯಲ್ಲಿ ಶನಿವಾರ 3-0ರಿಂದ ಐನಂಡ ವಿರುದ್ಧ ಜಯ ಸಾಧಿಸಿತು.

ಕೊಡವ ಕೌಟುಂಬಿಕ ಕ್ರಿಕೆಟ್ ಟೂರ್ನಿಯಲ್ಲಿ ಶನಿವಾರ ಮೇಚಿಯಂಡ ಮತ್ತು ಮಾದಂಡ ತಂಡಗಳ ಆಟಗಾರರು ಸೆಣಸಿದರು

ಇತರ ಪಂದ್ಯಗಳಲ್ಲಿ ಚೆಪ್ಪುಡಿರ 4-0ಯಿಂದ ಕರ್ತಮಾಡ ವಿರುದ್ಧ, ಮೇಚಿಯಂಡ 2-1ರಿಂದ ಮಾದಂಡ ವಿರುದ್ಧ, ಬೊಟ್ಟೋಳಂಡ 2-1ರಿಂದ ಬೊಳ್ಳಂಡ ವಿರುದ್ಧ, ನಾಳಿಯಂಡ 2-0ರಿಂದ ಐಚೆಟ್ಟೀರ ವಿರುದ್ಧ, ನೆಲ್ಲಮಕ್ಕಡ 4-1 ರಿಂದ ನಾಪಂಡ ವಿರುದ್ಧ, ಕೋಳೇರ 3-0ಯಿಂದ ಚೆಕ್ಕೇರ ವಿರುದ್ಧ, ಕರವಂಡ 2-1ರಿಂದ ಬಯವಂಡ ವಿರುದ್ಧ, ಇಟ್ಟೀರ 1-0ಯಿಂದ ಕೋನೇರಿರ ವಿರುದ್ಧ, ಕುಪ್ಪಂಡ (ಕೈಕೇರಿ) 1-0ಯಿಂದ ಮತ್ರಂಡ ವಿರುದ್ಧ ಜಯ ಸಾಧಿಸಿದವು.

'ಟೈ ಬ್ರೇಕರ್'ನಲ್ಲಿ ಕೊಂಗೇಟಿರ 5-3ರಿಂದ ಚೇನಂಡ ವಿರುದ್ಧ, ಕಂಬೀರಂಡ 5-3ರಿಂದ ಕಳ್ಳಿಚಂಡ ವಿರುದ್ಧ, ಕಾಂಡಂಡ 4-3ರಿಂದ ಕುಲ್ಲೇಟಿರ ವಿರುದ್ಧ ಜಯ ಗಳಿಸಿದವು.

ವಿಶ್ವಕಪ್: ತಟಸ್ಥ ಸ್ಥಳಕ್ಕೆ ಪಾಕ್ ಬೇಡಿಕೆ

ಲಾಹೋರ್ (ಪಿಟಿಐ): ಪಾಕಿಸ್ತಾನ ಮಹಿಳಾ ಕ್ರಿಕೆಟ್ ತಂಡವು ವರ್ಷಾಂತ್ಯದಲ್ಲಿ ನಡೆಯುವ ಐಸಿಸಿ ಏಕದಿನ ವಿಶ್ವಕಪ್ ಟೂರ್ನಿಗಾಗಿ ಭಾರತಕ್ಕೆ ಪ್ರಯಾಣಿಸುವುದಿಲ್ಲ. ಹೈಬ್ರಿಡ್ ಮಾದರಿಯಂತೆ ತಟಸ್ಥ ಸ್ಥಳದಲ್ಲಿ ತನ್ನ ಪಂದ್ಯಗಳನ್ನು ಆಡಲಿದೆ ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿ ಅಧ್ಯಕ್ಷ ಮೊಹ್ಸಿನ್ ನಖ್ವಿ ಹೇಳಿದ್ದಾರೆ.

